ಹುಬ್ಬಳ್ಳಿ
ಶುಕ್ರವಾರ, 24 ಏಪ್ರಿಲ್ 2026
ಸಂಪುಟ 16, ಸಂಚಿಕೆ 30, ಪುಟಗಳು 14
■ಹುಬ್ಬಳ್ಳಿ ■ಬೆಂಗಳೂರು
■ಮಂಗಳೂರು ■ಶಿವಮೊಗ್ಗ
₹5
RNI No.KARKAN/
2011/64413
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ
ಹೊಸ ದಿಗಂತ
ಲೋಕಹಿತಂ ಮಮ ಕರಣೀಯಂ

ಮಧ್ಯಪ್ರಾಚ್ಯ ಯುದ್ಧ ನಿಲ್ಲಿಸಲು ಚೀನಾ ಯತ್ನ? | ೦೭
ಇರಾನ್ ಕ್ಷಿಪಣಿ ಪ್ರದರ್ಶನ | ೦೭
ಕೇಂದ್ರ ಸರ್ಕಾರ ನಮ್ಮ ಜತೆಗೆ ಇತ್ತು | ೦೭

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಶುಕ್ಲ ಪಕ್ಷ, ತಿಥಿ: ಅಷ್ಟಮಿ, ನಕ್ಷತ್ರ: ಪುಷ್ಯ

ದಿನದ ಮಾತು

ಅಹಂಕಾರ ಬಂದವನು ಮಾಡಿದ್ದೆಲ್ಲವೂ ವ್ಯರ್ಥ.
▲ಕಬೀರ್‌ದಾಸ್

ಮತಗಟ್ಟೆಯ ಬಾಗಿಲು ಹೇಳುವ ಮಂಡೇಲಾ ಎಂಬ ಕಹಿಸತ್ಯ

ಉಫೇ ವೀರ ಭೂಮಿಗೆ

◆ಸಂತೋಷ್ ತಮ್ಮಯ್ಯ

◆ಪುಟ ೬

ಕಿರುಸುದ್ದಿ

ಕಾಡಾನೆ ದಾಳಿ: ಇಬ್ಬರು ಅರಣ್ಯ ಸಿಬ್ಬಂದಿ ಗಂಭೀರ

◆**ಚಿಕ್ಕಮಗಳೂರು:** ಕಾಡಾನೆ ದಾಳಿಯಿಂದ ಇಬ್ಬರು ಅರಣ್ಯ ಸಿಬ್ಬಂದಿ ಗಂಭೀರ ಗಾಯಗೊಂಡಿರುವ ಘಟನೆ ಮೂಡಿಗೆರೆ ತಾಲೂಕಿನ ಗೌತಹಳ್ಳಿ ಗ್ರಾಮದಲ್ಲಿ ನಡೆದಿದೆ. ➡ಪುಟ ೪

ಟಿಸಿಎಸ್ ಪಾಸ್‌ವರ್ಡ್‌ಗಳಲ್ಲೂ ಅಶ್ಲೀಲ ಭಾಷೆ ಬಳಕೆ!

◆ಪುಟ ೭

ಬದರಿನಾಥ ದೇಗುಲ ಭಕ್ತರ ಪ್ರವೇಶಕ್ಕೆ ಮುಕ್ತ

◆ಪುಟ ೭

ದಕ್ಷಿಣ ಕನ್ನಡ ಜಿಲ್ಲೆ ಪ್ರಥಮ, ಕಲ್ಬುರ್ಗಿಗೆ ಕೊನೆಯ ಸ್ಥಾನ

ಎಲ್ಲೆಲ್ಲೂ ಫಸ್ಟ್‌ಕ್ಲಾಸ್

ಎಸ್‌ಐಆರ್ ಬಳಿಕ ದಾಖಲೆ ಮತದಾನ

ಎಸ್‌ಎಸ್‌ಎಲ್‌ಸಿ ಶೇ.94 ಪಾಸ್

◆**ಬೆಂಗಳೂರು:** 2025–2026ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆ–1ರ ಫಲಿತಾಂಶ ಗುರುವಾರ ಪ್ರಕಟವಾಗಿದ್ದು, ಶೇ.94.1ರ ದಾಖಲೆ ಫಲಿತಾಂಶ ಪ್ರಕಟವಾಗಿದೆ. ಪ್ರತಿ ವರ್ಷದಂತೆ ಈ ಬಾರಿಯೂ ವಿದ್ಯಾರ್ಥಿನಿಯರೇ ಮೇಲುಗೈ ಸಾಧಿಸಿದ್ದು, ದಕ್ಷಿಣ ಕನ್ನಡ ಪ್ರಥಮ ಸ್ಥಾನ ಪಡೆದರೆ, ಕಲಬುರಗಿ ಕೊನೆಯ ಸ್ಥಾನದಲ್ಲಿದೆ. ಈ ಬಾರಿ ಒಟ್ಟು ಏಳು ವಿದ್ಯಾರ್ಥಿಗಳು 625ಕ್ಕೆ 625 ಪಡೆಯುವ ಮೂಲಕ ರಾಜ್ಯಕ್ಕೆ ಪ್ರಥಮ ರ್‍ಯಾಂಕ್ ಪಡೆದುಕೊಂಡಿದ್ದಾರೆ. ಕೋವಿಡ್ ಸಂದರ್ಭದಲ್ಲಿ ಎಲ್ಲರನ್ನೂ ಉತ್ತೀರ್ಣಗೊಳಿಸಿದ್ದನ್ನು ಹೊರತುಪಡಿಸಿದರೆ, 2023ನೇ ಸಾಲಿನ ಫಲಿತಾಂಶ ಶೇ.83.89 ದಾಖಲಾಗಿದ್ದು ಈವರೆಗಿನ ದಾಖಲೆಯಾಗಿತ್ತು. ಪ್ರಸಕ್ತ ಸಾಲಿನಲ್ಲಿ ಶೇ.94.1ರಷ್ಟು ಫಲಿತಾಂಶವು ಹಿಂದಿನ ಎಲ್ಲಾ ದಾಖಲೆಯನ್ನು ಮುರಿದಿದೆ.

ಗುರುವಾರ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿಯ ಕಚೇರಿಯಲ್ಲಿ ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಸುದ್ದಿಗೋಷ್ಠಿ ನಡೆಸಿ ಫಲಿತಾಂಶದ ವಿವರ ನೀಡಿದರು. ಮಾ.18ರಿಂದ ಏ.2ರವರೆಗೆ ನಡೆದ ಎಸ್‌ಎಸ್‌ಎಲ್‌ಸಿ ಪರೀಕ್ಷೆ–1ರಲ್ಲಿ ಒಟ್ಟಾರೆ 8,66,046 ವಿದ್ಯಾರ್ಥಿಗಳು ನೋಂದಣಿಯಾದರೆ 8,56,516 ವಿದ್ಯಾರ್ಥಿಗಳು ಹಾಜರಾಗಿದ್ದರು. ➡ಪುಟ ೪

ಮೂರನೇ ಪರೀಕ್ಷೆ ಇರಲ್ಲ ಮೇ 18ರಿಂದ ಪರೀಕ್ಷೆ–2

ಕಳೆದ ಬಾರಿ ವಿದ್ಯಾರ್ಥಿಗಳಿಗೆ ಮೂರು ಪರೀಕ್ಷೆ ನಡೆಸಲಾಗಿದ್ದು, ಆದರೆ ಈ ಬಾರಿ ಪರೀಕ್ಷೆ 3 ಇರುವುದಿಲ್ಲ. ಪರೀಕ್ಷೆ–2 ಮೇ 18 ರಿಂದ 28ರವರೆಗೆ ನಡೆಯಲಿದೆ. ➡ಪುಟ ೪

625ಕ್ಕೆ 625 ಅಂಕ ಪಡೆದವರು

ಬೃಂದಾ ಎಂ. ತಾಪ್ಸೆ

ಪ್ರೀತಮ್ ಪೂಜಾರಿ

ಸೌಜನ್ಯಾ ಕಂದಕೂರ್

ಪ್ರಾರ್ಥನಾ ಬಿರಾದಾರ

ಭರತ್ ಜಿ.

ಸುಖದೇವ

ಧನುಷ್ ಸುಧೀರ್

ನಪಾಸಾದ ವಿದ್ಯಾರ್ಥಿಗಳಿಗೂ ಶಾಲೆಗೆ ಬರಲು ಅವಕಾಶ

◆ಪುಟ ೫

ಜಿಲ್ಲಾವಾರು ಫಲಿತಾಂಶ

◆ಪುಟ ೪

ಈ ಬಾರಿ ಒಟ್ಟು ಏಳು ಅಭ್ಯರ್ಥಿಗಳು 625ಕ್ಕೆ 625 ಅಂಕಗಳನ್ನು ಗಳಿಸುವ ಮೂಲಕ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದುಕೊಂಡಿದ್ದಾರೆ. ವಿದ್ಯಾರ್ಥಿನಿಯರಾದ ಬೆಳಗಾವಿಯ ಕಟಗೇರಿ ಸರ್ಕಾರಿ ಪ್ರೌಢಶಾಲೆಯ ಪ್ರಾರ್ಥನಾ ನಾಗಪ್ಪ ಬಿರಾದಾರ ಪಾಟೀಲ್, ಚಿಕ್ಕಮಗಳೂರಿನ ಕೋಟೆ ಸೈಂಟ್ ಮೇರಿಸ್ ಪ್ರೌಢಶಾಲೆಯ ಬೃಂದಾ ಎಂ. ತಾಪ್ಸೆ, ವಿಜಯಪುರದ ನಾಗರಬೆಟ್ಟ ಆಕ್ಸ್‌ಫರ್ಡ್ ಆಂಗ್ಲ ಮಾಧ್ಯಮ ಪ್ರೌಢಶಾಲೆಯ ಸೌಜನ್ಯಾ ಬಸವರಾಜ ಕಂದಕೂರ್, ವಿದ್ಯಾರ್ಥಿಗಳಾದ ಬೆಂಗಳೂರು ಉತ್ತರದ ಸದಾಶಿವನಗರ ಪೂರ್ಣ ಪ್ರಜ್ಞಾ ಪ್ರೌಢಶಾಲೆಯ ಧನುಷ್ ಸುಧೀರ್ ಮೈಸೂರು, ದಾವಣಗೆರೆಯ ಕಬ್ಬಾಳ ಶ್ರೀ ವಿದ್ಯಾಲಕ್ಷ್ಮಿ ಆಂಗ್ಲ ಮಾಧ್ಯಮ ಪ್ರೌಢಶಾಲೆಯ ವಿದ್ಯಾರ್ಥಿ ಭರತ್ ಜಿ., ಉಡುಪಿಯ ಮದರ್ ತೆರೇಸಾ ಸ್ಮಾರಕ ಶಂಕರನಾರಾಯಣ ಪ್ರೌಢಶಾಲೆಯ ಪ್ರೀತಮ್ ಜಿ. ಪೂಜಾರಿ, ರಾಯಚೂರಿನ ಮಾನ್ವಿ ಬಿವಿಆರ್ ಆಂಗ್ಲ ಮಾಧ್ಯಮ ಪ್ರೌಢಶಾಲೆಯ ಸುಖದೇವ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದವರಾಗಿದ್ದಾರೆ.

ಬಂಗಾಳ 92%, ತ.ನಾಡು 85% ಮತ

ಸ್ವಾತಂತ್ರ್ಯ ನಂತರದ ಅತ್ಯಧಿಕ ಮತದಾನ

◆**ಕೋಲ್ಕತ್ತಾ/ಚೆನ್ನೈ:** ಪಶ್ಚಿಮ ಬಂಗಾಳ ಮತ್ತು ತಮಿಳುನಾಡು ರಾಜ್ಯಗಳು ಸ್ವಾತಂತ್ರ್ಯ ನಂತರದ ತಮ್ಮ ಅತ್ಯಧಿಕ ಮತದಾನ ಪ್ರಮಾಣ ದಾಖಲಿಸಿವೆ. ಪಶ್ಚಿಮ ಬಂಗಾಳ ವಿಧಾನಸಭೆಯ ಮೊದಲ ಹಂತದಲ್ಲಿ ಶೇ.92 ಮತ್ತು ತಮಿಳುನಾಡಿನಲ್ಲಿ ನಡೆದ ಏಕ ಹಂತದ ಚುನಾವಣೆಯಲ್ಲಿ ಶೇ.85 ದಾಖಲೆಯ ಮತದಾನವಾಗಿದೆ. ಬಿಜೆಪಿಯು ಬಂಗಾಳದಲ್ಲಿ ಮಮತಾ ಬ್ಯಾನರ್ಜಿ ಅವರನ್ನು ಅಧಿಕಾರದಿಂದ ಕೆಳಗಿಳಿಸಲು ಹಾಗೂ ದಕ್ಷಿಣ ಭಾರತದಲ್ಲಿ ತನ್ನ ಪ್ರಭಾವ ವಿಸ್ತರಿಸಲು ಪ್ರಯತ್ನಿಸುತ್ತಿದೆ.

ಮೊದಲ ಹಂತದಲ್ಲಿ ಪಶ್ಚಿಮ ಬಂಗಾಳದ 152 ಕ್ಷೇತ್ರಗಳಲ್ಲಿ ಮತದಾನ ನಡೆಯಿತು. ತಮಿಳುನಾಡಿನ 234 ಸದಸ್ಯರ ವಿಧಾನಸಭೆಗೆ ಒಂದೇ ಹಂತದಲ್ಲಿ ಮತದಾನ ನಡೆದಿದೆ. ಈ ಚುನಾವಣೆಯು ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ(ಎಸ್‌ಐಆರ್) ವಿಚಾರದಲ್ಲಿ ಬಿಜೆಪಿ ಮತ್ತು ತೃಣಮೂಲ ಕಾಂಗ್ರೆಸ್ ಸೇರಿದಂತೆ ವಿರೋಧ ಪಕ್ಷಗಳಲ್ಲಿನ ಭಿನ್ನಾಭಿಪ್ರಾಯಗಳ ನಡುವೆ ನಡೆದಿದೆ.

ಪಶ್ಚಿಮ ಬಂಗಾಳದಲ್ಲಿ ಮಮತಾ ಬ್ಯಾನರ್ಜಿ ನೇತೃತ್ವದ ತೃಣಮೂಲ ಕಾಂಗ್ರೆಸ್ ನಾಲ್ಕನೇ ಅವಧಿಗೆ ಅಧಿಕಾರದಲ್ಲಿರಲು ಪ್ರಯತ್ನಿಸುತ್ತಿದ್ದು, ಬಿಜೆಪಿ ಮೊದಲ ಬಾರಿಗೆ ರಾಜ್ಯದಲ್ಲಿ ಅಧಿಕಾರಕ್ಕೇರಲು ಯತ್ನಿಸುತ್ತಿದೆ. ➡ಪುಟ ೪

> **ಪಶ್ಚಿಮ ಬಂಗಾಳ ಮತ್ತು ತಮಿಳುನಾಡು ರಾಜ್ಯಗಳಲ್ಲಿ ಸ್ವಾತಂತ್ರ್ಯ ನಂತರದ ಅತ್ಯಧಿಕ ಮತದಾನ ದಾಖಲಾಗಿದೆ. ಇದು ಭಾರತೀಯ ಪ್ರಜಾಪ್ರಭುತ್ವದ ಮಹತ್ವದ ಕ್ಷಣ.**
> ■ **ಜ್ಞಾನೇಶ್ ಕುಮಾರ್,** ಮುಖ್ಯ ಚುನಾವಣಾ ಆಯುಕ್ತ

- ಪ.ಬಂಗಾಳದಲ್ಲಿ ಹಲವಾರು ಕ್ಷೇತ್ರಗಳಲ್ಲಿ ಹಿಂಸಾಚಾರ, ಮತದಾರರಿಗೆ ಬೆದರಿಕೆ, ಬಿಜೆಪಿ ಅಭ್ಯರ್ಥಿಗಳ ಮೇಲೆ ದಾಳಿ
- ಹಿಂಸಾಚಾರ ಘಟನೆಗಳ ಬಗ್ಗೆ ವಿವರವಾದ ವರದಿ ಸಲ್ಲಿಸಲು ಚುನಾವಣಾ ಆಯೋಗ ಸೂಚನೆ
- ಮುರ್ಷಿದಾಬಾದ್‌ನಲ್ಲಿ ಎಜೆಯುಪಿ ಮತ್ತು ಟಿಎಂಸಿ ಬೆಂಬಲಿಗರ ನಡುವೆ ಘರ್ಷಣೆ, ಲಾಠಿಚಾರ್ಜ್, ವಾಹನಗಳಿಗೆ ಹಾನಿ
- ತಮಿಳುನಾಡಿನ ಕೆಲವು ಮತಗಟ್ಟೆಗಳಲ್ಲಿ ಸಣ್ಣ ಮಟ್ಟದ ಘರ್ಷಣೆ, ಕೆಲವೆಡೆ ಮತಯಂತ್ರಗಳಿಗೆ ಹಾನಿ
- ಮತ ಚಲಾಯಿಸುವ ವಿಡಿಯೋ ಹಂಚಿಕೊಂಡವನ ಬಂಧನ
- ಚೆನ್ನೈ, ಕಾಂಚೀಪುರಂ, ನಮಕ್ಕಲ್, ಕೃಷ್ಣಗಿರಿ ಸೇರಿದಂತೆ ಹಲವೆಡೆ ಮದುವೆ ಉಡುಪಿನಲ್ಲೇ ಮತ ಚಲಾಯಿಸಿ, ಗಮನ ಸೆಳೆದ ನವಜೋಡಿಗಳು

ಬಿಜೆಪಿ ಅಭ್ಯರ್ಥಿಗಳ ಮೇಲೆ ಟಿಎಂಸಿ ಹಲ್ಲೆ

ತೃಣಮೂಲ ಕಾಂಗ್ರೆಸ್ ಮತ್ತು ಬಿಜೆಪಿ ಕಾರ್ಯಕರ್ತರ ನಡುವೆ ಹಲವೆಡೆ ಘರ್ಷಣೆಗಳು ನಡೆದಿವೆ. ಬಿಜೆಪಿ ಅಭ್ಯರ್ಥಿಗಳಾದ ಸುವೇಂದು ಸರ್ಕಾರ್, ಅಗ್ನಿಮಿತ್ರಾ ಪೌಲ್ ಮೇಲೆ ಟಿಎಂಸಿ ಗೂಂಡಾಗಳು ಹಲ್ಲೆ ನಡೆಸಿದ್ದಾರೆ.

ಟಿಎಂಸಿ ಗೂಂಡಾಗಳ ಅಟ್ಟಹಾಸ ◆ಪುಟ ೭

ಇರಾನ್ ಸಣ್ಣ ದೋಣಿಗಳ ಧ್ವಂಸಕ್ಕೆ ಟ್ರಂಪ್ ಹುಕುಂ

ಮಧ್ಯಪ್ರಾಚ್ಯ ಸಮರಾಂಗಣ

◆**ದುಬೈ:** ಹಾರ್ಮುಜ್ ಜಲಸಂಧಿಯ ಆಸುಪಾಸಿನ ಪ್ರದೇಶಗಳಲ್ಲಿ ಹಡಗುಗಳಿಗೆ ಹಾನಿ ಮಾಡಬಲ್ಲ ಸ್ಫೋಟಕಗಳನ್ನು ಕಡಲಿನಾಳದಲ್ಲಿ ಹುದುಗಿಸಿ ಇಡಬಲ್ಲ ಸಣ್ಣ ಇರಾನ್ ದೋಣಿಗಳು ಎದುರಾದರೆ ಅವುಗಳನ್ನು ಧ್ವಂಸಗೊಳಿಸಿ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಶೂಟ್ ಆ್ಯಂಡ್ ಕಿಲ್ ಆದೇಶ ನೀಡಿದ್ದಾರೆ. ಜಲಸಂಧಿ ಮುಚ್ಚಿರುವ ಸಂದರ್ಭ ಇರಾನ್ ತೈಲವನ್ನು ಕಳ್ಳಸಾಗಣೆ ಮಾಡುತ್ತಿದ್ದ ತೈಲ ಹಡಗೊಂದನ್ನು ಅಮೆರಿಕ ಸೇನೆ ವಶಪಡಿಸಿದ್ದಾಗಿ ಅಧ್ಯಕ್ಷ ಟ್ರಂಪ್ ಸಾಮಾಜಿಕ ಜಾಲತಾಣದಲ್ಲಿ ಹೇಳಿಕೊಂಡಿದ್ದಾರೆ.ಜಾಗತಿಕತೈಲಮತ್ತುಅನಿಲಪೂರೈಕೆಯಶೇ.20ರಷ್ಟು ಪಾಲು ಹಾರ್ಮುಜ್ ಅನ್ನು ದಾಟಿ ಹೋಗುತ್ತವೆ.ಹಾರ್ಮುಜ್ ಆಸುಪಾಸಿನ ಸಮುದ್ರ ದಾಳದಲ್ಲಿ ಬಾಂಬ್‌ಗಳನ್ನು ಹುದುಗಿಸಿಡಲು ಬರುವ ಇರಾನ್‌ನ ಸಣ್ಣ ದೋಣಿಗಳನ್ನು ಗುಂಡಿನ ದಾಳಿ ನಡೆಸಿ ಧ್ವಂಸಗೊಳಿಸಲು ಅಮೆರಿಕ ನೌಕಾಪಡೆಗೆ ಆದೇಶ ನೀಡಿದ್ದೇನೆ ಎಂದು ಟ್ರಂಪ್ ಟ್ರುಥ್ ಸೋಶಿಯಲ್‌ನಲ್ಲಿ ಬರೆದಿದ್ದಾರೆ. ➡ಪುಟ ೪

ಮೇ 9ಕ್ಕೆ ಬಿಎಸ್‌ವೈ ಅಭಿಮಾನೋತ್ಸವ

◆**ಬೆಂಗಳೂರು:** ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ಐದು ದಶಕಗಳ ರಾಜಕೀಯ ಪಯಣದ ಸಂಭ್ರಮಾಚರಣೆಯ ಅಭಿಮಾನೋತ್ಸವ ಕಾರ್ಯಕ್ರಮ ಮೇ 9ರಂದು ಚಿತ್ರದುರ್ಗದಲ್ಲಿ ನಡೆಯಲಿದೆ ಎಂದು ಸಂಸದ ಗೋವಿಂದ ಕಾರಜೋಳ ತಿಳಿಸಿದ್ದಾರೆ. ➡ಪುಟ ೪

ಸಾರ್ಥಕ 50 ವರ್ಷ
BSY
ಅಭಿಮಾನೋತ್ಸವ

- ಯಡಿಯೂರಪ್ಪರ 5 ದಶಕಗಳ ರಾಜಕೀಯ ಪಯಣದ ಸಂಭ್ರಮ
- ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ ಕೇಂದ್ರ ಗೃಹ ಸಚಿವ ಶಾ
- 10 ಲಕ್ಷ ಮಂದಿ ಭಾಗಿ ನಿರೀಕ್ಷೆ

ಮೋದಿ ವಿರುದ್ಧ ಖರ್ಗೆ ಹೇಳಿಕೆಗೆ ಬಿಜೆಪಿ ಖಂಡನೆ

◆**ಬೆಂಗಳೂರು:** ಇಡೀ ವಿಶ್ವವೇ ಮೋದಿ ಅವರ ನಾಯಕತ್ವವನ್ನು ಒಪ್ಪಿಕೊಳ್ಳುವ ಸಂದರ್ಭದಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಮೋದಿ ಅವರನ್ನು ಭಯೋತ್ಪಾದಕರೆಂದು ಹೇಳಿದ್ದು ಬಿಜೆಪಿ ಮಾತ್ರವಲ್ಲದೇ ಇಡೀ ದೇಶ ಇದನ್ನು ಬಲವಾಗಿ ಖಂಡಿಸುತ್ತದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ತಿಳಿಸಿದ್ದಾರೆ. ಪ್ರಧಾನಿ ಮೋದಿ ಅವರನ್ನು ಉಗ್ರವಾದಿ ಎಂದು ಹೇಳಿದ ಎಐಸಿಸಿ ಅಧ್ಯಕ್ಷ ಖರ್ಗೆ ಹೇಳಿಕೆ ಖಂಡಿಸಿ ವಿಧಾನಸೌಧದ ಗಾಂಧಿ ಪ್ರತಿಮೆ ಬಳಿ ಗುರುವಾರ ಏರ್ಪಡಿಸಿದ್ದ ಪ್ರತಿಭಟನೆಯಲ್ಲಿ ಅವರು ಮಾತನಾಡಿದರು. ➡ಪುಟ ೪

ಬಿಸಿಲ ಝಳಕ್ಕೆ ಬೆದರಿದ ಕರಾವಳಿ ಜನ

◆**ಮಂಗಳೂರು:** ದಕ್ಷಿಣ ಕನ್ನಡ ಸೇರಿ ಕರಾವಳಿ ಜಿಲ್ಲೆಗಳಲ್ಲಿ ದಿನೇ ದಿನೇ ತಾಪಮಾನ ಏರಿಕೆಯಾಗುತ್ತಿದ್ದು, ಜನತೆಯ ಆರೋಗ್ಯದ ಮೇಲೆ ಪರಿಣಾಮ ಉಂಟುಮಾಡುತ್ತಿದೆ. ➡ಪುಟ ೪

100 YEARS
Late. S. L. SHET
FOUNDER
LADYHILL
M. RAVINDRA SHET
S/o. S. L. Shet
Managing Partner
Celebrating 78 years
GOLD KING
ESTD : 1947
LADYHILL
Samruddhi Scheme
Monthly Instalment of
₹2,000, ₹4,000, ₹6,000, ₹8,000, ₹10,000
Gold Secure Scheme
Monthly Instalment of
₹3,000, ₹5,000, ₹10,000,
₹15,000, ₹20,000
Note: Minimum ₹3,000 per Month
We deal with Gold, Diamond, Silver articles
Momentz, Silver & Gold Photos of Deities
Luxury Watches, Gift items
Timings: 10.30 AM to 8.00 PM (All days) Open on all Sundays
ESTD: 1947
S. L. SHET DIAMOND HOUSE™
LADYHILL
Opp. Mangala Swimming Pool, Near Narayana Guru Circle, Ladyhill, Mangaluru-575003
Phone: 2453262, 2456262, Mobile: +91 98456 58555
#slshet www.slshet.com
SCAN TO LOCATE
*T&C Apply

SHAKTHI PU COLLEGE
Shakthinagar , Mangalore
ADMISSIONS OPEN FOR PU COLLEGE
AY 2026–27
Enroll now and provide them with the tools they need to succeed in a supportive learning environment.
NEET • JEE • KCET Integrated Coaching
Well-equipped library for excellent learning
Regular Tests, Revision & Doubt-Clearing Sessions
Industrial Visits & Practical Exposure
ENROLL NOW
CONTACT US
9686000046, 9108043552
shakthi.edu.in

ALVA'S
Education Foundation®
ALVA'S HIGH SCHOOL
PUTHIGE, MOODUBIDIRE, D.K. - 574227
SSLC RESULTS 2026
139 STUDENTS SCORED ABOVE 95% IN THE FINAL BOARD EXAM
Above 600 Marks 75 Students
Above 90% 300 Students
Above 85% 432 Students
4th State Rank 622 SADHVI PV
5th State Rank 621 PRITHVIRAJ REDDY
6th State Rank 620 ADARSH ANAND
7th State Rank 619 LAKSHMI S
7th State Rank 619 PAVANA KUMAR
ADMISSIONS OPEN 2026-27
ALVA'S English Medium School (State Syllabus NCERT) 1st to 10th Std
ALVA'S Central School (Affiliated to CBSE, New Delhi) GRADE 1 to 12
ALVA'S ICSE School (Affiliated to CISCE, New Delhi) GRADE 1 to 10
STRUCTURED NEET-IIT FOUNDATION COACHING FOR CLASSES 6 - 10 ACROSS CBSE, ICSE & STATE BOARDS
77602 72525, 70265 29757
ALVA'S PU COLLEGE ADMISSIONS OPEN 2026-27
SCIENCE
PCMB | PCMC
PCMS | PCME
NEET | JEE | CET
NATA | NDA
COMMERCE
EBAC | EBAS | EBAH
BASBM | BAEBM
CA | CS | NDA
CLAT | CIVIL SERVICE
ARTS
HEPS
CLAT | NDA
CIVIL SERVICE
STUDENTS CAN AVAIL MERIT BASED SCHOLARSHIPS BASED ON THIER ON BOARDS' SCORES
NEET LONG TERM 2026-27
63663 77823 / 63663 77825 / 63663 77827

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: 2,65,000 (2,65,000) ಅಪರಂಜಿ ಚಿನ್ನ: 1,54,750 (1,54,750) ಆಭರಣ ಚಿನ್ನ: 1,41,850 (1,41,850) ಚಿನ್ನ 10 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)

ಷೇರು ಸೂಚ್ಯಂಕ ಬಿಎಸ್‌ಇ 78,516 (756↓) ಎನ್‌ಎಸ್‌ಇ 24,378 (198↓)

$1 = ₹92.93

ಕಿರುಸುದ್ದಿ

ಮಾಲಾರ್ಪಣೆ ಇಂದು

◆**ಹುಬ್ಬಳ್ಳಿ:** ಡಾ. ರಾಜಕುಮಾರ್ ಅವರ 97ನೇ ಜಯಂತಿ ಅಂಗವಾಗಿ ಏ.24ರಂದು ಬೆಳಗ್ಗೆ 10 ಗಂಟೆಗೆ ನಗರದ ಗಬ್ಬೂರ ಬೈಪಾಸ್‌ನಲ್ಲಿರುವ ವೃತ್ತದಲ್ಲಿ ಡಾ. ರಾಜಕುಮಾರ್ ಅವರ ಕಂಚಿನ ಪುತ್ಥಳಿಗೆ ಮಾಲಾರ್ಪಣೆ ಮಾಡಲಾಗುವುದು ಎಂದು ಕನ್ನಡಿಗರ ನಾಮಕರಣ ಚಳುವಳಿ ಹೋರಾಟ ಸಮಿತಿಯ ರಾಜ್ಯಾಧ್ಯಕ್ಷ ಶಿವಾನಂದ ಮುತ್ತಣ್ಣವರ ಹೇಳಿದರು.

ನಗರದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂಜೆ 5ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಡಾ.ರಾಜ ಗಾನಕಲಾ ರತ್ನ ಪ್ರಶಸ್ತಿ ಪುರಸ್ಕೃತ ಡಾ.ಗುರು ಚಲವಾದಿ ಕಲಾ ತಂಡದಿಂದ ಡಾ.ರಾಜಕುಮಾರ ಅಭಿನಯದ ಚಿತ್ರ ಗೀತೆಗಳ ಮಧುರ ಮಧುರವೀ ಮಂಜುಳ ಗಾನ ಶೀರ್ಷಿಕೆ ಅಡಿಯಲ್ಲಿ ಸಂಗೀತ ರಸಮಂಸರಿ ಕಾರ್ಯಕ್ರಮ ನಡೆಯಲಿದೆ ಎಂದರು. ಹುಬ್ಬಳ್ಳಿಯ ಜ್ಯೂನಿಯರ್ ರಾಜಕುಮಾರ ಗಂಗಾಧರಯ್ಯ ಹಿರೇಮಠ ವಿಶೇಷ ಪ್ರದರ್ಶನ ನೀಡಲಿದ್ದಾರೆ. ಉದ್ಘಾಟನೆಯನ್ನು ಅನಿಲಕುಮಾರ ಪಾಟೀಲ ಮಾಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ನಾಗೇಶ ಕಲಬುರ್ಗಿ, ಚಂದ್ರಶೇಖರ್ ಜುಟ್ಟಲ, ಅಡಿವೆಪ್ಪ ಶಿವಳ್ಳಿ ಸೇರಿದಂತೆ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು. ಬೆಂಗಳೂರಿನ ಎರಡನೇ ಟರ್ಮಿನಲ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಡಾ. ರಾಜಕುಮಾರ ಅವರ ಹೆಸರು ನಾಮಕರಣ ಮಾಡಲು ಆಗ್ರಹಿಸಿ ಏ.25ರಂದು ಘಂಟಿಕೇರಿಯಿಂದ ಸಚಿವರ ನಿವಾಸದವರೆಗೆ ಪಾದಯಾತ್ರೆ ನಡೆಸಿ ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಅವರಿಗೆ ಮನವಿ ಸಲ್ಲಿಸಲಾಗುವುದು ಎಂದು ತಿಳಿಸಿದರು. ಗುರುರಾಜ ಚಲವಾದಿ ಇದ್ದರು.

ಏ.26ರಿಂದ ವಸ್ತು ಪ್ರದರ್ಶನ

◆**ಹುಬ್ಬಳ್ಳಿ:** ಹುಬ್ಬಳ್ಳಿ-ಧಾರವಾಡ ಜಿಲ್ಲಾ ಲೈಸನ್ಸ್ಡ್ ಪ್ಲಂಬರ್ ಸಂಘ ರಜತ್ ಮಹೋತ್ಸವ ಅಂಗವಾಗಿ ನಗರದ ಇಂದಿರಾ ಗಾಜಿನ ಮನೆಯಲ್ಲಿ ಏ.26 ಹಾಗೂ 27 ರಂದು ಪ್ಲಂಬಿಂಗ್ ವಸ್ತು ಪ್ರದರ್ಶನವನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಗೌರವ ಕಾರ್ಯಾಧ್ಯಕ್ಷ ಡಾ.ಎಂ. ಆರ್.ಪಾಟೀಲ್ ಹೇಳಿದರು.

ನಗರದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಏ.26ರಂದು ಸಂಘದ ರಜತ ಮಹೋತ್ಸವ ಸಮಾರಂಭಕ್ಕೆ ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಚಾಲನೆ ನೀಡಿದ್ದಾರೆ. ವಸ್ತು ಪ್ರದರ್ಶನವನ್ನು ಸಚಿವ ಸಂತೋಷ ಲಾಡ್ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸಂಸದ ಜಗದೀಶ್ ಶೆಟ್ಟರ್, ಶಾಸಕ ಪ್ರಸಾದ್ ಅಬ್ಬಯ್ಯ, ಅರವಿಂದ ಬೆಲ್ಲದ, ಮಹೇಶ ಟೆಂಗಿನಕಾಯಿ, ಎನ್.ಎಚ್.ಕೋನರೆಡ್ಡಿ, ಎಂ.ಆರ್.ಪಾಟೀಲ್, ಹು-ಧಾ ಮಹಾನಗರ ಪಾಲಿಕೆ ಮೇಯರ್ ಜ್ಯೋತಿ ಪಾಟೀಲ್, ವಿಪ ಸದಸ್ಯ ಪ್ರದೀಪ ಶೆಟ್ಟರ್, ಸಲೀಂ ಅಹ್ಮದ್ ಭಾಗವಹಿಸಲಿದ್ದಾರೆ ಎಂದರು.

ಎರಡು ದಿನಗಳ ವಸ್ತು ಪ್ರದರ್ಶನದಲ್ಲಿ 42 ಮಳಿಗೆಗಳಿದ್ದು, ಇವುಗಳಲ್ಲಿ ಪ್ಲಂಬಿಂಗ್ ವಸ್ತುಗಳು, ಪರಿಕರಗಳು, ಉಪಕರಣಗಳು, ಮಳೆ ನೀರು ಕೊಯ್ಲು, ನೀರಿನ ಮಿತ ಬಳಕೆ ಪರಿಕರಗಳು, ದ್ವಿಚಕ್ರ ವಾಹನಗಳು ಹಾಗೂ ಮನೆ ತೋಟದ ನೀರಾವರಿ ಉಪಕರಣಗಳ ವಸ್ತು ಪ್ರದರ್ಶನ ನಡೆಯಲಿದೆ ಎಂದರು.

ಈ ಕಾರ್ಯಕ್ರಮದಲ್ಲಿ ಹಿರಿಯ ಪ್ಲಂಬರ್‌ಗಳಿಗೆ ಗೌರವ ಸನ್ಮಾನ, ರಕ್ತದಾನ ಶಿಬಿರ, ಪ್ಲಂಬರ್‌ಗಳ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಮತ್ತು ಪ್ಲಂಬರ್ ಸಂಘದ ಆಧುನಿಕ ತಂತ್ರಜ್ಞಾನದ ಪ್ಲಂಬರ್ ಪರಿಕರಗಳ ಹಾಗೂ ಉಪಕರಣಗಳ ಪರಿಚಯ, ನವೀನ ಪ್ಲಂಬಿಂಗ್ ತಂತ್ರಜ್ಞಾನ ತರಬೇತಿ ಶಿಬಿರ ಏರ್ಪಡಿಸಲಾಗಿದೆ ಎಂದರು. ಏ.27ರಂದು ಸಂಜೆ 4 ಗಂಟೆಗೆ ಸಮಾರೋಪ ಸಮಾರಂಭ ನಡೆಯಲಿದೆ. ಮುಖ್ಯ ಅತಿಥಿಗಳಾಗಿ ಜಿಲ್ಲಾಧಿಕಾರಿ ಸ್ನೇಹಾಲ್ ಆರ್., ಹು-ಧಾ ಪೊಲೀಸ್ ಆಯುಕ್ತ ಎನ್.ಶಶಿಕುಮಾರ್, ಪಾಲಿಕೆ ಆಯುಕ್ತ ರುದ್ರೇಶ ಘಾಳಿ ಭಾಗವಹಿಸಲಿದ್ದಾರೆ ಎಂದರು.

ಸಂಘದ ಅಧ್ಯಕ್ಷ ಮಕಬೂಲಸಾಬ ಉಂಟವಾಲೆ, ಸಹ ಉಪಾಧ್ಯಕ್ಷರಾದ ಹನುಮಂತಪ್ಪಾ ಮಜ್ಜವಡ್ಡರ, ಕಾರ್ಯಕಾರಿಣಿ ಸದಸ್ಯರಾದ ಅಬ್ದುಲನಬಿ ನದಾಫ್, ತೌಸಿಫ್ ಇಲಕಲ್ಲ ಇದ್ದರು.

ಗಿರಿಜಾ ವಾಳ್ವೇಕರ್ ನಿಧನ

◆**ಧಾರವಾಡ:** ಇಲ್ಲಿನ ಸಾರಸ್ವತಪುರ ನಿವಾಸಿ ಗಿರಿಜಾ ನಾರಾಯಣ ಮೂರ್ತಿ ವಾಳ್ವೇಕರ (76) ಅವರು ಬುಧವಾರ ಧಾರವಾಡದ ಸ್ವಗೃಹದಲ್ಲಿ ನಿಧನರಾದರು.

ಮೃತರು ಪತಿ ಕೇಂದ್ರ ಸರ್ಕಾರಿ ಸ್ವಾಮ್ಯದ ಬಿ.ಎಸ್.ಎನ್.ಎಲ್ ಸಂಸ್ಥೆಯ ನಿವೃತ್ತ ಹಿರಿಯ ಅಧಿಕಾರಿ ಎನ್.ಕೆ.ವಾಳ್ವೇಕರ, ಪುತ್ರ ಕರ್ನಾಟಕ ಮಾಹಿತಿ ಆಯೋಗದ ರಾಜ್ಯ ಮಾಹಿತಿ ಆಯುಕ್ತ ಡಾ.ಮಹೇಶ ವಾಳ್ವೇಕರ್ , ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಬುಧವಾರ ಧಾರವಾಡದ ಹೊಸಯಲ್ಲಾಪುರದ ರುದ್ರಭೂಮಿಯಲ್ಲಿ ಜರುಗಿತು.

ಇವರ ನಿಧನಕ್ಕೆ ಹು- ಧಾ ಮೇಯರ್ ಜ್ಯೋತಿ ಪಾಟೀಲ್, ಮಾಜಿ ಮೇಯರ್ ಆದ ಹನುಮಂತ ಡಂಬಳ, ಈರೇಶ ಅಂಚಟಗೇರಿ, ಗಣ್ಯರಾದ ಶ್ರೀಧರ ನಾಡಿಗೇರ್, ಶಂಕರ ಹಲಗತ್ತಿ, ಎಸಿಪಿ ಪ್ರಶಾಂತ್ ಸಿದ್ದನಗೌಡರ್, ಮಲ್ಲಿಕಾರ್ಜುನ ಚಿಕ್ಕಮಠ, ಸಾಹಿತ್ಯ ಪರಿಷತ್ ಅಧ್ಯಕ್ಷ ಲಿಂಗರಾಜ ಅಂಗಡಿ, ಚಂದ್ರಶೇಖರ ಅಮಿನಗಡ, ಗಿರೀಶ ಪದಕಿ , ಆರ್. ಎಂ. ಕುಲಕರ್ಣಿ, ಆರ್.ಎಂ. ಗುತ್ತಲ , ವಿಲ್ಸನ್ ಮೈಲಿ , ಕೆ.ಎಚ್. ನಾಯಕ , ನಿರುಪಾದಿ ಕಾಂಬಳೆ, ಕವಿವಿ ಯ ಪ್ರೊ. ಚಂದುನವರ್ ಸೇರಿದಂತೆ ಹಲವು ಗಣ್ಯರು, ಅಧಿಕಾರಿಗಳು, ಸಾಮಾಜಿಕ ಕಾರ್ಯಕರ್ತರು, ಮುಖಂಡರುಗಳು ಸಂತಾಪ ಸಭೆಯಲ್ಲಿ ಶ್ರದ್ಧಾಂಜಲಿ ಸಲ್ಲಿಸಿದರು.

ಹುಬ್ಬಳ್ಳಿ: ಇಲ್ಲಿಯ ನವನಗರ ಎಬಿಸಿ ಫಿಟ್ನೆಸ್ ಹಾಗೂ ಜಿಮ್ ವತಿಯಿಂದ ವಿಶ್ವ ಭೂಮಿ ದಿನ ಆಚರಿಸಲಾಯಿತು. ಈ ವೇಳೆ ನಗರದಲ್ಲಿ ಬಿಸಿಲು ಜಾಸ್ತಿ ಇರುವ ನವನಗರದ ಸುತ್ತಮುತ್ತಲಿನ ಪ್ರದೇಶದಲ್ಲಿ ಪಕ್ಷಿಗಳಿಗೆ ನೀರು ಇಡುವ ಮೂಲಕ ಅವುಗಳ ದಾಹ ನಿಗಿಸುವ ಕಾರ್ಯ ಮಾಡಿದ್ದಾರೆ. ಜಿಮ್‌ನ ಮಾಲೀಕರಾದ ಸುನೀಲ ಜಂಗಾನಿ, ಆಕಾಶ ಸೊಗಲದ, ಶಿವು, ಮಧುರಾ ಇತರರಿದ್ದರು.

ಇಂದು ರಾಷ್ಟ್ರ ಮಟ್ಟದ 4ನೇ ಸಂಧಾನ ಸ್ಪರ್ಧೆ

◆**ಹುಬ್ಬಳ್ಳಿ:** ವಿದ್ಯಾನಗರ ಕೆಎಲ್‌ಇ ಸಂಸ್ಥೆಯ ಜಿ.ಕೆ. ಕಾನೂನು ಕಾಲೇಜ್‌ನಲ್ಲಿ ಏ.24ರಂದು ಎರಡು ದಿನಗಳ ರಾಷ್ಟ್ರ ಮಟ್ಟದ 4ನೇ ಸಂಧಾನ ಸ್ಪರ್ಧೆ ಹಮ್ಮಿಕೊಳ್ಳಲಾಗಿದೆ ಎಂದು ಕಾಲೇಜಿನ ಪ್ರಾಚಾರ್ಯ ಡಾ. ಜ್ಞಾನೇಶ್ವರ ಚೌರಿ ತಿಳಿಸಿದರು. ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಧಾರವಾಡದ ಪಾರಂಪರಿಕ ಪೇಡೆ ವಿಷಯವನ್ನು ಸ್ಪರ್ಧೆಗೆ ಆಯ್ದುಕೊಳ್ಳಲಾಗಿದೆ. ಮುಂಬೈ, ಬೆಂಗಳೂರು, ಬೆಳಗಾವಿ, ಉಡುಪಿ, ಕಲಬುಗಿರ್, ವಿಜಯಪುರ ಸೇರಿ ವಿವಿಧ ಕಡೆಗಳಿಂದ 22 ಕಾಲೇಜಿನ ತಂಡಗಳು ಸ್ಪರ್ಧೆಯಲ್ಲಿ ಭಾಗವಹಿಸಲಿವೆ. ಪ್ರತಿ ತಂಡದಲ್ಲಿ ಇಬ್ಬರು ವಿದ್ಯಾರ್ಥಿಗಳು ಇರುತ್ತಾರೆ. 50ಕ್ಕೂ ಹೆಚ್ಚು ವಕೀಲರು, ತಜ್ಞರು ನಿರ್ಣಾಯಕರಾಗಿ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು. ಸಂಯೋಜಕ ಜೈ ಹನುಮಾನ ಮಾತನಾಡಿ, ಏ.24ರಂದು ಬೆಳಗ್ಗೆ 9ಕ್ಕೆ ಹೈಕೋರ್ಟ್ ನ್ಯಾಯಾಧೀಶ ಬಿ.ಎಂ. ಶ್ಯಾಮ ಪ್ರಸಾದ ಅವರು ಕಾರ್ಯಕ್ರಮ ಉದ್ಘಾಟಿಸುವರು. ಕವಿವಿ ಕಾನೂನು ವಿಭಾಗದ ಮಾಜಿ ಡೀನ್ ಡಾ. ಸಿ. ರಾಜಶೇಖರ, ಡಾ. ಬಾಬುಗೌಡ ಪಾಟೀಲ ಅತಿಥಿಗಳಾಗಿ ಪಾಲ್ಗೊಳ್ಳುವರು. ಕೆಎಲ್‌ಇ ನಿರ್ದೇಶಕ ಜಯಾನಂದ ಮುನವಳ್ಳಿ ಅಧ್ಯಕ್ಷತೆ ವಹಿಸುವರು ಎಂದರು. ಸ್ಪರ್ಧೆ ಸಂಯೋಜಕಿ ಡಾ. ಶಾರದಾ ಜಿ. ಪಾಟೀಲ ಮಾತನಾಡಿದರು. ಏ. 25ರಂದು ಮಧ್ಯಾಹ್ನ 2.30ಕ್ಕೆ ಸಮಾರೋಪ ನಡೆಯಲಿದ್ದು, ನಿವೃತ್ತ ನ್ಯಾಯಾಧೀಶ ಅನಿಲ ಕಟ್ಟಿ, ಕವಿವಿ ಕಾನೂನು ವಿಭಾಗದ ಡೀನ್ ಡಾ. ಎಂ. ವಿಶ್ವನಾಥ, ವಕೀಲ ಎಂ.ಬಿ. ಹಿರೇಮಠ ಅತಿಥಿಗಳಾಗಿ ಪಾಲ್ಗೊಳ್ಳುವರು. ಎಲ್‌ಜಿಬಿ ಸದಸ್ಯ ವಿವೇಕ ಗಬ್ಬೂರ ಅಧ್ಯಕ್ಷತೆ ವಹಿಸುವರು ಎಂದರು.

ಹುಬ್ಬಳ್ಳಿ: ನಗರದ ಅನಂತ ಸೇವಾ ಫೌಂಡೇಶನ್ ವತಿಯಿಂದ ವಿದ್ಯಾರ್ಥಿಗಳು ಕ್ರೀಡಾ ಚಟುವಟಿಕೆಯಲ್ಲಿ ಭಾಗವಹಿಸಲು ಕ್ರೀಡಾ ಸಾಮಗ್ರಿಗಳ ವಿತರಿಸಲಾಯಿತು. ವಿಏಕೆ ಫೌಂಡೇಶನ್ ಅಧ್ಯಕ್ಷ ವೆಂಕಟೇಶ ಕಾಟವೆ, ಅನಂತ ಸೇವಾ ಫೌಂಡೇಶನ್ ಧಾರವಾಡ ಜಿಲ್ಲಾ ಅಧ್ಯಕ್ಷ ಸಚಿನ್ ಪೂಜಾರಿ, ಸಚಿನ ಕಾಟವೆ ಹಾಗೂ ಶ್ರೀಧರ ಕಲಬುರಗಿ ಇದ್ದರು.

12ನೇ ಸ್ಥಾನಕ್ಕೇರಿದ ಧಾರವಾಡ | 175 ಶಾಲೆಗಳು ಶೇ.100ರ ಫಲಿತಾಂಶ

ಶೇ.95.58ರಷ್ಟು ಫಲಿತಾಂಶ ದಾಖಲು

◆**ಧಾರವಾಡ:** ವಿದ್ಯಾಕಾಶಿ ಧಾರವಾಡ ಪಿಯುಸಿ ಪರೀಕ್ಷಾ ಫಲಿತಾಂಶದಲ್ಲಿ ಹಿನ್ನಡೆ ಅನುಭವಿಸಿದರೂ ಎಸ್ಸೆಸ್ಸೆಲ್ಸಿ ಫಲಿತಾಂಶದಲ್ಲಿ ಸುಧಾರಣೆ ಕಂಡಿದ್ದು, ಅಲ್ಲದೇ ರಾಜ್ಯ ಪಟ್ಟಿಯಲ್ಲಿ 18ನೇ ಸ್ಥಾನದಿಂದ 12ನೇ ಸ್ಥಾನಕ್ಕೆ ಏರಿಕೆ ಕಂಡಿದೆ.

ಧಾರವಾಡ ಜಿಲ್ಲೆಯು 2022ರಲ್ಲಿ ಶೇ.88.12ರಷ್ಟು ಫಲಿತಾಂಶ ಪಡೆದು, 22ನೇ ಸ್ಥಾನದಲ್ಲಿತ್ತು. 2023ರಲ್ಲಿ ಶೇ.86.09ರಷ್ಟು ಫಲಿತಾಂಶ ಪಡೆದು, 24ನೇ ಸ್ಥಾನದಲ್ಲಿತ್ತು. 2024ರಲ್ಲಿ ಶೇ.74.85 ಫಲಿತಾಂಶ ಪಡೆದು 23ನೇ ಸ್ಥಾನದಲ್ಲಿತ್ತು. 2025ರ ಕಳೆದ ವರ್ಷದಲ್ಲಿ ಸೇ.67.08 ಫಲಿತಾಂಶ ಪಡೆದು 18ನೇ ಸ್ಥಾನದಲ್ಲಿತ್ತು. ಇದೀಗ 2026ರಲ್ಲಿ ಶೇ. 95.38ರಷ್ಟು ಫಲಿತಾಂಶ ಪಡೆದು 12ನೇ ಸ್ಥಾನಕ್ಕೆ ಏರಿದೆ. 2021ರಲ್ಲಿ ಕೋವಿಡ್ ಸಮಯದಲ್ಲಿ ಶೇ.100ರಷ್ಟು ಫಲಿತಾಂಶ ಕೊಡಲಾಗಿತ್ತು. ಇದನ್ನು ಹೊರತು ಪಡಿಸಿದರೆ, ಕಳೆದ 16 ವರ್ಷಗಳಲ್ಲಿ ಹೆಚ್ಚು ಶೇ. 95.38ರಷ್ಟು ಫಲಿತಾಂಶ ಬಂದಿದ್ದು ಇದೇ ವರ್ಷ.

- ಒಟ್ಟು 450 ಶಾಲೆಗಳ ಪೈಕಿ ಸರ್ಕಾರದ 34
- ಅನುದಾನಿತ 47
- ಅನುದಾನ ರಹಿತ 77
- ಇತರೆ 17 ಶಾಲೆಗಳು
- ಒಟ್ಟು 175 ಶಾಲೆಗಳು ಶೇ.100 ಫಲಿತಾಂಶ

ವಿದ್ಯಾರ್ಥಿನಿಯರೇ ಮೇಲುಗೈ

ಈ ಬಾರಿ 12623 ಬಾಲಕರು, 13491 ಬಾಲಕಿಯರು ಸೇರಿ 26114 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು, ಈ ಪೈಕಿ 11782 ಬಾಲಕರು, 13179 ಬಾಲಕಿಯರು ಸೇರಿ 24961 ವಿದ್ಯಾರ್ಥಿಗಳು ಪಾಸಾಗಿದ್ದಾರೆ. ಈ ಅಂಕಿ ಅಂಶ ಗಮನಿಸಿದರೆ ಶೇ.93.34ರಷ್ಟು ಬಾಲಕರು ಹಾಗೂ ಶೇ.97.69ರಷ್ಟು ಬಾಲಕಿಯರು ಪಾಸಾಗಿದ್ದಾರೆ.

> **ಕಠಿಣ ಪರಿಶ್ರಮ ಇದ್ದರೆ ಏನಾದರೂ ಸಾಧಿಸಬಹುದು ಎಂಬುದು ಗೊತ್ತಾಗಿದೆ. ಪಿಯುಸಿಯಲ್ಲಿ ವಿಜ್ಞಾನ ವಿಷಯದಲ್ಲಿ ಓದಿ ಎಂಜಿನಿಯರ್ ಆಗುವ ಕನಸಿದೆ.**
> ■ **ಪ್ರತೀಕ ಸರದಾರ, ವಿದ್ಯಾರ್ಥಿ**

ಜಿಲ್ಲೆಗೆ ಅಪೇಕ್ಷಾ ಪಾಟೀಲ ಪ್ರಥಮ

◆**ಧಾರವಾಡ:** ಎಸೆಸ್ಸೆಲ್ಸಿ ಪರೀಕ್ಷೆಯ ಫಲಿತಾಂಶ ಪ್ರಕಟಗೊಂಡಿದ್ದು, ಹುಬ್ಬಳ್ಳಿಯ ಚೇತನ ಪಬ್ಲಿಕ್ ಶಾಲೆಯ ವಿದ್ಯಾರ್ಥಿನಿ ಅಪೇಕ್ಷಾ ಪಾಟೀಲ 625ಕ್ಕೆ 623 ಅಂಕ ಪಡೆದು ಪ್ರಥಮ ಸ್ಥಾನ ಪಡೆದಿದ್ದಾರೆ. ಗಣಿತ, ಸಮಾಜ ವಿಜ್ಞಾನ ಹಾಗೂ ಹಿಂದಿ ವಿಷಯಗಳಿಗೆ 100ಕ್ಕೆ 100 ಅಂಕ, ಕನ್ನಡಕ್ಕೆ 125 ಅಂಕ ಹಾಗೂ ಇಂಗ್ಲಿಷ್ ಹಾಗೂ ವಿಜ್ಞಾನ ವಿಷಯಗಳಿಗೆ 99 ಸೇರಿ ಒಟ್ಟು 623 ಅಂಕ ಪಡೆದಿದ್ದಾಳೆ. ಧಾರವಾಡದ ಮಲ್ಲಸಜ್ಜನ ಇಂಗ್ಲಿಷ್ ಮಾಧ್ಯಮ ಶಾಲೆಯ ಪ್ರತೀಕ ಸರದಾರ ಗಣಿತ, ಇಂಗ್ಲಿಷ್, ಸಮಾಜ ವಿಜ್ಞಾನಕ್ಕೆ 100ಕ್ಕೆ 100, ಕನ್ನಡಕ್ಕೆ 125, ಹಿಂದಿ ಹಾಗೂ ವಿಜ್ಞಾನಕ್ಕೆ 98 ಸೇರಿ ಒಟ್ಟು 622 ಅಂಕ ಪಡೆದಿದ್ದಾನೆ. ನವಲಗುಂದ ತಿರ್ಲಾಪುರ ಸರ್ಕಾರಿ ಪ್ರೌಢಶಾಲೆಯ ಐಶ್ವರ್ಯ ಮಂಜುನಾಥ ರಾಯ್ಕರ್, ಹುಬ್ಬಳ್ಳಿಯ ಚಿನ್ಮಯ ವಿದ್ಯಾಲಯದ ಸಾಕ್ಷಿ ಕುಲಕರ್ಣಿ, ಹುಬ್ಬಳ್ಳಿಯ ಮದರ್ಸ್ ಮಾರ್ಸ್ ಶಾಲೆಯ ಪಲ್ಲವಿ ಮಂಜುನಾಥ ಮಾನೆ, ಆರ್‌ವಿಎಸ್ ಇಂಟರನ್ಯಾಶನಲ್ ಪಬ್ಲಿಕ್ ಶಾಲೆಯ ಪ್ರೇಮಾಭಾಯಿ ದೇಸಾಯಿ ತಲಾ 622 ಅಂಕ ಪಡೆದು ಜಿಲ್ಲೆಗೆ ದ್ವಿತೀಯ ಸ್ಥಾನ ಪಡೆದಿದ್ದಾರೆ. ಹುಬ್ಬಳ್ಳಿಯ ಕಾನ್ವೆಂಟ್ ಹೈಸ್ಕೂಲ್‌ನ ಮಧುಶ್ರೀ ಮಗಜಿಕೊಂಡಿ 621 ಅಂಕ ಪಡೆದು ತೃತೀಯ ಸ್ಥಾನ ಪಡೆದಿದ್ದಾರೆ.

ಶೇ.99.52ರಷ್ಟು ಅಂಕ

ನವಲಗುಂದ ತಿರ್ಲಾಪುರದ ನಾಗಮ್ಮ ಚನ್ನರೆಡ್ಡಿ ವೀರರೆಡ್ಡಿ ಸರ್ಕಾರಿ ಪ್ರೌಢ ಶಾಲೆ ವಿದ್ಯಾರ್ಥಿನಿ ಐಶ್ವರ್ಯ ಮಂಜುನಾಥ್ ರಾಯ್ಕರ 625 ಕ್ಕೆ 622 ಅಂಕ ಪಡೆದು ಜಿಲ್ಲೆಗೆ ದ್ವಿತೀಯ ಸ್ಥಾನ ಪಡೆದಿದ್ದಾಳೆ. ತಂದೆ ಬಂಗಾರ ವ್ಯಾಪಾರಸ್ಥರು. ತಾಯಿ ಗೃಹಿಣಿ. ಗ್ರಾಮದಲ್ಲಿಯೇ 1 ರಿಂದ 10 ನೇ ತರಗತಿ ವರೆಗೂ ಸರ್ಕಾರಿ ಶಾಲೆಯಲ್ಲಿ ಅಭ್ಯಾಸ ಮಾಡಿ, ಯಾವುದೇ ಟ್ಯೂಷನ್ ಹೋಗದೆ ಶಾಲೆ ಶೇ.99.52ರಷ್ಟು ಫಲಿತಾಂಶ ಪಡೆದಿದ್ದಾಳೆ ಐಶ್ವರ್ಯ.

> **ಶಿಕ್ಷಕರ ಮಾರ್ಗದರ್ಶನ, ವೈಯಕ್ತಿಕ ಅಧ್ಯಯನವೂ ಇತ್ತು. ತಂದೆ ಸಹ ಶಿಕ್ಷಕರು. ಹೀಗಾಗಿ ಹೆಚ್ಚಿನ ಓದಿಗೆ ಅವಕಾಶ ಸಿಕ್ಕಿತು. ಪಿಯುಸಿಯಲ್ಲಿ ವಿಜ್ಞಾನ ಕಲಿತು ನೀಟ್ ಬರೆದು ವೈದ್ಯಳಾಗುವ ಕನಸಿದೆ.**
> ■ **ಅಪೇಕ್ಷಾ ಪಾಟೀಲ, ಜಿಲ್ಲೆಗೆ ಪ್ರಥಮ ಸ್ಥಾನ ಪಡೆದ ವಿದ್ಯಾರ್ಥಿನಿ**

ಎಸ್‌ಎಸ್‌ಎಲ್‌ಸಿ: ಶೇ.93.91ರಷ್ಟು ಫಲಿತಾಂಶ

◆**ನವಲಗುಂದ:** ಎಸ್.ಎಸ್.ಎಲ್ .ಸಿ. ವಾರ್ಷಿಕ ಪರೀಕ್ಷಾ ಫಲಿತಾಂಶವು ಪ್ರಕಟವಾಗಿದ್ದು, ನವಲಗುಂದ ತಾಲೂಕಿನ ಫಲಿತಾಂಶ ಶೇ.93.91 ರಷ್ಟಾಗಿದೆ.

2687 ಮಕ್ಕಳು ಪರೀಕ್ಷೆಗೆ ಹಾಜರಾಗಿದ್ದು ಅವರಲ್ಲಿ ರೆಗ್ಯುಲರ್ ಫ್ರೆಶ್ ವಿದ್ಯಾರ್ಥಿಗಳು 2414 ಇದ್ದು ಇದರಲ್ಲಿ 2267 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ರೆಗ್ಯುಲರ್ ರಿಪೀಟರ್ ವಿದ್ಯಾರ್ಥಿಗಳು 203 ಇದ್ದು ಇದರಲ್ಲಿ 127 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಪ್ರೈವೆಟ್ ಫ್ರೆಶ್ ವಿದ್ಯಾರ್ಥಿಗಳು 60 ಇದ್ದು ಇದರಲ್ಲಿ 04 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಪ್ರೈವೇಟ್ ರಿಪೀಟರ್ ವಿದ್ಯಾರ್ಥಿಗಳು 10 ಇದ್ದು ಇದರಲ್ಲಿ 02 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಪರೀಕ್ಷೆಗೆ ಕುಳಿತ ಒಟ್ಟು ಬಾಲಕರ ಸಂಖ್ಯೆ 1360 ಹಾಗೂ ಬಾಲಕಿಯರ ಸಂಖ್ಯೆ 1327 ಇರುತ್ತದೆ. ಉತ್ತೀರ್ಣರಾದ ಬಾಲಕರ ಸಂಖ್ಯೆ 1133 ಹಾಗೂ ಬಾಲಕಿಯರ ಸಂಖ್ಯೆ 1267 ಇರುತ್ತದೆ. ಈ ಬಾರಿ ತಾಲೂಕಿನ ಒಟ್ಟು 51 ಶಾಲೆಗಳಿಂದ ಮಕ್ಕಳು ಪರೀಕ್ಷೆಗೆ ನೋಂದಾಯಿತರಾಗಿದ್ದಾರೆ.

ಆದೇ ರೀತಿಯಾಗಿ ಪರೀಕ್ಷೆಗೆ ಕುಳಿತ ರೆಗ್ಯುಲರ್ ಫ್ರೆಶ್ ವಿದ್ಯಾರ್ಥಿಗಳಲ್ಲಿ ಇಬ್ಬರು ವಿದ್ಯಾರ್ಥಿಗಳಾದ ಐಶ್ವರ್ಯ ರಾಯ್ಕರ, ಸರ್ಕಾರಿ ಪ್ರೌಢ ಶಾಲೆ ತಿರ್ಲಾಪೂರ ಹಾಗೂ ಪ್ರೇಮಾಬಾಯಿ ದೇಸಾಯಿ ಆರ್.ವಿ.ಎಸ್ ಪ್ರೌಢ ಶಾಲೆ ಖನ್ನೂರ 622 ಅಂಕಗಳನ್ನು ಪಡೆದು ಜಿಲ್ಲೆಯಲ್ಲಿ ಉನ್ನತ ಅಂಕಗಳನ್ನು ಪಡೆದು ಉತ್ತೀರ್ಣರಾಗಿರುತ್ತಾರೆಂದು ಹಾಗೂ ಜಗದ್ಗುರು ಅಜಾತ ನಾಗಲಿಂಗ ಸ್ವಾಮಿ ವಿದ್ಯಾಪೀಠದ ವಿದ್ಯಾರ್ಥಿನಿ ಲಕ್ಷ್ಮಿ ಸುಳ್ಳದ 616 ಅಂಕ, ಶಲವಡಿ ಗ್ರಾಮದ ಕರ್ನಾಟಕ ಪಬ್ಲಿಕ್ ಸ್ಕೂಲ್ ವಿದ್ಯಾರ್ಥಿನಿ ಸಹನಾ ಗುಡಗಿ 614 ಅಂಕ, ಮೊರಬ ಗ್ರಾಮದ ಡಾ. ಬಿ. ಆರ್. ಅಂಬೇಡ್ಕರ ವಸತಿ ಶಾಲೆ ವಿದ್ಯಾರ್ಥಿ ಪ್ರೀತಮ್ ದೊಡ್ಡಮನಿ 612 ಅಂಕ, ಬ್ಯಾಲಾಳ ಗ್ರಾಮದ ಎಸ್.ವಿ ಮತ್ತು ಎನ್.ಎಸ್. ಪಟ್ಟಣಶೆಟ್ಟಿ ಸರ್ಕಾರಿ ಶಾಲೆ ವಿದ್ಯಾರ್ಥಿ ರುದ್ರಮ್ಮ ಕುರಿ 612 ಅಂಕ, ಖನ್ನೂರ ಗ್ರಾಮದ ಆರ್. ವಿ. ಎಸ್ ಇಂಟರ್ನ್ಯಾಷನಲ್ ಪಬ್ಲಿಕ್ ಶಾಲೆ ವಿದ್ಯಾರ್ಥಿ ಪ್ರಣವ ಪಾಟೀಲ 612 ಅಂಕ ಪಡೆದು ಉತ್ತಮ ಸಾಧನೆ ಮಾಡಿದ್ದಾರೆ ಎಂದು ನವಲಗುಂದ ತಾಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿ ದೀಪಕ ಕುಲಕರ್ಣಿ ತಿಳಿಸಿದ್ದಾರೆ.

ಎಸ್‌ಎಸ್‌ಎಲ್‌ಸಿ: ವಿದ್ಯಾರ್ಥಿನಿಯರ ಸಾಧನೆ

◆**ಅಳ್ನಾವರ:** ತಾಲೂಕಿನ ಸರ್ಕಾರಿ ಪ್ರೌಢಶಾಲೆಯ ಬಿಂದು ದಾಸ್ತಿಕೊಪ್ಪ ಶೇ.96.48 (603) ಹಾಗೂ ಶ್ರೇಯಾ ಗೋದಗೇರಿಕರ ಶೇ. 96.48 (603) ಅಂಕಗಳನ್ನು ಪಡೆದು ಈರ್ವರು ಶಾಲೆಗೆ ಪ್ರಥಮ ಸ್ಥಾನ ಗಳಿಸಿದ್ದಾರೆ. ದೀಕ್ಷಿತಾ ರೇಡೆಕರ ಶೇ.95.52 (597) ದ್ವಿತೀಯ ಮತ್ತು ದೀಪಾ ಗಾಣಿಗೇರ ಶೇ. 95.36 (596) ಅಂಕ ಗಳಿಸಿ ತೃತೀಯ ಸ್ಥಾನ ಪಡೆದಿದ್ದಾರೆ. ಶಾಲೆಯ ಬಾಲಕಿಯರ ಉತ್ತಮ ಸಾಧನೆಗೆ ಎಸ್ .ಡಿ.ಎಂ.ಸಿ ಅಧ್ಯಕ್ಷ ಫಕೀರ ದಬಾಲಿ ಮತ್ತು ಮುಖ್ಯೋಧ್ಯಾಪಕ ಎಸ್.ಎಸ್.ಬೆನಕನಾಳ ಹರ್ಷವ್ಯಕ್ತಪಡಿಸಿದ್ದಾರೆ.

ಮಕ್ಕಳ ಬಾಲ್ಯದ ಜೀವನ ನಶಿಸದಿರಲಿ: ಹಲಗತ್ತಿ

◆**ಕುಂದಗೋಳ:** ಮಕ್ಕಳ ಬಾಲ್ಯದ ಜೀವನ ನಶಿಸಬಾರದು. ಕಲಿಕೆ ಜೊತೆಗೆ ಮಕ್ಕಳಿಗೆ ಸಂಸ್ಕಾರ, ಕಲೆ, ಸಾಹಿತ್ಯದ ನೈಪುಣ್ಯತೆಯನ್ನು ಈ ಶಿಬಿರದಲ್ಲಿ ನೀಡುತ್ತಿರುವ ಕಾರ್ಯ ಶ್ಲಾಘನಿಯವಾಗಿದೆ ಎಂದು ಧಾರವಾಡ ವಿದ್ಯಾವರ್ಧಕ ಸಂಘದ ಪ್ರಧಾನ ಕಾರ್ಯದರ್ಶಿ ಶಂಕರ ಹಲಗತ್ತಿ ಹೇಳಿದರು.

ಅವರು ತಾಲೂಕಿನ ಹರಲಾಪೂರ ಗ್ರಾಮದ ಜಾನಪದಕ್ರೀಡಾ ರಂಗಕುಟೀರದಲ್ಲಿ ಯುವಜನ ಹಾಗೂ ಸಾಂಸ್ಕೃತಿಕ ಅಭಿವೃದ್ಧಿ ಕೇಂದ್ರ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ತಾಯಿ ಪಾರ್ವತಮ್ಮ ಚಂ ನರೇಗಲ್ಲಮಠ ಇವರ ಸ್ಮರಣೆಗೆ ಆಯೋಜಿಸಿದ್ದ 15 ದಿನಗಳ ವಸತಿ ಸಹಿತ ಮಕ್ಕಳ ಮಲ್ಲಕಂಬ ಜಾನಪದ ಬೆಸಿಗೆ ಶಿಬಿರ ಮುಕ್ತಾಯ ಸಮಾರಂಭ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ತಾಯಿ ಪಾರ್ವತಮ್ಮ ಚಂ ನರೇಗಲ್ಲಮಠ ಅವರ ಮಕ್ಕಳು ಶಂಕರ ಹಲಗತ್ತಿ ಅವರಿಗೆ ತಮ್ಮ ತಾಯಿ ಹೆಸರಿನಲ್ಲಿ ಆರಂಭಿಸಿದ ಬೆಳದಿಂಗಳ ಬದುಕು ಮೊದಲ ರಾಜ್ಯ ಪ್ರಶಸ್ತಿ 5000 ರೂ. ನಗದು ಹಾಗೂ ಪ್ರಶಸ್ತಿ ಫಲಕ ನೀಡಿ ಗೌರವಿಸಿದರು. ಕಿರಣ್ ಕುಮಾರ್ ವಿವೇಕವಂಶಿ, ನಾಗನಗೌಡ ಪಾಟೀಲ, ಗುರುಶಿದ್ದಯ್ಯ ಹಿರೇಮಠ, ರೇವಣಶಿದ್ದಯ್ಯ ನರೇಗಲ್ಲಮಠ ಉಪಸ್ಥಿತರಿದ್ದರು. ರಾಷ್ಟ್ರೀಯ ಮಲ್ಲಕಂಬ ಕ್ರೀಡಾ ಪಟುಗಳಾದ ಗಣೇಶ, ರುದ್ರಮುನಿ, ಅನನ್ಯ, ದೊಡ್ಡಮ್ಮ, ಮಧುಮತಿ, ಪ್ರವೀಣ, ಗುರಯ್ಯ, ಪ್ರಜ್ವಲ್, ತ್ವಾಟಯ್ಯ ಹಾಗೂ ಸೂಪ್ರೀಯಾ ಅವರು ಮಲ್ಲಕಂಬ, ಯೋಗ ಹಾಗೂ ರೋಪ್ ಮಲ್ಲಕಂಬ ಕಲಿಸಿದರು. ಜಾನಪದ ಕಲಾವಿದರಾದ ಮಲ್ಲೇಶ, ಶರೀಫ್, ನಾಗರಾಜ, ಈಶ್ವರ, ಅರುಂಧತಿ ಜಾನಪದ ದೊಡ್ಡಾಟ ಕುಣಿತ ಕಲಿಸಿಕೊಟ್ಟರು. ಸಾಗರದ ದೀರಜ ರವರು ನಾಟಕ ಕಲಿಸಿಕೊಟ್ಟರು. ಶಿಬಿರಕ್ಕೆ ಧಾರವಾಡ, ಬಳ್ಳಾರಿ, ಕೊಪ್ಪಳ, ಬಾಗಲಕೋಟೆ, ಹಾವೇರಿ, ದಾವಣಗೆರೆ ಸೇರಿದಂತೆ ವಿವಿಧ ಜಿಲ್ಲೆಗಳಿಂದ ಸುಮಾರು 70ಕ್ಕು ಹೆಚ್ಚು ಮಕ್ಕಳು ಪಾಲ್ಗೊಂಡಿದ್ದರು. ಹಿರಿಯ ಜಾನಪದ ಕಲಾವಿದ ಎಸ್.ಎಸ್. ಹಿರೇಮಠ ನಿರೂಪಿಸಿದರು. ಅಮೋಘ ಹಿರೇಮಠ, ಎ. ಎಸ್. ಹಿರೇಮಠ ವಂದಿಸಿದರು.

ಆರೋಗ್ಯ ತಪಾಸಣೆ ಅವಶ್ಯ

◆**ಕುಂದಗೋಳ:** 100 ದಿನಗಳ ಸಕ್ರಿಯ ಟಿಬಿ ರೋಗ ಪತ್ತೆ ಆಂದೋಲನ ಹಾಗೂ ಎಚ್‌ಐವಿ/ಏಡ್ಸ್ ತಪಾಸಣೆ ಮತ್ತು ನಿಯಂತ್ರಣ ಕಾರ್ಯಕ್ರಮದ ಅಂಗವಾಗಿ ಪಟ್ಟಣದ ಮಾರ್ಕೆಟ್ ರಸ್ತೆಯ ಚೌಡಿಯಲ್ಲಿ ಜಾಗೃತಿ ಅಭಿಯಾನ ಕಾರ್ಯಕ್ರಮದಲ್ಲಿ ಸಾರ್ವಜನಿಕರಲ್ಲಿ ಟಿಬಿ ಮತ್ತು ಎಚ್‌ಐವಿ/ಏಡ್ಸ್ ಕುರಿತು ಅರಿವು ಮೂಡಿಸುವ ಕಾರ್ಯ ನಡೆಯಿತು.

ಅಭಿಯಾನದ ವೇಳೆ ಆರೋಗ್ಯ ಇಲಾಖೆಯ ಸಿಬ್ಬಂದಿಯಿಂದ ಟಿಬಿ ರೋಗದ ಲಕ್ಷಣಗಳು, ಮುಂಜಾಗ್ರತಾ ಕ್ರಮಗಳು ಹಾಗೂ ಸಮಯಕ್ಕೆ ತಪಾಸಣೆ ಮಾಡಿಸಿಕೊಳ್ಳುವ ಮಹತ್ವವನ್ನು ವಿವರಿಸಿದರು. ಜೊತೆಗೆ ಎಚ್‌ಐವಿ/ಏಡ್ಸ್ ಬಗ್ಗೆ ಇರುವ ತಪ್ಪು ಕಲ್ಪನೆಗಳನ್ನು ನಿವಾರಿಸಿ,ಹಾಗೆ ಪಟ್ಟಣ ಸೇರಿದಂತೆ ತಾಲೂಕಿನ ಅನೇಕ ಗ್ರಾಮಗಳಲ್ಲಿ ಗರ್ಭ ಕಂಠ ಕ್ಯಾನ್ಸರ್ ತಡೆಯುವ ನಿಟ್ಟಿನಲ್ಲಿ 14 ವರ್ಷ ಮೇಲ್ಪಟ್ಟ, 15 ವರ್ಷ ಒಳಗಡೆ ಇರುವ ಹೆಣ್ಣುಮಕ್ಕಳಿಗೆ ಎಚ್‌ಪಿವಿ ವ್ಯಾಕ್ಸಿನೇಶನ ಎಲ್ಲ ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿ ನೀಡಲಾಗುತ್ತದೆ. ತಪಾಸಣೆ ಮತ್ತು ಚಿಕಿತ್ಸೆ ಬಗ್ಗೆ ಮಾಹಿತಿ ನೀಡಿ ಸಾರ್ವಜನಿಕರು ಇಂತಹ ಜಾಗೃತಿ ಕಾರ್ಯಕ್ರಮಗಳನ್ನು ಸದುಪಯೋಗಪಡಿಸಿಕೊಂಡು ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಬೇಕು ಮನವಿ ಮಾಡಿದರು. ಪಪಂ ಮಾಜಿ ಅಧ್ಯಕ್ಷ ವಾಗೇಶ ಗಂಗಾಯಿ, ಮಾಜಿ ಉಪಾಧ್ಯಕ್ಷ ಮಂಜುನಾಥ ಹಿರೇಮಠ, ಸುಭಾಸ ಸಾದರ, ಎನ್‌ಜಿಓ ಬೆಳಕು ಮಹಿಳಾ ಸಂಘ ರೇಷ್ಮಾ ಅಂಗಡಿ, ರಾಜ ಕಬನೂರ್. ರಾಮನಗೌಡ ಧ್ಯಾಮನಗೌಡ, ಎಸ್‌ಟಿ ಎಸ್ ತುಕಾರಾಮ, ಮಂಜುಳಾ ಕೋಟೆನ್ನವರ್ ,ಮಂಜುನಾಥ ಕುದುರಿ ಸೇರಿದಂತೆ ಆಶಾ ಕಾರ್ಯಕರ್ತರು ಇದ್ದರು.

ಮಹರ್ಷಿ ಭಗೀರಥ ಜಯಂತಿ

◆**ನವಲಗುಂದ:** ತಾಲೂಕಾಡಳಿತ ವತಿಯಿಂದ ಗುರುವಾರ ತಹಶೀಲ್ದಾರ್ ಕಚೇರಿ ಸಭಾಭವನದಲ್ಲಿ ಮಹರ್ಷಿ ಭಗೀರಥರ ಜಯಂತಿಯನ್ನು ಶಾಸ್ತ್ರೋಕ್ತವಾಗಿ ಆಚರಿಸಲಾಯಿತು. ತಹಶೀಲ್ದಾರ್ ಸುಧೀರ್ ಸಾವುಕಾರ ಮಹರ್ಷಿ ಭಗೀರಥರ ಭಾವಚಿತ್ರಕ್ಕೆ ಪುಷ್ಪಾರ್ಪಣೆ ಮಾಡಿ, ಜಯಂತಿ ಸಮಾರಂಭ ಉದ್ಘಾಟಿಸಿದರು. ತಾಲೂಕು ಅಧ್ಯಕ್ಷ ಮಲ್ಲೇಶ ಉಪ್ಪಾರ ಮಾತನಾಡಿ, ಭಗೀರಥರು ತಪಸ್ಸಿನ ಮೂಲಕ ಸಾಕ್ಷಾತ್ ಗಂಗಾಮಾತೆಯನ್ನು ಧರೆಗೆ ಹರಿಯುವಂತೆ ಮಾಡಿ ಮುಕ್ಕೋಟಿ ಜೀವ ಸಂಕುಲಕ್ಕೆ ಭವಣೆ ನೀಗಿಸಿದ ಮಹಿಮರು ಎಂದರು. ಈಗ ರಾಜ್ಯದಲ್ಲಿ ಉಪ್ಪಾರ ಸಮಾಜದ ಜನಸಂಖ್ಯೆ ವಿರಳವಾಗಿದೆ. ಉಪ್ಪಾರರು ಶ್ರಮಜೀವಿಗಳಾಗಿದ್ದು ಇತ್ತೀಚಿಗೆ ಸಂಘಟನೆ ಜೊತೆಗೆ ಶೈಕ್ಷಣಿಕ ಕ್ಷೇತ್ರದಲ್ಲೂ ಸಾಕಷ್ಟು ಸಾಧನೆ ಮಾಡುತ್ತಿದ್ದಾರೆ ಎಂದರು. ತಹಶೀಲ್ದಾರ್ ಸುಧೀರ ಸಾವುಕಾರ ಮಾತನಾಡಿದರು. ಅಬಕಾರಿ ಅಧಿಕಾರಿ ರಾಮು ಆರೇರ, ಉಪ್ಪಾರ ಸಮಾಜದ ತಾಲೂಕಾಧ್ಯಕ್ಷ ಮಲ್ಲೇಶ ಉಪ್ಪಾರ, ರೈತ ಹೋರಾಟಗಾರ ಶಂಕರ ಅಂಬಲಿ, ಯಲ್ಲಪ್ಪ ಕರಿಕಟ್ಟಿ, ವಾಸು ಅವಡಿ, ದ್ಯಾಮಣ್ಣ ಹಂಚಿನಾಳ, ಸಂಜು ಕಳಮುಡಿ, ಶರಣಪ್ಪ ಅಣ್ಣಿಗೇರಿ ಸೇರಿದಂತೆ ತಾಲೂಕು ಆಡಳಿತದ ಸಿಬ್ಬಂದಿ, ಸಮಾಜದವರು ಇದ್ದರು.

ಅಕ್ಕ ಕೆಫೆ ಕಾರ್ಯ ಮಾದರಿ: ಜಿಲ್ಲಾಧಿಕಾರಿ

◆**ಧಾರವಾಡ:** ನಗರದ ಜಿಲ್ಲಾಧಿಕಾರಿ ಆವರಣದಲ್ಲಿ ಕಾರ್ಯನಿರ್ವಹಿಸುವ ಕಬ್ಬೆನೂರು ಗ್ರಾಮದ ಕಾಮದೇನು ಸಂಜೀವಿನಿ ಮಹಿಳಾ ಸ್ವ-ಸಹಾಯ ಸಂಘವು ಪ್ರಸಕ್ತ ವರ್ಷ ಅಕ್ಕ ಕೆಫೆಯ ಲಾಭಾವಂಶದಲ್ಲಿ ಬಡ ಹೆಣ್ಣು ಮಕ್ಕಳ ಮದುವೆಗೆ ರೂ.20 ಸಾವಿರ ನಗದು, ಸೀರೆ, ಹಣ್ಣುಕಾಯಿ ಮತ್ತು ತಾಂಬೂಲದ ಸಹಾಯ ನೀಡಿತು.

ಕುಂದಗೋಳ ತಾಲೂಕಿನ ಗುಡೇನಕಟ್ಟಿ ಗ್ರಾಮದ ಬಡ ಕುಟುಂಬದ ಲಕ್ಷ್ಮಿ ಸಿದ್ದನವರ ಮಗಳಾದ ಭೂಮಿಕಾ ಅವರ ಮದುವೆಗೆ ಸ್ವ-ಸಹಾಯ ಸಂಘದ ಪ್ರತಿನಿಧಿಗಳಾದ ರಾಜೇಶ್ವರಿ ಪವಾಡಿ ಹಾಗೂ ಶಿವಲೀಲಾ ಕಮ್ಮಾರ ಲಾಭಾಂಶದ ಮೊತ್ತ ನೀಡಿದರು.

ಸಹಾಧಯನ ಸ್ವೀಕರಿಸಿದ ಜಿಲ್ಲಾಧಿಕಾರಿ ಸ್ನೇಹಲ್ ಆರ್., ಅಕ್ಕ ಕೆಫೆಯ ಲಾಭದಲ್ಲಿ ಬಡ ಹೆಣ್ಣು ಮಕ್ಕಳ ಮದುವೆಗೆ ಧನಸಹಾಯದ ಕಾರ್ಯ ಇತರರಿಗೂ ಮಾದರಿ. ಇಂತಹ ಅನೇಕ ಸಂಘ-ಸಂಸ್ಥೆಗಳು ಸಮಾಜಮುಖಿ ಕಾರ್ಯಕ್ಕೆ ಮುಂದಾಗಲು ಹೇಳಿದರು.

ಏಜೆಂಟಿಕ್ ಎಐ ಹ್ಯಾಕಥಾನ್

◆**ಹುಬ್ಬಳ್ಳಿ:** ಕೆಎಲ್‌ಇ ತಾಂತ್ರಿಕ ವಿವಿಯಲ್ಲಿ ಕಂಪ್ಯೂಟರ್ ಸೈನ್ಸ್ ಹಾಗೂ ಎಂಜಿನಿಯರಿಂಗ್ ಶಾಲೆ ಏ.25 ಹಾಗೂ 26 ರಂದು ಎರಡು ದಿನಗಳ ಏಜೆಂಟಿಕ್ ಎಐ ಹ್ಯಾಕಥಾನ್ ಆಯೋಜಿಸಲಾಗಿದೆ.

ಈ ಕಾರ್ಯಕ್ರಮವು ಕೃತಕ ಬುದ್ಧಿಮತ್ತೆಯ ನವೀನ ಕ್ಷೇತ್ರದಲ್ಲಿ ಯುವ ಪ್ರತಿಭೆಗಳನ್ನು ಒಂದೇ ವೇದಿಕೆಗೆ ತರಲಿದೆ. ಕಾರ್ಯಕ್ರಮದ ಮೊದಲ ದಿನ ಹ್ಯಾಂಡ್ಸ್-ಆನ್ ವರ್ಕ್‌ಶಾಪ್ ಮೂಲಕ ಭಾಗವಹಿಸುವವರಿಗೆ ಏಜೆಂಟಿಕ್ ಎಐ ಸಂಪ್ರದಾಯಗಳು, ಉಪಕರಣಗಳು ಹಾಗೂ ಫ್ರೇಮ್ ವರ್ಕ್‌ಗಳ ಬಗ್ಗೆ ಪ್ರಾಯೋಗಿಕ ತರಬೇತಿ ನೀಡಲಾಗುತ್ತದೆ. ಎರಡನೇ ದಿನ 24 ಗಂಟೆಗಳ ಹ್ಯಾಕಥಾನ್ ನಡೆಯಲಿದ್ದು, ಆಯ್ಕೆಯಾದ ತಂಡಗಳು ನೈಜ ಸಮಸ್ಯೆಗಳಿಗೆ ಬುದ್ಧಿವಂತ ಮತ್ತು ಸ್ವಾಯತ್ತ ಎಐ ಪರಿಹಾರಗಳನ್ನು ವಿನ್ಯಾಸಗೊಳಿಸಿ ಅಭಿವೃದ್ಧಿಪಡಿಸಲಿವೆ.

ಈ ಹ್ಯಾಕಥಾನ್‌ಗೆ ಅಪಾರ ಸ್ಪಂದನೆ ದೊರೆತಿದ್ದು, ಕರ್ನಾಟಕ ಮತ್ತು ಮಹಾರಾಷ್ಟ್ರ ರಾಜ್ಯಗಳ 20 ಕ್ಕೂ ಹೆಚ್ಚು ಕಾಲೇಜುಗಳಿಂದ 135 ಕ್ಕೂ ಹೆಚ್ಚು ತಂಡಗಳು ನೋಂದಾಯಿಸಿಕೊಂಡಿವೆ. ಇವರಲ್ಲಿ 25 ತಂಡಗಳನ್ನು ಅಂತಿಮ ಹಂತಕ್ಕೆ ಆಯ್ಕೆ ಮಾಡಲಾಗಿದೆ. ಕೃತಕ ಬುದ್ಧಿಮತ್ತೆ ಮತ್ತು ಉದಯೋನ್ಮುಖ ತಂತ್ರಜ್ಞಾನಗಳಲ್ಲಿ ಭವಿಷ್ಯೋಚಿತ ಪ್ರತಿಭೆಯನ್ನು ಬೆಳೆಸುವಲ್ಲಿ ಕೆಎಲ್‌ಇ ತಾಂತ್ರಿಕ ವಿಶ್ವವಿದ್ಯಾಲಯದ ಬದ್ಧತೆಯನ್ನು ಪ್ರತಿಬಿಂಬಿಸುತ್ತದೆ ಎಂದು ಪ್ರಕಟಣೆಗೆ ತಿಳಿಸಿದ್ದಾರೆ.

ಚಾಲಕನ ಮಗಳು ಶಾಲೆಗೆ ಪ್ರಥಮ



◆**ಅಳ್ನಾವರ:** ಸರ್ಕಾರಿ ಶಾಲೆ ಎಂದರೆ ಹಿಂಜರಿಕೆ ಮಾಡುತ್ತಿರುವ ಇಂದಿನ ದಿನದಲ್ಲಿ ತಾಲೂಕಿನಲ್ಲಿರುವ ಎರಡು ಸರ್ಕಾರಿ ಪ್ರೌಡ ಶಾಲೆಗಳು ಪ್ರಸಕ್ತ ಎಸ್.ಎಸ್.ಎಲ್.ಸಿ ಫಲಿತಾಂಶದಲ್ಲಿ ಅತ್ಯುತ್ತಮ ಫಲಿತಾಂಶವನ್ನು ಪಡೆಯುವ ಮೂಲಕ ಗ್ರಾಮೀಣ ಮಕ್ಕಳ ಶೈಕ್ಷಣಿಕ ಪ್ರಗತಿಗೆ ಕಾರಣವಾಗಿವೆ ಎನ್ನುವ ಮಾತುಗಳು ಕೇಳಿಬರುತ್ತಿವೆ.

ಅಳ್ನಾವರ ಪಟ್ಟನದಲ್ಲಿರುವ ಸರ್ಕಾರಿ ಪ್ರೌಡಶಾಲೆಯ ಫಲಿತಾಂಶ ಶೇ.97 ರಷ್ಟಾಗಿದ್ದರೆ ಬೆಣಚಿ ಗ್ರಾಮದ ಪ್ರೌಡಶಾಲೆಯ ಫಲಿತಾಂಶ ಶೇ.96 ರಷ್ಟಾಗಿದೆ. ಅಳ್ನಾವರದ ಅಂಕಿತಾ ನಾರಾಯಣ ತಂಬಾಕದವರ ಎನ್ನುವ ಬಾಲಕಿ ಶೇ.87.44 (609) ಅಂಕಗಳನ್ನು ಪಡೆಯುವ ಮೂಲಕ ಶಾಲೆಯ ಹೆಮ್ಮೆ ಎನಿಸಿದ್ದಾಳೆ. ಇವಳು ಕನ್ನಡದಲ್ಲಿ 125 ಕ್ಕೆ 125 ಮತ್ತು ಹಿಂದಿ ಹಾಗೂ ಸಮಾಜ ವಿಜ್ಞಾನದಲ್ಲಿ ನೂರಕ್ಕೆ ನೂರರಷ್ಟು ಅಂಕ ಪಡೆದು ಪ್ರತಿಭೆಯನ್ನು ಮೆರೆದಿದ್ದಾಳೆ.

ಬಾಲಕಿಯ ತಂದೆ ಖಾಸಗಿ ವಾಹನ ಚಾಲಕರಾಗಿದ್ದು ತಾಯಿ ಕೂಲಿ ಕಾರ್ಮಿಕಳಾಗಿದ್ದು ಶೈಕ್ಷಣಿಕವಾಗಿ ಹಿಂದಿರುವ ಕುಟುಂಬದಲ್ಲಿ ಬೆಳೆದಿರುವ ಅಂಕಿತಾ ಮನೆಯಲ್ಲಿ ಕಡು ಬಡತನ ನಡುವೆ ಮನೆಯ ಕೆಲಸದಲ್ಲಿ ತಾಯಿಗೆ ನೆರವಾಗುವದರ ಜೊತೆಗೆ ಓದಿನಲ್ಲಿ ಏಕಾಗ್ರತೆ ಸಾಧಿಸಿ ಹೆಚ್ಚಿನ ಅಂಕ ಪಡೆದಿರುವದು ಶ್ಲಾಘನೀಯವೆಂದು ಹಲವರು ಅಭಿಪ್ರಾಯಪಟ್ಟಿದ್ದಾರೆ. ಇದೇ ಸರ್ಕಾರಿ ಶಾಲೆಯಲ್ಲಿ ಕಲಿತ ವಿದ್ಯಾರ್ಥಿನಿ ಪವಿತ್ರಾ ಅರುಣ ಕಮ್ಮಾರ ಶೇ.92.16(576) ಅಂಕ ಪಡೆಯುವ ಮೂಲಕ ಶಾಲೆಗೆ ಎರಡನೆ ಸ್ಥಾನ ಪಡೆದಿದ್ದಾಳೆ.

ಶಾಲೆಯ ಸುಧಾರಣೆಗೆ ಕಾರ್ಮಿಕ ಸಚಿವ ಸಂತೋಷ ಲಾಡ ಅವರಿಗೆ ಹೆಚ್ಚಿನ ಅನುದಾನಕ್ಕಾಗಿ ಒತ್ತಾಯಿಸಲಾಗಿದೆ ಎಂದಿದ್ದಾರೆ ಎಸ್ .ಡಿ.ಎಂ.ಸಿ ಅಧ್ಯಕ್ಷ ಪ್ರವೀಣ ಪವಾರ.

ಎಸ್‌ಎಸ್‌ಎಲ್‌ಸಿ: ಶೇ.100ರಷ್ಟು ಸಾಧನೆ

◆**ನವಲಗುಂದ:** ಮಾರ್ಚ್/ಏಪ್ರಿಲ್ 2026 ನಲ್ಲಿ ನಡೆದ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಸ್ಥಳೀಯ ಶ್ರೀ ಜಗದ್ಗುರು ಅಜಾತ ನಾಗಲಿಂಗ ಮಹಾಸ್ವಾಮಿ ವಿದ್ಯಾಪೀಠದ ಪ್ರೌಢಶಾಲೆಯ ಮಕ್ಕಳು ಅತ್ಯುತ್ತಮ ಸಾಧನೆ ಮಾಡಿದ್ದಾರೆ.

ಪರೀಕ್ಷೆಗೆ ಒಟ್ಟು 46 ವಿದ್ಯಾರ್ಥಿಗಳು ಹಾಜರಾಗಿದ್ದು, ಎಲ್ಲಾ ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು 8ವಿದ್ಯಾರ್ಥಿಗಳು ಡಿಸ್ಟಿಕ್ಷನ್, 27 ವಿದ್ಯಾರ್ಥಿಗಳು ಪ್ರಥಮ, 10 ವಿದ್ಯಾರ್ಥಿಗಳು ದ್ವಿತೀಯ, ಕೇವಲ ಒಬ್ಬ ವಿದ್ಯಾರ್ಥಿ ಮಾತ್ರ ಪಾಸ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ಶಾಲೆಯ ಒಟ್ಟಾರೆ ಫಲಿತಾಂಶ ಶೇ.100 ಆಗಿದೆ. ಲಕ್ಷ್ಮಿ ಬಸಪ್ಪ ಸುಳ್ಳದ 625ಕ್ಕೆ 616 (98.56%)ಅಂಕಗಳನ್ನು ಗಳಿಸಿ ಶಾಲೆಗೆ ಪ್ರಥಮ ಸ್ಥಾನ ಪಡೆದಿದ್ದಾಳೆ. ಸಾವಿತ್ರಿ ಬಸವರಾಜ ಹಳ್ಳದ 625ಕ್ಕೆ 601 (96.16%) ಅಂಕಗಳೊದಿಗೆ ಶಾಲೆಗೆ ದ್ವಿತೀಯ ಸ್ಥಾನ ಪಡೆದಿದ್ದಾಳೆ ಮತ್ತು ಸನಾ ಇಬ್ರಾಹಿಂಸಾಬ ಮುಲ್ಲಾ 625ಕ್ಕೆ 584(93.44%) ಅಂಕಗಳೊದಿಗೆ ತೃತೀಯ ಸ್ಥಾನ ಪಡೆದಿದ್ದಾರೆ. ರೋಹಿಣಿ ಫಕೀರಪ್ಪ ಕುರಹಟ್ಟಿ (92.42%), ರಮೀಜಾಬೇಗಂ ಶರೀಫಸಾಬ ಅಣ್ಣಿಗೇರಿ (90.40%), ಪವಿತ್ರಾ ಬಸಪ್ಪ ಕರಲಿಂಗಣ್ಣವರ (88.00%), ಶ್ರೇಯಾ ವಿಜಯಾನಂದ ಕುಂಬಾರ (88.00%), ಅರುಣಾ ಶಿವಾಜಿ ಸಾಳುಂಕೆ (85.28%) ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ವಿದ್ಯಾರ್ಥಿಗಳ ಸಾಧನೆಗೆ ಅಜಾತ ನಾಗಲಿಂಗಸ್ವಾಮಿ ಮಠದ ಪೀಠಾಧಿಪತಿ ವೀರೇಂದ್ರ ಸ್ವಾಮೀಜಿ ಹಾಗೂ ಶಾಲೆಯ ಆಡಳಿತ ಮಂಡಳಿ, ಮುಖ್ಯೋಪಾಧ್ಯಾಯರು ಮತ್ತು ಎಲ್ಲ ಶಿಕ್ಷಕರು ಹರ್ಷವ್ಯಕ್ತಪಡಿಸಿದ್ದಾರೆ.

ಪಿ.ಯು. ಕಾಲೇಜ್ ವಿದ್ಯಾರ್ಥಿಗಳ ಸಾಧನೆ



◆**ಹುಬ್ಬಳ್ಳಿ:** ಜೆಇಇ ಮೇನ್ಸ್ 2026 ನೇ ಸಾಲಿನಲ್ಲಿ ಕೆಎಲ್‌ಇ ಪ್ರೇರಣಾ ರೆಸಿಡೆನ್ಶಿಯಲ್ ಪಿ.ಯು. ಕಾಲೇಜ್ ವಿದ್ಯಾರ್ಥಿಗಳು ಅತ್ಯುತ್ತಮ ಸಾಧನೆ ಮಾಡಿದ್ದಾರೆ.

ವಿದ್ಯಾರ್ಥಿಗಳಾದ ವಿನಾಯಕ ಬಿಂಗಿ ಅವರು 270ನೇ ರ್‍ಯಾಂಕ್ ಹಾಗೂ ತೇಜಸ್ ನರ್ತಿ ಅವರು 370ನೇ ರ್‍ಯಾಂಕ್ ಪಡೆದಿದ್ದಾರೆ. ಚೈತ್ರಾ ಪಿ. ರದ್ದೇರ್ (ಶೇ. 97.91), ಕಾರ್ತಿಕ್ ಕೆ. ಅರಭಾವಿ(97.56) ಶಂಕರ್ ಬಿ. ಬಾಗಲಕೋಟೆ(95.84) ಸಾಯಿ ಪ್ರಸಾದ್ (ಶೇ. 95.29)

ಸದಾಪ್ರಜಾ ಸಂಕನೂರು (ಶೇ.93.98), ಇಶ್ವರಸಿಂಗ್ ರಾಜಪೂತ್ (ಶೇ. 92.64) ಅಭಿನವ್ ಪಾಟೀಲ್ (ಶೇ. 92.02) ವೆಂಕಟೇಶ್ (ಶೇ. 90.67) ಫಲಿತಾಂಶ ಪಡೆದಿದ್ದಾರೆ.

ವಿದ್ಯಾರ್ಥಿಗಳ ಸಾಧನೆಗೆ ಸಂಸ್ಥೆ ಗೌರವಾಧ್ಯಕ್ಷ ಡಾ. ಪ್ರಭಾಕರ್ ಕೋರೆ, ಅಧ್ಯಕ್ಷ ಅಮಿತ್ ಪಿ. ಕೋರೆ, ಮಂಡಳಿಯ ಮಾಜಿ ಸದಸ್ಯ ಶಂಕರಣ್ಣ ಮುನವಳ್ಳಿ, ಮಂಡಳಿ ಸದಸ್ಯ ಮಂಜುನಾಥ ಎಸ್ ಮುನವಳ್ಳಿ, ಮಹಾಂತೇಶ್ ಕವಟಗಿಮಠ, ವಿವಿ ಸಹ ಕುಲಪತಿ ಡಾ. ಅಶೋಕ ಶೆಟ್ಟರ, ಪ್ರಾಂಶುಪಾಲ ಶ್ರೀನಿವಾಸ್ ಲಿಕ್ಕಿ ಅವರು ವಿದ್ಯಾರ್ಥಿಗಳನ್ನು ಹರ್ಷವ್ಯಕ್ತಪಡಿಸಿದ್ದಾರೆ.

ಕಿರುಸುದ್ದಿ

ಸಿಎಂ ತಜ್ಞರ ಜೊತೆ ಚರ್ಚಿಸಿ ಬೆಂಬಲಿಸಲಿ: ಬೊಮ್ಮಾಯಿ

◆**ಹಾವೇರಿ:** ಮಹಿಳಾ ಮೀಸಲಾತಿ ಮತ್ತು ಕ್ಷೇತ್ರ ಪುನರ್ ವಿಂಗಡಣೆ ವಿಚಾರದಲ್ಲಿ ಸಿಎಂ ಸಿದ್ದರಾಮಯ್ಯ ಹಾಗೂ ಕಾಂಗ್ರೆಸ್ ಡಿಎಂಕೆಯವರ ರಾಜಕೀಯ ಹುನ್ನಾರಕ್ಕೆ ನಮ್ಮ ರಾಜ್ಯದ ಹಿತಾಸಕ್ತಿ ಬಲಿಕೊಟ್ಟಿದ್ದಾರೆ. ಸಿಎಂ ತಜ್ಞರ ಜೊತೆ ಚರ್ಚಿಸಿ, ಸ್ಪಷ್ಟತೆಯಿಂದ ಮರು ಚಿಂತನೆ ಮಾಡಲಿ, ತಮ್ಮ ಪಕ್ಷದ ನಾಯಕರನ್ನು ಒಪ್ಪಿಸಿ ಕ್ರಾಂತಿಕಾರಿ ಬದಲಾವಣೆಗೆ ದೊಡ್ಡ ಬೆಂಬಲ ನೀಡಬೇಕು ಎಂದು ಮಾಜಿ ಸಿಎಂ, ಸಂಸದ ಬಸವರಾಜ ಬೊಮ್ಮಾಯಿ ಮನವಿ ಮಾಡಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ಮಹಿಳೆಯರಿಗೆ ಮೀಸಲಾತಿ ನೀಡುವ ಪ್ರಥಮ ರಾಜ್ಯಗಳಲ್ಲಿ ಕರ್ನಾಟಕ ಒಂದು. ರಾಮಕೃಷ್ಣ ಹೆಗಡೆಯವರು ಸಿಎಂ ಆಗಿದ್ದಾಗ ಮಾಡಿರುವ ಅಧಿಕಾರ ವಿಕೇಂದ್ರಿಕರಣದೊಂದಿಗೆ ಮಹಿಳಾ ಮೀಸಲಾತಿಯನ್ನು ಜಾರಿ ಮಾಡಲಾಯಿತು. 1993ರಲ್ಲಿ ದೇವೇಗೌಡರು ಸಿಎಂ ಇದ್ದಾಗ ಅದನ್ನು ಮತ್ತೊಮ್ಮೆ ಜಾರಿ ಮಾಡಲಾಯಿತು. ಅದನ್ನು ನೋಡಿ 1994ರಲ್ಲಿ ಕೇಂದ್ರದಲ್ಲಿ ಪಿ.ವಿ. ನರಸಿಂಹರಾವ್ ಸಂವಿಧಾನದ 73ನೇ ತಿದ್ದುಪಡಿ ಮಾಡಿ ಮಹಿಳಾ ಮೀಸಲಾತಿ ಜಾರಿಗೆ ತಂದರು. ಸಿದ್ದರಾಮಯ್ಯ ಮಹಿಳಾ ಮೀಸಲಾತಿ ಮೊದಲು ಕಾಂಗ್ರೆಸ್ ತಂದಿದೆ ಎನ್ನುತ್ತಾರೆ. ಆದರೆ, ಕಾಂಗ್ರೆಸ್ಸೇತರ ಸರ್ಕಾರ ಮೊದಲು ಮಹಿಳಾ ಮೀಸಲಾತಿ ಜಾರಿಗೆ ತಂದಿದೆ. ಸಿದ್ದರಾಮಯ್ಯ ಅವರು ಕಾಂಗ್ರೆಸ್ ಮೆಚ್ಚಿಸಲು ಹೀಗೆ ಹೇಳುತ್ತಾರೆ ಎಂದು ದೂರಿದರು.

50 ಲಕ್ಷ ರೂ. ವಂಚನೆ

◆**ಹುಬ್ಬಳ್ಳಿ:** ಗೋಕುಲ ರಸ್ತೆಯ ಬೆಲ್ಲದ ಕಂಪನಿಯವರನ್ನು ದೆಹಲಿಯಲ್ಲಿ ವ್ಯವಹಾರ ನಡೆಸಲು ಸಹಕರಿಸುವಂತೆ ನಂಬಿಸಿ 50 ಲಕ್ಷ ಪಡೆದು ವಂಚಿಸಿದ ಉದ್ಯಮಿ ವಿರುದ್ಧ ಗೋಕುಲ ರಸ್ತೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ದೆಹಲಿಯ ಡಿಫೆನ್ಸ್ ಕಾಲೊನಿಯ ಉದ್ಯಮಿ ಮಹೇಂದ್ರಪಾಲ್ ಆರೋರ ವಿರುದ್ಧ, ಕಂಪನಿ ಉದ್ಯೋಗಿ ರಾಮಚಂದ್ರ ರಾವ್ ದೂರು ನೀಡಿದ್ದಾರೆ. ಮಹೇಂದ್ರಪಾಲ್ ಅವರು ಎರಡು ಬಾರಿ ಕಂಪನಿಗೆ ಭೇಟಿ ನೀಡಿ, ದೆಹಲಿಯಲ್ಲಿ ಉದ್ಯೋಗ ನಡೆಸಲು ತಮ್ಮ ಮಾರ್ಗದರ್ಶನ ಹಾಗೂ ಸಹಕಾರ ಬೇಕು ಎಂದು ನಂಬಿಸಿ ಹಣ ವರ್ಗಾಯಿಸಿಕೊಂಡಿದ್ದರು. ನಂತರ ಹಣ ನೀಡದೆ ವಂಚಿಸಿದ್ದಾರೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

ಮಹಾಗಣಪತಿ ದೇವಸ್ಥಾನ ಕಳ್ಳತನ: ಆರೋಪಿ ಬಂಧನ

◆**ಯಲ್ಲಾಪುರ:** ತಾಲೂಕಿನ ಆರಬೈಲ್ ಗ್ರಾಮದ ಕಸಬೆಯ ಶ್ರೀ ಶೇಡಿಕೆರೆ ಮಹಾಗಣಪತಿ ದೇವಸ್ಥಾನದಲ್ಲಿ ನಡೆದ ಕಳ್ಳತನ ಪ್ರಕರಣವನ್ನು ಪೊಲೀಸರು ಭೇದಿಸಿದ್ದಾರೆ. ಈ ಸಂಬಂಧ ಆರೋಪಿಯನ್ನು ಬಂಧಿಸಿ, ಕಳುವಾದ ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ.

ಅಂಬೇಡ್ಕರ ನಗರ ನಿವಾಸಿ ಕೃಷ್ಣಾನಂದ (28) ಬಂಧಿತ ಆರೋಪಿ. ಬಂಧಿತನಿಂದ ಕೃತ್ಯಕ್ಕೆ ಬಳಸಿದವಾಹನ ಸೇರಿದಂತೆ 1,19,900 ರೂ. ಮೌಲ್ಯದ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ.

ಸುಣಜೋಗ, ಕೋಮಡಿ ಗ್ರಾಮದ ನಿವಾಸಿ ಶಿವರಾಮ ಕೃಷ್ಣ ಭಟ್ಟ ಅವರು ನೀಡಿದ ದೂರಿನ ಪ್ರಕಾರ, ಏಪ್ರಿಲ್ 18ರ ಸಂಜೆಯಿಂದ ಏಪ್ರಿಲ್ 19ರ ಬೆಳಿಗ್ಗೆ ನಡುವೆ ದೇವಸ್ಥಾನದ ಗರ್ಭಗುಡಿ ಹಾಗೂ ಪಕ್ಕದ ಕೊಠಡಿಗಳ ಬೀಗಗಳನ್ನು ಒಡೆದು ಒಳನುಗ್ಗಿದ ಕಳ್ಳರು ಹಿತ್ತಾಳೆ ಗಂಟೆಗಳು, ತಾಮ್ರದ ಕೊಡ, ಆರತಿ, ದೀಪಗಳು ಸೇರಿದಂತೆ ವಿವಿಧ ವಸ್ತುಗಳನ್ನು ಕಳವು ಮಾಡಿದ್ದರು. ಒಟ್ಟು ಸುಮಾರು 19,900 ರೂ ಮೌಲ್ಯದ ವಸ್ತುಗಳು ಕಳ್ಳತನವಾಗಿದ್ದವು. ಈ ಕುರಿತು ಯಲ್ಲಾಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಕವಿವಿ 75ನೇ ಘಟಿಕೋತ್ಸವ | ಇಸ್ರೋ ಮಾಜಿ ಅಧ್ಯಕ್ಷ ಕಿರಣಕುಮಾರ್ ಅಭಿಮತ

ವಿಶ್ವದಲ್ಲಿ ಪ್ರಥಮ ಸ್ಥಾನ ಭಾರತದ ಗುರಿ

◆**ಧಾರವಾಡ:** ಭಾರತ ವಿಶ್ವದ ನಾಲ್ಕನೇ ಅತಿದೊಡ್ಡ ಆರ್ಥಿಕತೆಯನ್ನು ಹೊಂದಿದೆ. ಸ್ವಾತಂತ್ರ್ಯದ ನೂರು ವರ್ಷದಲ್ಲಿ ಭಾರತ ಮೊದಲ ಸ್ಥಾನ ಪಡೆಯುವ ಗುರಿ ಹೊಂದಿದೆ. ಇದರಲ್ಲಿ ಯುವ ಜನಾಂಗದ ಪಾತ್ರವೂ ಮುಖ್ಯವಾಗಿದೆ ಎಂದು ಇಸ್ರೋ ಮಾಜಿ ಅಧ್ಯಕ್ಷ ಡಾ. ಎಸ್.ಕಿರಣಕುಮಾರ ಹೇಳಿದರು.

ನಗರದ ಕರ್ನಾಟಕ ವಿಶ್ವವಿದ್ಯಾಲಯದ ಗಾಂಧಿ ಭವನದಲ್ಲಿ ಗುರುವಾರ ನಡೆದ ಕವಿವಿ 75ನೇ ಘಟಿಕೋತ್ಸವ ಉದ್ಘಾಟಿಸಿದ ಅವರು, ಮೊದಲ ಸ್ಥಾನ ಪಡೆಯುವ ಭಾರತದ ಗುರಿ ಪಯಣದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಮಹತ್ವದ ಪಾತ್ರ ವಹಿಸುತ್ತಿವೆ ಎಂದು ತಿಳಿಸಿದರು.

ಸಂವಹನ, ಪ್ರಸಾರ, ಹವಾಮಾನ ಮೇಲ್ವಿಚಾರಣೆ, ಸಂಪನ್ಮೂಲಗಳ ನಿರ್ವಹಣೆ, ನೇವಿಗೇಶನ್ ಮತ್ತು ವಿಪತ್ತು ನಿರ್ವಹಣೆಯಲ್ಲಿ ಅಂತರಿಕ್ಷ ತಂತ್ರಜ್ಞಾನದ ಬಳಕೆಯಲ್ಲಿ ಭಾರತ ಗಮನಾರ್ಹ ಸಾಧನೆ ಮಾಡಿದೆ. ಅಣುಶಕ್ತಿ ಅಭಿವೃದ್ಧಿ ಜೊತೆಗೆ ಕೊರೋನಾ ಸಮಸ್ಯೆ ಯಶಸ್ವಿಯಾಗಿ ಎದುರಿಸಿದೆ. ರಾಷ್ಟ್ರದ ಸವಾಲುಗಳು ಎದುರಿಸುವ ಸಾಮರ್ಥ್ಯ ಹೊಂದಿದ್ದಾಗಿ ಅಭಿಮಾನ ವ್ಯಕ್ತಪಡಿಸಿದರು. ಪ್ರಸ್ತುತ ಲಭ್ಯವಿರುವ ತಂತ್ರಜ್ಞಾನಗಳನ್ನು ಮಾತ್ರ ಬಳಸಿ, ಸಮಸ್ಯೆಗಳನ್ನು ಪರಿಹರಿಸುವುದು ಸಾಕಾಗುವುದಿಲ್ಲ. ಅದು ಕೆಲ ಅಡೆತಡೆ ದಾಟಲು ಸಹಕಾರಿ ಅಷ್ಟೇ. ಆದರೆ, ಇತರರಿಗಿಂತ ಹಿಂದೆ ಬೀಳುವ ಸಾಧ್ಯತೆ ಇದೆ. ಆದ್ದರಿಂದ ಜೀವನಯಾತ್ರ ಹೇಗೆ ಸಾಗಿಸಬೇಕು ಎಂಬುವ ಕುರಿತು ಆತ್ಮ ವಿಮರ್ಶೆ ಮಾಡಬೇಕೊಳ್ಳುವಂತೆ ಕಿವಿಮಾತು ಹೇಳಿದರು.

ಪ್ರಾಸ್ತಾವಿಕ ಮಾತನಾಡಿದ ಕವಿವಿ ಕುಲಪತಿ ಪ್ರೊ. ಎ.ಎಂ.ಖಾನ್, ಕರ್ನಾಟಕ ವಿಶ್ವವಿದ್ಯಾಲಯ ನ್ಯಾಕ್ 'ಎ' ಗ್ರೇಡ ಹೊಂದಿದ್ದು, ಶೈಕ್ಷಣಿಕವಾಗಿ ನಾವೀನ್ಯತೆ ಹೊಂದಿದೆ. 235 ಕಾಲೇಜುಗಳು ಕವಿವಿಯ ವ್ಯಾಪ್ತಿಯ ಸಂಯೋಜನೆಗೊಂಡಿವೆ. ಪ್ರತಿವರ್ಷ ಎಂಟು ಸಾವಿರ ವಿದ್ಯಾರ್ಥಿಗಳು ಸ್ನಾತಕೋತ್ತರ ಪದವಿ ಪಡೆಯುತ್ತಾರೆ ಎಂದು ಮಾಹಿತಿ ನೀಡಿದರು.

ಕೌಶಲ್ಯ ಭಾರತ ಮತ್ತು ವಿಕಸಿತ ಭಾರತ ಕನಸನ್ನು ನನಸಾಗಿಸಲು ಶೈಕ್ಷಣಿಕವಾಗಿ ದಾಪುಗಾಲು ಇಟ್ಟಿದೆ. ಸ್ಟಾರ್ಟ್-ಅಪ್ ಮತ್ತು ಅನ್ವೇಷಣಾ ಹಬ್, ವಿದ್ಯಾರ್ಥಿ ಉದ್ಯಮಶೀಲತೆ ಅಂತಹ ವಿಶೇಷತೆಗಳನ್ನು ಹೊಂದಿದೆ ಎಂದ ಅವರು, ವಿಶ್ವವಿದ್ಯಾಲಯವು ಹಲವಾರು ವಿಭಾಗಗಳು ಸಂಶೋಧನಾ ಒಪ್ಪಂದ ಹೊಂದಿದೆ ಎಂದು ಮಾಹಿತಿ ನೀಡಿದರು.

ಉನ್ನತ ಶಿಕ್ಷಣ ಸಚಿವರಾದ ಡಾ.ಎಂ.ಸಿ.ಸುಧಾಕರ ಮಾತನಾಡಿ, ಕರ್ನಾಟಕ ವಿಶ್ವವಿದ್ಯಾಲಯವು ಪಿಂಚಣಿ ಸೇರಿದಂತೆ ಅನೇಕ ಹಣಕಾಸಿನ ಸಮಸ್ಯೆಗಳನ್ನು ಎದುರಿಸುತ್ತಿದೆ. ಶೇ. 70 ರಷ್ಟು ಪಿಂಚಣಿ ನೀಡಲು ಸರ್ಕಾರದಿಂದ ನೀಡುವ ಕುರಿತು ಚಿಂತನೆ ನಡೆಯಲಿದೆ ಎಂದು ತಿಳಿಸಿದರು.

ಅಜಿಂ ಪ್ರೇಮಜಿ ಫೌಂಡೇಶನ್ ಸಹಾಯದಿಂದ ವಿದ್ಯಾರ್ಥಿನಿಯರಿಗೆ ಮದುವೆ ಆಗುವವರೆಗೆ ಉಚಿತ ಶಿಕ್ಷಣದ ಜೊತೆಗೆ ಶಿಷ್ಯವೇತನ ನೀಡಲಾಗುವ ಯೋಜನೆ ರೂಪಿಸಿದೆ. ಪ್ರತಿವರ್ಷ ಮೂರು ವಿದ್ಯಾರ್ಥಿನಿಯರಿಗೆ ವಿದೇಶದಲ್ಲಿ ಉನ್ನತ ಶಿಕ್ಷಣ ನೀಡುವ ಯೋಜನೆ ಇದೆ. ಉನ್ನತ ಶಿಕ್ಷಣ ಇಲಾಖೆ ವಿದ್ಯಾರ್ಥಿಗಳಿಗೆ ಅನೇಕ ಉತ್ತಮ ಯೋಜನೆಗಳನ್ನು ಹಾಕಿಕೊಂಡಿದೆ ಎಂದರು.

ಎಥೆನಾಲ್ ಟ್ಯಾಂಕರ್ ಸ್ಫೋಟ

ಸುಟ್ಟು ಗಾಯಗೊಂಡಿದ್ದ ಲಾರಿ ಚಾಲಕ ಸಾವು

◆**ಅಂಕೋಲಾ:** ತಾಲೂಕಿನ ಕಂಚಿನಬಾಗಿಲ ಬಳಿ ರಾಷ್ಟ್ರೀಯ ಹೆದ್ದಾರಿ 52 ರಲ್ಲಿ ಅಗ್ನಿಗಾಹುತಿಯಾಗಿದ್ದ ಎಥೆನಾಲ್ ಟ್ಯಾಂಕರ್ ಚಾಲಕ ಚಿತ್ರದುರ್ಗದ ನಿವಾಸಿ ಮುರುಗೇಂದ್ರ ಅವರು ಮಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾಗಿದ್ದಾರೆ.

ರಾಷ್ಟ್ರೀಯ ಹೆದ್ದಾರಿಯಲ್ಲಿ ಎಥೆನಾಲ್ ರಾಸಾಯನಿಕ ತುಂಬಿದ್ದ ಲಾರಿ ಪಲ್ಟಿಯಾಗಿ ಬೆಂಕಿ ಹೊತ್ತಿಕೊಂಡು ಸ್ಫೋಟಗೊಂಡು ಅನಾಹುತ ಸಂಭವಿಸಿತ್ತು

ಉರಿಯುತ್ತಿರುವ ಲಾರಿಯಿಂದ ಪಾರಾಗಿ ಬಂದಿದ್ದ ಚಾಲಕ ಮುರುಗೇಂದ್ರ ಅವರ ಮೈ ಸುಮಾರು 60 ಪ್ರತಿಶತ ಸುಟ್ಟು ಹೋಗಿದ್ದರಿಂದ ಅವರಿಗೆ ಅಂಕೋಲಾ ತಾಲೂಕು ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಿ ಕಾರವಾರದ ಕಿಮ್ಸ್ ಗೆ ದಾಖಲಿಸಲಾಗಿತ್ತಾದರೂ ಹೆಚ್ಚಿನ ಚಿಕಿತ್ಸೆಯ ಅಗತ್ಯತೆ ಇರುವುದರಿಂದ ಜನಶಕ್ತಿ ವೇದಿಕೆ ಹಾಗೂ ಉತ್ತರ ಕನ್ನಡ ಜಿಲ್ಲಾ ಲಾರಿ ಮಾಲಿಕರ ಅಸೋಸಿಯೇಶನ್ ಅಧ್ಯಕ್ಷ ಮಾಧವ ನಾಯ್ಕ ಅವರು ಮುತುವರ್ಜಿವಹಿಸಿ ಅಂಬುಲೆನ್ಸ್ ವ್ಯವಸ್ಥೆ ಕಲ್ಪಿಸುವಮೂಲಕ ಮಂಗಳೂರಿನ ಆಸ್ಪತ್ರೆಗೆ ದಾಖಲಿಸಲು ಸಹಾಯ ಮಾಡಿದ್ದರು.

ಸುಟ್ಟ ಗಾಯಗಳಿಂದ ಬಹು ಅಂಗಾಂಗ ವೈಫಲ್ಯದ ಕಾರಣ ಮುರುಗೇಂದ್ರ ಅವರು ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿದ್ದು ಆಸ್ಪತ್ರೆಯ ವೆಚ್ಚ ಬರಿಸಲು ಯೋಜನೆಗಳ ಸಹಾಯ ಪಡೆಯಲು ಅಗತ್ಯವಿದ್ದ ಮೊಬೈಲ್ ಫೋನ್ ಬೆಂಕಿಗಾಹುತಿಯಾದ ಕಾರಣ ಮುರುಗೇಂದ್ರ ಅವರ ಕುಟುಂಬಕ್ಕೆ ತೊಡಕಾಗಿದ್ದರಿಂದ ಮಾಧವ ನಾಯ್ಕ ಅವರು ಮಾಲೀಕರ ಸಂಘದ ರಾಜ್ಯ ಅಧ್ಯಕ್ಷರನ್ನು ಸಂಪರ್ಕಿಸಿ ಚಾಲಕನ ಕುಟುಂಬಕ್ಕೆ ನೆರವು ನೀಡುವಂತೆ ಮನವಿ ಮಾಡಿದ್ದಾರೆ. ಮನೆಯಿಂದ ದೂರವಿದ್ದು ತಮ್ಮ ಜೀವದ ಹಂಗು ತೊರೆದು ದುಡಿಯುವ ಲಾರಿ ಚಾಲಕರಿಗೆ ಸಂಕಷ್ಟದ ಸಂದರ್ಭದಲ್ಲಿ ಮಾನವೀಯ ನೆರವಿನ ಅಗತ್ಯತೆ ಇದೆ. ಚಾಲಕ ಆಸ್ಪತ್ರೆಯಲ್ಲಿ ಇದ್ದಾಗ ಸಹಾಯಕ್ಕೆ ಬಾರದ ಟ್ಯಾಂಕರ್ ಮಾಲಿಕ ಚಾಲಕ ಸತ್ತ ನಂತರ ಕುಟುಂಬಕ್ಕೆ ಒಂದು ಲಕ್ಷ ಸಹಾಯ ನೀಡಿದ್ದಾನೆ ಚಾಲಕನ ದುಡಿಮೆಯ ಮೇಲೆ ಬದುಕುತ್ತಿದ್ದ ಕುಟುಂಬಕ್ಕೆ ಸಹಾಯ ಮಾಡುವಂತೆ ಲಾರಿ ಮಾಲೀಕರ ಸಂಘಗಳಿಗೆ ಮಾದವ ನಾಯ್ಕ ಮನವಿ ಮಾಡಿದ್ದಾರೆ.

ಬಿಸಿಲ ಬೇಗೆಯಿಂದ ಕಂಗೆಟ್ಟಿದ್ದ ಜನತೆ ಗುಡುಗು-ಸಿಡಿಲು ಸಹಿತ ಧಾರಾಕಾರ ಮಳೆ

◆**ಧಾರವಾಡ:** ಕಳೆದ ಕೆಲವು ದಿನಗಳಿಂದ ಸುಡುತ್ತಿರುವ ಬಿಸಿಲಿನ ತಾಪದಿಂದ ಕಂಗೆಟ್ಟಿದ್ದ ಧಾರವಾಡ ಜಿಲ್ಲೆಯ ಜನತೆಗೆ ವರುಣದೇವ ತಂಪು ನೀಡಿದ್ದಾನೆ. ಇಂದು ಗುರುವಾರ ಸಂಜೆ ಜಿಲ್ಲೆಯಾದ್ಯಂತ ಗುಡುಗು, ಸಿಡಿಲು ಹಾಗೂ ಬಿರುಗಾಳಿ ಸಹಿತ ಧಾರಾಕಾರ ಮಳೆ ಸುರಿದಿದೆ.

ಮಧ್ಯಾಹ್ನದವರೆಗೆ ಅತಿಯಾದ ಸೆಕೆ ಹಾಗೂ ಬಿಸಿಲಿನ ವಾತಾವರಣವಿತ್ತು. ಆದರೆ ಸಂಜೆ ನಾಲ್ಕು ಗಂಟೆಯ ನಂತರ ಏಕಾಏಕಿ ಮೋಡ ಕವಿದ ವಾತಾವರಣ ನಿರ್ಮಾಣವಾಗಿ, ಸುಮಾರು ಒಂದು ಗಂಟೆಗೂ ಹೆಚ್ಚು ಕಾಲ ಬಿರುಸಿನ ಮಳೆಯಾಗಿದೆ. ಧಾರವಾಡ ನಗರ ಸೇರಿದಂತೆ ಹುಬ್ಬಳ್ಳಿ, ಕಲ್ಘಟಗಿ ಹಾಗೂ ನವಲಗುಂದ ತಾಲೂಕಿನ ಹಲವೆಡೆ ಮಳೆಯ ಅಬ್ಬರ ಕಂಡುಬಂದಿದೆ. ಏಕಾಏಕಿ ಸುರಿದ ಮಳೆಯಿಂದಾಗಿ ರಸ್ತೆಗಳ ಮೇಲೆ ನೀರು ಹರಿದು ವಾಹನ ಸವಾರರು ಪರದಾಡುವಂತಾಯಿತು. ನಗರದ ತಗ್ಗು ಪ್ರದೇಶಗಳಿಗೆ ನೀರು ನುಗ್ಗಿದ ವರದಿಯಾಗಿದೆ. ಬಿರುಗಾಳಿ ಮತ್ತು ಸಿಡಿಲಿನ ಅರ್ಭಟಕ್ಕೆ ಮುಂಜಾಗ್ರತಾ ಕ್ರಮವಾಗಿ ನಗರದ ಹಲವು ಬಡಾವಣೆಗಳಲ್ಲಿ ವಿದ್ಯುತ್ ಸಂಪರ್ಕ ಕಡಿತಗೊಳಿಸಲಾಗಿತ್ತು.

- ಮಳೆಯಿಂದಾಗಿ ಮಾವು ಬೆಳೆಗಾರರಲ್ಲಿ ಆತಂಕ ಮನೆ ಮಾಡಿದ್ದರೆ, ಮುಂಗಾರು ಹಂಗಾಮಿನ ಸಿದ್ಧತೆಯಲ್ಲಿದ್ದ ರೈತರಲ್ಲಿ ಮಂದಹಾಸ
- ಹವಾಮಾನ ಇಲಾಖೆಯ ಮುನ್ಸೂಚನೆಯಂತೆ ಮುಂದಿನ ಎರಡು ದಿನಗಳ ಕಾಲ ಇದೇ ರೀತಿಯ ಗುಡುಗು ಸಹಿತ ಮಳೆ ಮುಂದುವರಿಯುವ ಸಾಧ್ಯತೆ
- ಗುಡುಗು-ಸಿಡಿಲು ಕಂಡುಬಂದಾಗ ಮರಗಳ ಕೆಳಗೆ ಅಥವಾ ವಿದ್ಯುತ್ ಕಂಬಗಳ ಬಳಿ ನಿಲ್ಲಬಾರದೆಂದು ಜಿಲ್ಲಾಡಳಿತ ಸೂಚನೆ

ನಾರೀಶಕ್ತಿ ವಂದನ್ ಮಸೂದೆ ಮಹಿಳೆಯರಿಗೆ ಕಾಂಗ್ರೆಸ್ ಅನ್ಯಾಯ

◆**ಚಿಕ್ಕೋಡಿ:** ಕೇಂದ್ರದಲ್ಲಿ ಪ್ರಧಾನಮಂತ್ರಿ, ನರೇಂದ್ರ ಮೋದಿ ಅವರು ಜಾರಿಗೆ ತರಲು ಉದ್ದೇಶಿಸಿದ ನಾರೀಶಕ್ತಿ ವಂದನ್ ಮಸೂದೆಗೆ ಮತ ಹಾಕದೇ ಕಾಂಗ್ರೆಸ್ ಹಾಗೂ ಮಿತ್ರಪಕ್ಷಗಳು ಭಾರತ ಮಾತೆಯ ಭ್ರೂಣ ಹತ್ಯೆಯನ್ನು ಮಾಡಿವೆ. ಭಾರತೀಯ ಮಹಿಳೆಯರಿಗೆ ತೀವ್ರ ಅನ್ಯಾಯ ಮಾಡಿವೆ ಎಂದು ನಿಪ್ಪಾಣಿ ಶಾಸಕಿ ಶಶಿಕಲಾ ಜೊಲ್ಲೆ, ಮಾಜಿ ಸಂಸದ ಅಣ್ಣಾಸಾಹೇಬ ಜೊಲ್ಲೆ ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಪಟ್ಟಣದ ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ಗುರುವಾರ ಕರೆದ ಜಂಟಿ ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಅವರು, ಕಾಂಗ್ರೆಸ್, ಟಿಎಂಸಿ, ಡಿಎಂಕೆ, ಸಮಾಜವಾದಿ ಪಕ್ಷಗಳು ಕುಟುಂಬ ರಾಜಕಾರಣ ಮಾಡುತ್ತಿದ್ದು, ಹೀಗಾಗಿ ಲೋಕಸಭೆ ಹಾಗೂ ವಿಧಾನಸಭೆಯಲ್ಲಿ ಮಹಿಳೆಯರಿಗೆ ಸಿಗಬೇಕಿದ್ದ ಮೀಸಲಾತಿಗೆ ವಿರೋಧ ಮಾಡಿವೆ. ಸಂಸತ್ತಿನಲ್ಲಿ, ನಾರೀಶಕ್ತಿ ವಂದನ್ ಮಸೂದೆ ವಿರೋಧಿಸಿ ಮತ ಹಾಕುವ ಮೂಲಕ ಚರಿತ್ರೆಯಲ್ಲಿ ''ಕರಾಳ ಅಕ್ಷರ'' ಮೂಡಿಸಿದೆ'' ಎಂದು ಕಿಡಿಕಾರಿದರು.

''ನಾರೀಶಕ್ತಿ ವಂದನ್ ಮಸೂದೆ ವಿರೋಧಿಸಿದ ಕಾಂಗ್ರೆಸ್ ನಾಯಕ ರಾಹುಲ ಗಾಂಧಿ ಸೇರಿದಂತೆ ವಿರೋಧ ಪಕ್ಷದ ನಾಯಕರು ರಾವಣ, ಕೌರವ, ಕಂಸರಂತೆ ಮಹಿಳೆಯರಿಗೆ ಕಿರುಕುಳ ನೀಡಿದ್ದಾರೆ. ಮಹಿಳೆಯರಿಗೆ ಕಿರುಕುಳ ನೀಡಿದವರ್ಯಾರೂ ಇತಿಹಾಸದಲ್ಲಿ ಉಳಿದಿಲ್ಲ, ಕಾಂಗ್ರೆಸ್ ಹಾಗೂ ಮಿತ್ರ ಪಕ್ಷಗಳ ಸ್ಥಿತಿಯು ಇದೇ ಆಗುತ್ತದೆ'' ಎಂದು ಭವಿಷ್ಯ ನುಡಿದರು.

ಮಾಜಿ ಸಂಸದ ಅಣ್ಣಾಸಾಹೇಬ ಜೊಲ್ಲೆ ಮಾತನಾಡಿ, ವಿರೋಧ ಪಕ್ಷಗಳು ವಿರೋಧ ಮಾಡಬೇಕು. ಅದು ಸಹಜ. ಆದರೆ, ದೇಶದಲ್ಲಿ ಶೇ.50 ರಷ್ಟು ಇರುವ ಮಹಿಳೆಯರಿಗೆ ರಾಜಕೀಯದಲ್ಲಿ ಮೀಸಲಾತಿ ತರಲು ವಿರೋಧ ಮಾಡಿದ್ದು ಸರಿಯಾದ ಕ್ರಮವಲ್ಲ. 2011ರ ಜನಗಣತಿಯಂತೆ ಕರ್ನಾಟಕ ರಾಜ್ಯದಲ್ಲಿ ಲೋಕಸಭೆಯ ಸದಸ್ಯರ ಸಂಖ್ಯೆ 28 ರಿಂದ 42ಕ್ಕೆ ಏರಿಕೆಯಾಗಲಿದೆ. ಕ್ಷೇತ್ರಗಳ ಪುನರ್ ವಿಂಗಡಣೆಯಿಂದ ಮಿತ್ರ ಪಕ್ಷಗಳು ಆರೋಪಿಸಿದಂತೆ ಯಾವುದೇ ಅನ್ಯಾಯವಾಗುದಿಲ್ಲ'' ಎಂದರು.

ಸುದ್ದಿಗೋಷ್ಠಿಯಲ್ಲಿ ರಾಜ್ಯ ಮಹಿಳಾ ಮೋರ್ಚಾ ಉಪಾಧ್ಯಕ್ಷೆ ಶಾಂಭವಿ ಅಶ್ವತ್ಥಪೂರ, ಜಿಲ್ಲಾ ಮಹಿಳಾ ಮೋರ್ಚಾ ಅಧ್ಯಕ್ಷೆ ಶಕುಂತಲಾ ಡೋಣವಾಡೆ, ಚಿಕ್ಕೋಡಿ ಜಿಲ್ಲಾ ಪ್ರದಾನ ಕಾರ್ಯದರ್ಶಿ ಸದಾಶಿವ ಹಳಿಂಗಳೆ, ಅಪ್ಪಾಸಾಹೇಬ ಚೌಗಲಾ, ಪವನ ಮಹಾಜನ, ಸಂಜಯ ಪಾಟೀಲ ಇತರರು ಇದ್ದರು.

ಬಿಜೆಪಿಯಿಂದ ಪ್ರತಿಭಟನೆ

ಮಹಿಳಾ ಮೀಸಲಾತಿ ವಿರೋಧಿಸಿದ ಕಾಂಗ್ರೆಸ್ ಹಾಗೂ ಮಿತ್ರಪಕ್ಷಗಳ ವಿರುದ್ಧ ಬಿಜೆಪಿ ಏ.25ರಂದು ಜಿಲ್ಲಾ ಮಟ್ಟದಲ್ಲಿಯೂ ಹಾಗೂ ಏ.27ರಂದು ಪ್ರತಿ ಮಂಡಲದಲ್ಲಿ ಬಿಜೆಪಿ ಪಕ್ಷದಿಂದ ಪ್ರತಿಭಟನೆ ಹಮ್ಮಿಕೊಳ್ಳಲು ಉದ್ದೇಶಿಸಲಾಗಿದೆ'' ಎಂದು ಮಾಜಿ ಸಂಸದ ಅಣ್ಣಾಸಾಹೇಬ ಜೊಲ್ಲೆ ಮಾಹಿತಿ ನೀಡಿದರು.

ಅಲ್ಪಸಂಖ್ಯಾತರು ಕೈ ವಿರುದ್ಧ ತಿರುಗಿ ಬೀಳ್ತಾರೆ ; ಬೊಮ್ಮಾಯಿ

◆**ಹಾವೇರಿ:** ಮುಂಬರುವ ದಿನಗಳಲ್ಲಿ ಅಲ್ಪಸಂಖ್ಯಾತರು, ದಲಿತರು ಕಾಂಗ್ರೆಸ್ ವಿರುದ್ಧ ತಿರುಗಿ ಬೀಳಬಹುದು. ಈ ಮಾತು ನೆನಪಿಟ್ಟುಕೊಳ್ಳಿ ಎಂದರು. ಎಂದು ಮಾಜಿ ಸಿಎಂ, ಸಂಸದ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ. ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೆಲವು ಸಮುದಾಯಗಳನ್ನು ಕಾಂಗ್ರೆಸ್ಸಿನವರು 30-35 ವರ್ಷ ಬಳಸಿಕೊಂಡಿದ್ದಾರೆ. ಈಗ ಮುಂದಿನ ಪೀಳಿಗೆ ಅವರಿಗೆ ಪ್ರಶ್ನೆ ಕೇಳುತ್ತಿದೆ ಎಂದರು.

ಮೋದಿ ಜನಪ್ರಿಯತೆ ಹೆಚ್ಚಳ: ಪ್ರಧಾನಿ ನರೇಂದ್ರ ಮೋದಿ ಕುರಿತು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿಕೆ ಕುರಿತು ಪ್ರತಿಕ್ರಿಯಿಸಿ, ಖರ್ಗೆಯವರು ದೊಡ್ಡ ಸ್ಥಾನದಲ್ಲಿದ್ದಾರೆ, ಹಿರಿಯರು. ಅವರ ಮಾತಿನಿಂದ ಅವರ ವ್ಯಕ್ತಿತ್ವವೇ ಕುಸಿಯುತ್ತಿದೆ. ಹಲವು ಬಾರಿ ಕೆಟ್ಟದಾಗಿ ಮಾತನಾಡಿದ ಹಲವು ಉದಾಹರಣೆಗಳಿವೆ. ಮೋದಿಯವರನ್ನು ಟೀಕಿಸಿದಷ್ಟು ಅವರ ಜನಪ್ರಿಯತೆ ಹೆಚ್ಚುತ್ತಿದೆ ಎಂದರು.

2029ಕ್ಕೆ ಜಾರಿ ಉದ್ದೇಶ : ಕ್ಷೇತ್ರ ಪುನರ್‌ವಿಂಗಡನೆ ಹಾಗೂ ಮಹಿಳಾ ಮೀಸಲಾತಿಯನ್ನು 2029ರಲ್ಲಿ ಜಾರಿ ಮಾಡಲು ಕಾಂಗ್ರೆಸ್ ಸೇರಿದಂತೆ ಎಲ್ಲ ಪಕ್ಷಗಳ ಒತ್ತಡವೂ ಇತ್ತು. ಆದಕ್ಕೆ ಕೇಂದ್ರ ಸರ್ಕಾರ ಮತ್ತೆ ತಿದ್ದುಪಡಿ ತಂದಿತು. ಶೇ.50ರಷ್ಟು ಸೀಟು ಹೆಚ್ಚಳವಾಗಬೇಕೆಂದರೆ ಡಿಲಿಮಿಟೇಷನ್ ಆಗಬೇಕು. ಇದರ ಜೊತೆಗೆ ಮಹಿಳಾ ಮಹಿಳೆಯರಿಗೆ ಶೇ.33 ಮೀಸಲಾತಿ 2029ಕ್ಕೆ ಜಾರಿಗೆ ಬರಬೇಕು ಎನ್ನುವ ಉದ್ದೇಶಿಸಿತ್ತು. ಆದರೆ ಪ್ರತಿಪಕ್ಷಗಳು ಡಿಲಿಮಿಟೇಷನ್ ಯಾವಾಗಲೂ ಆಗಿಯೇ ಇಲ್ಲ ಅನ್ನುವಂತೆ ಮಾತನಾಡುತ್ತಿದ್ದಾರೆ ಎಂದರು.

ಒಳ್ಳೆಯ ಅವಕಾಶ ತಪ್ಪಿತು: ಕರ್ನಾಟಕದಲ್ಲಿ 28 ಲೋಕಸಭಾ ಕ್ಷೇತಗಳು ಇದ್ದದ್ದು 42 ಕ್ಷೇತ್ರ ಆಗುತ್ತಿತ್ತು. ಈ ಅವಕಾಶ ಕಳೆದುಕೊಳ್ಳಬಾರದು. ದಕ್ಷಿಣದ ರಾಜ್ಯಗಳು ಇದನ್ನು ಒಪ್ಪಿಕೊಳ್ಳಬೇಕು. ಇದು ಜನಸಂಖ್ಯೆ ಆಧಾರದ ಮೇಲೆ ಇಲ್ಲ, 2011ರಲ್ಲಿ ನಮ್ಮ ಕರ್ನಾಟಕದ ಜನಸಂಖ್ಯೆ 5 ಕೋಟಿ ಇತ್ತು. ಆ ಜನಸಂಖ್ಯೆಯನ್ನು 42 ಸೀಟುಗಳಿಗೆ ಹಂಚಿಕೆ ಮಾಡಲಾಗುತ್ತದೆ. ಇದನ್ನು ಅರ್ಥ ಮಾಡಿಕೊಳ್ಳದೆ ಕೇವಲ ರಾಜಕೀಯ ಕಾರಣಕ್ಕೆ ಡಿಎಂಕೆಯವರ ರಾಜಕೀಯ ಹುನ್ನಾರಕ್ಕೆ ನಮ್ಮ ಸಿಎಂ ಹಾಗೂ ಕಾಂಗ್ರೆಸ್ ರಾಜ್ಯದ ಹಿತಾಸಕ್ತಿ ಬಲಿಕೊಟ್ಟಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಅನೈತಿಕ ಸಂಬಂಧ ಶಂಕೆ : ಪತ್ನಿಯನ್ನು ಕೊಂದ ಪತಿ

◆**ಬಾಗಲಕೋಟೆ:** ಪತ್ನಿ ಅನೈತಿಕ ಸಂಬಂಧ ಹೊಂದಿದ್ದಾಳೆಂದು ಪತಿ ಕೊಲೆ ಮಾಡಿರುವ ಘಟನೆ ಘಟನೆ ಜಿಲ್ಲೆಯ ಜಮಖಂಡಿ ತಾಲೂಕಿನ ತೊದಲಬಾಗಿ ಗ್ರಾಮದಲ್ಲಿ ನಡೆದಿದೆ.

ಕೊಲೆಯಾದ ಮಹಿಳೆಯನ್ನು ನಾಗನೂರ ಗ್ರಾಮದ ಸೋಮಾ(32) ಎಂದು ಗುರುತಿಸಲಾಗಿದೆ. ಹತ್ತು ವರ್ಷಗಳ ಹಿಂದೆ ಮಲ್ಲಪ್ಪನೊಂದಿಗೆ ಮದುವೆಯಾಗಿತ್ತು. ಒಂಬತ್ತು ವರ್ಷದ ಗಂಡು, 7 ವರ್ಷದ ಹೆಣ್ಣು ಮಗು ಇದೆ.

ಮಲ್ಲಪ್ಪನ ಪತ್ನಿ ನೆರೆಯ ಜಕ್ಕನವ್ವ ಮನೆಯಲ್ಲಿ ಇದ್ದರು ಆ ಸಂದರ್ಭದಲ್ಲಿ ಪ್ರವೀಣ ಎಂಬ ವ್ಯಕ್ತಿ ಕೂಡ ಆ ಸ್ಥಳದಲ್ಲಿ ಇದ್ದನು. ಈ ಸಂದರ್ಭದಲ್ಲಿ ಪತಿ ಮಲ್ಲಪ್ಪ ಆ ಮನೆಗೆ ಹೋದಾಗ ಹೆಂಡತಿ ಅನೈತಿಕ ಸಂಬಂಧ ಹೊಂದಿದ್ದಾಳೆಂದು ಪತ್ನಿಯ ಮೇಲೆ ಮಲ್ಲಪ್ಪ ಜಗಳ ನಡೆಸಿ ಹಲ್ಲೆ ಕೂಡ ಮಾಡಿದ್ದಾನೆ. ಮೃತ ಸೋಮಾ ಹೃದಯ ಕಾಯಿಲೆಯಿದ ಬಳಲುತ್ತಿದ್ದಳು ಈ ವೇಳೆ ಮಲ್ಲಪ್ಪ ಪತ್ನಿ ಮೇಲೆ ಹಲ್ಲೆ ಮಾಡಿದ್ದರಿಂದ ಸ್ಥಳದಲ್ಲೇ ಸಾವನ್ನಪ್ಪಿದಳು. ಘಟನೆಗೆ ಸಂಬಂಧಿಸಿದಂತೆ ಸಾವಳಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು ತನಿಖೆ ನಡೆಯುತ್ತಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ಧಾರ್ಥ ಗೋಯಲ್ ತಿಳಿಸಿದ್ದಾರೆ.

ಹಲ್ಲೆ: ವ್ಯಕ್ತಿ ಸಾವು

◆ **ಬಾಗಲಕೋಟೆ:** ಜಿಲ್ಲೆಯ ಸಾವಳಗಿ ಪೊಲೀಸ್ ಠಾಣಾ ವ್ಯಾಪ್ತಿಯ ತುಂಗಾರ್ ಗ್ರಾಮದಲ್ಲಿ ಮನೆಯ ಹೊರಗಡೆ ಮಲಗಿದ್ದಾಗ ಅಪರಿಚಿತರು ನಡೆಸಿದ ಹಲ್ಲೆಯಿಂದ ವ್ಯಕ್ತಿಯೊಬ್ಬ ಸಾವನ್ನಪ್ಪಿದ್ದಾನೆ. ತುಂಗಾರ ಗ್ರಾಮದ ಆಶೋಕ್ ತಳವಾಡ ಅಲಿಯಾಸ್ ಕೋಳ್ಳಿ (35 ವರ್ಷ), ಆದೇ ಗ್ರಾಮದ ನಿವಾಸಿ, ತನ್ನ ಪರಿಚಿತನಾದ ಉತ್ತಮ್ ಅವರ ಮನೆಯ ಹೊರಗೆ ಮಲಗಿದ್ದಾಗ ದುಷ್ಕರ್ಮಿಗಳಿಂದ ಹಲ್ಲೆಗೆ ಒಳಗಾಗಿ ಸಾವನ್ನಪ್ಪಿದ್ದಾನೆ. ಈ ಘಟನೆಯಲ್ಲಿ ಉತ್ತಮ್ ಕೂಡ ಗಾಯಗೊಂಡಿದ್ದು, ಅವರನ್ನು ವಿಜಯಪುರ ಆಸ್ಪತ್ರೆಗೆ ದಾಖಲಿಸಲಾಗಿದ್ದು ಚಿಕಿತ್ಸೆ ಪಡೆಯುತ್ತಿದ್ದಾರೆ. ಈ ಪ್ರಕರಣದಲ್ಲಿ ಆರೋಪಿಗಳನ್ನು ಗುರುತಿಸುವುದು ಹಾಗೂ ಕೊಲೆಯ ಉದ್ದೇಶವನ್ನು ಪತ್ತೆಹಚ್ಚಲು ತನಿಖೆ ಮುಂದುವರಿದಿದೆ ಎಂದು ಎಸ್ಪಿಯವರು ತಿಳಿಸಿದ್ದಾರೆ.

ಟ್ಯಾಂಕರ್ ಪಲ್ಟಿ: ಅನಿಲ ಸೋರಿಕೆ !

ವಾಹನ ಸಂಚಾರಕ್ಕೆ ಮುಕ್ತವಾದ ರಸ್ತೆ

◆**ಕಲಘಟಗಿ:** ತಾಲೂಕಿನ ದೇವಿಕೊಪ್ಪ ಸಮೀಪ ಬುಧವಾರ ರಾತ್ರಿ ಅಡುಗೆ ಅನಿಲ ಸಾಗಣೆ ಟ್ಯಾಂಕರ್ ಪಲ್ಟಿಯಾಗಿ ಗ್ಯಾಸ್ ಸೋರಿಕೆಯಾಗುತ್ತಿರುವ ಪರಿಣಾಮ ಹುಬ್ಬಳ್ಳಿಯಿಂದ ಕಲಘಟಗಿ ಮೂಲಕ ಅಂಕೋಲಾ ಮಾರ್ಗದ ವಾಹನ ಸಂಚಾರ ಸ್ಥಗಿತಗೊಳಿಸಲಾಗಿತ್ತು.

ಕಲಘಟಗಿ ಠಾಣೆ ಸಿಪಿಐ ಶ್ರೀಶೈಲ್ ಕೌಜಲಗಿ ಅವರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ, ಸುತ್ತಮುತ್ತ ಯಾವುದೇ ಅಗ್ನಿಸ್ಪರ್ಶ ಆಗದಂತೆ ಮುನ್ನೆಚ್ಚರಿಕೆ ಕ್ರಮ ಕೈಗೊಂಡರು. ಜತೆಗೆ ಘಟನಾ ಸ್ಥಳದಿಂದ 10 ಕಿಮೀ ಅಂತರದಲ್ಲಿ ವಾಹನ ಸಂಚಾರ ನಿರ್ಬಂಧಿಸಲಾಗಿತ್ತು, ಯಲ್ಲಾಪುರ-ಹಳಿಯಾಳ-ಧಾರವಾಡ ಅಥವಾ ಯಲ್ಲಾಪುರ-ಮುಂಡಗೋಡ-ಹುಬ್ಬಳ್ಳಿ ಹೀಗೆ ಬದಲಿ ಮಾರ್ಗ ಸೂಚಿಸಿದ್ದು, ಗುರುವಾರ ಮಧ್ಯಾಹ್ನ ರಸ್ತೆ ಸಂಚಾರಕ್ಕೆ ಮುಕ್ತವಾಗಿದೆ.

ವರ್ಗಾವಣೆ ಕಾರ್ಯಾಚರಣೆಯಲ್ಲಿ 15ಕ್ಕೂ ಅಧಿಕ ಸಿಬ್ಬಂದಿ ತೊಡಗಿದ್ದು, ಅಡುಗೆ ಅನಿಲ ರೀಫಿಲ್ ಮಷಿನ್‌ನಿಂದ ವರ್ಗಾವಣೆ ಮಾಡುವವರೆಗೂ ಘಟನಾ ಸ್ಥಳದ ಪಕ್ಕದಲ್ಲಿ ಯಾವುದೇ ವಾಹನ ಸಂಚಾರವಾಗದಂತೆ ಕ್ರಮ ಕೈಗೊಳ್ಳಲಾಗಿದೆ. ವಾಟರ್ ಟೆಂಡರ್ ವಾಹನ ಸಹಿತವಾಗಿ ಎಲ್ಲ ರೀತಿಯ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಲಾಗಿದೆ ಎಂದು ಅಗ್ನಿಶಾಮಕ ಠಾಣಾಧಿಕಾರಿ ಅರುಣ ಮಾಳೋದೆ ತಿಳಿಸಿದ್ದಾರೆ.

ಪದ್ಮಭೂಷಣ, ಕರ್ನಾಟಕ ರತ್ನ, ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ ವಿಜೇತ
ನಟಸಾರ್ವಭೌಮ
ಡಾ. ರಾಜ್‌ಕುಮಾರ್
97ನೇ ಜನ್ಮದಿನಾಚರಣೆ
ಶುಕ್ರವಾರ ಏಪ್ರಿಲ್ 24, 2026 ಬೆಳಿಗ್ಗೆ 10.30 ಗಂಟೆಗೆ
ಡಾ.ರಾಜ್‌ಕುಮಾರ್ ಪುಣ್ಯಭೂಮಿ, ಶ್ರೀ ಕಂಠೀರವ ಸ್ಟುಡಿಯೋ ಆವರಣ, ಬೆಂಗಳೂರು

ಉದ್ಘಾಟನೆ
ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು,
ಕರ್ನಾಟಕ ಸರ್ಕಾರ

ಘನ ಉಪಸ್ಥಿತಿ
ಶ್ರೀ ಡಿ. ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು,
ಕರ್ನಾಟಕ ಸರ್ಕಾರ

ಸು.ಶ್ರೀ. ಶೋಭಾ ಕರಂದ್ಲಾಜೆ
ಮಾನ್ಯ ಕಾರ್ಮಿಕ ಮತ್ತು ಉದ್ಯೋಗ ಹಾಗೂ
ಎಂಎಸ್‌ಎಂಇ ಖಾತೆ ರಾಜ್ಯ ಸಚಿವರು, ಭಾರತ ಸರ್ಕಾರ

ಅಧ್ಯಕ್ಷತೆ
ಶ್ರೀ ಕೆ.ಗೋಪಾಲಯ್ಯ
ಮಾನ್ಯ ಶಾಸಕರು,
ಮಹಾಲಕ್ಷ್ಮಿ ಲೇಔಟ್

ಮುಖ್ಯ ಅತಿಥಿಗಳು
ಶ್ರೀ ಕೆ. ವಿ. ಪ್ರಭಾಕರ್
ಮಾನ್ಯ ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರರು,
ಕರ್ನಾಟಕ ಸರ್ಕಾರ

ಶ್ರೀ ಮಹಬೂಬ್ ಪಾಷಾ
ಮಾನ್ಯ ಅಧ್ಯಕ್ಷರು,
ಶ್ರೀ ಕಂಠೀರವ ಸ್ಟುಡಿಯೋ ಪ್ರೈ. ಲಿ., ಬೆಂಗಳೂರು

ಶ್ರೀ ಸಾಧು ಕೋಕಿಲ
ಮಾನ್ಯ ಅಧ್ಯಕ್ಷರು,
ಕರ್ನಾಟಕ ಚಲನಚಿತ್ರ ಅಕಾಡೆಮಿ, ಬೆಂಗಳೂರು

ನಮ್ಮೊಂದಿಗೆ
ಡಾ. ಶಿವರಾಜ್ ಕುಮಾರ್, ಹಿರಿಯ ಚಲನಚಿತ್ರ ನಟರು
ಶ್ರೀ ರಾಘವೇಂದ್ರ ರಾಜ್‌ಕುಮಾರ್, ಹಿರಿಯ ಚಲನಚಿತ್ರ ನಟರು
ಶ್ರೀಮತಿ ಅಶ್ವಿನಿ ಪುನೀತ್ ರಾಜ್‌ಕುಮಾರ್, ಚಲನಚಿತ್ರ ನಿರ್ಮಾಪಕರು
ಸಹಕಾರ: ಡಾ.ರಾಜ್‌ಕುಮಾರ್ ಪ್ರತಿಷ್ಠಾನ, ಕರ್ನಾಟಕ ಸರ್ಕಾರ, ಬೆಂಗಳೂರು
ಡಾ. ರಾಜ್‌ಕುಮಾರ್ ಗೀತೆಗಳ ಗಾಯನ
ಶ್ರೀ ವಿಕಾಸ್ ವಸಿಷ್ಠ ಮತ್ತು ಸ್ವರ್ಶ ಆರ್.ಕೆ. ತಂಡದವರಿಂದ
ಉಪನ್ಯಾಸ: ಶ್ರೀ ದೊಡ್ಡಹುಲ್ಲೂರು ರುಕ್ಕೋಜಿ

ತಮಗೆಲ್ಲ ಆದರದ ಸ್ವಾಗತ

ವೈಜ್ಞಾನಿಕ ಮನೋಧರ್ಮ ಬೆಳೆಸಿಕೊಳ್ಳುವುದು: ಪ್ರಶ್ನೆ ಮಾಡುವ ಮತ್ತು ಬದಲಾವಣೆಗೆ ಒಡ್ಡಿಕೊಳ್ಳುವ ಮನಃಸ್ಥಿತಿ ಬೆಳೆಸಿಕೊಳ್ಳುವುದು.- ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ಹೇಮಂತ್ ಎಂ. ನಿಂಬಾಳ್ಕರ್, ಭಾ.ಪೊ.ಸೇ
ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ಬಿ. ಬಿ. ಕಾವೇರಿ, ಭಾ.ಆ.ಸೇ
ಸರ್ಕಾರದ ಕಾರ್ಯದರ್ಶಿಗಳು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ಕರ್ನಾಟಕ ವಾರ್ತೆ

ಮೇ 9ಕ್ಕೆ ಬಿ.ಎಸ್.ಯಡಿಯೂರಪ್ಪ ಅಭಿಮಾನೋತ್ಸವ

ಪುಟ ೧➜ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಗುರುವಾರ ಸುದ್ದಿಗೋಷ್ಠಿ ನಡೆಸಿದ ಅವರು, ಕಾರ್ಯಕ್ರಮವನ್ನು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಉದ್ಘಾಟಿಸಿ ಯಡಿಯೂರಪ್ಪ ಅವರನ್ನು ಸನ್ಮಾನಿಸಲಿದ್ದಾರೆ ಎಂದು ಹೇಳಿದರು.

ಅಭಿಮಾನೋತ್ಸವದ ಹಿಂದಿನ ದಿನ ಅಂದರೆ ಮೇ 8 ರಂದು ಸಂಜೆ 6 ಗಂಟೆಗೆ ಯಡಿಯೂರಪ್ಪ ಅವರ ಪುರಪ್ರವೇಶ ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ. ಈ ಅಭಿಮಾನೋತ್ಸವ ಕಾರ್ಯಕ್ರಮಕ್ಕೆ ಸುಮಾರು 10 ಲಕ್ಷಕ್ಕೂ ಹೆಚ್ಚು ಜನ ಭಾಗವಹಿಸುವ ನಿರೀಕ್ಷೆ ಇದೆ. ವ್ಯವಸ್ಥಿತವಾಗಿ ಕಾರ್ಯಕ್ರಮ ನಡೆಸಲು ತಂಡಗಳನ್ನು ರಚಿಸಲಾಗಿದೆ. ನಾಡಿನ ಎಲ್ಲಾ ಮಠಾಧೀಶರು, ಮಾಜಿ ಮುಖ್ಯಮಂತ್ರಿಗಳು, ಸಚಿವರು ಮತ್ತು ಗಣ್ಯಮಾನ್ಯರನ್ನು ಈ ಕಾರ್ಯಕ್ರಮಕ್ಕೆ ಆಹ್ವಾನಿಸಲಾಗುತ್ತಿದೆ. ಯಡಿಯೂರಪ್ಪ ಅವರನ್ನು ಬಲ್ಲ ಸಾಹಿತಿಗಳು, ಒಡನಾಡಿಗಳು, ಕಲಾವಿದರು ಸೇರಿ ಸಮಾಜದ ಎಲ್ಲ ರಂಗದವರು ಭಾಗವಹಿಸುತ್ತಾರೆ. ಅಲ್ಲದೇ ಸಾರ್ವಜನಿಕರು, ರೈತಾಪಿ ವರ್ಗದವರು ಭಾಗವಹಿಸಲಿದ್ದಾರೆ ಎಂದು ವಿವರಿಸಿದರು.

ಏ.26ರಂದು ಭೂಮಿ ಪೂಜೆ: ಯಡಿಯೂರಪ್ಪ ಅವರ ಅಭಿಮಾನೋತ್ಸವ ಕಾರ್ಯಕ್ರಮ ನಡೆಯುವ ಸ್ಥಳದಲ್ಲಿ ಏ.26ರಂದು ಬೆಳಗ್ಗೆ 10 ಗಂಟೆಗೆ ಭೂಮಿಪೂಜೆ ನೆರವೇರಿಸಲಾಗುವುದು. ಕಾರ್ಯಕ್ರಮದ ಸ್ಥಳಗಳಲ್ಲಿ ಪೆಂಡಾಲ್, ವೇದಿಕೆ ಮುಂತಾದ ವ್ಯವಸ್ಥೆಗಳನ್ನು ಪ್ರಾರಂಭಿಸಲು ಭೂಮಿಪೂಜೆ ನಡೆಯಲಿದೆ. ಭೂಮಿಪೂಜೆಗೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರನ್ನು ಆಹ್ವಾನಿಸಿದ್ದೇವೆ. ಅವರು, ಸಂಸದರು, ಮಾಜಿ ಸಂಸದರು, ಶಾಸಕರು, ಮಾಜಿ ಶಾಸಕರು, ವಿಧಾನಪರಿಷತ್ ಸದಸ್ಯರು, ಪ್ರತಿಪಕ್ಷ ನಾಯಕರಾದ ಆರ್.ಅಶೋಕ, ಛಲವಾದಿ ನಾರಾಯಣಸ್ವಾಮಿ ಸೇರಿ ಅನೇಕ ಗಣ್ಯರು ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.

ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು 50 ವರ್ಷಗಳ ಕಾಲ ರಾಜ್ಯವನ್ನು ಸುತ್ತಿದ್ದಾರೆ. ರೈತರ ಪರವಾಗಿ ಹೋರಾಡಿ, ದೀನದಲಿತರಿಗೆ ನ್ಯಾಯ ಒದಗಿಸಿ ಸಾಮಾಜಿಕ ನ್ಯಾಯಕ್ಕಾಗಿ ಹೋರಾಡಿದವರು. ಅವರ ಜೀವನ ಮತ್ತು ಸಮಾಜಸೇವೆ ಕುರಿತು ಅವರ ಅಭಿಮಾನೋತ್ಸವ ಆಚರಿಸಲು ತೀರ್ಮಾನಿಸಿದ್ದೇವೆ. ಚಿತ್ರದುರ್ಗವು ಕರ್ನಾಟಕದ ಕೇಂದ್ರ ಬಿಂದು. ಆದ್ದರಿಂದ ಆ ಸ್ಥಳವನ್ನು ಆಯ್ಕೆ ಮಾಡಿಕೊಂಡಿದ್ದೇವೆ. ಜನತಾದಳದಿಂದ ಕಾಂಗ್ರೆಸ್ಸಿಗೆ ಬಂದ ಸಿದ್ದರಾಮಯ್ಯ ಅವರು ಬೇರೆಯವರ ಹೆಗಲ ಮೇಲೆ ಕುಳಿತು ಕಾರ್ಯಕ್ರಮ ಮಾಡಿಸಿಕೊಂಡಿದ್ದಾರೆ. ನಮ್ಮದು ಹಾಗಲ್ಲ; ಯಡಿಯೂರಪ್ಪ ಅವರೇ ಕಟ್ಟಿ ಬೆಳೆಸಿದ ಪಕ್ಷ ಇದು. ಇದು ಜನರ ಉತ್ಸವ ಎಂದು ಪ್ರಶ್ನೆಗೆ ಉತ್ತರಿಸಿದರು. ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಕಾರ್ಯಕ್ರಮದ ಲೋಗೋವನ್ನು ಇದೇ ಸಂದರ್ಭದಲ್ಲಿ ಬಿಡುಗಡೆ ಮಾಡಿದರು. ಯುವ ಮೋರ್ಚಾ ರಾಜ್ಯ ಪ್ರಧಾನ ಕಾರ್ಯದರ್ಶಿ ಹರೀಶ್ ಪೂಂಜಾ, ಮಾಜಿ ಶಾಸಕ ಅನಿಲ್ ಬೆನಕೆ, ರಾಜ್ಯ ಕಾರ್ಯದರ್ಶಿ ಶರಣು ತಳ್ಳಿಕೇರಿ, ವಿಧಾನಪರಿಷತ್ ಮಾಜಿ ಸದಸ್ಯ ಅರುಣ್ ಶಹಾಪುರ ಇದ್ದರು.

ರಾಜ್ಯದ ವಿವಿಧೆಡೆಯಿಂದ ಅಭಿಮಾನಿಗಳ ಆಗಮನ

ಯಡಿಯೂರಪ್ಪ ಅವರ 50 ವರ್ಷಗಳ ರಾಜಕೀಯ ಪಯಣದ ಸಂಭ್ರಮಾಚರಣೆಗಾಗಿ ಸಿದ್ಧತೆ ಮಾಡಿಕೊಳ್ಳಲಾಗಿದೆ. ನಾಡಿಗೆ ಯಡಿಯೂರಪ್ಪ ಅವರ ಕೊಡುಗೆಯನ್ನು ಎಲ್ಲ ವರ್ಗದವರೂ ಪ್ರಶಂಸಿಸುತ್ತಾರೆ. ಇದಕ್ಕಾಗಿ ಅರ್ಥಪೂರ್ಣ, ಭವ್ಯ ಕಾರ್ಯಕ್ರಮ ನಡೆಸುತ್ತಿದ್ದೇವೆ. ಕಾರ್ಯಕ್ರಮಕ್ಕೆ ರಾಜ್ಯದ ಮೂಲೆಮೂಲೆಗಳಿಂದ ಅಭಿಮಾನಿಗಳು, ಲಕ್ಷಾಂತರ ಸಂಖ್ಯೆಯಲ್ಲಿ ಜನರು ಬರಲಿದ್ದಾರೆ. ಒಂದು ಐತಿಹಾಸಿಕ ಕಾರ್ಯಕ್ರಮ ಇದಾಗಲಿದೆ ಎಂದು ವಿಜಯೇಂದ್ರ ತಿಳಿಸಿದರು.

ಕಲಬುರಗಿಯಲ್ಲಿ ದಾಖಲೆ ಉಷ್ಣಾಂಶ

•**ಕಲಬುರಗಿ:** ರಾಜ್ಯದಲ್ಲಿ ಬಿಸಿಗಾಳಿ ತೀವ್ರಗೊಂಡಿದ್ದು, ಹಲವು ಜಿಲ್ಲೆಗಳಲ್ಲಿ ಗರಿಷ್ಠ ತಾಪಮಾನ ಗಣನೀಯವಾಗಿ ಏರಿಕೆಯಾಗಿದೆ. ವಿಶೇಷವಾಗಿ ಗುರುವಾರ ಕಲಬುರಗಿ ಜಿಲ್ಲೆಯಲ್ಲಿ 41.1 ಡಿಗ್ರಿ ಸೆಲ್ಸಿಯಸ್ ಗರಿಷ್ಠ ತಾಪಮಾನ ದಾಖಲಾಗಿದ್ದು, ರಾಜ್ಯದಲ್ಲೇ ಅತ್ಯಧಿಕವಾಗಿದೆ.

ಹವಾಮಾನ ಇಲಾಖೆ ನೀಡಿರುವ ಮಾಹಿತಿಯ ಪ್ರಕಾರ, ರಾಜ್ಯದ ಭೌಗೋಳಿಕ ಪ್ರದೇಶದ ಸುಮಾರು 75 ಶೇಕಡಾ ಭಾಗದಲ್ಲಿ 38ಲಿಅ ರಿಂದ 44.7ಲಿಅ ನಡುವೆ ಗರಿಷ್ಠ ತಾಪಮಾನ ದಾಖಲಾಗಿದೆ.ಇದು ಉಷ್ಣತೆಯ ತೀವ್ರತೆಯನ್ನು ಸೂಚಿಸಿದ್ದು,ಮೈಸೂರು, ಬೀದರ, ರಾಯಚೂರು, ವಿಜಯಪುರ, ಯಾದಗಿರಿ, ಕಲಬುರಗಿ ಹಾಗೂ ಚಿತ್ರದುರ್ಗ ಜಿಲ್ಲೆಗಳ ಕೆಲವು ಭಾಗಗಳಲ್ಲಿ 40ಲಿಅ ರಿಂದ 44.7ಲಿಅ ನಡುವೆ ತಾಪಮಾನ ದಾಖಲಾಗಿದ್ದು, ಜನಜೀವನದ ಮೇಲೆ ಪರಿಣಾಮ ಬೀರಿದೆ. ಇದೇ ವೇಳೆ, ಬೆಂಗಳೂರು ನಗರ ಹಾಗೂ ಬೆಂಗಳೂರು ದಕ್ಷಿಣ ಜಿಲ್ಲೆಗಳಲ್ಲಿಯೂ ಬಿಸಿಯ ತೀವ್ರತೆ ಹೆಚ್ಚಾಗಿದ್ದು, ಜನರು ಎಚ್ಚರಿಕೆ ವಹಿಸುವಂತೆ ಸೂಚಿಸಲಾಗಿದೆ. ಏಪ್ರಿಲ್ 22ರಂದು ಬೆಳಿಗ್ಗೆ 8:30ರಿಂದ ಏಪ್ರಿಲ್ 23ರಂದು ಬೆಳಿಗ್ಗೆ 8.30ರವರೆಗೆ ವಿವಿಧ ಜಿಲ್ಲೆಗಳ ಕನಿಷ್ಠ ಹಾಗೂ ಗರಿಷ್ಠ ತಾಪಮಾನ ವಿವರಗಳನ್ನು ಹವಾಮಾನ ಇಲಾಖೆ ಪ್ರಕಟಿಸಿದೆ.

ಸಚಿವ ಪರಮೇಶ್ವರ ವಿರುದ್ಧ ಎಫ್ಐಆರ್‌ಗೆ ತಡೆ

•**ಬೆಂಗಳೂರು:** ಹಾಸ್ಯ ಮಾಡುವುದು ಕ್ರಿಮಿನಲ್ ಅಪರಾಧ ವಾಗುತ್ತದೆಯೇ ಎಂದು ಪ್ರಶ್ನಿಸಿರುವ ಹೈಕೋರ್ಟ್, ಗೃಹ ಸಚಿವ ಡಾ.ಜಿ.ಪರಮೇಶ್ವರ ವಿರುದ್ಧ ಎಫ್ಐಆರ್ ದಾಖಲಿಸಲು ಆದೇಶಿಸಿದ್ದ ಮ್ಯಾಜಿಸ್ಟ್ರೇಟ್ ಆದೇಶ ಮತ್ತು ಅನಂತರದ ಪ್ರಕ್ರಿಯೆಗೆ ಗುರುವಾರ ತಡೆ ನೀಡಿದೆ.

ತುಮಕೂರು ನಗರದಲ್ಲಿ ಕಳೆದ ವರ್ಷ ಅಕ್ಟೋಬರ್‌ನಲ್ಲಿ ನಡೆದಿದ್ದ ಕಬಡ್ಡಿ ಪಂದ್ಯಾವಳಿಯಲ್ಲಿ ಕಾನೂನುಬಾಹಿರ 500 ರೂ. ಬೆಟ್ಟಿಂಗ್ ನಡೆಸಿದ ಆರೋಪಕ್ಕೆ ಸಂಬಂಧಿಸಿದಂತೆ ಡಾ.ಜಿ.ಪರಮೇಶ್ವರ ಮತ್ತು ತುಮಕೂರು ಜಿಲ್ಲಾಧಿಕಾರಿ ಶುಭ ಕಲ್ಯಾಣ ಅವರ ವಿರುದ್ಧ ಎಫ್ಐಆರ್ ದಾಖಲಿಸಿ, ತನಿಖೆ ನಡೆಸಲು ಮ್ಯಾಜಿಸ್ಟ್ರೇಟ್ ನ್ಯಾಯಾಲಯ ಆದೇಶಿಸಿತ್ತು. ಈ ಪ್ರಕರಣ ರದ್ದತಿ ಕೋರಿ ಡಾ.ಜಿ.ಪರಮೇಶ್ವರ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ನ್ಯಾ. ಎಸ್.ಸುನೀಲ್ ದತ್ ಯಾದವ್ ಅವರ ಏಕಸದಸ್ಯ ಪೀಠ ನಡೆಸಿತು.

ಪ್ರಕರಣ ದಾಖಲಿಸಲು ಆದೇಶಿಸುವುದಕ್ಕೂ ಮುನ್ನ ಮ್ಯಾಜಿಸ್ಟ್ರೇಟ್ ನ್ಯಾಯಾಲಯವು ಬಿಎನ್‌ಎಸ್‌ಎಸ್ ಸೆಕ್ಷನ್ 175 (3) ಅಡಿ ಪೊಲೀಸರ ವಾದ ಆಲಿಸಿಲ್ಲ. ಹೀಗಾಗಿ, ಖಾಸಗಿ ದೂರು ಆಧರಿಸಿ ಮ್ಯಾಜಿಸ್ಟ್ರೇಟ್ ನ್ಯಾಯಾಲಯವು ಏ.21 ರಂದು ಎಫ್ಐಆರ್ ದಾಖಲಿಸಿ, ತನಿಖೆ ನಡೆಸುವಂತೆ ಮಾಡಿರುವ ಆದೇಶ ಹಾಗೂ ಅನಂತರದ ಪ್ರಕ್ರಿಯೆಗೆ ತಡೆ ನೀಡಲಾಗಿದೆ ಎಂದು ನ್ಯಾಯಾಲಯ ಆದೇಶಿಸಿದೆ.

ಕಿಡಿ ನುಡಿ

•ವಾಸುದೇವರಾವ್ ಕಕ್ಕೆನೇಜಿ

◆ ನರೇಂದ್ರ ಮೋದಿ ಒಬ್ಬ ಭಯೋತ್ಪಾದಕ
- ಮಲ್ಲಿಕಾರ್ಜುನ ಖರ್ಗೆ

- ಒಂದು ದೃಷ್ಟಿಯಲ್ಲಿ ಇದು ಸರಿ, ಭಯೋತ್ಪಾದಕರ ಬೆಂಬಲಿಗರ ಪಾಲಿಗೆ ಅವರು ಭಯೋತ್ಪಾದಕ ಅಂತ ಅನಿಸುವುದು ಸಹಜ!

ದಿನ ಭವಿಷ್ಯ

ಮೇಷ
ಈ ದಿನ ಪ್ರಗತಿ ಸಾಧಿಸಿದರೂ ನಿಮಗೆ ಮಾತ್ರ ತೃಪ್ತಿಯಿಲ್ಲ. ನಿಮ್ಮ ಮನಸ್ಸು ಬೇರೇನನ್ನೋ ಬಯಸುತ್ತದೆ. ಮನೆಯಲ್ಲಿ ಕಲಹವಾದೀತು.

ವೃಷಭ
ಪ್ರಮುಖ ವಿಷಯದಲ್ಲಿ ನಿಮ್ಮ ನಿಲುವು ಬದಲಿಸುವ ಸನ್ನಿವೇಶ ಉಂಟಾದೀತು. ದುಡುಕಿನ ನಿರ್ಧಾರ ತಾಳದಿರಿ. ಎಲ್ಲರ ಜತೆ ಸೌಹಾರ್ದತೆ ಇರಲಿ.

ಮಿಥುನ
ನಿಮ್ಮ ಪಾಲಿಗೆ ವಿಶೇಷ ದಿನ.ಬಯಸಿದ ಬೆಳವಣಿಗೆ ಸಂಭವ. ಸಮಸ್ಯೆಯೊಂದು ನಿವಾರಣೆ, ಕೆಲಸ ಸುಲಲಿತ. ಧನಪ್ರಾಪ್ತಿ.

ಕಟಕ
ನಿಮ್ಮ ನಿರ್ಧಾರ ಬೇರೆಯವರ ಮೇಲೆ ಹೇರಬೇಡಿ. ಅದು ವಿರಸಕ್ಕೆ ಹೇತುವಾದೀತು. ಕೌಟುಂಬಿಕ ಶಾಂತಿಗೆ ಭಂಗ. ಆರ್ಥಿಕ ಕೊರತೆ.

ಸಿಂಹ
ಹೊಸ ಪಾಠ ಕಲಿಯುವಂತಹ ಪ್ರಸಂಗ ಉಂಟಾದೀತು. ದೊಡ್ಡ ಬಿಕ್ಕಟ್ಟು ಎದುರಾದರೂ ಬಳಿಕ ಪರಿಹಾರ ಕಂಡು ನೆಮ್ಮದಿ ಉಂಟಾಗಲಿದೆ.

ಕನ್ಯಾ
ಕೆಲಸದಲ್ಲಿ ತಪ್ಪು ಘಟಿಸದಂತೆ ಎಚ್ಚರ ವಹಿಸಿ. ಕೆಲವರು ಅದನ್ನೆ ಹಿಗ್ಗಿಸಬಹುದು. ಮಾನಕ್ಕೆ ಕುಂದು ತರುವ ಬೆಳವಣಿಗೆ ಸಂಭವಿಸಬಹುದು.

ತುಲಾ
ಮನಸ್ಸಿಗೆ ನಿರಾಳತೆ ತರುವಂತಹ ಬೆಳವಣಿಗೆ. ಕಾರ್ಯ ಸಾಫಲ್ಯ, ವಿರಸ ಮುಕ್ತಿ. ಅನಿರೀಕ್ಷಿತ ಖರ್ಚು ಬಂದೀತು. ಆತ್ಮೀಯ ಬಂಧು ಭೇಟಿ.

ವೃಶ್ಚಿಕ
ಅನ್ಯರ ಮೆಚ್ಚಿಸಲು ಅನವಶ್ಯ ಪ್ರಯತ್ನ ಬೇಡ. ನಿಮ್ಮ ಕಾರ್ಯ ನಿಷ್ಠೆಯಿಂದ ಮಾಡಿ. ಹಣದ ಬಿಕ್ಕಟ್ಟು ತಲೆಬೇನೆ ತಂದೀತು.

ಧನು
ಆರ್ಥಿಕ ಪ್ರಗತಿ ಉತ್ತಮ. ಆಪ್ತರ ಜತೆ ಭಿನ್ನಾಭಿಪ್ರಾಯ ಉಂಟಾದೀತು. ಸ್ನೇಹಿತ ನಿಮ್ಮ ವಿರೋಧಿಯಾಗಿ ಬದಲಾಗಬಹುದು.

ಮಕರ
ಒತ್ತಡ ನಿವಾರಣೆ. ಮನಸ್ಸಿಗೆ ನಿರಾಳತೆ. ಕೆಲವು ಬೆಳವಣಿಗೆ ಅದಕ್ಕೆ ಕಾರಣ. ಆಪ್ತರ ಜತೆ ಮಾತುಕತೆ ನೆಮ್ಮದಿ ತರಲಿದೆ. ಆರ್ಥಿಕ ಪ್ರಗತಿ ಉತ್ತಮ.

ಕುಂಭ
ಕೆಲಸದಲ್ಲಿ ಅಧಿಕ ಒತ್ತಡ. ತಾಳ್ಮೆಯ ವರ್ತನೆ ಅಗತ್ಯ. ಇತರರ ಪ್ರಲೋಭನೆಗೆ ಒಳಗಾಗಿ ಅಡ್ಡದಾರಿ ಹಿಡಿಯದಿರಿ. ಆರೋಗ್ಯ ಸಮಸ್ಯೆ.

ಮೀನ
ವಿವೇಕದಿಂದ ಕಾರ್ಯ ಎಸಗಿ. ಇಲ್ಲವಾದರೆ ಕೆಟ್ಟ ಫಲಿತಾಂಶ ಸಂಭವ. ಅನಿರೀಕ್ಷಿತ ಧನಲಾಭ. ಆಪ್ತ ಬಂಧು ಭೇಟಿ.

ರಾಹುಕಾಲ : 10.30-12.00
ಗುಳಿಕಕಾಲ : 7.30-9.00

ಅದೃಷ್ಟ ಸಂಖ್ಯೆ : 0,6,4,7

ಬಿಸಿಲ ಝಳಕ್ಕೆ ಬೆದರಿದ ಕರಾವಳಿ ಜನ

ಪುಟ ೧➜ಹವಾಮಾನ ಇಲಾಖೆಯ ಮಾಹಿತಿಯಂತೆ ಮುಂದಿನ 5 ದಿನ ಕರಾವಳಿ ಕರ್ನಾಟಕದ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಬಿಸಿಗಾಳಿ ಮತ್ತು ತೇವಾಂಶ ಪರಿಸ್ಥಿತಿ ಎಂದಿಗಿಂತ ಹೆಚ್ಚಾಗಿರಲಿದೆ ಎಂದು ಹವಾಮಾನ ಇಲಾಖೆ ಮಾಹಿತಿ ನೀಡಿದೆ.

ಬೀಸಲಿದೆ ಬಿಸಿಗಾಳಿ: ಬಿಸಿಗಾಳಿಯ ವಾತಾವರಣ ಇರುವುದರಿಂದ ದ.ಕ., ಉಡುಪಿ, ಉ.ಕನ್ನಡ ಜಿಲ್ಲೆಗಳಲ್ಲಿ ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ. ಜನತೆ ಬಿಸಿಲಿನಿಂದ ಆದಷ್ಟು ದೂರವಿದ್ದು, ಮುಂಜಾಗ್ರತಾ ಕ್ರಮ ತೆಗೆದುಕೊಳ್ಳುವಂತೆ ಹವಾಮಾನ ಇಲಾಖೆ ಮುನ್ನೆಚ್ಚರಿಕೆ ನೀಡಿದೆ.

ದ.ಕ.ದಲ್ಲಿ ಉರಿಬಿಸಿಲು: ಮಂಗಳೂರು ಸೇರಿದಂತೆ ದಕ್ಷಿಣ ಕನ್ನಡ ಇಂದು ಕೂಡ ಭಾರೀ ಉರಿಬಿಸಿಲಿನ ವಾತಾವಾರಣ ಕಂಡುಬರುತ್ತಿದ್ದು, ಜನತೆ ಮನೆಯಿಂದ ಹೊರಬರಲು ಹಿಂದೇಟು ಹಾಕುತ್ತಿದ್ದಾರೆ. ಗುರುವಾರ ಅಪರಾಹ್ನ 12 ಗಂಟೆಯಿಂದ 3 ಗಂಟೆಯವರೆಗೆ ನಗರದಲ್ಲಿ ಜನಸಂಚಾರ ವಿರಳವಿತ್ತು. ಬಸ್‌ಗಳಲ್ಲಿ ಪ್ರಯಾಣಿಕರ ಸಂಖ್ಯೆ ಕಡಿಮೆಯಿತ್ತು.

ಆರೋಗ್ಯದ ಕಾಳಜಿ ಅಗತ್ಯ: ತಾಪಮಾನ ಏರಿಕೆಯಾಗುವ ಈ ಸಂದರ್ಭದಲ್ಲಿ ಆರೋಗ್ಯದ ಮೇಲೆ ವಿಶೇಷ ಕಾಳಜಿ ವಹಿಸಬೇಕು ಎನ್ನುತ್ತಾರೆ ವೈದ್ಯರು. ದಿನಕ್ಕೆ 3 ಲೀಟರ್‌ಗಿಂತ ಅಧಿಕ ನೀರು ಸೇವನೆ, ಎಳನೀರು, ಲಿಂಬೆ, ಪುನರ್‌ಪುಳಿ ಶರಬತ್ತು ಕುಡಿಯುವುದು, ಕಲ್ಲಂಗಡಿ ಸೇರಿದಂತೆ ಇತರೆ ಹಣ್ಣುಗಳ ಸೇವನೆ. ಮಾಂಸಾಹಾರದ ಬದಲಾಗಿ ತರಕಾರಿ ಬಳಕೆಯಿಂದ ದೇಹದ ಉಷ್ಣತೆಯನ್ನು ಸಹಜ ಸ್ಥಿತಿಯಲ್ಲಿ ಕಾಯ್ದುಕೊಳ್ಳಲು ಸಾಧ್ಯವಿದೆ.

ಮುಂಜಾಗ್ರತೆ ವಹಿಸುವುದು ಅಗತ್ಯ: ಉರಿಬಿಸಿನಿಂದಾಗಿ ತಲೆ ಸುತ್ತುವುದು, ವಾಕರಿಕೆ, ಸುಸ್ತು ಇತ್ಯಾದಿ ಕಾಣಿಸಿಕೊಳ್ಳುವುದು ಸಹಜ.

ಕವಿವಿ 75ನೇ ಘಟಿಕೋತ್ಸವ | ರಾಜ್ಯಪಾಲ ಗೆಹಲೋತ್ ಅಭಿಮತ

ಯುವಪೀಳಿಗೆಯಿಂದ ಪ್ರಗತಿ

•**ಧಾರವಾಡ:** ವಿಶ್ವದಲ್ಲಿ ಭಾರತ ಉದಯೋನ್ಮುಖ ಶಕ್ತಿಯಾಗಿ ಹೊರಹೊಮ್ಮುತ್ತಿದೆ. ಯುವಜನರೇ ನಮ್ಮ ದೊಡ್ಡ ಶಕ್ತಿ. ದೃಢ ನಿಶ್ಚಯವೇ ಯಶಸ್ಸಿನ ಮಂತ್ರ. ಈ ನಾಡಿನ ಯುವಜನಾಂಗ ದೇಶವನ್ನು ಹೊಸ ಎತ್ತರಕ್ಕೆ ಬೆಳೆಸಲಿದ್ದಾರೆ ಎಂದು ರಾಜ್ಯಪಾಲ ಥಾವರಚಂದ್ ಗೆಹಲೋಟ್ ಹೇಳಿದರು.

ನಗರದ ಕರ್ನಾಟಕ ವಿಶ್ವವಿದ್ಯಾಲಯದ 75ನೇ ಘಟಿಕೋತ್ಸವದಲ್ಲಿ ಅಧ್ಯಯನ ಮುಗಿಸಿದ ವಿವಿಧ ವಿಷಯಗಳ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಿದ ಅವರು, ಯುವಜನತೆ ಗುರಿಗೆ ಸಮರ್ಪಿತರಾಗಿರಬೇಕು ಮತ್ತು ಸಾಧಿಸಲು ಶ್ರಮಿಸಬೇಕು ಎಂದರು. ಇಂದು ತ್ವರಿತ ಬದಲಾವಣೆ, ತಂತ್ರಜ್ಞಾನ, ನಾವೀನ್ಯತೆ ಮತ್ತು ಜಾಗತಿಕ ಸ್ಪರ್ಧೆಯ ಯುಗ. ಕೃತಕ ಬುದ್ಧಿಮತ್ತೆ, ದತ್ತಾಂಶ ವಿಜ್ಞಾನ, ಜೈವಿಕ ತಂತ್ರಜ್ಞಾನ, ಹಸಿರು ಶಕ್ತಿ, ಸೈಬರ್ ಭದ್ರತೆ, ಡಿಜಿಟಲ್ ನಾವೀನ್ಯತೆ ಮುಂತಾದ ಕ್ಷೇತ್ರಗಳಲ್ಲಿ ಹೊಸ ಅವಕಾಶಗಳು ನಿರಂತರವಾಗಿ ಹೊರಹೊಮ್ಮುತ್ತಿವೆ ಎಂದು ತಿಳಿಸಿದರು.

ಸ್ಪರ್ಧಾತ್ಮಕ ಯುಗದಲ್ಲಿ, ನಿರಂತರ ಕಲಿಕೆಯ ಮನೋಭಾವ, ನವೀನ ಮನಸ್ಥಿತಿ ಮತ್ತು ಸಮಾಜದ ಜವಾಬ್ದಾರಿಯ ಪ್ರಜ್ಞೆ ಅತ್ಯಗತ್ಯ. ಆದ್ದರಿಂದ, ನೀವು ಕಲಿಯುವುದನ್ನು ಮುಂದುವರಿಸುವುದು, ನಿಮ್ಮ ಜ್ಞಾನ ಮತ್ತು ಕೌಶಲ್ಯಗಳನ್ನು ನವೀಕರಿಸುವುದು ಮತ್ತು ಕಾಲದ ಅಗತ್ಯಗಳನ್ನು ಪೂರೈಸಲು ನಿಮ ಕಲಿಕೆ ನಿರಂತರವಾಗಿರಬೇಕು ಎಂದು ಕಿವಿಮಾತು ಹೇಳಿದರು. ಪ್ರಧಾನಮಂತ್ರಿ ನರೇಂದ್ರ ಮೋದಿ ಮೇಡ್ ಇನ್ ಇಂಡಿಯಾ, ಮೇಕ್ ಇನ್ ಇಂಡಿಯಾ ಮತ್ತು ವೋಕಲ್ ಫಾರ್ ಲೋಕಲ್ ಮೂಲಕ ದೇಶವನ್ನು ಸ್ವಾವಲಂಬಿ ಮತ್ತು ಅಭಿವೃದ್ಧಿಗೊಳಿಸುವತ್ತ ಸಾಗುತ್ತಿದ್ದಾರೆ. ಯುವಕರು ಇದರಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ ಎಂದು ಹೇಳಿದರು.

ಸ್ಟಾರ್ಟ್‌ಅಪ್ ಸಂಸ್ಕೃತಿ, ನಾವೀನ್ಯತೆ, ಹೊಸ ತಂತ್ರಜ್ಞಾನಗಳು ಮತ್ತು ಸಂಶೋಧನೆಯ ಮೂಲಕ ಯುವಪೀಳಿಗೆ ದೇಶದ ಪ್ರಗತಿಗೆ ಗಮನಾರ್ಹ ಕೊಡುಗೆ ನೀಡಬಹುದು. ಜೀವನದಲ್ಲಿ ಯಶಸ್ಸು, ಜ್ಞಾನ ಮತ್ತು ಪ್ರತಿಭೆ, ದೃಢನಿಶ್ಚಯ ಮತ್ತು ನಿರಂತರ ಪ್ರಯತ್ನದಿಂದ ಬರುತ್ತದೆ. ಕೆಲವೊಮ್ಮೆ ಉಂಟಾಗುವ ಹಿನ್ನಡೆ ಬದುಕಿನ ಭಾಗ ಎಂದರು.

ಪರಿಸರ ಸಂರಕ್ಷಣೆ ಇಂದಿನ ಪ್ರಮುಖ ವಿಷಯವಾಗಿದೆ. ಹವಾಮಾನ ಬದಲಾವಣೆ, ಮಾಲಿನ್ಯ ಮತ್ತು ನೈಸರ್ಗಿಕ ಸಂಪನ್ಮೂಲಗಳ ಸವಕಳಿ ಮುಂತಾದ ಸಮಸ್ಯೆಗಳು ಗಮನಾರ್ಹ ಸವಾಲು ಒಡ್ಡುತ್ತವೆ. ಪ್ರತಿಯೊಬ್ಬರೂ ಪರಿಸರ ಪ್ರಜ್ಞೆ ಹೊಂದಿರಬೇಕು ಮತ್ತು ಸುಸ್ಥಿರ ಅಭಿವೃದ್ಧಿಯ ತತ್ವಗಳನ್ನು ಅಳವಡಿಸಿಕೊಳ್ಳಬೇಕು ಎಂದು ಹೇಳಿದರು.

ವಿದ್ಯಾರ್ಥಿಗಳೇ, 'ಕನಸು ಕಾಣಿರಿ, ಅವುಗಳನ್ನು ನನಸಾಗಿಸುವ ಧೈರ್ಯವನ್ನು ಹೊಂದಿರಿ ಮತ್ತು ಪ್ರಯತ್ನಗಳ ಮೂಲಕ ಸಮಾಜದಲ್ಲಿ ಸಕಾರಾತ್ಮಕ ಬದಲಾವಣೆಯನ್ನು ತಂದುಕೊಳ್ಳಿ ಎಂದರು. ಘಟಿಕೋತ್ಸವದಲ್ಲಿ ಸಚಿವ ಎಂ.ಸಿ.ಸುಧಾಕರ್, ಪದ್ಮಶ್ರೀ ಡಾ. ಎ.ಎಸ್.ಕಿರಣ್ ಕುಮಾರ್, ಪ್ರೊ.ಎ.ಎಂ.ಖಾನ್ ಮತ್ತು ಗಣ್ಯರು ಇದ್ದರು.

> **ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯವು ಶಿಕ್ಷಣದ ಕೇಂದ್ರ ಮಾತ್ರವಲ್ಲದೆ ಸಾಮಾಜಿಕ ಪ್ರಜ್ಞೆ, ಸಂವೇದನೆ ಮತ್ತು ಬದಲಾವಣೆಯ ಜೀವಂತ ಸಂಕೇತವಾಗಿದೆ. ಈ ಸಂಸ್ಥೆಯು ಹಲವಾರು ವಿದ್ವಾಂಸರು, ವಿಜ್ಞಾನಿಗಳು, ಆಡಳಿತಗಾರರು, ಸಾಮಾಜಿಕ ಕಾರ್ಯಕರ್ತರು, ತತ್ವಜ್ಞಾನಿಗಳು, ರಾಜಕಾರಣಿಗಳು ಮತ್ತು ಕ್ರೀಡಾಪಟುಗಳನ್ನು ಉತ್ಪಾದಿಸಿದೆ, ಅವರು ರಾಜ್ಯ ಮತ್ತು ದೇಶಕ್ಕೆ ಗೌರವವನ್ನು ತಂದಿದ್ದಾರೆ.**
>
> ■ **ಥಾವರಚಂದ್ ಗೆಹಲೋಟ್, ರಾಜ್ಯಪಾಲ**

ಇರಾನ್ ಸಣ್ಣ ದೋಣಿಗಳ ಧ್ವಂಸಕ್ಕೆ ಟ್ರಂಪ್ ಹುಕುಂ

ಪುಟ ೧➜ಯಾವುದೇ ಹಿಂಜರಿಕೆಯಿಲ್ಲ, ಹೆಚ್ಚುವರಿಯಾಗಿ, ನಮ್ಮ ಬಾಂಬ್ ನಿರೋಧಕ ದೋಣಿಗಳು ಜಲ ಸಂಧಿಯತ್ತ ಪ್ರಯಾಣಿಸುತ್ತಿವೆ. ನಮ್ಮ ಚಟುವಟಿಕೆ ಮೂರು ಪಟ್ಟು ವೇಗದಲ್ಲಿ ನಡೆಸಲು ನಾನು ಆದೇಶವನ್ನು ನೀಡಿದ್ದೇನೆ. ಶೀಘ್ರದಲ್ಲಿ ಹಾರ್ಮುಜ್ ಆಸುಪಾಸಿನ ಕಡಲಿನಾಳದಲ್ಲಿ ಬಾಂಬ್ ನಿಷ್ಕ್ರಿಯಗೊಳಿಸಲು ಕೆಲಸ ಆರಂಭವಾಗಲಿದೆ ಎಂದು ಟ್ರಂಪ್ ಮಾಹಿತಿ ನೀಡಿದ್ದಾರೆ.



ಇರಾನ್ ನಾಯಕತ್ವದಲ್ಲಿ ಬಿರುಕು? ಇರಾನ್ ಆಡಳಿತದಲ್ಲಿನ ಮಿತವಾದಿಗಳು ಮತ್ತು ತೀವ್ರವಾದಿಗಳ ನಡುವೆ ದೊಡ್ಡ ಬಿರುಕು ಮೂಡಿದೆ ಎಂಬ ಹೊಸ ಬಾಂಬ್ ಅನ್ನು ಅಧ್ಯಕ್ಷ ಟ್ರಂಪ್ ಸಿಡಿಸಿದ್ದಾರೆ.

ತಮ್ಮ ನಾಯಕ ಯಾರೆಂದು ನಿರ್ಧರಿಸುವಷ್ಟು ಸಂಕಷ್ಟದ ಪರಿಸ್ಥಿತಿಯನ್ನು ಇರಾನ್ ಅನುಭವಿಸುತ್ತಿದೆ. ಅವರ ನಾಯಕ ಯಾರೆಂದು ಅವರಿಗೆ ಗೊತ್ತಿಲ್ಲ ಎಂದು ಟ್ರಂಪ್ ಕುಹಕವಾಡಿದ್ದಾರೆ.

ಅಮೆರಿಕ ವಶಕ್ಕೆ ತೈಲ ನೌಕೆಗಳು

ಶ್ರೀಲಂಕಾ ಮತ್ತು ಇಂಡೋನೇಷ್ಯಾ ನಡುವೆ ಹಿಂದು ಮಹಾಸಾಗರದಲ್ಲಿ ಮೆಜೆಸ್ಟಿಕ್ ಎಕ್ಸ್ ತೈಲ ಹಡಗನ್ನು ಅಮೆರಿಕ ಸೇನೆ ವಶಪಡಿಸಿದೆ. ಇದು ಚೀನಾದ ಝೌಶಾನ್‌ಗೆ ತೆರಳಬೇಕಿದ್ದ ನೌಕೆಯಾಗಿತ್ತು. ಬಹುತೇಕ ಇದೇ ಸ್ಥಳದಲ್ಲಿ ತೈಲ ಟ್ಯಾಂಕರ್ ಟಿಫಾನಿ ಅಮೆರಿಕನ್ನರ ವಶಕ್ಕೆ ಒಳಗಾಗಿತ್ತು. ಫೀನಿಕ್ಸ್ ಹೆಸರಿನಿಂದ ತಿಳಿಯಲ್ಪಟ್ಟಿದ್ದ ಹಡಗಿನ ಮೇಲೆ 2024ರಲ್ಲಿ ಇರಾನ್ ಕಚ್ಚಾ ತೈಲ ಕಳ್ಳಸಾಗಣೆ ಆರೋಪವನ್ನು ಅಮೆರಿಕ ಹೊರಿಸಿತ್ತು. ಸದ್ಯ ಇರಾನ್ ಈ ಬಗ್ಗೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಇರಾನ್‌ನ ಭಿನ್ನಮತೀಯ ನಾಯಕತ್ವವು ಏಕೀಕೃತ ಶಾಂತಿ ಪ್ರಸ್ತಾವನೆಯನ್ನು ಸಿದ್ಧಪಡಿಸಲು ಅವಕಾಶ ಕೊಡುವ ಉದ್ದೇಶದಿಂದ ಅಧ್ಯಕ್ಷ ಟ್ರಂಪ್ ತಾತ್ಕಾಲಿಕ ಕದನ ವಿರಾಮವನ್ನು ಅನಿರ್ದಿಷ್ಟಾವಧಿ ವಿಸ್ತರಿಸಿದ್ದಾರೆ. ಇದೇ ವೇಳೆ ಇರಾನ್ ಕರಾವಳಿ ಪ್ರದೇಶಗಳು ಮತ್ತು ಬಂದರುಗಳ ಮೇಲಿನ ದಿಗ್ಬಂಧನವನ್ನು ಮುಂದುವರಿಸಲು ಟ್ರಂಪ್ ಆದೇಶಿಸಿದ್ದಾರೆ. ಅಮೆರಿಕ-ಇರಾನ್ ನಡುವಿನ ದ್ವಿತೀಯ ಸುತ್ತಿನ ಶಾಂತಿ ಮಾತುಕತೆ ಯಾವಾಗ ಆರಂಭವಾಗಲಿದೆ ಎಂಬ ಬಗ್ಗೆ ಯಾವುದೇ ಸ್ಪಷ್ಟತೆ ಸದ್ಯಕ್ಕಿಲ್ಲ.

ಮೋದಿ ವಿರುದ್ಧ ಖರ್ಗೆ ಹೇಳಿಕೆಗೆ ಬಿಜೆಪಿ ಖಂಡನೆ

ಪುಟ ೧➜ವಿಶ್ವದ 25ಕ್ಕೂ ಹೆಚ್ಚು ರಾಷ್ಟ್ರಗಳು ಮೋದಿ ಅವರಿಗೆ ತಮ್ಮ ದೇಶದ ಅತ್ಯುನ್ನತ ಗೌರವ ನೀಡಿವೆ. ಖರ್ಗೆ ಮತ್ತು ಕಾಂಗ್ರೆಸ್ಸಿಗೆ ಪ್ರಧಾನಿಯವರ ಜನಪ್ರಿಯತೆ ಸಹಿಸಿಕೊಳ್ಳಲು ಆಗುತ್ತಿಲ್ಲ, ಮಲ್ಲಿಕಾರ್ಜುನ ಖರ್ಗೆ ಅವರು ದೇಶದ ಜನರ ಕ್ಷಮೆ ಕೇಳಬೇಕು ಎಂದು ಆಗ್ರಹಿಸಿದರು.

ಕಾಂಗ್ರೆಸ್ ನಾಯಕರ ದೇಶವಿರೋಧಿ ಹೇಳಿಕೆ: ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ವಿದೇಶದಲ್ಲೂ ದೇಶವಿರೋಧಿ ಹೇಳಿಕೆ ನೀಡುತ್ತಾರೆ. ಖರ್ಗೆ ಮತ್ತು ರಾಹುಲ್ ಗಾಂಧಿ ಅವರು ಭಾರತ ವಿರೋಧಿಗಳು. ಇವರು ವಿದೇಶಿ ಏಜೆಂಟರಂತೆ ನಡೆದುಕೊಳ್ಳುತ್ತಿದ್ದಾರೆ. ಇವರಿಬ್ಬರು ಜಾರ್ಜ್ ಸೊರೊಸ್ ಏಜೆಂಟರು. ಅವರ ಮಾನಸಿಕತೆಗೆ ತಕ್ಕಂತೆ ಇವರು ಭಾರತದಲ್ಲಿ ಕುಣಿಯುತ್ತಿದ್ದಾರೆ ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಟೀಕಿಸಿದರು.

ದೇಶಕ್ಕೆ ಅವಮಾನ: ವಿಧಾನಸಭೆ ಪ್ರತಿಪಕ್ಷದ ನಾಯಕ ಆರ್. ಅಶೋಕ ಮಾತನಾಡಿ, ಖರ್ಗೆ ಅವರ ಮಾತು ಅಕ್ಷಮ್ಯ ಅಪರಾಧ ಮತ್ತು ದೇಶಕ್ಕೆ ಮಾಡಿದ ಅವಮಾನ. ಕಾಂಗ್ರೆಸ್‌ನವರು ಕುಕ್ಕರ್ ಬ್ಲಾಸ್ಟ್ ಆರೋಪಿಯನ್ನು ಬ್ರದರ್ ಎಂದು ಕರೆದಿದ್ದಾರೆ. ವಿಧಾನಸೌಧದಲ್ಲಿ ಖರ್ಗೆ ಅವರ ಬಲಗೈ ಬಂಟ, ರಾಜ್ಯಸಭಾ ಸದಸ್ಯ ಪಾಕಿಸ್ತಾನ ಜಿಂದಾಬಾದ್ ಎಂದಿದ್ದರು. ಇದನ್ನು ಖರ್ಗೆ ಅವರು ಖಂಡಿಸಿರಲಿಲ್ಲ ಎಂದು ದೂರಿದರು. ಮುಂಬೈಯಲ್ಲಿ ಹೋಟೆಲ್ ಮೇಲೆ ಭಯೋತ್ಪಾದಕರ ದಾಳಿ ಆದಾಗ ಕಾಂಗ್ರೆಸ್ಸಿನವರು ಕೈಕಟ್ಟಿ ಕೂತಿದ್ದರು ಎಂದು ಗಮನ ಸೆಳೆದರು. ಪ್ರತಿಭಟನೆಯಲ್ಲಿ ಸಂಸದರು, ಶಾಸಕರು, ವಿಧಾನಪರಿಷತ್ ಸದಸ್ಯರು ಉಪಸ್ಥಿತರಿದ್ದರು.

ಧಿಕ್ಕಾರ
ಧಿಕ್ಕಾರ
ಧಿಕ್ಕಾರ

> **ಖರ್ಗೆ ಅವರು ಈ ಮಾತನಾಡಿದರೇ ಅಥವಾ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ಅವರು ಖರ್ಗೆ ಅವರಿಂದ ಈ ಮಾತನ್ನು ಹೇಳಿಸಿದರೇ? ಬಿಜೆಪಿ, ಆರೆಸ್ಸೆಸ್ ಅನ್ನು ಅವರು ವಿಷಸರ್ಪಕ್ಕೆ ಹೋಲಿಸಿ ಕೊಲ್ಲಲು ಪ್ರಚೋದಿಸುವ ಹೇಳಿಕೆ ನೀಡಿದ್ದರು. ಈಗ ಪ್ರಧಾನಿಯವರು ಭಯೋತ್ಪಾದಕರು ಎಂಬ ಹೇಳಿಕೆ ನಿಮ್ಮ ಮುತ್ಸದ್ದಿತನವೇ?**
>
> ■ **ಛಲವಾದಿ ನಾರಾಯಣಸ್ವಾಮಿ, ವಿಧಾನಪರಿಷತ್ ಪ್ರತಿಪಕ್ಷ ನಾಯಕ**

> **ಖರ್ಗೆ ಮತ್ತು ಅವರ ಮಗ, ಸೋನಿಯಾ ಗಾಂಧಿ ಅವರನ್ನು ಮೆಚ್ಚಿಸಲು ಹೀಗೆ ಮಾತನಾಡುತ್ತಿದ್ದಾರಾ? ಹಿಂದೆ ವಿಷಸರ್ಪಕ್ಕೆ ಹೋಲಿಸಿದ್ದರು, ಈಗ ಪ್ರಧಾನಿಯವರನ್ನು ಹೀಗೆ ಹೋಲಿಸಿ ಮಾತನಾಡಿದ್ದರಿಂದ ಕಾಂಗ್ರೆಸ್ಸಿಗೆ 140 ಕೋಟಿ ಜನರ ಶಾಪ ತಟ್ಟಲಿದೆ. ಅದರಿಂದ ಕಾಂಗ್ರೆಸ್ ನಶಿಸಿ ಹೋಗಲಿದೆ.**
>
> ■ **ಗೋವಿಂದ ಕಾರಜೋಳ, ಸಂಸದ**

ಬಂಗಾಳ 92%, ತ.ನಾಡು 85% ಮತ

ಪುಟ ೧➜ತಮಿಳುನಾಡಿನಲ್ಲಿ ಆಡಳಿತದಲ್ಲಿರುವ ಡಿಎಂಕೆ ಮತ್ತು ಪ್ರಧಾನ ವಿರೋಧ ಪಕ್ಷ ಎಐಎಡಿಎಂಕೆ ಪ್ರಮುಖ ಸ್ಪರ್ಧಿಗಳಾಗಿದ್ದು, ನಟ-ರಾಜಕಾರಣಿ ವಿಜಯ್ ನೇತೃತ್ವದ ಟಿವಿಕೆ ಮತ್ತು ಸಂಥಮಿಜನ್ ಸೀಮನ್ ನೇತೃತ್ವದ ಎನ್‌ಟಿಕೆ ಕೂಡ ಸ್ಪರ್ಧೆ ನೀಡಿವೆ.

ಪಶ್ಚಿಮ ಬಂಗಾಳದ ಭಾರೀ ಮತದಾನವನ್ನು 'ಬದಲಾವಣೆಯ ಸ್ಪಷ್ಟ ಸೂಚನೆ' ಎಂದು ಪ್ರಧಾನಿ ನರೇಂದ್ರ ಮೋದಿ ತಿಳಿಸಿದ್ದಾರೆ. ಮೇ 4 ರಂದು ಮತ ಎಣಿಕೆ ನಡೆಯಲಿದ್ದು, ಅದು ಟಿಎಂಸಿ ಆಡಳಿತದ ಅಂತ್ಯದ ದಿನವಾಗಲಿದೆ ಎಂದು ಅವರು ಹೇಳಿದರು. ಇನ್ನೊಂದೆಡೆ ಮಮತಾ ಬ್ಯಾನರ್ಜಿ ಮೊದಲ ಹಂತದ ಮತದಾನವೇ ಟಿಎಂಸಿಗೆ ಗೆಲುವಿನ ಸೂಚನೆ ನೀಡುತ್ತಿದೆ ಎಂದು ಹೇಳಿದ್ದು, ತಮ್ಮ ಪಕ್ಷವು 152 ಕ್ಷೇತ್ರಗಳಲ್ಲಿ 125-134 ಸ್ಥಾನಗಳನ್ನು ಗೆಲ್ಲಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದೆ.

ಪಶ್ಚಿಮ ಬಂಗಾಳದ ಉಳಿದ 142 ಕ್ಷೇತ್ರಗಳಿಗೆ ಏ.29ರಂದು ಎರಡನೇ ಹಂತದ ಮತದಾನ ನಡೆಯಲಿದೆ. ಕೇರಳ, ಅಸ್ಸಾಂ, ಪಶ್ಚಿಮ ಬಂಗಾಳ, ತಮಿಳುನಾಡು ಮತ್ತು ಪುದುಚೇರಿ ಸೇರಿ ಎಲ್ಲಾ ರಾಜ್ಯಗಳ ಮತ ಎಣಿಕೆ ಮೇ 4 ರಂದು ನಡೆಯಲಿದೆ.

ಸ್ವಾತಂತ್ರ್ಯ ನಂತರದ ಹೆಚ್ಚು ಮತದಾನ: ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರು, ಪಶ್ಚಿಮ ಬಂಗಾಳದಲ್ಲಿ ಮೊದಲ ಹಂತದಲ್ಲಿ 91.78 ಶೇಕಡಾ ಮತದಾನ ನಡೆದಿದ್ದು, ಇದು ಸ್ವಾತಂತ್ರ್ಯ ನಂತರದ ಅತಿ ಹೆಚ್ಚು ಎಂದು ಹೇಳಿದ್ದಾರೆ.

16 ಜಿಲ್ಲೆಗಳ 152 ಕ್ಷೇತ್ರಗಳಲ್ಲಿ ದಿನವಿಡೀ ಮತದಾನ ಜೋರಾಗಿಯೇ ನಡೆದಿದ್ದು, ಗ್ರಾಮೀಣ ಪ್ರದೇಶಗಳಲ್ಲಿ ಉದ್ದ ಸಾಲುಗಳು ಕಂಡುಬಂದವು. ಎರಡೂ ಪಕ್ಷಗಳು ತೀವ್ರವಾಗಿ ಮತದಾರರನ್ನು ಪ್ರೇರೇಪಿಸಿದವು.

ಎಸ್ಐಆರ್ ಪ್ರಕ್ರಿಯೆಯಲ್ಲಿ ರಾಜ್ಯದಲ್ಲಿ 91 ಲಕ್ಷಕ್ಕಿಂತ ಹೆಚ್ಚು ಹೆಸರುಗಳನ್ನು ಮತದಾರರ ಪಟ್ಟಿಯಿಂದ ತೆಗೆದುಹಾಕಲಾಗಿದೆ, ಇದು ರಾಜಕೀಯ ಚರ್ಚೆಯ ಕೇಂದ್ರವಾಗಿಯೇ ಉಳಿದಿದೆ.

ಅಮಿತ್ ಶಾ ಪರಿಶೀಲನೆ: ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಸಾಲ್ಟ್ ಲೇಕ್‌ನಲ್ಲಿರುವ ಬಿಜೆಪಿ ನಿಯಂತ್ರಣ ಕೊಠಡಿಗೆ ಭೇಟಿ ನೀಡಿ ಚುನಾವಣೆಯ ಸ್ಥಿತಿಗತಿಗಳನ್ನು ಪರಿಶೀಲಿಸಿದರು. ಅವರು ಏ.27ರವರೆಗೆ ರಾಜ್ಯದಲ್ಲೇ ಉಳಿಯುವ ನಿರೀಕ್ಷೆಯಿದೆ. 2021ರ ಚುನಾವಣೆಯೊಂದಿಗೆ ಹೋಲಿಸಿದರೆ ಈ ಬಾರಿ ಮತದಾನದಲ್ಲಿ ಗಣನೀಯ ಏರಿಕೆ ಕಂಡುಬಂದಿದೆ. 2021ರಲ್ಲಿ ಬಿಜೆಪಿ 152 ಕ್ಷೇತ್ರಗಳಲ್ಲಿ 59 ಗೆದ್ದರೆ, ಟಿಎಂಸಿ 93 ಗೆದ್ದಿತ್ತು.

ಹಲವು ಕ್ಷೇತ್ರಗಳಲ್ಲಿ ಘರ್ಷಣೆ: ತಮಿಳುನಾಡಿನ ಕೆಲವು ಕ್ಷೇತ್ರಗಳಲ್ಲಿ ಘರ್ಷಣೆಗಳು, ಬೆದರಿಕೆ ಆರೋಪಗಳು ಮತ್ತು ಅಭ್ಯರ್ಥಿಗಳ ಮೇಲೆ ದಾಳಿಗಳ ವರದಿಗಳು ಬಂದಿವೆ. ಆದರೂ ಚುನಾವಣಾ ಆಯೋಗ ಮತದಾನ 'ಮುಖ್ಯವಾಗಿ ಶಾಂತಿಯುತ' ಎಂದು ಹೇಳಿದೆ. ಚುನಾವಣೆಗೆ ರಾಜ್ಯದಲ್ಲಿ ಸುಮಾರು 2.5 ಲಕ್ಷ ಸಿಬ್ಬಂದಿಯನ್ನು ಒಳಗೊಂಡ 2,450 ಕೇಂದ್ರ ಸೈನಿಕ ಪಡೆಗಳನ್ನು ನಿಯೋಜಿಸಲಾಗಿದೆ. 8,000ಕ್ಕೂ ಹೆಚ್ಚು ಮತಗಟ್ಟೆಗಳು ಅತಿ ಸೂಕ್ಷ್ಮ ಪ್ರದೇಶಗಳಾಗಿ ಗುರುತಿಸಲಾಗಿತ್ತು.

ಡಿಎಂಕೆ-ಎನ್‌ಡಿಎ ನಡುವೆ ಸ್ಪರ್ಧೆ: ತಮಿಳುನಾಡಿನಲ್ಲಿ, ಡಿಎಂಕೆ ನೇತೃತ್ವದ ಮೈತ್ರಿ ಮತ್ತು ಎಐಎಡಿಎಂಕೆ ನೇತೃತ್ವದ ಎನ್‌ಡಿಎ ನಡುವೆ ಮುಖ್ಯ ಪೈಪೋಟಿಯಿದೆ. ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ತಮ್ಮ 'ದ್ರಾವಿಡ ಮಾದರಿ' ಆಡಳಿತವನ್ನು ಪ್ರಚಾರದ ಕೇಂದ್ರವಾಗಿಟ್ಟುಕೊಂಡಿದ್ದಾರೆ. ಎಐಎಡಿಎಂಕೆ ನಾಯಕ ಎಡಪ್ಪಾಡಿ ಕೆ. ಪಳನಿಸ್ವಾಮಿ ಮತ್ತೆ ಅಧಿಕಾರಕ್ಕೆ ಬರಲು ಪ್ರಯತ್ನಿಸುತ್ತಿದ್ದಾರೆ. ತಮಿಳುನಾಡಿನಲ್ಲಿ 2021ರಲ್ಲಿ 73.63% ಮತದಾನವಾಗಿತ್ತು. 2011ರಲ್ಲಿ ಗರಿಷ್ಠ 78.29% ಮತದಾನ ದಾಖಲಾಗಿತ್ತು.

ಎಸ್ಸೆಸ್ಸೆಲ್ಸಿ ಶೇ.94 ಪಾಸ್

ಪುಟ ೧➜ಈ ಪೈಕಿ ಹೊಸಬರು 7,70,209 ವಿದ್ಯಾರ್ಥಿಗಳು ನೋಂದಣಿಯಾಗಿದ್ದರು, 7,24,794 (ಶೇ.94.1)ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದಾರೆ ಆ ಮೂಲಕ ಹೊಸ ದಾಖಲೆ ಬರೆದಿದ್ದಾರೆ. ಕಳೆದ ಶೈಕ್ಷಣಿಕ ವರ್ಷ ಪರೀಕ್ಷೆ-1ರಲ್ಲಿ (ಶೇ.66.14)ಫಲಿತಾಂಶಕ್ಕೆ ಈ ಬಾರಿ ಫಲಿತಾಂಶ (ಶೇ.94.1)ಹೋಲಿಸಿದರೆ ಶೇ.27.87ರಷ್ಟು ಫಲಿತಾಂಶ ಜಿಗಿತ ಕಂಡಿದೆ ಎಂದರು. ಫಲಿತಾಂಶವನ್ನು ವಿದ್ಯಾರ್ಥಿಗಳ ನೋಂದಾಯಿತ ಮೊಬೈಲ್ ಸಂಖ್ಯೆಗೆ ವಾಟ್ಸಪ್ / ಎಸ್‌ಎಂಎಸ್ ಮೂಲಕವೂ ಮಾಹಿತಿ ರವಾನಿಸಲಾಗಿತ್ತು. ಜತೆಗೆ ಅಂಕಪಟ್ಟಿಯನ್ನು ಡಿಜಿ ಲಾಕರ್ ಮೂಲಕ ನೀಡಲಾಗಿದೆ ಎಂದು ವಿವರಿಸಿದರು.

ಬಾಲಕಿಯರದ್ದೇ ಮೇಲುಗೈ: 3,92,922 ವಿದ್ಯಾರ್ಥಿನಿಯರ ಪೈಕಿ 3,77,922 (ಶೇ.96.18) ತೇರ್ಗಡೆಯಾಗಿದ್ದಾರೆ. 3,77,287 ವಿದ್ಯಾರ್ಥಿಗಳ ಪೈಕಿ 3,46,872(ಶೇ.91.94) ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದಾರೆ. ಆ ಮೂಲಕ ಈ ಬಾರಿಯೂ ವಿದ್ಯಾರ್ಥಿನಿಯರೇ ಮೇಲುಗೈ ಸಾಧಿಸಿದ್ದಾರೆ.

ಮೂರನೇ ಪರೀಕ್ಷೆ ಇರಲ್ಲ ಮೇ 18ರಿಂದ ಪರೀಕ್ಷೆ-2

ಪುಟ ೧➜ಪರೀಕ್ಷೆ -2ರಲ್ಲಿ ಅನುತ್ತೀರ್ಣಗೊಂಡವರಿಗೆ ಹಾಗೂ ತೃತೀಯ ಭಾಷೆ ಬರೆಯುವವರಿಗೆ ಯಾವುದೇ ಪರೀಕ್ಷಾ ಶುಲ್ಕ ಇರುವುದಿಲ್ಲ. ಆದರೆ ಫಲಿತಾಂಶ ಉತ್ತಮ ಪಡಿಸಿಕೊಳ್ಳುವ ವಿದ್ಯಾರ್ಥಿಗಳಿಗೆ ಹಾಗೂ ಪುನರಾವರ್ತಿತ ವಿದ್ಯಾರ್ಥಿಗಳಿಗೆ ಒಂದು ವಿಷಯಕ್ಕೆ 448 ರೂ., ಎರಡು ವಿಷಯಕ್ಕೆ 559 ರೂ., ಮೂರು ಹಾಗೂ ಅದಕ್ಕಿಂತ ಹೆಚ್ಚಿನ ವಿಷಯಕ್ಕೆ 752 ರೂ. ಶುಲ್ಕ ಪಾವತಿಸಬೇಕಾಗುತ್ತದೆ ಎಂದರು.

> **ನಮ್ಮ ಸರ್ಕಾರದ ಸುಧಾರಿತ ಶಿಕ್ಷಣ ನೀತಿ ಹಾಗೂ ಶೈಕ್ಷಣಿಕ ಕ್ರಾಂತಿಯ ಫಲವಾಗಿ ಈ ಬಾರಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.94.1 ರಷ್ಟು ದಾಖಲೆ ಪ್ರಮಾಣದ ಫಲಿತಾಂಶ ಬಂದಿರುವುದು ಹೆಮ್ಮೆಯ ವಿಷಯವಾಗಿದೆ. ನಿಮ್ಮ ಈ ಸಾಧನೆ ರಾಜ್ಯಕ್ಕೆ ಮಾದರಿ. ನಿಮ್ಮ ಮುಂದಿನ ಭವಿಷ್ಯ ಉಜ್ವಲವಾಗಿರಲಿ ಎಂದು ಹಾರೈಸುತ್ತೇನೆ.**
>
> ■ **ಮಧು ಬಂಗಾರಪ್ಪ, ಶಾಲಾ ಶಿಕ್ಷಣ ಸಚಿವ**

ಜಿಲ್ಲಾವಾರು ಫಲಿತಾಂಶ

ದಕ್ಷಿಣ ಕನ್ನಡ	98.40	ಧಾರವಾಡ	95.59	ಬಳ್ಳಾರಿ	93.35
ಉಡುಪಿ	98.18	ಕೋಲಾರ	95.50	ಕೊಪ್ಪಳ	93.10
ಉತ್ತರ ಕನ್ನಡ	98.09	ಬಾಗಲಕೋಟೆ	95.42	ರಾಮನಗರ	92.83
ಹಾಸನ	97.51	ಬೆಂ.ಉತ್ತರ	95.33	ಚಿತ್ರದುರ್ಗ	92.25
ಮಂಡ್ಯ	97.45	ಗದಗ	95.24	ಬೀದರ್	92.17
ಶಿರಸಿ	97.21	ಚಿಕ್ಕಮಗಳೂರು	94.99	ತುಮಕೂರು	92.04
ಹಾವೇರಿ	96.87	ಬೆಳಗಾವಿ	94.75	ಚಾ.ನಗರ	91.89
ಕೊಡಗು	96.68	ದಾವಣಗೆರೆ	94.64	ಯಾದಗಿರಿ	91.89
ಶಿವಮೊಗ್ಗ	96.56	ಮೈಸೂರು	94.45	ಬೆಂ.ದಕ್ಷಿಣ	91.64
ವಿಜಯನಗರ	96.39	ರಾಯಚೂರು	94.41	ಚಿಕ್ಕಬಳ್ಳಾಪುರ	90.88
ಬೆಂ.ಗ್ರಾಮಾಂತರ	95.83	ವಿಜಯಪುರ	94.16	ಮಧುಗಿರಿ	90.24
		ಚಿಕ್ಕೋಡಿ	94.09	ಕಲಬುರಗಿ	85.06

ಕಾಡಾನೆ ದಾಳಿ: ಇಬ್ಬರು ಅರಣ್ಯ ಸಿಬ್ಬಂದಿ ಗಂಭೀರ

ಪುಟ ೧➜ಹಾಸ್ಟೆಲ್ ಕಾಡು ಎಂಬ ಪ್ರದೇಶದಲ್ಲಿ ಗುರುವಾರ ಮುಂಜಾನೆ ಎಂದಿನಂತೆ ಆನೆ ಕಾರ್ಯಪಡೆ ಸಿಬ್ಬಂದಿ ಈ ಭಾಗದಲ್ಲಿ ಕಾಡಾನೆಗಳ ಚಲನವಲನದ ಬಗ್ಗೆ ಪರಿಶೀಲಿಸಿ, ಸಾರ್ವಜನಿಕರಿಗೆ ಮಾಹಿತಿ ಕೊಡುವ ಕಾರ್ಯಾಚರಣೆಯಲ್ಲಿ ನಿರತರಾಗಿದ್ದಾಗ ಒಂಟಿ ಸಲಗವೊಂದು ಏಕಾಏಕಿ ಅರಣ್ಯ ಸಿಬ್ಬಂದಿ ಮೇಲೆ ಎರಗಿ ಬಂದಿದೆ.

ಇಟಿಎಫ್ ಸಿಬ್ಬಂದಿ ರಮೇಶ್ ಅವರನ್ನು ಕಾಡಾನೆ ನೆಲಕ್ಕೆ ಕೆಡವಿ ಅವರ ತೊಡೆ ಮತ್ತು ಹೊಟ್ಟೆ ಭಾಗವನ್ನು ಮೆಟ್ಟಿ ಗಾಯಗೊಳಿಸಿದೆ. ಮತ್ತೋರ್ವ ಹೊರಗುತ್ತಿಗೆ ನೌಕರ ವಿಶ್ವ ಎನ್ನುವವರ ಮೇಲೆಯೂ ಕಾಡಾನೆ ದಾಳಿ ಮಾಡಿದೆ. ಇವರಲ್ಲಿ ರಮೇಶ್ ಅವರು ತೀವ್ರವಾಗಿ ಗಾಯಗೊಂಡಿದ್ದು ಇಬ್ಬರಿಗೂ ಚಿಕಿತ್ಸೆ ಮುಂದುವರಿಸಲಾಗಿದೆ.

ದಾಳಿ ಮಾಡಿದ ಕಾಡಾನೆ ಅದೇ ಸ್ಥಳದ ಸುತ್ತಮುತ್ತ ಸಂಚರಿಸುತ್ತಿದ್ದು, ವಿಡಿಯೋ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಘಟನೆಯಿಂದ ಅರಣ್ಯ ಸಿಬ್ಬಂದಿ ಮತ್ತು ಸ್ಥಳೀಯರು ತೀವ್ರವಾಗಿ ಆತಂಕಗೊಂಡಿದ್ದಾರೆ.

ಈ ಭಾಗದಲ್ಲಿ ಕಳೆದ ಹಲವು ತಿಂಗಳಿನಿಂದ ಕಾಡಾನೆಗಳ ಗುಂಪು ಬೀಡು ಬಿಟ್ಟಿದ್ದು ರೈತರ ಬೆಳೆಗಳಿಗೆ ಅಪಾರ ಹಾನಿ ಉಂಟು ಮಾಡುತ್ತಿವೆ. ಹಾಗೆ ಜನರ ಮೇಲೆಯೂ ಎರಗಿ ಬರುತ್ತಿವೆ.

ನಪಾಸಾದ ವಿದ್ಯಾರ್ಥಿಗಳಿಗೂ ಶಾಲೆಗೆ ಬರಲು ಅವಕಾಶ

ಬೆಂಗಳೂರು: ಎಸ್‌ಎಸ್‌ಎಲ್‌ಸಿ ಪರೀಕ್ಷೆ-1 ಹಾಗೂ ಪರೀಕ್ಷೆ-2ರಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳು ಬಯಸಿದರೆ ಶಾಲೆಗೆ ಪುನರ್ ಪ್ರವೇಶ ಪಡೆಯಲು ಅವಕಾಶ ಕಲ್ಪಿಸಲಾಗಿದೆ ಎಂದು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಮೇ 18 ರಿಂದ 25ರವರೆಗೆ ಪರೀಕ್ಷೆ -2 ನಡೆಯಲಿದ್ದು, ವಿದ್ಯಾರ್ಥಿಗಳು ಆನ್‌ಲೈನ್ ಮೂಲಕ ನೋಂದಣೆ ಮಾಡಿಕೊಳ್ಳಬಹುದಾಗಿದೆ. ಮಂಡಳಿಯ ಜಾಲತಾಣದ ಶಾಲಾ ಲಾಗಿನ್ ಮೂಲಕ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಲು ಏ.24 ರಿಂದ ಏ.30 ರೊಳಗೆ ನೋಂದಣೆ ಮಾಡಿಕೊಳ್ಳಬಹುದು. ಶುಲ್ಕದ ಚಲನ್ ಮುದ್ರಿಸಿಕೊಳ್ಳಲು ಮೇ 2 ರವರೆಗೆ ಅವಕಾಶವಿದ್ದು, ಮೇ 2ರಿಂದ 4ರವರೆಗೆ ಬ್ಯಾಂಕ್‌ಗೆ ಹಣ ಜಮೆ ಮಾಡಲು ಅವಕಾಶ ಕಲ್ಪಿಸಲಾಗಿದೆ. ಪರೀಕ್ಷೆ -2ರ ವೇಳಾಪಟ್ಟಿಯನ್ನು ನೋಂದಾಯಿತ ವಿದ್ಯಾರ್ಥಿಗಳಿಗೆ ಮೆಸೆಜ್ ಮೂಲಕ ಕಳಿಸಲಾಗುತ್ತದೆ ಎಂದರು.

ಶಾಲಾವಿಧವಾರು ಫಲಿತಾಂಶ: ಸರ್ಕಾರಿ ಶಾಲೆಯ 3,06,341 ಹಾಜರಾದ ವಿದ್ಯಾರ್ಥಿಗಳಲ್ಲಿ 2,87,878 (ಶೇ.93.97) ಉತ್ತೀರ್ಣರಾಗಿದ್ದು, ಅನುದಾನಿತದಲ್ಲಿ 1,90,032 ವಿದ್ಯಾರ್ಥಿಗಳಲ್ಲಿ 1,75,670, ಅನುದಾನರಹಿತದಲ್ಲಿ 2,73,836 ವಿದ್ಯಾರ್ಥಿಗಳಲ್ಲಿ 2,61,246 ಸೇರಿದಂತೆ ಒಟ್ಟು 7,70,209 ವಿದ್ಯಾರ್ಥಿಗಳಲ್ಲಿ 7,24,794 (ಶೇ.94.1) ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ.

> ಮೆಗಾ ಪಿಟಿಎಂ, ಮನೆಗೆ ಭೇಟಿ ನೀಡಿ ವಿದ್ಯಾರ್ಥಿಗಳನ್ನು ಪರೀಕ್ಷೆಗೆ ಹಾಜರುಪಡಿಸುವಂತಹ ಕ್ರಮಗಳು ಫಲಿತಾಂಶ ಸುಧಾರಣೆಗೆ ಪ್ರಮುಖ ಕಾರಣಗಳಾಗಿವೆ. ಫಲಿತಾಂಶ ಮ್ಯಾಜಿಕ್ ಅಲ್ಲ, ಸಮಗ್ರ ತಂಡದ ಪ್ರಯತ್ನ. ಶೇ.1ರಷ್ಟು ಏರಿಕೆಗೆ ಹಲವಾರು ಕ್ರಮಗಳು ಸೇರಿವೆ. ಮುಂದಿನ ವರ್ಷಗಳಲ್ಲಿ ಗುಣಮಟ್ಟವನ್ನು ಕಾಪಾಡುವುದು ಇನ್ನಷ್ಟು ಸವಾಲಾಗಲಿದೆ.
>
> ■ **ಮಧು ಬಂಗಾರಪ್ಪ**, ಶಾಲಾ ಶಿಕ್ಷಣ, ಸಾಕ್ಷರತಾ ಸಚಿವ

ಕುಂಬಾಭಿಷೇಕ
ಮಹೋತ್ಸವ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹದಗೂರು ಶ್ರೀ ಬೀರೇಶ್ವರ ಸ್ವಾಮಿ (ತೊರಸಾಲಪ್ಪ) ಸೇವಾ ಸಮಿತಿ ಆಯೋಜಿಸಿದ್ದ ಬೀರೇಶ್ವರ ಸ್ವಾಮಿ ದೇವಸ್ಥಾನದ ಕುಂಬಾಭಿಷೇಕ ಮಹೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಸಚಿವ ಬೈರತಿ ಸುರೇಶ್, ಮಾಜಿ ಸಚಿವ ಎಚ್.ಎಂ.ರೇವಣ್ಣ ಸೇರಿದಂತೆ ಹಲವು ಮುಖಂಡರು ಉಪಸ್ಥಿತರಿದ್ದರು.

ಇಂದು ಒಳಮೀಸಲಾತಿ ನಿರ್ಧಾರ

ಬೆಂಗಳೂರು: ಪರಿಶಿಷ್ಟ ಜಾತಿಯೊಳಗೆ ಒಳಮೀಸಲಾತಿ ಕಲ್ಪಿಸುವ ಉದ್ದೇಶಕ್ಕಾಗಿ ಶುಕ್ರವಾರ ವಿಶೇಷ ಸಚಿವ ಸಂಪುಟ ಸಭೆ ನಿಗದಿಯಾಗಿದೆ. ಒಳ ಮೀಸಲಾತಿ ವಿಚಾರವಾಗಿ ಈ ಸಂಪುಟ ಸಭೆ ಸಾಕಷ್ಟು ಮಹತ್ವ ಪಡೆದುಕೊಂಡಿದೆ. ಅಲ್ಲದೇ ಮಹತ್ವದ ತೀರ್ಮಾನ ಆಗುವ ಸಾಧ್ಯತೆ ಇದೆ.

ವಿಧಾನಸೌಧದಲ್ಲಿ ಸಿಎಂ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ನಡೆಯಲಿರುವ ವಿಶೇಷ ಸಚಿವ ಸಂಪುಟ ಸಭೆಯಲ್ಲಿ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್.ನಾಗಮೋಹನ್ ದಾಸ್ ನೇತೃತ್ವದ ಸಮಿತಿ ನೀಡಿರುವ ಒಳಮೀಸಲಾತಿ ವರದಿ ಅನುಷ್ಠಾನ ಮಾಡುವ ಸಂಬಂಧ ಸರ್ಕಾರ ತೀರ್ಮಾನ ಕೈಗೊಳ್ಳುವ ನಿರೀಕ್ಷೆಯಿದೆ. ಒಳಮೀಸಲಾತಿ ಕಲ್ಪಿಸುವ ವಿಚಾರವಾಗಿ ಎಡಗೈ ಮತ್ತು ಬಲಗೈ ನಡುವಿನ ಭಿನ್ನಾಭಿಪ್ರಾಯ ವ್ಯಾಪಕವಾಗಿದೆ. ರಾಜ್ಯ ಸರ್ಕಾರಕ್ಕೆ ಇದು ತಲೆನೋವಾಗಿದೆ. ಎಸ್‌ಸಿ ಸಮುದಾಯದಲ್ಲಿರುವ 101ಕ್ಕೂ ಹೆಚ್ಚು ಉಪ-ಜಾತಿಗಳಲ್ಲಿ, ಅತಿ ಹೆಚ್ಚು ಹಿಂದುಳಿದಿರುವ ಸಮುದಾಯಗಳಿಗೆ ಮೀಸಲಾತಿಯಲ್ಲಿ ಹೆಚ್ಚಿನ ಅವಕಾಶ ಕಲ್ಪಿಸುವುದು ಒಳಮೀಸಲಾತಿಯ ಮುಖ್ಯವಾದ ಉದ್ದೇಶ. ಆದರೆ, ಮೀಸಲಾತಿಯಲ್ಲಿ ನ್ಯಾಯಯುತ ಪಾಲು ಸಿಗುತ್ತಿಲ್ಲವೆಂದು ಆರೋಪಿಸಿ, ಸದಾಶಿವ ಆಯೋಗದ ವರದಿಯನ್ನು ಜಾರಿಗೊಳಿಸಲು ಎಡಗೈ ಸಮುದಾಯಗಳು, ಮಾದಿಗ ಮತ್ತು ಇತರ ಉಪ-ಜಾತಿಗಳು ಒತ್ತಾಯಿಸುತ್ತಿವೆ. ಈ ನಿಟ್ಟಿನಲ್ಲಿ ಹೋರಾಟ, ಚಳವಳಿಗಳು ನಡೆಯುತ್ತಿವೆ. ಈ ನಿಟ್ಟಿನಲ್ಲಿ ಚರ್ಚಿಸಿ ನಿರ್ಧಾರ ಕೈಗೊಳ್ಳಲು ಈ ಹಿಂದೆ ಸಚಿವ ಸಂಪುಟ ಸಭೆಯನ್ನು ಕರೆಯಲಾಗಿತ್ತು. ಆದರೆ, ದಾವಣಗೆರೆ ಉಪ ಚುನಾವಣೆಯ ಹಿನ್ನೆಲೆಯಲ್ಲಿ ಸಭೆ ಮುಂದೂಡಲಾಗಿತ್ತು.

ಪರಿಶಿಷ್ಟ ಜಾತಿಯ ಮೀಸಲಾತಿಯನ್ನು ಶೇ.15 ರಿಂದ 17ಕ್ಕೆ ಏರಿಕೆ ಮಾಡಲಾಗಿದೆ. ಅಲ್ಲದೇ ಎಸ್‌ಟಿ ಮೀಸಲಾತಿಯನ್ನು ಶೇ.3ರಿಂದ 7ಕ್ಕೆ ಏರಿಕೆ ಮಾಡಲಾಗಿದೆ. ಈ ಹಿನ್ನೆಲೆಯಲ್ಲಿ ಒಟ್ಟು ಮೀಸಲಾತಿ ಪ್ರಮಾಣ ಶೇ. 50 ರಿಂದ 56ಕ್ಕೆ ಏರಿಕೆಯಾಗಿದೆ. ಹೆಚ್ಚಳ ಮಾಡಿದ ಪ್ರಮಾಣಕ್ಕೆ ಅನುಗುಣವಾಗಿ ಒಳಮೀಸಲಾತಿ ಕಲ್ಪಿಸಲು ಮಸೂದೆ ರೂಪಿಸಿದ್ದು, ಅದಕ್ಕೆ ರಾಜ್ಯಪಾಲರು ಅಂಕಿತ ಹಾಕಿದ್ದಾರೆ. ಏ.16 ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಒಳ ಮೀಸಲಾತಿಯ ಬಗ್ಗೆ ಚರ್ಚೆಯಾಗಿದೆ. ಹಾಗಾಗಿ, ವಿಶೇಷ ಸಂಪುಟ ಸಭೆಯನ್ನು ಕರೆಯುವಂತೆ ಬೇಡಿಕೆ ವ್ಯಕ್ತವಾಗಿತ್ತು ಎಂದರು.

ಕಿರುಸುದ್ದಿ

ಬಸ್ ಕಂಡಕ್ಟರ್ ಮಗ ರಾಜ್ಯಕ್ಕೆ ಪ್ರಥಮ

ಕುಂದಾಪುರ: ಶಂಕರನಾರಾಯಣ ಮದರ್ ಥೆರೆಸಾ ಮೆಮೋರಿಯಲ್ ಶಾಲೆಯ ವಿದ್ಯಾರ್ಥಿ ಪ್ರೀತಮ್ ಜಿ. ಪೂಜಾರಿ 625 ಅಂಕ ಪಡೆಯುವ ಮೂಲಕ ರಾಜ್ಯಕ್ಕೆ ಹಾಗೂ ಜಿಲ್ಲೆಗೆ ಪ್ರಥಮ ಸ್ಥಾನಿಯಾಗಿದ್ದಾನೆ. ಪ್ರೀತಮ್ ಬಿದ್ಕಲ್‌ಕಟ್ಟೆ ನಿವಾಸಿ ಗಣಪತಿ ಪೂಜಾರಿ- ನಾಗರತ್ನಾ ದಂಪತಿಯ ಇಬ್ಬರ ಮಕ್ಕಳ ಪೈಕಿ ಹಿರಿಯ ಪುತ್ರ. ತಂದೆ ಗಣಪತಿ ಶ್ರೀ ಲಕ್ಷ್ಮಿ ಎಕ್ಸ್‌ಪ್ರೆಸ್ ಬಸ್‌ನಲ್ಲಿ ಕಂಡಕ್ಟರ್. ತಾಯಿ ನಾಗರತ್ನಾ ಗೃಹಿಣಿ. ಎಲ್.ಕೆ.ಜಿ.ಯಿಂದಲೂ ಈತ ಮದರ್ ಥೆರೆಸಾ ಸಂಸ್ಥೆಯಲ್ಲಿ ಕಲಿತಿದ್ದ. ಈ ಬಗ್ಗೆ ಪ್ರತಿಕ್ರಿಯಿಸಿದ ಸಾಧಕ ವಿದ್ಯಾರ್ಥಿ ಪ್ರೀತಮ್ ಜಿ. ಪೂಜಾರಿ, ಅಂದಿನ ಪಾಠವನ್ನು ಅಂದೇ ಕಣ್ಣು ಹಾಯಿಸುತ್ತಿದ್ದೆ. ಪಠ್ಯವನ್ನು ಓದಿ ಮುಗಿಸಲು ತಿಂಗಳ ಗುರಿಯನ್ನು ಇಟ್ಟುಕೊಂಡಿದ್ದೆ. ಪೋಷಕರು ಹಾಗೂ ವಿದ್ಯಾಸಂಸ್ಥೆಯವರ ಪ್ರೋತ್ಸಾಹ, ಮಾರ್ಗದರ್ಶನ ಸಾಧನೆಗೆ ಪ್ರೇರಣೆ. ಮುಂದೆ ವಿಜ್ಞಾನ ವಿಭಾಗದಲ್ಲಿ ಪಿಸಿಎಂಸಿಎಸ್ ಓದಿ ಜೆಇ ಪರೀಕ್ಷೆ ಬರೆಯುವ ಇಂಗಿತ ವ್ಯಕ್ತಪಡಿಸಿದ್ದಾರೆ.

ವಿದ್ಯಾರ್ಥಿನಿ ಮೂಗಿಗೆ ಗಮ್ ಟೇಪ್ ಅಂಟಿಸಿದ ಸಿಬ್ಬಂದಿ

ಚಿಕ್ಕಮಗಳೂರು: ಸಿಇಟಿ ಪರೀಕ್ಷೆ ಬರೆಯಲು ಮೂಗುತಿ ಧರಿಸಿ ಬಂದಿದ್ದ ವಿದ್ಯಾರ್ಥಿನಿಯರ ಮೂಗಿಗೆ ಪರೀಕ್ಷಾ ಕೇಂದ್ರದ ಸಿಬ್ಬಂದಿಗಳು ಗಮ್ ಟೇಪ್ ಅಂಟಿಸಿದ ಪ್ರಕರಣ ನಗರದ ಎಂಇಎಸ್ ಕಾಲೇಜಿನಲ್ಲಿ ಗುರುವಾರ ನಡೆದಿದೆ. ರಾಜ್ಯಾದ್ಯಂತ ಸಿಇಟಿ ಪರೀಕ್ಷೆಗಳು ಆರಂಭವಾಗಿದ್ದು, ಪರೀಕ್ಷಾ ಅಕ್ರಮ ತಡೆಯಲು ಲೋಹದ ಆಭರಣಗಳಿಗೆ ಕಟ್ಟುನಿಟ್ಟಿನ ನಿಷೇಧವಿದ್ದ ಕಾರಣ ತಪಾಸಣೆ ವೇಳೆ ಮೂಗುತಿ ಬಿಚ್ಚಲು ಸಾಧ್ಯವಾಗದ ಸ್ಥಿತಿ ನಿರ್ಮಾಣವಾದ ಹಿನ್ನೆಲೆಯಲ್ಲಿ ಪರೀಕ್ಷಾ ಕೇಂದ್ರದ ಸಿಬ್ಬಂದಿಯೇ ವಿದ್ಯಾರ್ಥಿನಿಯರ ಮೂಗಿನ ಮೇಲೆ ಗಮ್ ಟೇಪ್ ಅಂಟಿಸಿ ಪರೀಕ್ಷಾ ಕೊಠಡಿಯೊಳಗೆ ಕಳುಹಿಸಿದ ಘಟನೆ ನಡೆಯಿತು. ನಿಯಮಗಳ ಕಟ್ಟುನಿಟ್ಟಿನ ಪಾಲನೆ ಹೆಸರಿನಲ್ಲಿ ಏಕಾಏಕಿ ಮೂಗಿಗೆ ಟೇಪ್ ಅಂಟಿಸಿರುವುದು ಪೋಷಕರು ಮತ್ತು ಅಭ್ಯರ್ಥಿಗಳ ಅಸಮಾಧಾನಕ್ಕೆ ಕಾರಣವಾಯಿತು. ಪರೀಕ್ಷೆಯ ಒತ್ತಡದ ನಡುವೆ ಈ ವಿಚಿತ್ರ ಸನ್ನಿವೇಶವು ವಿದ್ಯಾರ್ಥಿನಿಯರಲ್ಲಿ ಕೆಲಕಾಲ ಗೊಂದಲವನ್ನು ಸೃಷ್ಟಿಸಿತ್ತು. ಪರೀಕ್ಷೆ ಸುಗಮವಾಗಿ ನಡೆಯಬೇಕು ಎಂಬ ಉದ್ದೇಶದಿಂದ ಸಿಬ್ಬಂದಿಗಳು ಈ ಕ್ರಮಕ್ಕೆ ಮುಂದಾದರೂ, ಇದು ಟೀಕೆಗೆ ಗುರಿಯಾಗಿದೆ.

ಖರ್ಗೆ ಕ್ಷಮೆಯಾಚಿಸಲಿ: ಬೆಲ್ಲದ

ಹುಬ್ಬಳ್ಳಿ: ಅಖಿಲ ಭಾರತ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಪ್ರಧಾನ ಮಂತ್ರಿ ಮೋದಿ ಅವರ ಕುರಿತು ನೀಡಿರುವ ಅತ್ಯಂತ ಕೆಳಮಟ್ಟದ ಮತ್ತು ಅವಹೇಳನಕಾರಿ ಹೇಳಿಕೆ ಖಂಡನೀಯ. ಕೂಡಲೇ ಕ್ಷಮೆಯಾಚಿಸಬೇಕು ಎಂದು ಶಾಸಕ ಅರವಿಂದ ಬೆಲ್ಲದ ಆಗ್ರಹಿಸಿದ್ದಾರೆ. ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಮಲ್ಲಿಕಾರ್ಜುನ ಖರ್ಗೆ ಅವರು ಹಿರಿಯ ರಾಜಕಾರಣಿಗಳಾಗಿದ್ದು, ಜವಾಬ್ದಾರಿಯುತ ಸ್ಥಾನದಲ್ಲಿದ್ದಾರೆ. ಆದರೆ ಪ್ರಧಾನಿ ಮೋದಿ ಅವರ ಬಗ್ಗೆ ಬಳಸಿರುವ ಶಬ್ದ ಅವರ ರಾಜಕೀಯ ದಿವಾಳಿತನ ಪ್ರದರ್ಶಿಸುತ್ತದೆ. ಇದು ಕೇವಲ ಪ್ರಧಾನಿಯವರಿಗೆ ಮಾಡಿದ ಅವಮಾನವಲ್ಲ, ದೇಶದ ಜನರಿಗೆ ಮಾಡಿದ ಅವಮಾನವಾಗಿದೆ. ಖರ್ಗೆ ಹೇಳಿಕೆ ಕಾಂಗ್ರೆಸ್ ನಾಯಕರ ನಿರಾಶೆಯನ್ನು ತೋರುತ್ತದೆ. ಕಾಂಗ್ರೆಸ್ ಮತ್ತೆ ಅಧಿಕಾರಕ್ಕೆ ಬರಲು ಸಾಧ್ಯವಿಲ್ಲ ಎಂಬ ಭಯದಿಂದ ಇಂತಹ ಭಾಷೆ ಬಳಸುತ್ತಿದ್ದಾರೆ ಎಂದು ಕಿಡಿಕಾರಿದ್ದಾರೆ.

ಎಸ್ಸೆಸ್ಸೆಲ್ಸಿ ಫಲಿತಾಂಶ ಪ್ರಕಟ | ಕಳೆದ ಸಾಲಿಗಿಂತ ಈ ಬಾರಿ ಶೇಕಡಾವಾರು ಫಲಿತಾಂಶದಲ್ಲಿ ಹೆಚ್ಚಳ

ಏಳು ವಿದ್ಯಾರ್ಥಿಗಳು ರಾಜ್ಯಕ್ಕೆ ಪ್ರಥಮ

ಬೆಳಗಾವಿ/ ಚಿಕ್ಕಮಗಳೂರು/ ಚನ್ನಗಿರಿ: ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ಬಂದಿದ್ದು, ರಾಜ್ಯದಲ್ಲಿ 7 ಜನ ವಿದ್ಯಾರ್ಥಿಗಳಿಗೆ 625ಕ್ಕೆ 625 ಅಂಕಗಳನ್ನು ಗಳಿಸುವ ಮೂಲಕ ರಾಜ್ಯಕ್ಕೆ ಟಾಪರ್‌ಗಳಾಗಿದ್ದಾರೆ. ಕಳೆದ ಸಾಲಿಗಿಂತ ಈ ಭಾರಿ ಫಲಿತಾಂಶದಲ್ಲಿ ಏರಿಕೆಯಾಗಿದೆ. ಅತ್ಯಧಿಕ ಅಂಕಗಳನ್ನು ಗಳಿಸಿದ ವಿದ್ಯಾರ್ಥಿಗಳಿಗೆ ಶುಭಾಶಯಗಳ ಭರಪೂರವೇ ಹರಿದುಬರುತ್ತಿದೆ. ಪೋಷಕರು ತಮ್ಮ ತಮ್ಮ ಮಕ್ಕಳಿಗೆ ಸಿಹಿ ತಿನ್ನಿಸಿ ಶುಭಾಶಯ ಕೋರಿದ್ದಾರೆ. ವಿದ್ಯಾರ್ಥಿಗಳು ಸಹ ಮುಂದೆ ಉತ್ತಮ ಸಾಧನೆ ಮಾಡುವ ಅಭಿಲಾಷೆಯನ್ನು ಹೊಂದಿರುವುದು ಗಮನಾರ್ಹ ಸಂಗತಿ.

6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-560 003

ಸುದ್ದಿಗೋಷ್ಠಿಯಲ್ಲಿ ಶಿಕ್ಷಣ ಸಚಿವ ಮಧು ಬಂಗಾರಪ್ಪ ಗುರುವಾರ ಎಸ್ಸೆಸ್ಸೆಲ್ಸಿ ಫಲಿತಾಂಶ ಪ್ರಕಟಗೊಳಿಸಿದರು.

ಮಾನ್ವಿ ಶಾಲೆಯ ವಿದ್ಯಾರ್ಥಿ ಸುಖದೇವ್‌ಗೆ 625 ಅಂಕ

ರಾಯಚೂರು: ಜಿಲ್ಲೆಯ ಮಾನವಿಯ ಬಿವಿಆರ್ ಆಂಗ್ಲ ಮಾಧ್ಯಮ ಶಾಲೆಯ ವಿದ್ಯಾರ್ಥಿ ಸುಖದೇವ 625ಕ್ಕೆ 625 ಅಂಕ ಪಡೆದು ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದುಕೊಂಡಿರುವ ಏಳು ವಿದ್ಯಾರ್ಥಿಗಳಲ್ಲಿ ಒಬ್ಬನಾಗಿದ್ದಾನೆ. ಎಸ್ಸೆಸ್ಸೆಲ್ಸಿಯಲ್ಲಿ ಈ ಸಾಧನೆ ಮಾಡಿರುವುದು ಹೆಮ್ಮೆಯ ಸಂಗತಿ ಎಂದು ಜಿಲ್ಲಾಡಳಿತ, ಶಾಲಾ ಆಡಳಿತ ಮಂಡಳಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಅನುದಾನ ರಹಿತ ಶಾಲಾ ವಿದ್ಯಾರ್ಥಿ ಆಗಿರುವ ಸುಖದೇವನ ತಂದೆ ಪರಶುರಾಮ ಮಾನವಿಯ ಖಾಸಗಿ ಕಾಲೇಜಿನಲ್ಲಿ ಅತಿಥಿ ಉಪನ್ಯಾಸಕರಾಗಿದ್ದರೆ. ತಾಯಿ ಚಂದ್ರಕಲಾ ಜಿಲ್ಲೆಯ ಪೋತನಾಳ ಗ್ರಾಮದ ಸರಕಾರಿ ಪ್ರೌಢ ಶಾಲೆಯಲ್ಲಿ ಕನ್ನಡ ಶಿಕ್ಷಕಿಯಾಗಿದ್ದಾರೆ. ಸುಖದೇವ್‌ನಿಗೆ ಶಾಲಾ ಶಿಕ್ಷಕರು ಹೇಳುವ ಪಾಠ ಹಾಗೂ ಅವರ ಮಾರ್ಗದರ್ಶನ, ಮನೆಯಲ್ಲಿ ತಂದೆ ತಾಯಿಯ ಮಾರ್ಗದರ್ಶನ. ಯಾವುದೇ ಖಾಸಗಿಯಾಗಿ ಮನೆ ಪಾಠವನ್ನು ಪಡೆದುಕೊಂಡಿಲ್ಲ.ಕ್ಷೇತ್ರ ಶಿಕ್ಷಣಾಧಿಕಾರಿ ಚಂದ್ರಶೇಖರ.ಡಿ., ಬಿ.ವಿ.ಆರ್. ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಬಿ.ವಿ.ರೆಡ್ಡಿ, ಕಾರ್ಯದರ್ಶಿ ಪದ್ಮವತಿ, ಮುಖ್ಯಗುರು ಸರ್‌ಮಾತ್‌ಖಾನ್ ಅವರು ವಿದ್ಯಾರ್ಥಿಗೆ ಅಭಿನಂದನೆಯನ್ನು ತಿಳಿಸಿದ್ದಾರೆ.

> ಸುಖದೇವ್ 620 ಬರುವ ನಿರೀಕ್ಷೆ ಇತ್ತು. 625 ಅಂಕ ಪಡೆದಿದ್ದು ಬಹಳ ಸಂತೋಷವಾಗಿದೆ. ದಿನಕ್ಕೆ 3-4 ಗಂಟೆ ಓದುತ್ತಿದ್ದ, ಶಾಲಾ ಶಿಕ್ಷಕರ ಪ್ರೋತ್ಸಾಹ, ಅವನ ಶ್ರಮವೂ ಇದೆ.
>
> ■ **ಚಂದ್ರಕಲಾ**, ಸುಖದೇವ್ ತಾಯಿ

ಆಂಬ್ಯುಲೆನ್ಸ್‌ನಲ್ಲಿ ಬಂದು ಪರೀಕ್ಷೆ ಬರೆದಿದ್ದ ಕುಸಿಮಾ ಪ್ರಥಮ ದರ್ಜೆಯಲ್ಲಿ ತೇರ್ಗಡೆ

ಕೋಲಾರ: ಆಂಬುಲೆನ್ಸ್ ಮೂಲಕ ಬಂದು ಸ್ಟ್ರೆಚರ್‌ನಲ್ಲಿಯೆ ಮಲಗಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆದಿದ್ದ ವಿದ್ಯಾರ್ಥಿನಿ ಕುಸಿಮಾ ಫಸ್ಟ್ ಕ್ಲಾಸ್ ನಲ್ಲಿ ಪಾಸ್ ಆಗಿದ್ದಾಳೆ. ಅಪಘಾತವಾಗಿ ಗಾಯಗೊಂಡ ವಿದ್ಯಾರ್ಥಿನಿ ಛಲ ಬಿಡದೆ ಸ್ಟ್ರೆಚರ್‌ನಲ್ಲಿ ಬಂದು ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆದಿದ್ದಳು. ಶಿಕ್ಷಣ ಇಲಾಖೆ ಹಾಗು ತಾಯಿಯ ನೆರವಿನೊಂದಿಗೆ ಪರೀಕ್ಷಾ ಕೇಂದ್ರಕ್ಕೆ ಆಂಬುಲೆನ್ಸ್‌ನಲ್ಲಿ ಬಂದು ಪರೀಕ್ಷೆ ಬರೆದಿದ್ದ ವಿದ್ಯಾರ್ಥಿನಿ ಕುಸಿಮಾ ಫಸ್ಟ್ ಕ್ಲಾಸ್‌ನಲ್ಲಿ ಪಾಸ್ ಆಗಿದ್ದಾಳೆ. ಕೋಲಾರ ಜಿಲ್ಲೆಯ ಕೆಜಿಎಫ್ ತಾಲ್ಲೂಕಿನ ಚಿನ್ನನಾಗಹಳ್ಳಿಯ ನಿವಾಸಿಯಾಗಿರುವ ಕುಸುಮಾ ಸದ್ಯ ಬೆಂಗಳೂರಿನ ವೈಟ್ ಫೀಲ್ಡ್ ಬಳಿ ಇರುವ ಹಾಸ್ಟರ್ ಖಾಸಗಿ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದಾಳೆ. ಕಳೆದ ಒಂದು ವಾರದಿಂದ ಆಸ್ಪತ್ರೆಯಲ್ಲಿ ಸರ್ಜರಿ ಮಾಡಿಸಿಕೊಳ್ಳುತ್ತಿರುವ ಕುಸುಮಾ 625 ಕ್ಕೆ 374 ಅಂಕ ಪಡೆದು ಅದೆಷ್ಟೋ ಜನರಿಗೆ ಮಾದರಿಯಾಗಿದ್ದಾಳೆ. ಕನ್ನಡದಲ್ಲಿ 62, ಇಂಗ್ಲೀಷ್‌ನಲ್ಲಿ 72, ಹಿಂದಿ-63, ಗಣಿತ-67, ವಿಜ್ಞಾನ-54, ಸಮಾಜ-56 ಅಂಕ ಪಡೆದಿದ್ದಾಳೆ.

ಶಿಕ್ಷಣ ಇಲಾಖೆ ಎಡವಟ್ಟಿನಿಂದ ಅಂಥ ವಿದ್ಯಾರ್ಥಿನಿಗೆ ಅನ್ಯಾಯ

ಶಿರಸಿ: ಇಂದು ಪ್ರಕಟವಾದ ಫಲಿತಾಂಶದಲ್ಲಿ ಪರೀಕ್ಷಾ ಮಂಡಳಿಯ ಗಂಭೀರ ಲೋಪವೊಂದು ಬೆಳಕಿಗೆ ಬಂದಿದೆ. ಎಲ್ಲ ವಿಷಯಗಳ ಪರೀಕ್ಷೆಯನ್ನು ಬರೆದಿದ್ದರೂ, ಸೋಷಿಯಲ್ ಸೈನ್ಸ್ ವಿಷಯದಲ್ಲಿ 'ಆಬ್ಸೆಂಟ್' ಎಂದು ನಮೂದಿಸುವ ಮೂಲಕ ಪ್ರತಿಭಾವಂತ ಅಂಧ ವಿದ್ಯಾರ್ಥಿನಿಯೊಬ್ಬರನ್ನು ಅನುತ್ತೀರ್ಣಗೊಳಿಸಿರುವ ಘಟನೆ ನಡೆದಿದೆ. ನಗರದ ಇಂದಿರಾ ನಗರದ ಯುನಿಯನ್ ಉರ್ದು ಪ್ರೌಢಶಾಲೆಯ ವಿದ್ಯಾರ್ಥಿನಿ ಲೀಸಾ ಖಾನಮ್ ಈ ಅನ್ಯಾಯಕ್ಕೆ ಒಳಗಾದವರು. ಲೀಸಾ ಅವರು ಕನ್ನಡದಲ್ಲಿ 100, ಇಂಗ್ಲಿಷ್‌ನಲ್ಲಿ 92, ಎಕನಾಮಿಕ್ಸ್‌ನಲ್ಲಿ 98 ಹಾಗೂ ಪೊಲಿಟಿಕಲ್ ಸೈನ್ಸ್‌ನಲ್ಲಿ 92 ಅಂಕಗಳನ್ನು ಗಳಿಸುವ ಮೂಲಕ ಒಟ್ಟು 526 ಅಂಕ (ಶೇ. 84.16) ಪಡೆದಿದ್ದಾರೆ. ಆದರೆ, ಸಮಾಜ ವಿಜ್ಞಾನ ಪರೀಕ್ಷೆಗೆ ಹಾಜರಾಗಿದ್ದರೂ ಮಂಡಳಿಯು ಆಕೆಯನ್ನು ಗೈರು ಎಂದು ಪರಿಗಣಿಸಿ ಫಲಿತಾಂಶದಲ್ಲಿ 'ಫೇಲ್' ಎಂದು ತೋರಿಸಿದೆ. ಕುಟುಂಬಸ್ಥರು ಮಂಡಳಿಯ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಉಡುಪಿ ಜಿಲ್ಲೆ: ಈ ಬಾರಿಯೂ ಬಾಲಕಿಯರೇ ಮೇಲುಗೈ!

ಉಡುಪಿ: ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಫಲಿತಾಂಶ ಪ್ರಕಟವಾಗಿದ್ದು, ಉಡುಪಿ ಜಿಲ್ಲೆಯು ಶೇ. 98.18 ರಷ್ಟು ಫಲಿತಾಂಶ ದಾಖಲಿಸುವ ಮೂಲಕ ಶೈಕ್ಷಣಿಕ ಕ್ಷೇತ್ರದಲ್ಲಿ ತನ್ನ ಪ್ರಾಬಲ್ಯವನ್ನು ಮುಂದುವರಿಸಿದೆ. ನಿಯಮಿತ ವಿದ್ಯಾರ್ಥಿಗಳ ವಿಭಾಗದಲ್ಲಿ ಜಿಲ್ಲೆಯು ಈ ಅತ್ಯುತ್ತಮ ಸಾಧನೆ ಮಾಡಿದೆ.

> ಫಲಿತಾಂಶ ನೋಡಿದಾಗ ಮೊದಲಿಗೆ ನಂಬಲಿಲ್ಲ, ಪುಟವನ್ನು ಹಲವು ಬಾರಿ ರಿಫ್ರೆಶ್ ಮಾಡಿ ಪರಿಶೀಲಿಸಿದೆ. 625 ಅಂಕಗಳನ್ನು ಕಂಡಾಗ ತುಂಬಾ ಖುಷಿಯಾಯಿತು. ನಾನು ದಿನಕ್ಕೆ ಹೆಚ್ಚು ಸಮಯ ಓದುವುದಕ್ಕಿಂತ ಓದುವ ಗುಣಮಟ್ಟಕ್ಕೆ ಆದ್ಯತೆ ನೀಡುತ್ತಿದ್ದೆ. ಟ್ಯೂಷನ್ನಲ್ಲೇ ಹೆಚ್ಚಿನ ಓದು ಆಗುತ್ತಿತ್ತು. ಮುಂದೆ ವಿಜ್ಞಾನ ತೆಗೆದುಕೊಂಡು ಇಂಜಿನಿಯರಿಂಗ್ ಮಾಡುವ ಆಸೆ ಇದೆ.
>
> ■ **ಧನುಷ್ ಸುಧೀರ್ ಮೈಸೂರು**, ಬೆಂಗಳೂರು ಉತ್ತರದ ಸದಾಶಿವನಗರ ಪೂರ್ಣ ಪ್ರಜ್ಞಾ ಪ್ರೌಢಶಾಲೆ ವಿದ್ಯಾರ್ಥಿ

ವೈದ್ಯೆಯಾಗುವ ಗುರಿ: ಪ್ರಾರ್ಥನಾ ನಾಗಪ್ಪ ಬಿರಾದರ್ ಪಾಟೀಲ್

ಬೆಳಗಾವಿ: ಜಿಲ್ಲೆಯ ಅಥಣಿ ತಾಲೂಕಿನ ಕಟಗೇರಿ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿ ಪ್ರಾರ್ಥನಾ ನಾಗಪ್ಪ ಬಿರಾದರ್ ಪಾಟೀಲ್ ಎಸ್ಸೆಸ್ಸೆಲ್ಸಿಯಲ್ಲಿ 625ಕ್ಕೆ 625 ಅಂಕ ಪಡೆದುಕೊಳ್ಳುವ ಮೂಲಕ ರಾಜ್ಯಕ್ಕೆ ಪ್ರಥಮ ಸ್ಥಾನವನ್ನು ಪಡೆದುಕಂಡಿದ್ದಾಳೆ. ಅಪ್ಪಟ ಗ್ರಾಮೀಣ ಪ್ರದೇಶದ ವಿದ್ಯಾರ್ಥಿನಿ ಆಗಿರುವ ಪ್ರಾರ್ಥನಾ ರಾಜ್ಯಕ್ಕೆ ಟಾಪರ್ ಆಗುವ ಮೂಲಕ ಬೆಳಗಾವಿ ಜಿಲ್ಲೆಯ ಕೀರ್ತಿ ಹೆಚ್ಚಿಸಿದ್ದಾರೆ. ಪ್ರಾರ್ಥನಾ ತಂದೆ ನಾಗಪ್ಪ ಅದೇ ಶಾಲೆಯ ಕನ್ನಡ ಭಾಷಾ ಶಿಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದರೆ, ತಾಯಿ ವಿನೋದಾ ಗೃಹಿಣಿಯಾಗಿದ್ದಾರೆ. 620 ಅಂಕ ಬರುವ ನಿರೀಕ್ಷೆ ಇಟ್ಟುಕೊಂಡಿದ್ದೆ. ಆದರೆ, 625 ಅಂಕ ಪಡೆದಿದ್ದಕ್ಕೆ ತುಂಬಾ ಖುಷಿ ಆಗುತ್ತಿದೆ. ಎಲ್ಲಾ ಶಿಕ್ಷಕರು ನನಗೆ ಬಹಳಷ್ಟು ಪ್ರೋತ್ಸಾಹ ಮಾಡಿದರು. ತಂದೆ-ತಾಯಿ ಬೆಂಬಲದಿಂದ ಇದು ಸಾಧ್ಯವಾಗಿದೆ. ಮುಂದೆ ಪಿಯುಸಿ ಸೈನ್ಸ್ ಸೇರಿಕೊಂಡು, ಬಳಿಕ ವೈದ್ಯೆ ಅಥವಾ ಯುಪಿಎಸ್ಸಿ ಪರೀಕ್ಷೆ ಎದುರಿಸುವ ಗುರಿ ಹೊಂದಿದ್ದೇನೆ ಎಂದು ತಮ್ಮ ಭವಿಷ್ಯದ ಗುರಿ ಬಗ್ಗೆ ಹಂಚಿಕೊಂಡರು.

ಕೃಷಿಕನ ಮಗ ಭರತ್ ರಾಜ್ಯಕ್ಕೆ ಪ್ರಥಮ

ಚನ್ನಗಿರಿ ಸಮೀಪದ ಕಬ್ಬಳ ಗ್ರಾಮದ ವಿದ್ಯಾಲಕ್ಷ್ಮಿ ಕಾನ್ವೆಂಟ್ ಶಾಲೆಯ ವಿದ್ಯಾರ್ಥಿ ಭರತ್.ಜಿ 625ಕ್ಕೆ 625 ಅಂಕ ಪಡೆದು ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದಿದ್ದಾನೆ. ಒಟ್ಟು ಏಳು ವಿದ್ಯಾರ್ಥಿಗಳು ರಾಜ್ಯದಲ್ಲಿ ಪರಿಪೂರ್ಣ ಅಂಕ ಪಡೆದಿದ್ದು, ಅವರಲ್ಲಿ ಭರತ್ ಕೂಡ ಒಬ್ಬ. ಈತ ತ್ಯಾವಣಿಗೆ ಸಮೀಪದ ಕಣಿವೆಬಿಳಚಿ ಗ್ರಾಮದ ಕೃಷಿಕ ಗಿರೀಶ್ ಹಾಗೂ ಶಿಲ್ಪ ದಂಪತಿ ಪುತ್ರ.

ಇಂಗ್ಲಿಷ್ ಮಾಧ್ಯಮದಲ್ಲಿ ಕಂದಕೂರ ಸಾಧನೆ

ವಿಜಯಪುರ: ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನ ನಾಗರಬೆಟ್ಟ ಆಕ್ಸ್‌ಫರ್ಡ್ ಆಂಗ್ಲ ಮಾಧ್ಯಮ ಶಾಲೆಯ ವಿದ್ಯಾರ್ಥಿನಿಯರು ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದು ಅಮೋಘ ಸಾಧನೆ ಮಾಡಿದ್ದಾಳೆ. ವಿದ್ಯಾರ್ಥಿನಿ ಸೌಜನ್ಯ ಬಸವರಾಜ್ ಕಂದಕೂರ ಇಂಗ್ಲಿಷ್ ಮಾಧ್ಯಮದಲ್ಲಿ 625ಕ್ಕೆ 625 ಅಂಕ ಪಡೆದು ವಿಶೇಷ ಸಾಧನೆ ತೋರಿದ್ದಾಳೆ. ವಿದ್ಯಾರ್ಥಿನಿಯ ಈ ಸಾಧನೆಗೆ ಆಕ್ಸ್‌ಫರ್ಡ್ ಪಾಟೀಲ್ಸ್ ಸಂಸ್ಥೆಯ ಚೇರ್ಮನ್ ಎಂ.ಎಸ್. ಪಾಟೀಲ, ಆಡಳಿತಾಧಿಕಾರಿ ಅಮೀತಗೌಡ ಪಾಟೀಲ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಪಾಸಾದ ವಿದ್ಯಾರ್ಥಿ ಈಜಲು ಹೋಗಿ ಸಾವು

ಕೋಲಾರ: ಎಸ್ಸೆಸ್ಸೆಲ್ಸಿ ಫಲಿತಾಂಶ ಪ್ರಕಟಗೊಂಡ ತಕ್ಷಣ ಪಾಸಾದ ಖುಷಿಯಲ್ಲಿ ಈಜಲು ಹೋದ ಬಾಲಕನೊಬ್ಬ ಬಾವಿಯಲ್ಲಿ ಮುಳುಗಿ ಸಾವನ್ನಪ್ಪಿರುವ ಘಟನೆ ನಡೆದಿದೆ. ಕೋಲಾರ ಜಿಲ್ಲೆ ಮುಳಬಾಗಲು ತಾಲೂಕಿನ ಸೊಣ್ಣವಾಡಿ ಗ್ರಾಮದ ಬಳಿ ಈ ಘಟನೆ ನಡೆದಿದ್ದು, ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಪಾಸಾದ ಗ್ರಾಮದ ಕಿರಣ್ ತನ್ನ ಸ್ನೇಹಿತರ ಜೊತೆ ಈಜಲು ಹೋಗಿ ಆಳದ ಬಾವಿಯಲ್ಲಿ ಮುಳುಗಿ ನಾಪತ್ತೆಯಾಗಿದ್ದಾನೆ. ಈತನಿಗೆ ಈಜು ಸಹ ಬರುತ್ತಿರಲಿಲ್ಲ, ಆದರೆ ಆತ ನೇರವಾಗಿ ಬಾವಿಗೆ ಹಾರಿದ ಪರಿಣಾಮ ಮೃತಪಟ್ಟಿದ್ದಾನೆ. ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಕಿರಣ್ ಕನ್ನಡ-43, ಇಂಗ್ಲೀಷ್-41, ಹಿಂದಿ-38, ಗಣಿತ-38, ವಿಜ್ಞಾನ-34, ಸಮಾಜ-45 ಸೇರಿದಂತೆ 239 ಅಂಕಗಳನ್ನು ಪಡೆದಿದ್ದ ಕಿರಣ್ 12 ಗಂಟೆಯ ವೇಳೆಗೆ ಪಲಿತಾಂಶವನ್ನು ನೋಡಿ ಪರೀಕ್ಷೆಯಲ್ಲಿ ಪಾಸಾದ ಖುಷಿಯಲ್ಲಿ ಮನೆಯ ಬಳಿಯಿದ್ದ ಬೃಹತ್ ಗಾತ್ರದ ಬಾವಿಗೆ ಸ್ನೇಹಿತರೊಂದಿಗೆ ಈಜಲು ಹೋಗಿ ಪ್ರಾಣವನ್ನು ಕಳೆದುಕೊಂಡಿದ್ದಾನೆ. ಮುಳಬಾಗಿಲು ಗ್ರಾಮಾಂತರ ಪೊಲೀಸ್ ರಾಣಾ ವ್ಯಾಪ್ತಿಯಲ್ಲಿ ಪ್ರಕರಣ ದಾಖಲಾಗಿದೆ.

ಇಂಜಿನಿಯರ್ ಆಗುವ ಬಯಕೆ: ಬೃಂದಾ ತಾಪ್ಸೆ

ಚಿಕ್ಕಮಗಳೂರು: ಈ ಬಾರಿಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ನಗರದ ಸೈಂಟ್ ಮೇರೀಸ್ ಪ್ರೌಢಶಾಲೆಯ ವಿದ್ಯಾರ್ಥಿನಿ ಬೃಂದಾ ತಾಪ್ಸೆ 625 ಅಂಕಗಳೊಂದಿಗೆ ಶೇ.100 ಫಲಿತಾಂಶದ ಸಾಧನೆ ತೋರಿದ್ದಾರೆ. ಇದರೊಂದಿಗೆ ರಾಜ್ಯದಲ್ಲೇ ಪ್ರಥಮ ಸ್ಥಾನಗಳಿದ ವಿದ್ಯಾರ್ಥಿಗಳ ಪಟ್ಟಿಯಲ್ಲಿ ಬೃಂದಾ ತಾಪ್ಸೆ ಸ್ಥಾನ ಗಳಿಸಿದ್ದು, ಜಿಲ್ಲೆಗೆ ಕೀರ್ತಿನ ತಂದಿದ್ದಾರೆ. ಗುರುವಾರ ಫಲಿತಾಂಶ ಹೊರಬಿದ್ದ ಕೂಡಲೇ ಸೈಂಟ್ ಮೇರೀಸ್ ಶಾಲೆಯಲ್ಲಿ ಸಂಭ್ರಮ ಮನೆ ಮಾಡಿತ್ತು. ನಗರದ ಕೋಟೆ ಬಡಾವಣೆಯ ಟೈಲರಿಂಗ್ ವೃತ್ತಿಯ ಮಂಜುನಾಥ್, ಹರ್ಷಿಣಿ ದಂಪತಿ ಪುತ್ರಿಯಾಗಿರುವ ಬೃಂದಾ ತಾಪ್ಸೆ ಇಂಜಿನೀಯರ್ ಆಗಬೇಕೆಂಬ ಬಯಕೆ ವ್ಯಕ್ತಪಡಿಸಿದ್ದಾರೆ.

ವಿಹಿಂಪ ಕೇಂದ್ರೀಯ ಸಂಘಟನಾ ಮಹಾಮಂತ್ರಿ ಮಿಲಿಂದ್ ಜೇ ಪರಾಂಡೆ ಒತ್ತಾಯ

ಕಾರ್ಪೊರೇಟ್ ಜಿಹಾದ್ ಎನ್‌ಐಎಗೆ ವಹಿಸಿ

ಬೆಂಗಳೂರು: ಹುಬ್ಬಳ್ಳಿ ಲವ್ ಜಿಹಾದ್, ಜಿಮ್ ಸ್ಕ್ಯಾಂಡಲ್, ಕಾರ್ಪೊರೇಟ್ ಜಿಹಾದ್, ಕಾಣೆಯಾದ ಮಹಿಳೆಯರ ಪ್ರಕರಣಗಳ ನಡುವಿನ ನಂಟನ್ನು ಬೇದಿಸಲು ಎನ್‌ಐಎ., ಇ.ಡಿ.ಮತ್ತು ರಾಜ್ಯ ಎಸ್‌ಐಟಿ ತನಿಖೆ ನಡೆಸಬೇಕು ಎಂದು ವಿಶ್ವ ಹಿಂದೂ ಪರಿಷತ್ ಕೇಂದ್ರೀಯ ಸಂಘಟನಾ ಮಹಾಮಂತ್ರಿ ಮಿಲಿಂದ್ ಜೇ ಪರಾಂಡೆ ಒತ್ತಾಯಿಸಿದರು.

ವಿಶ್ವ ಹಿಂದೂ ಪರಿಷದ್ ಪ್ರಾಂತ ಕಾರ್ಯಾಲಯ ಧರ್ಮಶ್ರೀಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ದೇಶದ ನಾನಾ ರಾಜ್ಯಗಳಲ್ಲಿ ಇತ್ತೀಚಿಗೆ ಲವ್ ಜಿಹಾದ್ ಪ್ರಕರಣಗಳು ಹೆಚ್ಚಿನ ಸಂಖ್ಯೆಯಲ್ಲಿ ವರದಿಯಾಗುತ್ತಿವೆ. ನಾಸಿಕ್‌ನ ಟಿಸಿಎಸ್ ಕಂಪನಿಯಲ್ಲಿ ಕಾರ್ಪೊರೇಟ್ ಜಿಹಾದ್ ಹಾಗೂ ಮತಾಂತರದ ಘಟನೆಗಳು ವರದಿ ಯಾಗಿರುವುದು ಖಂಡನೀಯ. ಇಂತಹಕೃತ್ಯಗಳು ನಾಗರಿಕ ಸಮಾಜದಲ್ಲಿ ಅಕ್ಷಮ್ಯ, ಕಾನೂನು ಬಾಹಿರವಾಗಿದ್ದು, ಮುಸ್ಲಿಂ ನಾಯಕತ್ವವು ಸರಿಯಾದ ದಾರಿ ತೋರಿಸದಿದ್ದರೆ ಅಂತಹ ನಾಯಕತ್ವವನ್ನು ಬದಲಿಸುವ ಬಗ್ಗೆ ಸಮಾಜ ಯೋಚಿಸಬೇಕು ಎಂದರು.

ಸಮಗ್ರ ತನಿಖೆ ನಡೆಸಲಿ: ಧಾರ್ಮಿಕ ಸ್ವಾತಂತ್ರ್ಯ ಹಕ್ಕುಗಳ ಉಲ್ಲಂಘನೆ ಕುರಿತಾದ ಆರೋಪಗಳೂ ಕೇಳಿಬರುತ್ತಿವೆ. ಬಲವಂತದ ಮತಾಂತರ, ಧಾರ್ಮಿಕ ಭಾವನೆಗಳಿಗೆ ಧಕ್ಕೆ ತರುವಂತಹ ಘಟನೆಗಳು ನಡೆದಿರುವುದಾಗಿ ಹೇಳಲಾಗುತ್ತಿದೆ. ಇದರಿಂದ ಸಂವಿಧಾನಾತ್ಮಕ ಹಕ್ಕುಗಳ ರಕ್ಷಣೆ ಕುರಿತು ಪ್ರಶ್ನೆಗಳು ಏಳುತ್ತಿವೆ. ಈ ಎಲ್ಲ ಬೆಳವಣಿಗೆಗಳ ಹಿನ್ನೆಲೆಯಲ್ಲಿ, ಪ್ರಕರಣಗಳ ನಡುವಿನ ನಂಟನ್ನು ಪತ್ತೆಹಚ್ಚಲು ರಾಷ್ಟ್ರೀಯ ತನಿಖಾ ಸಂಸ್ಥೆ ಜಾರಿ ನಿರ್ದೇಶನಾಲಯ, ರಾಜ್ಯ ಮಟ್ಟದ ವಿಶೇಷ ತನಿಖಾ ತಂಡಗಳಿಂದ ಸಮಗ್ರ ತನಿಖೆ ನಡೆಸಬೇಕೆಂದು ಒತ್ತಾಯಿಸಿದರು.

> ಸರ್ಕಾರ ಒಂದು ಸಮುದಾಯವನ್ನು ಓಲೈಸದೆ, ಕಾನೂನು ಪಾಲಿಸುವ ಹಿಂದೂ ಕಾರ್ಯಕರ್ತರ ಮೇಲೆ ಸುಳ್ಳು ಪ್ರಕರಣಗಳನ್ನು ದಾಖಲಿಸದಂತೆ ಪೊಲೀಸರು ಹಾಗೂ ಗೃಹ ಇಲಾಖೆಗೆ ಸೂಚಿಸಬೇಕು.
>
> ■ **ಮಿಲಿಂದ್ ಜೇ ಪರಾಂಡೆ**, ವಿಶ್ವ ಹಿಂದೂ ಪರಿಷತ್ ಕೇಂದ್ರೀಯ ಸಂಘಟನಾ ಮಹಾಮಂತ್ರಿ

ಆ್ಯಂಟಿ ಹ್ಯೂಮನ್ ಟ್ರಾಫಿಕಿಂಗ್ ಘಟಕ ರಚಿಸಿ

ರಾಜ್ಯದಲ್ಲಿ ಕಳೆದ 10 ವರ್ಷಗಳಲ್ಲಿ ದಾಖಲಾದ ದೂರುಗಳನ್ನು ಪರಿಶೀಲನೆ ಮಾಡಿ ಮತಾಂತರ ಸಂಬಂಧಿತ ಕಿರುಕುಳ ಕೇಸ್‌ಗಳನ್ನು ಮರು ತನಿಖೆ ನಡೆಸಬೇಕು. ಕಾಣೆಯಾದ ಹಿಂದು ಯುವತಿಯರ ಪತ್ತೆಗಾಗಿ ವಿಶೇಷ ಆ್ಯಂಟಿ ಹ್ಯೂಮನ್ ಟ್ರಾಫಿಕಿಂಗ್ ಯೂನಿಟ್ ರಚಿಸಬೇಕು. ಸಂತ್ರಸ್ತ ಮಹಿಳೆಯರ ಗುರುತು ಗೌಪ್ಯವಾಗಿಟ್ಟು, ಉಚಿತ ಕಾನೂನು ನೆರವು, ಕೌನ್ಸಲಿಂಗ್ ಮತ್ತು ಉದ್ಯೋಗ ನೀಡಲು ಧರ್ಮರಕ್ಷಾ ನಿಧಿ ಸ್ಥಾಪಿಸಬೇಕು.

ಸುಳ್ಳು ಸುದ್ದಿಗಳಿಂದ ಆತಂಕ ಬೇಡ: ಸಿದ್ಧಾರ್ಥ ಅಗರವಾಲ್

ರಾಜ್ಯದಲ್ಲಿ ಇಂಧನ ಪೂರೈಕೆ ಸ್ಥಿರ

ಬೆಂಗಳೂರು: ಕರ್ನಾಟಕದಲ್ಲಿ ಇಂಧನ ಪೂರೈಕೆಯು ಸ್ಥಿರವಾಗಿದೆ. ಪೆಟ್ರೋಲ್, ಡೀಸೆಲ್ ಮತ್ತು ಅನಿಲದ ಕೊರತೆಯಿಲ್ಲ. ಹಾಗಾಗಿ, ಸಾರ್ವಜನಿಕರು ಸುಳ್ಳು ಸುದ್ದಿಗಳಿಂದ ಆತಂಕಕ್ಕೆ ಒಳಗಾಗಬಾರದೆಂದು ಇಂಡಿಯನ್ ಆಯಿಲ್ ಕಾರ್ಪೊರೇಷನ್ ಲಿಮಿಟೆಡ್‌ನ ಕಾರ್ಯನಿರ್ವಾಹಕ ನಿರ್ದೇಶಕ ಸಿದ್ಧಾರ್ಥ ಅಗರವಾಲ್ ತಿಳಿಸಿದ್ದಾರೆ.

ಪ್ರೆಸ್ ಇನ್ಫಾರ್ಮೇಶನ್ ಬ್ಯೂರೋ (ಪಿಐಬಿ) ತೈಲ ಮಾರುಕಟ್ಟೆ ಕಂಪನಿಗಳ ರಾಜ್ಯ ಮಟ್ಟದ ಸಂಯೋಜಕ ಇಂಡಿಯನ್ ಆಯಿಲ್ ಕಾರ್ಪೊರೇಷನ್ ಲಿಮಿಟೆಡ್‌ನೊಂದಿಗೆ ಏರ್ಪಡಿಸಿದ ಜಂಟಿ ಸುದ್ದಿಗೋಷ್ಠಿಯಲ್ಲಿ ಅವರು ಈ ಮಾಹಿತಿ ನೀಡಿದರು. ಯಾವುದೇ ಕಾರಣಕ್ಕೂ ಸಾರ್ವಜನಿಕರು ಅಧಿಕ ಬೆಲೆ ಕೊಟ್ಟು ಗ್ಯಾಸ್ ಸಿಲಿಂಡರ್ ಖರೀದಿಸುವ ಅವಶ್ಯಕತೆಯಿಲ್ಲ. ಸುಳ್ಳು ಸುದ್ದಿಗಳಿಂದ ಗ್ಯಾಸ್ ಬುಕಿಂಗ್ ಮಾಡುವವರ ಸಂಖ್ಯೆ ಹೆಚ್ಚಾಗಿದ್ದರಿಂದ ಸರಬರಾಜಿನಲ್ಲಿ ವ್ಯತ್ಯಯವಾಗಿತ್ತು. ಈಗ ಬುಕಿಂಗ್ ಮಾಡುವುದು ಇಳಿಕೆಯಾಗಿರುವುದರಿಂದ ಸರಬರಾಜು ಮೊದಲಿನ ಸ್ಥಿತಿಗೆ ಬಂದಿದೆ. ಆದ್ದರಿಂದ ಸಾರ್ವಜನಿಕರು ಆತಂಕಕ್ಕೊಳಗಾಗಬಾರದು ಎಂದು ಹೇಳಿದರು.

ರಾಜ್ಯದಲ್ಲಿ 7,593 ಇಂಧನ ಕೇಂದ್ರಗಳಿದ್ದು, ಇವುಗಳಲ್ಲಿ 2,964 ಇಂಡಿಯನ್ ಆಯಿಲ್, 1,911 ಭಾರತ್ ಪೆಟ್ರೋಲಿಯಂ ಮತ್ತು 1,722 ಹಿಂದೂಸ್ತಾನ್ ಪೆಟ್ರೋಲಿಯಂ ಹಾಗೂ ಉಳಿದಂತೆ ಖಾಸಗಿ ಕಂಪನಿಯ ಮಳಿಗೆಗಳಿವೆ. ರಾಜ್ಯದಲ್ಲಿ ಪೆಟ್ರೋಲ್, ಡೀಸೆಲ್ ಕೊರತೆಯಿಲ್ಲ, ಕರ್ನಾಟಕವು ವಾರ್ಷಿಕ 15 ಮೆಟ್ರಿಕ್ ಟನ್ ಕಚ್ಚಾ ತೈಲ ಸಂಸ್ಕರಣಾ ಘಟಕ ಹೊಂದಿದೆ. ರಾಜ್ಯದ ವಿವಿಧ ಜಿಲ್ಲೆಗಳಲ್ಲಿ 10 ಟರ್ಮಿನಲ್ ಮತ್ತು 10 ಬಲ್ಕ್ ಡಿಪೋಗಳು ಪೆಟ್ರೋಲಿಯಂ ಉತ್ಪನ್ನಗಳ ಕೊರತೆ ನೀಗಿಸುತ್ತಿವೆ ಎಂದರು. ಪಿಐಬಿ ಹೆಚ್ಚುವರಿ ಮಹಾ ನಿರ್ದೇಶಕ ಎಸ್.ಜಿ.ರವೀಂದ್ರ, ಭಾರತ್ ಪೆಟ್ರೋಲಿಯಂನ ನೀರಾ ಸಿಂಗ್ ಮತ್ತಿತರ ಹಿರಿಯ ಅಧಿಕಾರಿಗಳು ಸುದ್ದಿಗೋಷ್ಠಿಯಲ್ಲಿದ್ದರು.

ಎಲ್‌ಪಿಜಿಯಿಂದ ಪಿಎನ್‌ಜಿಗೆ ವರ್ಗಾಯಿಸಿ

ಎಲ್‌ಪಿಜಿ ಸಿಲಿಂಡರ್ ಬದಲಿಗೆ ಪೈಪ್ಡ್ ನ್ಯಾಚುರಲ್ ಗ್ಯಾಸ್ (ಪಿಎನ್‌ಜಿ)ಗೆ ವರ್ಗಾಯಿಸಿಕೊಂಡರೆ ಸಿಲಿಂಡರ್ ಸಮಸ್ಯೆ ಬಗೆಹರಿಯಲಿದೆ. ಬೆಂಗಳೂರು ಮತ್ತು ಸುತ್ತಮುತ್ತಲಿನ ನಗರಗಳಲ್ಲಿ ಪೈಪ್‌ಲೈನ್ ವ್ಯವಸ್ಥೆ ಮಾಡಲಾಗಿದೆ. ಈಗಾಗಲೇ 3 ಲಕ್ಷ ಸಂಪರ್ಕಗಳಿವೆ. ಮುಂದಿನ ಜೂನ್ ಅಂತ್ಯದ ವೇಳೆಗೆ 24 ಸಾವಿರ ಹೆಚ್ಚುವರಿ ಸಂಪರ್ಕದ ಗುರಿ ಹೊಂದಿದ್ದೇವೆ. ಎಲ್‌ಪಿಜಿಗಿಂತ ಪಿಎನ್‌ಜಿ ಹೆಚ್ಚು ಸುರಕ್ಷಿತವಾಗಿದೆ. ಖಾಲಿಯಾದಾಗ ಬುಕ್ ಮಾಡುವ ಅಗತ್ಯವಿಲ್ಲ. ಆದ್ದರಿಂದ ಸಾರ್ವಜನಿಕರು ಈ ವ್ಯವಸ್ಥೆಯನ್ನು ಪಡೆಯಲು ತೈಲ ಕಂಪನಿಗಳ ವೆಬ್‌ಸೈಟ್ ಮೂಲಕ ಆನ್‌ಲೈನ್ ಅರ್ಜಿ ಸಲ್ಲಿಸಬಹುದು ಅಥವಾ ಕಂಪನಿಯ ಕಚೇರಿಯನ್ನು ಸಂಪರ್ಕಿಸಬಹುದು ಎಂದು ಗ್ಯಾಸ್ ಅಥಾರಿಟಿ ಆಫ್ ಇಂಡಿಯಾದ ವ್ಯವಸ್ಥಾಪಕ ನಿರ್ದೇಶಕ ಸಂಜಯ್ ಕುಮಾರ್ ಸಿಂಗ್ ತಿಳಿಸಿದರು.

ಸಂಪಾದಕೀಯ

ಟ್ರಂಪ್ ದಾರ್ಷ್ಟ್ಯ: ಅಕ್ಷಮ್ಯ ಅವಹೇಳನ

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ತಮ್ಮ ಟ್ರುಥ್ ಸೋಶಿಯಲ್ ವೇದಿಕೆಯಲ್ಲಿ ಭಾರತ ಮತ್ತು ಚೀನಾವನ್ನು ನರಕ ಕೂಪ ಎಂದು ಜರಿದ ಒಬ್ಬ ಲೇಖಕನ ಹೇಳಿಕೆಯನ್ನು ಹಂಚಿಕೊಂಡಿರುವ ಘಟನೆ ತೀರಾ ಆಘಾತಕಾರಿ ಹಾಗೂ ಅಕ್ಷಮ್ಯ.

ಐದು ಸಾವಿರ ವರ್ಷಗಳ ನಾಗರಿಕ ಪರಂಪರೆಯನ್ನು ಮೈವೆತ್ತಿ ನಿಂತಿರುವ ಭಾರತವನ್ನು ನರಕ ಎಂದು ಕರೆಯುವ ಅಹಂಕಾರ ಯಾವ ನಾಚಿಕೆಗೇಡಿತನದ ಪರಮಾವಧಿ? ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವ, ನೂರ ಕೋಟಿಗೂ ಹೆಚ್ಚು ಜನಸಂಖ್ಯೆ ಹೊಂದಿದ ಈ ದೇಶ ತನ್ನ ಘನತೆ ಮತ್ತು ಆತ್ಮಾಭಿಮಾನಗಳಿಗೆ ಸಂಬಂಧಿಸಿ ಯಾರ ಅಪಮಾನವನ್ನೂ ಸಹಿಸಿಕೊಳ್ಳುವ ಅಗತ್ಯ ಇಲ್ಲ. ಅದು ಅಮೆರಿಕದ ಅಧ್ಯಕ್ಷ ಆಗಿರಲಿ, ಇನ್ನಾರೇ ಆಗಿರಲಿ.

ಇಂದು ಭಾರತ ವಿಶ್ವದ ಐದನೇ ಅತಿದೊಡ್ಡ ಆರ್ಥಿಕ ಶಕ್ತಿ. ಬಾಹ್ಯಾಕಾಶ ಕ್ಷೇತ್ರದಲ್ಲಿ, ಡಿಜಿಟಲ್ ತಂತ್ರಜ್ಞಾನದಲ್ಲಿ, ರಕ್ಷಣಾ ಸಾಮರ್ಥ್ಯದಲ್ಲಿ ಭಾರತ ವಿಶ್ವ ಮಟ್ಟದಲ್ಲಿ ತನ್ನ ಪ್ರತಿಷ್ಠೆಯನ್ನು ಗಳಿಸಿಕೊಂಡಿದೆ. ಚಂದ್ರಯಾನ, ಮಂಗಳಯಾನ, ಯುಪಿಐ ಕ್ರಾಂತಿ ಇವು ನರಕ ಕೂಪದ ಸಾಧನೆಗಳೇ? ಅಮೆರಿಕದ ಮಾಹಿತಿ ತಂತ್ರಜ್ಞಾನ ಉದ್ಯಮ ಇಂದು ನಡೆಯುತ್ತಿರುವುದೇ ಭಾರತೀಯ ಮೂಲದ ಪ್ರತಿಭಾವಂತರ ಬೆವರಿನ ಬಲದಿಂದ. ಟ್ರಂಪ್ ಬಳಸುವ ಸಾಫ್ಟ್‌ವೇರ್ ಬರೆದದ್ದು ಕೂಡ ಬಹುತೇಕ ಭಾರತೀಯ ಮೂಲದ ಎಂಜಿನಿಯರ್‌ಗಳು ಎಂಬ ವಾಸ್ತವ ಅವರಿಗೆ ಗೊತ್ತಿಲ್ಲದ್ದೇನಲ್ಲ.

ವಿವಾದ ತೀವ್ರಗೊಂಡ ನಂತರ ಟ್ರಂಪ್ ಭಾರತ ನಮ್ಮ ಅತ್ಯಂತ ಪರಮಾಪ್ತ ದೇಶ ಎಂದು ನೀಡಿದ ಸ್ಪಷ್ಟನೆ ನಿಜಕ್ಕೂ ಅಣಕದಂತಿದೆ. ಕಲ್ಲು ಹೊಡೆದು ಹಣ್ಣು ಕೊಡುವ ತರ್ಕ ಇದು. ಮೊದಲು ಅವಮಾನಿಸಿ, ಆನಂತರ ಸ್ನೇಹ ಎನ್ನುವ ಟ್ರಂಪ್ ಶೈಲಿ ಅಂತಾರಾಷ್ಟ್ರೀಯ ನೀತಿ ನಿಯಮಗಳ ಅಪಹಾಸ್ಯ. ಅಮೆರಿಕದ ಅಧ್ಯಕ್ಷ ಎಂಬ ಮಹಾನ್ ಸ್ಥಾನ ವಹಿಸಿಕೊಂಡ ವ್ಯಕ್ತಿ ಹೀಗೆ ಅಸ್ಥಿರ ಮನಸ್ಥಿತಿ ಪ್ರದರ್ಶಿಸುವುದು ಆ ಸ್ಥಾನಕ್ಕೇ ಮಾನಹಾನಿ.

ಭಾರತ ಸರ್ಕಾರ ಈ ಹೇಳಿಕೆಯನ್ನು ಕೇವಲ ಸ್ಪಷ್ಟನೆ ಸ್ವೀಕರಿಸುವ ಮೂಲಕ ಮುಗಿಸಬಾರದು. ಅಧಿಕೃತ ರಾಜತಾಂತ್ರಿಕ ಮಾರ್ಗಗಳಲ್ಲಿ ತೀಕ್ಷ್ಣ ಪ್ರತಿಭಟನೆ ದಾಖಲಾಗಲೇಬೇಕು. ಮಿತ್ರ ದೇಶಗಳ ನಡುವೆ ಗೌರವ ಇರಬೇಕಾದರೆ, ಮಾತಿನ ಮರ್ಯಾದೆಯೂ ಇರಬೇಕು. ಭಾರತ ಸ್ನೇಹಕ್ಕೆ ಬೆಲೆ ಕೊಡುವ ದೇಶ, ಆದರೆ ಆ ಸ್ನೇಹ ನಮ್ಮ ಸ್ವಾಭಿಮಾನವನ್ನು ಅಡವಿಟ್ಟ ನಂತರ ಸಿಗುವ ಕೃಪೆ ಆಗಬಾರದು.

ಟ್ರಂಪ್ ಅಥವಾ ಯಾರೇ ಆಗಲಿ ಭಾರತ ನರಕ ಕೂಪ ಅಲ್ಲ, ನರಕ ಕೂಪವಾಗಲೂ ಅಲ್ಲ, ಇದು ಅಷ್ಟೈಶ್ವರ್ಯ, ತ್ಯಾಗ, ವೈವಿಧ್ಯ ಮತ್ತು ವೈಭವಗಳ ನಾಡು. ಈ ನಾಡಿನ ಮಣ್ಣಿನ ಗಂಧ ಅರಿಯದ ಯಾರ ಮಾತಿಗೂ ನಾವು ತಲೆ ಬಾಗುವ ಅಗತ್ಯ ಇಲ್ಲ, ಅಂತಹ ಉಡಾಫೆ ಮಾತುಗಳಿಗೆ ಸಜ್ಜಾದ ಉತ್ತರ ನೀಡಬಲ್ಲ ಆತ್ಮವಿಶ್ವಾಸ ನಮಗಿದೆ, ಅದಕ್ಕೆ ತಕ್ಕ ದೃಢ ರಾಜತಾಂತ್ರಿಕ ದನಿಯನ್ನು ನಮ್ಮ ಸರ್ಕಾರ ತಕ್ಷಣ ಎತ್ತಬೇಕು.

ಸಾಗರವು ಸಂಪತ್ತಿನ ಆಗರ

ಸಾಗರ ಕಲೆ ರತ್ನಾನಿ ಕಲೆ ಜೀವಾಶ್ಚ ಶುಕ್ತಯಃ ।
ಲಬ್ಧೇಃ ಸಂಪದಪಾರಾಸ್ತಿ ಸಾ ಹಿ ಜ್ಞಾತುಂ ನ ಶಕ್ಯತೇ ॥

ಸಾಗರದಲ್ಲಿ ರತ್ನಗಳೆಷ್ಟೋ, ಜೀವಿಗಳೆಷ್ಟೋ, ಮುತ್ತಿನ ಚಿಪ್ಪುಗಳೆಷ್ಟೋ! ಸಮುದ್ರದ ಸಂಪತ್ತು ಅಪಾರ. ಅದು ಯಾರಿಂದಲೂ ತಿಳಿಯಲಾಗುವುದಿಲ್ಲ- ಎಂಬುದು ಶ್ಲೋಕಾರ್ಥ.

ಸಮುದ್ರವನ್ನು 'ರತ್ನಾಕರ' ಎಂದು ಕರೆದಿದ್ದಾರೆ. ಇದಕ್ಕೆ ಕಾರಣವಿಲ್ಲದಿಲ್ಲ, ರತ್ನಗಳ ಆಗರ, ಬಗೆಬಗೆಯ ಸಂಪತ್ತುಗಳ ಆಗರ. ವಿವಿಧ ಜೀವ ಜಂತುಗಳಿಗೆ ಆಶ್ರಯ.... ಈ ಎಲ್ಲ ವಿಶೇಷತೆಗಳಿಂದಾಗಿ ರತ್ನಾಕರ ಎಂಬುದು ಅನ್ವರ್ಥ ನಾಮವೇ ಆಗಿದೆ.

ಶ್ಲೋಕ ಸಾಗರ



ಡಾ.ಸೋಂದಾ ಭಾಸ್ಕರ ಭಟ್

ಸಾಗರದ ಉದ್ದಗಲವನ್ನು ಅರಿತವರಾರು? ಇಳಿದು ಆಳ ವನ್ನು ಕಂಡುಕೊಂಡವರಾರು? ಸಮುದ್ರ ದಾಳದಲ್ಲಿ ಏನೆಲ್ಲ ಇವೆ ಎಂಬುದನ್ನು ಪತ್ತೆ ಹಚ್ಚಿದವರಾರು? ಆದರೂ ಇದು ವರೆಗೆ ನಾವು ಕಂಡುಕೊಂಡ ಪ್ರಕಾರ ಸಂಪತ್ತಿನ ಮೂಲ ಸಾಗರ ಎಂಬುದರಲ್ಲಿ ಸಂಶಯವಿಲ್ಲ. ಸಾಗರದ ಆಳದಲ್ಲಿ ಇರುವ ರತ್ನಗಳೆಷ್ಟೋ! ಅಮೂಲ್ಯವಾದ ಬಗೆಬಗೆಯ ಹವಳಗಳೂ ಕಡಲಿನ ಬಸುರಿನಲ್ಲಿಯೇ ಇವೆ. ಇಷ್ಟೇ ಇವೆ, ಇಷ್ಟೊಂದು ಪ್ರಕಾರಗಳಿವೆ ಎಂದು ಗುರುತಿಸಿ ಹೇಳುವುದಕ್ಕೂ ಸಾಧ್ಯವಿಲ್ಲ. ಸಾಗರದ ಗರ್ಭ ಸೇರಿ ಸಂಪೂರ್ಣ ಶೋಧಿಸಿದವರಿಲ್ಲ, ಶೋಧಿಸಲೂ ಸಾಧ್ಯವಿಲ್ಲ. ಭೂಮಿಯು ರತ್ನಗರ್ಭೆಯಾಗಿ ಅಪಾರ ಸಂಪತ್ತನ್ನು ತನ್ನೊಡಲಾಳದಲ್ಲಿ ಇರಿಸಿಕೊಂಡಿರುವಾಗ ಭೂಮಿಗಿಂತಲೂ ಮೂರು ಪಾಲು ವಿಸ್ತೃತವಾಗಿರುವ ರತ್ನಾಕರನಲ್ಲಿ ಇನ್ನೆಷ್ಟಿರಬಹುದು. ನಮ್ಮ ಕಲ್ಪನೆಗೂ ನಿಲುಕದಷ್ಟು ಇಲ್ಲಿದೆ.

ಎಷ್ಟೊಂದು ಜೀವರಾಶಿಗಳು ಸಮುದ್ರದಲ್ಲಿರಬಹುದು. ಎಷ್ಟೊಂದು ಪ್ರಮಾಣದಲ್ಲಿರಬಹುದು. ಸಮುದ್ರದಲ್ಲಿ ಸಾಗಿ ಮೀನು ಹಿಡಿಯುವ ಕಾಯಕ ಇಂದು ನಿನ್ನೆಯದಲ್ಲ ಅನಾದಿ ಕಾಲದಿಂದ ಅವ್ಯಾಹತವಾಗಿ ನಡೆದು ಬಂದಿದೆ. ಇತ್ತೀಚೆಗಂತೂ ಆಧುನಿಕ ತಂತ್ರಜ್ಞಾನವನ್ನು ಬಳಸಿ ಮೀನು ಹಿಡಿಯುತ್ತಿದ್ದೇವೆ. ಇದು ಮತ್ಸ್ಯೋದ್ಯಮವಾಗಿ ಬೆಳೆದು ನಿಂತಿದೆ. ಆದರೂ ಮೀನುಗಳು ಖಾಲಿಯಾಗಿಲ್ಲ, ಅವ್ಯಾಹತವಾಗಿ ಕೆಲಸ ಸಾಗಿದೆ. ನಮಗೆ ಗೊತ್ತಿರುವುದು ಕೆಲವು ಬಗೆಯ ಕಡಲ ಜೀವಿಗಳು. ಇನ್ನೆಷ್ಟು ಬಗೆಗಳಿವೆಯೋ ಯಾರಿಗೆ ಗೊತ್ತು? ಜಲಜೀವಿಗಳು ಅಪಾರ ಎಂಬುದಂತೂ ಸತ್ಯ. ಸಾಮಾನ್ಯ ಊಹೆಗೆ ನಿಲುಕದು. ಚಿಪ್ಪುಗಳೇನು ಕಡಿಮೆಯೇ. ಸಾಗರದ ದಡದಲ್ಲಿಯೇ ಸಾಕಷ್ಟು ಚಿಪ್ಪುಗಳಿರುವಾಗ, ನಿತ್ಯವೂ ಬಂದು ಬೀಳುವಾಗ ಕಡಲಾಳದಲ್ಲಿ ಇನ್ನೆಷ್ಟಿರಬಹುದು. ಊಹಿಸಲಸಾಧ್ಯವೇ ಸರಿ. ಇಷ್ಟೇ ಅಲ್ಲ, ಆಹಾರದ ರುಚಿಗೆ ಬೇಕಾದ ಉಪ್ಪು ಉತ್ಪನ್ನವಾಗುವುದು ಸಮುದ್ರದಿಂದಲೇ. ಒಟ್ಟಿನಲ್ಲಿ ಸಾಗರದಲ್ಲಿ ಹೇರಳವಾದ ಸಂಪತ್ತಿದೆ. ನಮಗೆ ಗೊತ್ತಿರದ ಇನ್ನೂ ಕಂಡರಿಯದ ಸಂಪತ್ತುಗಳೂ ಇವೆ. ಸಮುದ್ರದ ಮಹಿಮೆಯನ್ನು ಅರಿತವರಾರು? ಸಾಗರವು ಸಂಪತ್ತಿನ ತವರು ಎಂಬುದಂತೂ ಸತ್ಯ. ಸಾಮಾನ್ಯರಿಂದ ಆರಂಭಿಸಿ ಅಸಾಮಾನ್ಯರವರೆಗೆ ಯಾರಿಂದಲೂ ಊಹಿಸಲಸಾಧ್ಯ. ಬತ್ತದ ಸಂಪತ್ತು ಸಾಗರದಲ್ಲಿದೆ. ಸಾಗರವನ್ನು ಶೋಷಿಸಿ ಸಂಪತ್ತು ಪಡೆಯುವುದು ಅಸಾಧ್ಯ. ಸಾಗರವನ್ನು ದೋಹನ ಮಾಡಬೇಕು. ವಿಶೇಷ ಎಚ್ಚರಿಕೆಯಿಂದ ಮುಂದುವರಿಯಬೇಕು. ಆಗಲೇ ಒಂದಿಷ್ಟನ್ನು ಪಡೆಯಬಹುದು. ಕೃತಯುಗದಲ್ಲಿ ಸಮುದ್ರ ಮಥನ ಮಾಡಿ ದೇವತೆಗಳು ಅಪಾರ ಸಂಪತ್ತನ್ನು ಪಡೆದರು. ಇಂದು ಮಥನ ಸಾಧ್ಯವೇ. ವಿವೇಕದ ಕಡೆಗೋಲಿನಿಂದ ಅಂತಃಸಮುದ್ರವನ್ನು ಮಥಿಸುವ ಕ್ರಿಯೆ ನಡೆಯಬೇಕು. ಆಗ ಎಲ್ಲ ಬಗೆಯ ಸಂಪತ್ತೂ ಸಿಗುತ್ತದೆ.

ಮತಗಟ್ಟೆಯ ಬಾಗಿಲು ಹೇಳುವ ಮಂಡೇಲಾ ಎಂಬ ಕಹಿಸತ್ಯ

ಉಘೇ ವೀರಭೂಮಿಗೆ

ಸಂತೋಷ್ ತಮ್ಮಯ್ಯ

santoshthammaiah@gmail.com

ಸೂರಂಗುಡಿ ಎಂಬ ತಮಿಳುನಾಡಿನ ಸಣ್ಣ ಊರು. ಅಲ್ಲಿನ ಮತದಾರರ ಸಂಖ್ಯೆ 840. ಆದರೆ ಸಾಮಾಜಿಕವಾಗಿ ಸೂರಂಗುಡಿ ವಿಲಕ್ಷಣವಾಗಿ ವಿಭಜನೆಯಾಗಿದೆ. ಗ್ರಾಮ ಪ್ರಮುಖ ಅದೇ ಊರಿನ ಎರಡು ಜಾತಿಗಳಿಂದ ಹೆಣ್ಣುತಂದು ಮದುವೆಯಾಗಿದ್ದಾನೆ! ಸವತಿಯರ ನಡುವೆ ಮನೆಯಲ್ಲಿ ಜಗಳಗಳು ನಡೆಯುತ್ತವೆ. ಇಬ್ಬರ ಮಕ್ಕಳೂ ಬೆಳೆದಿದ್ದಾರೆ. ಜೊತೆಗೆ ದ್ವೇಷವೂ ಬೆಳೆದು ಊರಿಗೆ ವ್ಯಾಪಿಸಿದೆ. ಸೂರಂಗುಡಿಯ ವಿಲಕ್ಷಣತೆ ಇಷ್ಟಕ್ಕೇ ನಿಲ್ಲುವುದಿಲ್ಲ, ಇಡೀ ಊರು ಉತ್ತರ ಮತ್ತು ದಕ್ಷಿಣ ಎಂದು ಬಣಗಳಾಗಿದೆ. ಉತ್ತರದ ಬಣಕ್ಕೆ ಹಿರಿಯ ಪತ್ನಿಯ ಮಗ ರತ್ನಂ ನಾಯಕನಾದರೆ ದಕ್ಷಿಣದ ಬಣಕ್ಕೆ ಕಿರಿಯ ಪತ್ನಿಯ ಮಗ ಮತಿ ನಾಯಕ. ತವರು ಬಣಕ್ಕಾಗಿ ಮನೆಯಲ್ಲಿ ನಿತ್ಯ ನಡೆಯುವ ಜಗಳದಿಂದ ಊರ ಪ್ರಮುಖ ಸಾಕಷ್ಟು ಬಸವಳಿದಿದ್ದರೂ ಇನ್ನೂ ಬಲಿಷ್ಠನಾಗಿದ್ದಾನೆ.

ಆಗಾಗ ಹೊಡೆದಾಟ ನಡೆಯುವ ಸೂರಂಗುಡಿಗಿನ್ನೂ ಅಭಿವೃದ್ಧಿ ಪ್ರವೇಶವಾಗಿಲ್ಲ. ಆದರೆ ಕ್ಷೇತ್ರದ ಶಾಸಕನ ಮಾತು ಎರಡೂ ಬಣಗಳಲ್ಲಿ ನಡೆಯುತ್ತದೆ. ಆತ ಯೋಜನೆಗಳನ್ನು ತಂದರೂ ಅದರ ಲಾಭ ಪಡೆಯಲು ಎರಡೂ ಬಣಗಳು ಹೊಡೆದಾಡಿಕೊಳ್ಳುತ್ತದೆ. ಒಮ್ಮೆಯಂತೂ ಶೌಚಾಲಯದ ಉದ್ಘಾಟನೆ ವಿಚಾರಕ್ಕೆ ಆರಂಭವಾದ ಜಗಳ ಶೌಚಾಲಯವನ್ನೇ ಒಡೆಯುವಲ್ಲಿ ಕೊನೆಯಾಯಿತು. ಹಾಗಾಗಿ ಇಡೀ ಊರಿನಲ್ಲಿ ಶೌಚಾಲಯವಿಲ್ಲ. ಹೀಗಿದ್ದಾಗಲೇ ಒಮ್ಮೆ ಪಂಚಾಯತ್ ಚುನಾವಣೆ ಬರುತ್ತದೆ. ಅಭ್ಯರ್ಥಿಯ ಆಯ್ಕೆಯ ಪ್ರಶ್ನೆ ಪ್ರಮುಖನ ಮುಂದೆ ಬರುತ್ತದೆ. ಪ್ರಮುಖ, ಇಬ್ಬರು ಮಕ್ಕಳಿಗೂ ಸ್ಪರ್ಧಿಸಬಾರದೆಂದು ಕಟ್ಟಪ್ಪಣೆ ಕೊಡುತ್ತಾನೆ. ಆದರೆ ಇಬ್ಬರೂ ತಾಯಂದಿರ ಚಿತಾವಣೆಯಿಂದ ಸ್ಪರ್ಧೆಗಿಳಿಯುತ್ತಾರೆ. ಮುಂದೆ ಸೂರಂಗುಡಿ ಹೇಗೆ ರಂಗೇರುತ್ತದೆ ಎಂಬುದು ಅಸಲಿ ಕಥೆ.

ಎರಡೂ ಬಣಗಳು ಮತದಾರರ ಪಟ್ಟಿಯನ್ನಿಟ್ಟು ಲೆಕ್ಕಾಚಾರ ಹಾಕುತ್ತವೆ. ಹೇಗೆ ಲೆಕ್ಕ ಹಾಕಿದರೂ ವೋಟುಗಳು 50:50ಯಾಗಿಯೇ ಬರುತ್ತದೆ. ಊರ ಪ್ರಮುಖನಂತೂ ತಾನು ವೋಟು ಹಾಕಲಾರೆ ಎಂದಿರುತ್ತಾನೆ. ಕೊನೆಗೂ ಹಲವು ವರ್ಷಗಳಿಂದ ರೋಗಹಿಡಿದು ಮಲಗಿದ್ದ 90 ವರ್ಷದ ಮುದುಕಿಯೊಬ್ಬಳು ಸಿಗುತ್ತಾಳೆ. ಆದರೆ ಮುದುಕಿ ತಾನು ವೋಟು ಹಾಕುವುದಿದ್ದರೆ ಎಂಜಿಆರ್‌ಗೆ ಮಾತ್ರ ಎಂದು ಹಠ ಹಿಡಿಯುತ್ತಾಳೆ. "ಎಂಜಿಆರ್ ಸತ್ತು 30 ವರ್ಷವಾಯ್ತಲ್ಲಜ್ಜಿ" ಎಂದಾಗ ಆಘಾತಕ್ಕೊಳಗಾದ ಅಜ್ಜಿ "ಎಂಜಿಆರ್ ಸತ್ತ್‌ಬ್ಟಾರಾ?" ಎನ್ನುತ್ತಲೇ ಪ್ರಾಣ ಬಿಡುತ್ತಾಳೆ. ಅಲ್ಲಿಗೆ ವೋಟುಗಳು ಮತ್ತೆ ಫಿಫ್ಟಿಫಿಫ್ಟಿ. ಒಂದು ವೋಟಿಗಾಗಿ ಮತ್ತೆ ಅಲೆದಾಟ, ಬಣಗಳ ಮೇಲಾಟ.

ಸೂರಂಗುಡಿಯಲ್ಲೊಬ್ಬ ಹೆಸರೇ ಇಲ್ಲದ ಕ್ಷೌರಿಕ. ಆತ ತನ್ನನ್ನು 'ಸ್ಮೈಲ್' ಎಂದು ಕರೆದುಕೊಂಡರೂ ಊರಿನವರ ಪಾಲಿಗಾತ ಸೊಟ್ಟಮೂತಿ, ಹ್ಯಾಪ. ಸೂರಗುಂಡಿಯ ಪೋಸ್ಟಾಫೀಸಿಗೆ ಹೊಸದಾಗಿ ಬಂದ ತೇನ್ಮೊಳಿ ಎಂಬ ಅಂಚೆಯಕ್ಕನಿಗೆ ಸ್ವಾಭಿಮಾನಹೀನನಾಗಿ ಬದುಕುತ್ತಿರುವ ಆತನ ಮೇಲೇನೋ ಕರುಣೆ. ಆಕೆ ಆತನಿಗೆ 'ನೆಲ್ಸನ್ ಮಂಡೇಲಾ' ಎಂದು ಹೊಸ ಹೆಸರನ್ನಿಟ್ಟು ಪೋಸ್ಟಾಫೀಸಿನ ಖಾತೆ ಮಾಡಿಸಿಕೊಡುತ್ತಾಳೆ. ವೋಟರ್ ಗುರುತಿನ ಚೀಟಿಗೂ ಅರ್ಜಿ ಹಾಕಿಸಿರುತ್ತಾಳೆ. ಶನಿಶನಿ ಎಂಬಂತೆ ಸೂರಂಗುಡಿಯ ಬಣಗಳು ಒಂದು ವೋಟಿಗಾಗಿ ಹುಡುಕುತ್ತಿದ್ದಾಗಲೇ ಮಂಡೇಲಾನಿಗೆ ಗುರುತಿನ ಚೀಟಿ ಕೈಸೇರುತ್ತದೆ. ಜಿದ್ದಾಜಿದ್ದಿನ ಕಣ. ಅದರಲ್ಲೂ ಒಂದು ವೋಟಿನ ಪ್ರಶ್ನೆ. ಕೆಲವೇ ದಿನಗಳ ಮುನ್ನ ಜಾತಿಯಿಂದ, ಹೆಸರಿನಿಂದ ಹಂಗಿಸುತ್ತಿದ್ದವರಿಗೀಗ ಮಂಡೇಲಾ ಬೆಲೆಬಾಳುವ ರತ್ನವಾದ. ಎರಡು ಬಣಗಳೂ ಆತನ ವೋಟನ್ನು ಖರೀದಿಸಲು ಪೈಪೋಟಿಗಿಳಿದರು. ಆತನ ಸ್ಥಾನ ಬದಲಾಯಿತು. ಮನೆಮನೆಗೆ ತೆರಳಿ ಕ್ಷೌರ ಮಾಡುತ್ತಿದ್ದವನಿಗೆ ಅಂಗಡಿ ಮಾಡಿಕೊಡಲಾಯಿತು. ಹೊತ್ತುಹೊತ್ತಿಗೆ ಬಾಡೂಟ ಬಂತು. ಕಪ್ಪು ಕನ್ನಡಕ ಬಂತು. ಕೊನೆಗೆ ಎರಡು ಬಣಗಳೂ ಆತನ ವೋಟನ್ನು ಹರಾಜಿಗೆ ಹಾಕಿ ಖರೀದಿಸಲು ಇಳಿದರು! ಕೊನೆಗೆ ಮಂಡೇಲಾನ ಒಂದು ವೋಟು ಒಂದು ಕೋಟಿ ಇಪ್ಪತ್ತೈದು ಲಕ್ಷ ರೂಪಾಯಿಗೆ ಹರಾಜಾಯಿತು.

ಇದು 2021ರಲ್ಲಿ ಬಿಡುಗಡೆಯಾದ 'ಮಂಡೇಲಾ' ಎಂಬ ತಮಿಳು ಸಿನಿಮಾದ ಕಥಾ ಹಂದರ. ಹಾಗಾದರೆ ಇದು ಕಲ್ಪಿತ ಕಥೆಯೇ ಎಂದರೆ ಹಾಗೂ ಇಲ್ಲ. ಏಕೆಂದರೆ ಇಂಥವು ಚುನಾವಣೆಗಳಲ್ಲಿ ನಡೆದಿವೆ. ಹೆಚ್ಚು ಕಡಿಮೆ ಇಂಥ ಮೇಲಾಟಗಳು ಕರ್ನಾಟಕದಲ್ಲೇ ನಡೆದಿವೆ. ತಮಿಳುನಾಡಿನ ಜನ ಕೂಡ ಸಿನಿಮಾ ನೋಡಿ ಇದರಲ್ಲಿ ಅಚ್ಚರಿಯೇನಿಲ್ಲ ಎಂದೇ ಭಾವಿಸಿದರು. ಇನ್ನೊಂದು ಆಶ್ಚರ್ಯವೆಂದರೆ ಸಿನಿಮಾದಲ್ಲಿ ಉಲ್ಲೇಖಿತ ಸೂರಂಗುಡಿ ಎಂಬ ಗ್ರಾಮ ತೂತ್ತುಕುಡಿ ಜಿಲ್ಲೆಯಲ್ಲಿದೆ. ಆ ಗ್ರಾಮದ ಜನರಿಗೂ ಸಿನಿಮಾ ನೋಡಿ ಮಾಡಬಾರದ್ದೇನೂ ಮಾಡಿಲ್ಲವೆಂದೇ ಅನಿಸಿತು. ಏಕೆಂದರೆ ಸೂರಂಗುಡಿಯಂತೆ ತಮಿಳುನಾಡಿನ ಎಲ್ಲಾ ಗ್ರಾಮಗಳಲ್ಲೂ ಇದರಪ್ಪನಂಥಾ ರಾಜಕೀಯದಾಟಗಳು, ನಾಟಕೀಯ ಘಟನೆಗಳು, ರೋಚಕ ಪ್ರಕರಣಗಳು ಪ್ರತೀ ಚುನಾವಣೆಯಲ್ಲೂ ನಡೆದಿದ್ದವು. ದೇಶದ ಉಳಿದ ರಾಜ್ಯಗಳಲ್ಲಿ ನಡೆಯುವ ಚುನಾವಣೆಗಳದ್ದು ಒಂದು ತೂಕವಾದರೆ ತಮಿಳುನಾಡಿನ ಚುನಾವಣಾ ಕಣದ್ದು ಬೇರೆಯದ್ದೇ ತೂಕ. ಹೇಗೆ ಪ.ಬಂಗಾಳ ಬಂದು-ಹರತಾಳಗಳಲ್ಲಿ ಬೆಂಕಿಹಚ್ಚುವುದನ್ನು ದೇಶಕ್ಕೆ ಕಲಿಸಿತೋ ಹಾಗೆ ತಮಿಳುನಾಡು ಚುನಾವಣೆಯ ಹೊಸ ಮಾದರಿಯೊಂದನ್ನು ದೇಶಕ್ಕೆ ಕಲಿಸಿದೆ. ಇಂದಿನ ಸ್ಟಾರ್ ಪ್ರಚಾರಕರಿಂದ ಹಿಡಿದು ಹಣ-ಹೆಂಡ ಹಂಚುವ ಪದ್ಧತಿಯನ್ನು ಮೊದಲು ಅನುಸರಿಸಿದ್ದೇ ತಮಿಳುನಾಡು.



ಅಂಥ ತಮಿಳುನಾಡಿನಲ್ಲಿ ನಿನ್ನೆ ವಿಧಾನಸಭಾ ಚುನಾವಣೆ ನಡೆದಿದೆ. ನಿಸಂಶಯವಾಗಿ ಪ್ರತೀ ಗ್ರಾಮದಲ್ಲೂ ಇಂಥ ಅಥವಾ ಇದಕ್ಕಿಂತ ರೋಚಕ ಪ್ರಕರಣಗಳು ನಡೆದಿರುತ್ತವೆ. ಏಕೆಂದರೆ ಇಡೀ ದೇಶದಲ್ಲಿ ಒಳಲೆಕ್ಕದಲ್ಲಿ ಅತಿ ಹೆಚ್ಚು ವೆಚ್ಚ ಮಾಡಿ ಚುನಾವಣೆ ನಡೆಯುವ ರಾಜ್ಯವೆಂದರೆ ತಮಿಳುನಾಡು. ಕರ್ಚಿನ ಎಲ್ಲಾ ದಾರಿಗಳನ್ನು ತಮಿಳುನಾಡು ಹುಡುಕಿ ಮತ್ತು ಪ್ರಯೋಗ ಮಾಡುತ್ತದೆ. ಪ್ರತಿ ಅಭ್ಯರ್ಥಿ ಅಲ್ಲಿ ಹಣದ ಹೊಳೆಯನ್ನೇ ಹರಿಸುತ್ತಾನೆ. ಹಣದ ಹೊಳೆ ಹರಿಸಲಾಗದವ ಅಲ್ಲಿ ಅಭ್ಯರ್ಥಿಯಾಗಲಾರ. ತಮಿಳು ಅಸ್ಮಿತೆ, ಜಾತಿ ಮುಂತಾದ ಯಾವುದೇ ಕಾರಣಗಳಿದ್ದರೂ ತಮಿಳುನಾಡಿನಲ್ಲಿ ಹಣದ ಮುಂದೆ ಅವೇನೂ ಪ್ರಮುಖವಲ್ಲ. ಈ ಚುನಾವಣಾ ಕಣವನ್ನೇ ಗಮನಿಸಿದರೆ ಅಲ್ಲಿ ಕೂಡ ಅದೇ ಕಾಣಿಸುತ್ತದೆ. ಪ್ರಮುಖ ಪಕ್ಷಗಳ ಅಭ್ಯರ್ಥಿಗಳ ಘೋಷಿತ ಆದಾಯ ಬಹುಕೋಟಿ ಲೆಕ್ಕದಲ್ಲೇ ಇದೆ. ಏಕೆಂದರೆ ಗೆಲ್ಲುವ ಅಭ್ಯರ್ಥಿಗಳು ಅಲ್ಲಿ ಕಡ್ಡಾಯವಾಗಿ ಶ್ರೀಮಂತನಾಗಿಯೇ ಇರಬೇಕು. ಹಣವಿಲ್ಲದ ಅಭ್ಯರ್ಥಿಗೆ ಅಲ್ಲಿ ಬಿಜೆಪಿ, ಪಕ್ಷೇತರ ಬಣವೇ ಗತಿ. ಕೆಲವೇ ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದರೂ ಕೆಲವು ಕಮ್ಯುನಿಸ್ಟ್ ಅಭ್ಯರ್ಥಿಗಳು ಕೂಡ ಕೋಟಿಗಟ್ಟಲೆ ಆಸ್ತಿಯನ್ನು ಘೋಷಿಸಿಕೊಂಡಿರುವುದು ಮತ್ತೊಂದು ಘೋರ ವಿಡಂಬನೆ.

ಚುನಾವಣೆ ಬಿರುಸು ಪಡೆದುಕೊಂಡ ದಿನದಿಂದ ಚುನಾವಣಾ ದಿನದವರೆಗೆ ತಮಿಳುನಾಡಿನಲ್ಲಿ 1262 ಕೋಟಿ ಬೆಲೆಯ ಮದ್ಯ, ಚಿನ್ನ ಮತ್ತು ಮಾದಕ ವಸ್ತುಗಳನ್ನು ಜಪ್ತಿ ಮಾಡಲಾಗಿದೆ. ಇದರಲ್ಲಿ 543 ಕೋಟಿ ನಗದು. ತಮಿಳುನಾಡಿನ ರಾಜಕೀಯವನ್ನು ಬಲ್ಲವರಿಗೆ ಅಭ್ಯರ್ಥಿಗಳು ಘೋಷಿಸಿಕೊಂಡ ಆಸ್ತಿಯ ಮೌಲ್ಯದಲ್ಲೇ ಸುಳ್ಳಿದೆ ಎಂಬುದು ತಿಳಿದಿದೆ. ಟಿವಿಕೆ ಅಭ್ಯರ್ಥಿ ವಿಜಯ್ ಜೋಸೆಫ್ ತನ್ನ ಆಸ್ತಿ 624 ಕೋಟಿ ಎಂದು ಘೋಷಿಸಿಕೊಂಡಿದ್ದಾರೆ. ಸ್ವತಃ ಅವರ ಅಭಿಮಾನಿಗಳೇ ಇದನ್ನು ಒಪ್ಪಲಾರರು. ವಿಜಯ್ ಹಿಂದಿನ ದೊಡ್ಡ ಆರ್ಥಿಕ ಶಕ್ತಿಯಾಗಿರುವ ಮತ್ತೊಬ್ಬ ಟಿವಿಕೆ ಅಭ್ಯರ್ಥಿ ಆಧವ್ ಅರ್ಜುನ್ ಘೋಷಿತ ಆಸ್ತಿ ಕೇವಲ 197 ಕೋಟಿ. ಇದು ಸುಳ್ಳೆಂಬುದು ಪ್ರತಿ ತಮಿಳನಿಗೂ ತಿಳಿದಿದೆ. ಇದಕ್ಕಿಂತ ತಮಾಷೆಯೆಂದರೆ ಲಾಲ್ಗುಡಿ ಕ್ಷೇತ್ರದ ಎಐಎಡಿಎಂಕೆ ಅಭ್ಯರ್ಥಿ ಲೀಮಾ ರೋಸ್ ಮಾರ್ಟಿನ್ ಅವರ ಘೋಷಿತ ಆದಾಯ 1049 ಕೋಟಿ. ಇದು ಕೂಡ ತಮಿಳುನಾಡಿಗೆ ಸುಳ್ಳೆಂದು ತಿಳಿದಿದೆ. ತಿರುವಣ್ಣಾಮಲೈ ಕ್ಷೇತ್ರದ ಡಿಎಂಕೆ ಅಭ್ಯರ್ಥಿ ವೇಲು ಅವರ ಘೋಷಿತ ಆದಾಯ 23 ಕೋಟಿ!

ಅಣ್ಣಾಮಲೈ ಪ್ರಕಾರ ವೇಲು ಅವರ ಆದಾಯ 10 ಸಾವಿರ ಕೋಟಿಗೂ ಅಧಿಕ. ಅಂದರೆ ಘೋಷಿತ ಆದಾಯಕ್ಕೂ ವಾಸ್ತವಕ್ಕೂ ಅಜಗಜಾಂತರ ವ್ಯತ್ಯಾಸ. ಹೇಗೆ ಮಂಡೇಲಾ ಸಿನಿಮಾದಲ್ಲಿ ಒಂದು ಮತಕ್ಕೆ ಕೋಟಿ ಹರಾಜು ಕೂಗಿದವರು ತಮ್ಮ ಆದಾಯವನ್ನು 50 ಸಾವಿರ ಎಂದು ಘೋಷಿಸಿದ್ದರೋ ಹಾಗೆಯೇ ವಾಸ್ತವ ಪರಿಸ್ಥಿತಿ ಕೂಡ. ಹಲವು ದಶಕಗಳಿಂದಲೂ ತಮಿಳುನಾಡಿನ ಚುನಾವಣೆಗಳು ಹೀಗೆಯೇ ನಡೆಯುತ್ತಿವೆ. ಹಣದ ರುಚಿ ಮತದಾರರಿಗೂ ಹತ್ತಿದೆ. ಪ್ರಚಾರದಲ್ಲಿ ಪ್ರತೀ ಊರುಗಳಲ್ಲೂ ಪೆಂಡಾಲುಗಳೇಳುತ್ತವೆ. ಅಲ್ಲಿ ಭೂರಿ ಭೋಜನ ಮತ್ತು ಮದ್ಯದ ಅಭಿಷೇಕ ನಡೆಯುತ್ತದೆ.

ಬಹುತೇಕ ಎಲ್ಲಾ ಪಕ್ಷಗಳ ಪೆಂಡಾಲುಗಳೂ ಇರುತ್ತವೆ. ಪೆಂಡಾಲುಗಳಿಂದಲೇ ಮತಗಟ್ಟೆಗೆ ಸಾಗಿಸುವ ಸಂಪ್ರದಾಯ ಮತ್ತು ಸ್ಟೀಲ್ ಪಾತ್ರೆಗಳಿಂದ ಚಿನ್ನದ ಸರಗಳವರೆಗೆ ಉಡುಗೊರೆ ನೀಡುವ ತಂತ್ರವನ್ನು ತಮಿಳುನಾಡು ಸಾಕಷ್ಟು ಹಿಂದೆಯೇ ಕಂಡುಕೊಂಡಿದೆ. ಇದನ್ನು ಪ್ರಜಾಪ್ರಭುತ್ವದ ಅಣಕ, ಎಲ್ಲಾ ಕಡೆಯೂ ಹೀಗಿರಲಾರದು ಎಂದೆಷ್ಟೇ ಹೇಳಿದರೂ ವಾಸ್ತವ ಸಿನಿಮಾ ಕಥೆಯಂತೆಯೇ ಇದೆ. ಸೂಕ್ಷ್ಮವಾಗಿ ಅವಲೋಕಿಸುತ್ತಾ ಹೋದರೆ ತಮಿಳುನಾಡಿನ ಚುನಾವಣೆ ಎಂದರೆ ತಮಿಳು ಸಿನಿಮಾಗಳಷ್ಟೇ ರೋಚಕವಾಗಿ ಕಾಣದಿರದು. ವೇದಿಕೆಗಳಲ್ಲಿ ಪುಂಖಾನುಪುಂಖವಾಗಿ ಮೊಳಗುವ ಭಾಷಣಗಳು, ನೆರೆದ ಜನಸ್ತೋಮದ ಉತ್ಸಾಹ ಸಾಮಾನ್ಯ ಎಲ್ಲಾ ಪಕ್ಷಗಳ ರ್‍ಯಾಲಿಗಳ ಸಾಮಾನ್ಯ ದೃಶ್ಯ. ಅದನ್ನೇ ನಂಬಿ ಪಕ್ಷಗಳ ನಿಲುವುಗಳನ್ನು ಅರಿತರೆ ಮೂರ್ಖ ವಿಮರ್ಶಕರಾದಂತೆಯೇ ಸರಿ. ಹಣ ಹರಿಸಲು ಪಕ್ಷಗಳು ಅಲ್ಲಿ ಎಂತೆಂಥ ಸೃಜನಾತ್ಮಕ ದಾರಿಗಳನ್ನು ಹುಡುಕುತ್ತಾರೆಂಬುದು ಕೂಡ ಅಧ್ಯಯನದ ಸಂಗತಿ. ಚುನಾವಣಾ ಪ್ರಚಾರಾರ್ಥ ಭೋಜನಕೂಟ ಇತ್ತೆಂದರೆ ಎಲೆಯಡಿಯಲ್ಲಿ ನೋಟಿದೆಯೆಂದೂ, ಕರಪತ್ರದೊಂದಿಗೆ 20ರ ನೋಟಿದೆಯೆಂದರೆ ಅದೇ ಟೋಕನ್ ಎಂದೇ ಅರ್ಥ!

ಇವೆಲ್ಲವೂ ತಮಿಳುನಾಡಿಗೆ ತೀರಾ ಸಾಮಾನ್ಯ ಸಂಗತಿಗಳು. ಆದರೆ ಇವೆಲ್ಲದರ ಹೊರತಾಗಿಯೂ ತಮಿಳುನಾಡಿನ ಮತದಾರ ಬುದ್ಧಿವಂತನಿದ್ದಾನೆ. ಎಲ್ಲಾ ಪಕ್ಷಗಳಿಂದ ಹಣ ಪಡೆಯಬೇಕೆಂದು ಹಂಬಲಿಸಿದರೂ ಆತ ನಿತ್ಯದ ಆಗುಹೋಗುಗಳ ಬಗೆಗೆ ಜಾಗೃತನಾಗಿರುತ್ತಾನೆ ಎಂಬುದನ್ನು ಹಲವು ಚುನಾವಣೆಗಳ ಫಲಿತಾಂಶಗಳು ತೋರಿಸಿಕೊಟ್ಟಿವೆ. ಅವರು ರಂಗೋಲಿ ಕೆಳಗೆ ತೂರಬಲ್ಲ ಚಾಣಾಕ್ಷ್ಯರು. ಹಾಗಾಗಿ ನಿನ್ನೆ ನಡೆದ ಚುನಾವಣೆಯಲ್ಲಿ ಸಿದ್ಧಾಂತದ ಪ್ರಮಾಣ ಎಷ್ಟೆಂದರೆ ತಿರುಚ್ಚಿಯಲ್ಲೆಲ್ಲೋ ಅಣ್ಣಾಮಲೈ ಕಾಮರಾಜರ್ ಅವರನ್ನು ಉಲ್ಲೇಖಿಸಿದ್ದರಲ್ಲಾ, ಅಷ್ಟೇ. ಉಳಿದಂತೆ ಮಂಡೇಲಾ ಸಿನಿಮಾದಲ್ಲಿ ಮತ ಖರೀದಿಯ ಮುಂದೆ ಮೌಲ್ಯಗಳು ಹೇಗೆ ಮಕಾಡೆ ಮಲಗಿತ್ತೋ ಹಾಗೆ ನಿನ್ನೆಯ ಚುನಾವಣೆಯಲ್ಲೂ ಪಕ್ಷಗಳಿಗೆ ಸಿದ್ಧಾಂತ ಪುಣ್ಣಾಕ್ಕು ಮಾತ್ರ.

◆

ಲವ್ ಜಿಹಾದ್‌ಗೂ ಬರಲಿ 'ಮಿ ಟೂ' ಹೋರಾಟ

ಪೃಥ್ವಿರಾಜ್ ಕುಲಕರ್ಣಿ

90ರ ದಶಕದಲ್ಲಿ ಅಮೆರಿಕದ ಸಿನಿಮಾ, ಮಾಧ್ಯಮ ಮತ್ತು ಕಾರ್ಪೊರೇಟ್ ಮುಂತಾದ ಕ್ಷೇತ್ರಗಳಲ್ಲಿ ಅಧಿಕಾರವನ್ನು ಬಳಸಿ ಮಹಿಳೆಯರ ಮೇಲೆ ಲೈಂಗಿಕ ಕಿರುಕುಳ ನಡೆಯುತ್ತಿವೆ ಎಂಬ ಮಾತುಗಳು ಕೇಳಿಬಂದವು. ಇದಕ್ಕೆ ಸಂಬಂಧಿಸಿ ಹತ್ತಾರು ಕೇಸುಗಳು ನಡೆದು ಅಲ್ಲೇ ನಿಂತವು. ಪ್ರಕರಣವನ್ನು ಹೊರತರಲು ದೊಡ್ಡ ಧ್ವನಿ ಹೊರಡಲೇ ಇಲ್ಲ. ಇನ್ನೊಂದೆಡೆ ಯಾರೋ ಹೇಳುವ ಕತೆಗಳನ್ನು ನಂಬುವ ಮನಸ್ಥಿಯೂ ಜನರಲ್ಲಿ ಇರಲಿಲ್ಲ. ಒಂದುವೇಳೆ ಇದ್ದಿದ್ದಾದರೂ ಅದನ್ನು ತಳ್ಳಿ ಹಾಕಲು ದೊಡ್ಡ ಕೈಗಳು ಮುಂದಾಗುತ್ತಿದ್ದವು. ಅದಕ್ಕಿಂತ ಹೆಚ್ಚಾಗಿ ದಬ್ಬಾಳಿಕೆಗೆ ತುತ್ತಾದ ಮಹಿಳೆಯರು ನನಗೆ ಹೀಗಾಗಿದೆ ಎಂದು ಹೇಳಲು ಮುಂದೆ ಬರಲಿಲ್ಲ. ಇದೇ ಸಮಯದಲ್ಲಿ ಅಮೆರಿಕದ ಸಾಮಾಜಿಕ ಕಾರ್ಯಕರ್ತೆ ತರಾನಾ ಬರ್ಕ್ ಎಂಬುವವರು ಚಳುವಳಿ ಹುಟ್ಟುಹಾಕಿದರು. ಅಮೆರಿಕ ಸೇರಿದಂತೆ ಹತ್ತಾರು ದೇಶಗಳಲ್ಲಿ ನೂರಾರು ಮಹಿಳೆಯರೊಂದಿಗೆ ನಡೆದ ದೌರ್ಜನ್ಯ ಬಗೆಗಿನ ದುರಂತ ಕಥೆಗಳು ಮುಂದೆ ಬಂದವು. ದೌರ್ಜನ್ಯಕ್ಕೊಳಗಾದ ನೂರಾರು ಮಹಿಳೆಯರು ಭಯದಿಂದ ಹೊರಬಂದು ತಮಗಾದ ದೌರ್ಜನ್ಯದ ಬಗ್ಗೆ ಮುಕ್ತವಾಗಿ ಹೇಳತೊಡಗಿದರು. ಸಾಮಾಜಿಕ ಜಾಲತಾಣದಲ್ಲಿ ದೊಡ್ಡ ಕ್ರಾಂತಿಯಾಯಿತು. ಜನರು ನಂಬಿದರು. ದೊಡ್ಡ ದೊಡ್ಡ ಹೆಸರುಗಳು ಹೊರಬಂದವು. ಊಹಿಸಲಾಗದ ಜನರು ಕಟಕಟೆಯಲ್ಲಿ ನಿಂತರು. ಚಳುವಳಿ ಹೊಸ ರೂಪ ತೆಗೆದುಕೊಂಡಿತು. 2006ರಲ್ಲಿ ಅದು 'ಮಿ-ಟೂ' ಎಂಬ ಹೆಸರು ಪಡೆಯಿತು. ಅದು ಸಾವಿರಾರು ಮಹಿಳೆಯರಿಗೆ ಪ್ರೇರಣೆ ನೀಡಿತು. ಅಂತಹದ್ದೇ ಚಳುವಳಿ ಭಾರತದಲ್ಲಿ ಲವ್ ಜಿಹಾದ್ ಮತ್ತು ಮತಾಂತರ ವಿಚಾರದಲ್ಲಿ ಮತ್ತೊಮ್ಮೆ ಆಗಬೇಕಿದೆ.

ನಾಸಿಕ್‌ನ ಟಿಸಿಎಸ್ ಕಂಪೆನಿಯಲ್ಲಿ ಇತ್ತೀಚೆಗೆ ನಡೆದ ಘಟನೆ ಚರ್ಚೆ ಮಾಡಲೇಬೇಕಾದ ವಿಷಯ. ಏಪ್ರಿಲ್ ಮೊದಲ ವಾರಾಂತ್ಯದಲ್ಲಿ ಏಳು ಜನ ಮಹಿಳಾ ಪೊಲೀಸ್ ಸಿಬ್ಬಂದಿ ಕಂಪೆನಿಗೆ ಗುಪ್ತ ಕಾರ್ಯಾಚರಣೆ ಮಾಡುವುದಕ್ಕೆ ತೆರಳಿದರು. ಟಿಸಿಎಸ್‌ನ ಉನ್ನತ ಹುದ್ದೆಯಲ್ಲಿದ್ದ ಸುಮಾರು ಆರು ಜನ ಮುಸ್ಲಿಂ ಸಿಬ್ಬಂದಿ ಮೇಲೆ ಕಣ್ಣಿಡಲಾಯಿತು. ಆಫೀಸಿನ ಸಮಯದಲ್ಲಿ ಅದೇ ಆರು ಸಿಬ್ಬಂದಿಯಿಂದ ಅಲ್ಲಿನ ಹೆಣ್ಣುಮಕ್ಕಳ ಮೇಲೆ ಮಾಡಿದ ಲೈಂಗಿಕ ದೌರ್ಜನ್ಯವನ್ನು ಪ್ರತ್ಯಕ್ಷವಾಗಿ ಕಂಡ ಮಹಿಳಾ ಪೊಲೀಸರು ಪ್ರಕರಣ ದಾಖಲಿಸಿದರು. ಅದು ಲೈಂಗಿಕ ಕಿರುಕುಳ ಮತ್ತು ದೌರ್ಜನ್ಯದ ದಿಕ್ಕು ಪಡೆಯಿತು. ಕೇಸು ದಾಖಲಾಗಿದೆ ಎಂಬ ವಿಚಾರ ಬಹಿರಂಗವಾದಂತೆ ಮತ್ತೋರ್ವ ಮಹಿಳೆ ಪೊಲೀಸ್ ಠಾಣೆ ಹತ್ತಿದರು. ಅವರ ಮೂಲಕ ಟಿಸಿಎಸ್‌ನಲ್ಲಿ ಮುಸ್ಲಿಮರ ತಂಡವೊಂದು ಮತಾಂತರಗೊಳ್ಳುವುದಕ್ಕೆ ಕಿರುಕುಳ ನೀಡುತ್ತಿದೆ ಎಂಬ ಆತಂಕಕಾರಿ ಮಾಹಿತಿ ಹೊರಬಿತ್ತು. ಪ್ರಕರಣ ತೀವ್ರತೆ ಪಡೆದುಕೊಂಡಿತು. ನಂತರ ಅನೇಕ ಮಹಿಳೆಯರು ಠಾಣೆ ಹತ್ತಿದರು. ಅಲ್ಲೇ ಟಿಸಿಎಸ್‌ನಲ್ಲೇ ಒಟ್ಟು 6 ಜನರ ಮೇಲೆ 9 ಪ್ರಕರಣಗಳು ದಾಖಲಾದವು. 2022ರಿಂದ ಇಲ್ಲಿಯವರೆಗೂ ಮತಾಂತರಕ್ಕೆ ಕಿರುಕುಳ ಮಾಡಿದ ನೂರಾರು ಬೆಳಕಿಗೆ ಬಾರದ ಘಟನೆಗಳು ಟಿಸಿಎಸ್‌ನಲ್ಲಿ ನಡೆದಿದ್ದವು. ಧಾರ್ಮಿಕ ನಂಬಿಕೆಗೆ ಘಾಸಿ ಮಾಡುವುದು, ವೈವಾಹಿಕ ಸಂಬಂಧಗಳ ಬಗ್ಗೆ ಲೇವಡಿ ಮಾಡುವುಉ ನಡೆಯುತ್ತಿತ್ತು. ಮುಖ್ಯವಾಗಿ ಆರೋಪಿ ತೌಸಿಫ್ ಅಟ್ಟಾರ್ ಬಹಿರಂಗವಾಗಿ ಹಿಂದು ದೇವತೆಗಳ ಬಗ್ಗೆ ಅಶ್ಲೀಲ ಟೀಕೆ ಮಾಡುತ್ತಿದ್ದ. ಇದೆಲ್ಲಕ್ಕಿಂತ ಹೆಚ್ಚಾಗಿ ಹಿಂದು ಮಹಿಳೆಯನ್ನು ಅವಮಾನಿಸಿ, ಬಲವಂತವಾಗಿ ನಮಾಜ್ ಮಾಡಿಸಲು ಯತ್ನಿಸಿದ್ದಾರೆ ಎಂಬ ಆರೋಪವೊಂದು ಹೊರಬಂತು. ಈ ತಂಡಕ್ಕೆ ಅಲ್ಲಿನ ಎಚ್‌ಆರ್ ಮಹಿಳಾ ಸಿಬ್ಬಂದಿ ನಿದಾ ಖಾನ್ ಕೂಡ ಬೆಂಬಲಿಸುತ್ತಿದ್ದಳು ಎಂಬ ಸಂಗತಿ ಕೂಡ ಬಯಲಾಯಿತು.

ನಮ್ಮ ದೇಶದಲ್ಲಿ ಮತಾಂತರ ಪ್ರಯತ್ನಕ್ಕೆ ದೊಡ್ಡ ಇತಿಹಾಸವಿದೆ. ಹಿಂದಿನಿಂದಲೂ ಹಿಂದುಗಳನ್ನು ಬಲವಂತವಾಗಿ ಮತಾಂತರ ಮಾಡಿದ ಉದಾಹರಣೆಗಳಿವೆ. ಮುಘಲರ ಬಹುತೇಕ ರಾಜರು ಇಂತಹ ಕೃತ್ಯಗಳನ್ನು ಮಾಡಿದ್ದರು. ಅದೇ ಮಾನಸಿಕತೆ ಕೆಲವರಲ್ಲಿನ್ನೂ ಹಾಗೆಯೇ ಉಳಿದುಕೊಂಡಿದೆ. ಅದು ನಾಸಿಕ್ ಪ್ರಕರಣದಲ್ಲಿ ಸ್ಪಷ್ಟವಾಗಿ ಕಾಣಿಸುತ್ತಿದೆ. ಮೊದಲಿನ ದಬ್ಬಾಳಿಕೆ ಇದೀಗ ಆಧುನಿಕತೆ ರೀತಿ ಪಡೆದಿದೆ. ರಿವಾಜು ಬದಲಾಗಿದೆ. ಹಿಂದು ಚಿಂತಕರು ಮೊದಲಿನಿಂದಲೂ ತೌಸಿಫ್ ಅಟ್ಟಾರ್ ಅಂತವರಿದ್ದಾರೆ ಎಚ್ಚರಿಕೆ ಎಂಬ ಮಾತು ಹೇಳುತ್ತಾ ಬಂದಿದ್ದಾರೆ. ಆದರೆ ಅದನ್ನು ನಂಬುವ ಮನಸ್ಥಿತಿ ಹಿಂದುಗಳಿಗೆ ಬರಲೇ ಇಲ್ಲ. ಸಾಮಾನ್ಯ ಜನರು ಅದನ್ನು ನಂಬದೆ ತಳ್ಳಿ ಹಾಕಿದರೆ, ಇತ್ತ ಸೆಕ್ಯುಲರಿಸ್ಟ್‌ಗಳು ಇದು ಸುಳ್ಳೇ ಸರಿ ಎಂದಿದ್ದಾರೆ. ಅಸಲು ಕೇಸ್‌ಗಳನ್ನು ತೋರಿಸಿ ಲವ್ ಜಿಹಾದ್ ನಡೆಯುತ್ತಿದೆ ಎಂದು ಹೇಳಿದಾಗಲೆಲ್ಲಾ, ಹಿಂದುಗಳೇ ಅದಕ್ಕೆ 'ರಾಜಕೀಯ ಪ್ರಾಪಗೆಂಡಾ' ಎಂಬ ಹೆಸರು ಕೊಟ್ಟಿದ್ದಾರೆ. ಕೇರಳ ಸ್ಟೋರಿಯಂತಹ ಸಿನಿಮಾಗಳ ಮೂಲಕ ತಿಳಿಸಲೆತ್ನಿಸಿದಾಗಲೆಲ್ಲಾ, "ಇದೊಂದು ಸಿನಿಮಾ, ಸತ್ಯವಾಗಿರಲು ಸಾಧ್ಯವೇ ಇಲ್ಲ" ಎಂದು ತಳ್ಳಿಹಾಕಿದ್ದಾರೆ. ಇತ್ತ ಸೋಕಾಲ್ಡ್ ಸೆಕ್ಯುಲರಿಸ್ಟ್‌ಗಳು "ಇದೆಲ್ಲಾ ಸುಳ್ಳು, ದೇಶದಲ್ಲಿ ಅಶಾಂತಿ ಸೃಷ್ಟಿಸಲು ಯತ್ನಿಸಲಾಗುತ್ತಿದೆ" ಎನ್ನುತ್ತಾರೆ. ಇಂತದ್ದೇ ವಿಚಾರಗಳು ತೌಸಿಫ್, ಆಸೀಫ್ ಅಥವಾ ನಾಸಿಕ್‌ನ ಆರೋಪಿಗಳನ್ನು ಪ್ರೇರೇಪಿಸುತ್ತಿವೆ, ಧೈರ್ಯ ಕೊಡುತ್ತಿದೆ. ಹಿಂದುಗಳ ವಿರುದ್ಧ ನಿಂತರೆ ಅಂಥವರನ್ನು ಸೋ ಕಾಲ್ಡ್ ಸೆಕ್ಯುಲರಿಸ್ಟ್‌ಗಳು ಸದಾ ರಕ್ಷಿಸುತ್ತಾ ಬರುತ್ತಾರೆ. ವಾಸ್ತವವಾಗಿ ನಾಸಿಕ್ ಘಟನೆ ತಡವಾಗಿ ಹೊರಬರಲು ಕಾರಣವೇ ಅದು. ಸಮಾಜದಲ್ಲಿನ್ನೂ ಇಂಥ ಅದೆಷ್ಟೋ ಪ್ರಕರಣಗಳು ನಡೆಯುತ್ತಿವೆ. ಸಾಮಾಜಿಕ ಜಾಲತಾಣದಲ್ಲಿ ಹಿಂದು ದೇವತೆಗಳನ್ನು ಅವಮಾನಿಸುವುದನ್ನು ನೋಡುತ್ತೇವೆ. ಲವ್ ಜಿಹಾದ್ ಅನ್ನು ಪ್ರೇರೇಪಿಸುವುದನ್ನೂ ನೋಡುತ್ತೇವೆ. ವಾಸ್ತವವಾಗಿ ಹಿಂದು ಹೆಣ್ಣುಮಕ್ಕಳನ್ನು ಪ್ರೇರೇಪಿಸುವ ಕೃತ್ಯಕ್ಕೆ ಸಾಮಾಜಿಕ ಜಾಲತಾಣವೇ ದೊಡ್ಡ ವೇದಿಕೆಯಾಗುತ್ತಿದೆ.

ಮುಸ್ಲಿಂ ಯುವಕ ಹಿಂದು ಹೆಸರಿನಲ್ಲಿ ಪ್ರೀತಿಗೆ ಕೆಡವಿಕೊಂಡ ಅನೇಕ ಘಟನೆಗಳು ಬೆಳಕಿಗೆ ಬಂದಿವೆ. ಸಾಮಾಜಿಕ ಜಾಲತಾಣದ ಪೋಸ್ಟ್‌ಗಳಲ್ಲಿ ಹಿಂದು ಧರ್ಮವನ್ನು ಅವಹೇಳನ ಮಾಡುವ ಖಾತೆಗಳೂ ನಮ್ಮ ಮುಂದಿವೆ. ದೇವತೆಗಳನ್ನು ಅವಮಾನಿಸುವುದು, ಟೀಕಿಸುವುದು ಧರ್ಮದ ವಿರುದ್ಧ ಲೇವಡಿ ಮಾಡುವ ಖಾತೆಗಳು ಟ್ವಿಟ್ಟರ್, ಫೇಸ್‌ಬುಕ್, ಇನ್‌ಸ್ಟಾಗ್ರಾಮ್, ಡಿಸ್ಕೋರ್ಡ್ ಮುಖ್ಯವಾಗಿ ಟೆಲಿಗ್ರಾಮ್‌ನಲ್ಲಿ ಹೇರಳವಾಗಿವೆ. ದೇವತೆಗಳನ್ನು, ಹಿಂದು ಹೆಣ್ಣುಮಕ್ಕಳ ಫೋಟೊವನ್ನು ಅಸಭ್ಯವಾಗಿ ಎಡಿಟ್ ಮಾಡಿ ಪೋಸ್ಟ್ ಮಾಡುವ ಫೋಟೊ ಎಡಿಟರ್‌ಗಳು ಸಕ್ರಿಯವಾಗಿದ್ದಾರೆ. ಸಾವಿರಾರು ಜನರಿರುವ ಗುಂಪುಗಳಲ್ಲಿ ನೇರವಾಗಿ ಹಿಂದುಗಳನ್ನು ಬಯ್ಯುವುದು, ಅಪಹಾಸ್ಯ ಮಾಡುವುದು, ಟೀಕಿಸುವ ಜನರಿದ್ದಾರೆ. ಈ ಎಲ್ಲಾ ಮಾತುಗಳು ಕೇವಲ ಆರೋಪ ಅನ್ನಿಸಿದರೆ, ಟ್ವಿಟ್ಟರ್, ಫೇಸ್‌ಬುಕ್ ಅಥವಾ ಇನಸ್ಟಾಗ್ರಾಮ್‌ಗಳಲ್ಲಿ "Interfaith", "Interfaith bull" ಅಥವಾ "M-bull" ಎಂದು ಹುಡುಕಿ ನೋಡಿದರೆ ಭಯಾನಕ ಸತ್ಯವೇ ಹೊರಬರುತ್ತದೆ.

ಬೆಳಕಿಗೆ ಬಾರದ ಕತೆಗಳು ನೆರಳಿಗಿಂತಲೂ ಗಾಢ. ಇಂಥದ್ದೇ ವಿಷಯಗಳು ನಮ್ಮ ಕಣ್ಣುಮುಂದೆ ನಡೆದರೂ ಯಾರೂ ಹೇಳಲು ಮುಂದೆ ಬರುವುದಿಲ್ಲ. ಹೆಣ್ಣುಮಕ್ಕಳು ಬಹುತೇಕ ಭಯ ಪಡುತ್ತಾರೆ. ಅಥವಾ ಹೇಳಿದರೆ ಕೇಳುವವರ್‍ಯಾರು ಎಂಬ ಪ್ರಶ್ನೆ ಬರುತ್ತದೆ. ಅದಕ್ಕಾಗಿ ಮಿ-ಟೂ ಮಾದರಿಯಲ್ಲಿ ಚಳುವಳಿಯಾಗಬೇಕಿದೆ. ಇದರಿಂದ ಎಷ್ಟೋ ಕತೆಗಳು ಹೊರಬರಬಹುದು, ಊಹಿಸಲಾಗದ ಜನರು ಕಟಕಟೆಯಲ್ಲಿ ನಿಲ್ಲಬಹುದು.

◆

ಭ್ರಷ್ಟಾಚಾರದಲ್ಲಿ ಪೈಪೋಟಿ ನಡೆಸುತ್ತಿದ್ದಾರೆಯೆ?

ಪತ್ರ ಮಿತ್ರ

ಇತ್ತೀಚೆಗೆ ಇಂಗ್ಲಿಷ್ ಟಿವಿ ಚಾನೆಲೊಂದರಲ್ಲಿ ನಮ್ಮ ರಾಜ್ಯಕ್ಕೆ ಸಂಬಂಧಪಟ್ಟ ಸಂವಾದ ನಡೆಯುತ್ತಿರುವುದು ಕಾಣಿಸಿತು. ಸಂವಾದದ ವಿಷಯವು ಕರ್ನಾಟಕದಲ್ಲಿ ಪಂಚ ಗ್ಯಾರಂಟಿಗಳ ಅನುಷ್ಠಾನಕ್ಕಾಗಿ ನೇಮಿಸಿದ ಅಧ್ಯಕ್ಷ ಹಾಗೂ ಸದಸ್ಯರು ವಿಪರೀತ ಹಣ ಖರ್ಚು ಮಾಡಿದ ಕುರಿತಾಗಿತ್ತು.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವು ಪಂಚ ಗ್ಯಾರಂಟಿಗಳ ಮೂಲಕ ಅಧಿಕಾರ ಹಿಡಿದಿರುವುದು ತಿಳಿದೇ ಇದೆ. ಹಿಂದಿನ ಬಿಜೆಪಿ ಸರಕಾರ ಭ್ರಷ್ಟಾಚಾರದಲ್ಲಿ ಮುಳುಗಿದ್ದು, ಪ್ರತಿ ಸರ್ಕಾರಿ ಕೆಲಸಕ್ಕೆ ಲಂಚ ನೀಡಬೇಕಾಗಿದೆ ಎಂದು ಪ್ರಚಾರ ಮಾಡಿದ ಕಾಂಗ್ರೆಸ್ ಪಕ್ಷಕ್ಕೆ, ಗುತ್ತಿಗೆದಾರರ ಸಂಘ ಕೂಡ ಮಂತ್ರಿಗಳಿಗೆ ಶೇ.40 ಕಮಿಷನ್ ನೀಡದೆ ಗುತ್ತಿಗೆ ಹಣ ಪಾವತಿಯಾಗುತ್ತಿಲ್ಲವೆಂದು ಗಂಭೀರ ಆಪಾದನೆ ಮಾಡಿದ ಅಂಶಗಳು ಪೂರಕವಾಗಿ ಒದಗಿತು. ಕಾಂಗ್ರೆಸ್ 'ಪೇ ಸಿಎಮ್' ಎನ್ನುವ ಪೋಸ್ಟರ್‌ಗಳನ್ನು ಅಂಟಿಸಿ, ಚುನಾವಣೆಯಲ್ಲಿ ಗೆಲುವು ಸಾಧಿಸಿತು.

ಮತ ನೀಡಿದ ಜನರಲ್ಲಿ ಅದೇನೋ ಧನ್ಯತಾಭಾವ. ಭ್ರಷ್ಟ ಸರ್ಕಾರವೊಂದನ್ನು ಕಿತ್ತೊಗೆದು 'ನುಡಿದಂತೆ ನಡೆಯುವ' ಸ್ವಚ್ಛ ಸರ್ಕಾರವನ್ನು ಪೀಠಕ್ಕೆ ತಂದೆವು ಎಂಬ ಅನಿಸಿಕೆ. ಆದರೀಗ ಜನಸಾಮಾನ್ಯರ, ಅದರಲ್ಲೂ ವಿಶೇಷವಾಗಿ ಕೆಳ ಮಧ್ಯಮ ವರ್ಗದವರ ಜೀವನ ನಿರ್ವಹಣೆ ತೀರಾ ಹೈರಾಣಾಗಿರುವುದು ವಾಸ್ತವ. ಈ ನಿಟ್ಟಿನಲ್ಲಿ ಸರ್ಕಾರ ಘೋಷಿಸಿದ ಗ್ಯಾರಂಟಿ ಹಾಗೂ ಅವುಗಳ ಪ್ರಾಮಾಣಿಕ ಅನುಷ್ಠಾನದ ಬಗ್ಗೆ ರಾಜ್ಯದ ಜನತೆಗೆ ಯಾವುದೇ ಆತಂಕವಿರಲಿಲ್ಲ. ತೀರಾ ಬಡವರ ಉದ್ಧಾರಕ್ಕೆ ತಂದ ಆರ್ಥಿಕ ಕಾರ್ಯಕ್ರಮವನ್ನೂ ರಾಜ್ಯದ ಜನತೆ ವಿಶಾಲ ಮನಸ್ಸಿನಿಂದ ಸ್ವಾಗತಿಸಿದರೇ ಹೊರತು ಅನ್ಯಥಾ ಭಾವಿಸಲಿಲ್ಲ. ಹೊಸ ಸರ್ಕಾರದ ಗ್ಯಾರಂಟಿ ಅನುಷ್ಠಾನಕ್ಕಾಗಿ ವಿಶಾಲವಾದ ರಾಜ್ಯ ಸರ್ಕಾರಿ ನೌಕರ ವರ್ಗವಿದೆ. ಸದಾ ಸೇವಾ ಮನೋಭಾವ ಹೊಂದಿದ ಪ್ರತಿಷ್ಠಿತ ಎನ್.ಜಿ.ಒಗಳೂ ಇವೆ. ರಾಜ್ಯ ಸರ್ಕಾರದ ವಿವಿಧ ಮಂತ್ರಾಲಯಗಳ ಮೂಲಕವೂ ಅದನ್ನು ಅನುಷ್ಠಾನಗೊಳಿಸಬಹುದು. ಅಷ್ಟಕ್ಕೂ ಫಲಾನುಭವಿಗಳನ್ನು ಒಮ್ಮೆ ಗುರುತಿಸಿದ ಮೇಲೆ ಕ್ಷಣಾರ್ಧದಲ್ಲಿ ಅಂತವರ ಖಾತೆಗೆ ಹಣ ವರ್ಗಾಯಿಸುವುದು ಸುಲಭ. ಇಡೀ ದೇಶದ ರೈತರ ಖಾತೆಗೆ 'ಕಿಸಾನ್ ಸಂಮಾನ' ಯೋಜನೆಯಡಿ ಕಾಲ ಕಾಲಕ್ಕೆ ನೇರವಾಗಿ ಹಣ ವರ್ಗಾವಣೆಯಾಗುತ್ತಿರುವುದು ನಮ್ಮ ಕಣ್ಣಮುಂದೆಯೇ ಇದೆ. ಲಕ್ಷಗಟ್ಟಲೆ ಜನರ ಖಾತೆಗೆ ಏಕಕಾಲಕ್ಕೆ ಹಣ ಜಮಾ ಮಾಡಬಹುದಾದ ತಾಂತ್ರಿಕತೆ ನಮ್ಮಲ್ಲಿದೆ. ಆದರೆ ರಾಜ್ಯ ಸರ್ಕಾರ ತಂತ್ರಜ್ಞಾನವನ್ನು ಕಡೆಗಣಿಸಿ ಗ್ಯಾರಂಟಿ ಅನುಷ್ಠಾನಕ್ಕಾಗಿ ಪ್ರತ್ಯೇಕ ಸಮಿತಿ ರಚಿಸಿ ಸರ್ಕಾರಿ ಖಜಾನೆಯಿಂದ ಕೋಟಿ ಕೋಟಿ ರೂಪಾಯಿ ವೆಚ್ಚ ಮಾಡುತ್ತಿರುವುದು ವಿಪರ್ಯಾಸ.

ಈ ಸಂವಾದದ ಬಗ್ಗೆ ಕಾಂಗ್ರೆಸ್ ಪ್ರತಿನಿಧಿಯನ್ನು ಪ್ರಶ್ನಿಸಿದಾಗ 'ಹಿಂದೆ ಬಿಜೆಪಿ ಸರ್ಕಾರವು ಕೂಡಾ ಇಂತಹುದೆ ಖರ್ಚು ಮಾಡಿದೆ' ಎಂದು ಸಮಜಾಯಿಷಿ ನೀಡಿದರು. 'ಅಂತಹ ಪ್ರಮಾದಗಳಿಗಾಗಿ ಆ ಸರ್ಕಾರ ಬಿದ್ದು ಹೋಯಿತಲ್ಲ' ಎಂದು ಆ್ಯಂಕರ್ ನುಡಿದಾಗ ಕಾಂಗ್ರೆಸ್ ಪ್ರತಿನಿಧಿ ಮುಗುಳ್ನಕ್ಕರೇ ಹೊರತು ಯಾವುದೇ ಸಮಂಜಸ ಉತ್ತರ ನೀಡಲಿಲ್ಲ.

ಗ್ಯಾರಂಟಿ ಅನುಷ್ಠಾನ ಸಮಿತಿಯ ಅಧ್ಯಕ್ಷರು ಪಡೆಯುತ್ತಿರುವ ವಾರ್ಷಿಕ ಪಾವತಿ ಸುಮಾರು ಐದೂವರೆ ಕೋಟಿ ರೂ. ಮೀರಿದ್ದು, ಇದು ದೇಶದ ರಾಷ್ಟ್ರಪತಿ ಯಾ ಪ್ರಧಾನ ಮಂತ್ರಿಗಳ ಸಂಬಳಕ್ಕಿಂತಲೂ ಜಾಸ್ತಿಯಾಗಿದೆಯಲ್ಲಾ ಎಂದಾಗ ಅವರು 'ಅದು ಸಂಬಳ ಮಾತ್ರವಲ್ಲ, ಇತರ ಖರ್ಚುಗಳೂ ಸೇರಿವೆ' ಎನ್ನುವ ಅತಾರ್ಕಿಕ ಸಮಜಾಯಿಷಿ ನೀಡಿದರು. ಅವರಿಂದಲೂ ಸಮಂಜಸ ಸ್ಪಷ್ಟನೆ ಮೂಡಿ ಬರಲಿಲ್ಲ. ಈ ಗ್ಯಾರಂಟಿ ಅನುಷ್ಠಾನ ಕಮಿಟಿಯು ಕೇವಲ ಬೆಂಗಳೂರಿಗೆ ಸೀಮಿತವಾಗಿರದೆ, ಇದರ ಕಬಂಧ ಬಾಹುಗಳು ರಾಜ್ಯದ ಎಲ್ಲಾ ಜಿಲ್ಲಾ ಹಾಗೂ ತಾಲೂಕು ಮಟ್ಟಕ್ಕೆ ಹರಡಿದ್ದು, ಇದರ ಸಂಪೂರ್ಣ ಫಲಾನುಭವಿಗಳು ಆಡಳಿತ ಪಕ್ಷದ ನೇತಾರರು ಹಾಗೂ ಕಾರ್ಯಕರ್ತರೇ ಆಗಿರುತ್ತಾರೆ. ಈ ಕೆಲಸಗಳನ್ನು ಆಡಳಿತ ಪಕ್ಷದ ಹೊರಗಿರುವ ಬೇರೆ ಬಡ ವಿದ್ಯಾವಂತ ಯುವಕರಿಗೆ ನೀಡಿಲ್ಲವೆನ್ನುವುದು ಗಮನಾರ್ಹ. ಜಿಲ್ಲಾ, ತಾಲೂಕು ಹಾಗೂ ರಾಜ್ಯ ಮಟ್ಟದ ಗ್ಯಾರಂಟಿ ಅನುಷ್ಠಾನ ಕಮಿಟಿಗಳಿಗಾಗಿ ಸರಕಾರ ಒಟ್ಟು ಎಷ್ಟು ಮೊತ್ತ ಖರ್ಚು ಮಾಡುತ್ತಿದೆ, ವಿವಿಧ ಕಮಿಟಿಗಳು ಕೈಗೊಂಡ ಕಾರ್ಯಕ್ರಮಗಳು ಏನು ಎನ್ನುವ ಮಾಹಿತಿಗಳು ಜನಸಾಮಾನ್ಯರಿಗೆ ಲಭ್ಯವಾಗುತ್ತಿಲ್ಲ.

ಜನ ಸಾಮಾನ್ಯರ ತೆರಿಗೆಗಳ ಮೂಲಕ ಕ್ರೋಡೀಕರಿಸಿದ ಅತ್ಯಮೂಲ್ಯ ಮೊತ್ತವನ್ನು ಅಧಿಕಾರರೂಢ ರಾಜಕೀಯ ಪಕ್ಷದ ನಾಯಕರು ಹಾಗೂ ಅವರ ಅನುಯಾಯಿಗಳಿಗೆ ಇಷ್ಟು ಸುಲಭವಾಗಿ ಹಂಚಬಹುದೆನ್ನುವ ಹೊಚ್ಚ ಹೊಸ ವಿಧಾನವನ್ನು ಈ ಮೂಲಕ ತೋರಿಸಿಕೊಟ್ಟಂತಾಗಿದೆ.

ಮುಖ್ಯವಾಗಿ ಗುತ್ತಿಗೆದಾರರ ಸಂಘದ ಅಧ್ಯಕ್ಷ ಮಾಡಿದ ಆಧಾರರಹಿತ ಆಪಾದನೆಯ ಮೇಲೆ ಅಂದಿನ ಬಿಜೆಪಿ ಸರ್ಕಾರದ ಮೇಲೆ 'ಪೇ ಸಿ.ಎಮ್.' ಅಭಿಯಾನದ ಮೂಲಕ ಮುಗಿಬಿದ್ದ ಕಾಂಗ್ರೆಸ್ ಇಂದು ಅದೇ ಗುತ್ತಿಗೆದಾರರ ಸಂಘ ಅದಕ್ಕಿಂತ ಗಂಭೀರ ಆಪಾದನೆ (ಬಿಜೆಪಿ ಸರ್ಕಾರಕ್ಕಿಂತಲೂ ಅಧಿಕ ಕಮಿಷನ್ ಈಗಿನ ಕಾಂಗ್ರೆಸ್ ಸರ್ಕಾರ ಪಡೆಯುತ್ತಿದೆ) ಮಾಡಿದರೂ 'ಅದು ಆಧಾರವಿಲ್ಲದ ಆರೋಪ' ಎಂದು ತೇಲಿ ಬಿಡುತ್ತಿರುವುದನ್ನು ಜನರು ಗಮನಿಸುತ್ತಿದ್ದಾರೆ ಎನ್ನುವುದನ್ನು ನೆನಪಿಡಬೇಕಾಗಿದೆ

ಇತ್ತೀಚೆಗೆ ಟಿ.ವಿ ಮಾಧ್ಯಮದಲ್ಲಿ ಅಬಕಾರಿ ಸಚಿವರು ಇಲಾಖೆಯಲ್ಲಿರುವ ಲಂಚದ ಬಗ್ಗೆ ಮಾತಾಡುತ್ತಾ 'ಅಬಕಾರಿ ಇಲಾಖೆಯಲ್ಲಿ ಭ್ರಷ್ಟಾಚಾರ ಹಿಂದೆಯೂ ಇತ್ತು, ಈಗಲೂ ಇದೆ, ಮುಂದೆಯೂ ಇರುತ್ತದೆ' ಎನ್ನುವ ಧಾಟಿಯಲ್ಲಿ ಯಾವುದೇ ಅಳುಕಿಲ್ಲದೆ, ಘಂಟಾಘೋಷವಾಗಿ ಹೇಳುತ್ತಿರುವುದನ್ನು ನೋಡಿದರೆ ಮತ್ತು ಪ್ರತಿಪಕ್ಷಗಳು ಸರ್ಕಾರದ ಯಾವುದೇ ಜನವಿರೋಧಿ ನೀತಿಗಳನ್ನು ವಿರೋಧಿಸಿ ತಾರ್ಕಿಕ ಅಂತ್ಯ ಕಾಣುವಲ್ಲಿ ವಿಫಲವಾಗುತ್ತಿರುವುದನ್ನು ಗಮನಿಸಿದರೆ ನಮ್ಮ ರಾಜಕೀಯ ಪಕ್ಷಗಳು ಅಭಿವೃದ್ಧಿಗೆ ಪೈಪೋಟಿ ಬೀಳುವ ಬದಲು ಭ್ರಷ್ಟಾಚಾರದಲ್ಲಿ ಒಬ್ಬರಿಗೊಬ್ಬರು ಸ್ಪರ್ಧೆಗಿಳಿಯುತ್ತಿರುವಂತೆ ಭಾಸವಾಗುತ್ತಿದೆ.

ಹೊಸೂರು ರತ್ನಾಕರ ಶೆಟ್ಟಿ, ಹಿರಿಯಡ್ಕ

ಟ್ರಂಪ್ ಸೋಷಿಯಲ್ ಮೀಡಿಯಾ ಪೋಸ್ಟ್

ಭಾರತ, ಚೀನಾ ನರಕ ಎಂದ ಅಧ್ಯಕ್ಷ ಟ್ರಂಪ್!

ವಾಷಿಂಗ್ಟನ್: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಭಾರತ ಮತ್ತು ಚೀನಾವನ್ನು ನರಕಗಳು (ಹೆಲ್–ಹೋಲ್ಸ್) ಎಂದು ಬಣ್ಣಿಸಿರುವ ರಾಜಕೀಯ ವಿಶ್ಲೇಷಕ ಮೈಕಲ್ ಸ್ಯಾವೇಜ್ ಅವರ ಪಾಡ್‌ಕಾಸ್ಟ್ ಮತ್ತು ವೀಡಿಯೊವನ್ನು ಮರುಹಂಚಿಕೊಂಡಿದ್ದಾರೆ.

ತಮ್ಮ ಪಾಡ್‌ಕಾಸ್ಟ್‌ನಲ್ಲಿ ಸ್ಯಾವೇಜ್, ಅಮೆರಿಕದ ಜನ್ಮಸಿದ್ಧ ಪೌರತ್ವ ಕಾಯ್ದೆ ಮತ್ತು ಸುಪ್ರೀಂ ಕೋರ್ಟ್ ಅನ್ನು ಟೀಕಿಸಿದ್ದಾರೆ. ಭಾರತ ಮತ್ತು ಚೀನಾದ ವಲಸಿಗರು 'ಬರ್ತ್ ಟೂರಿಸಂ' ಮೂಲಕ ಮಗು ಜನಿಸಿದ ತಕ್ಷಣ ಪೌರತ್ವ ಪಡೆಯುತ್ತಿದ್ದಾರೆ ಎಂದು ಅವರು ಆರೋಪಿಸಿದ್ದಾರೆ. ಅಲ್ಲದೆ, ಈ ವಲಸಿಗರನ್ನು 'ಲ್ಯಾಪ್‌ಟಾಪ್ ಹಿಡಿದ ಗ್ಯಾಂಗ್‌ಸ್ಟರ್‌ಗಳು' ಎಂದು ಕರೆದಿದ್ದಾರೆ. ಅವರು ಕ್ರಿಮಿನಲ್ ಚಟುವಟಿಕೆಗಳಿಗಿಂತ ದೇಶಕ್ಕೆ ಹೆಚ್ಚಿನ ಹಾನಿ ಮಾಡಿದ್ದಾರೆ ಎಂದು ಸ್ಯಾವೇಜ್ ಕಿಡಿಕಾರಿದ್ದಾರೆ.

ಉದ್ಯೋಗದ ಆರೋಪಗಳು: ಕ್ಯಾಲಿಫೋರ್ನಿಯಾದ ಹೈ–ಟೆಕ್ ಕಂಪನಿಗಳು ಬಿಳಿಯರಿಗಿಂತ ಭಾರತೀಯ ಮತ್ತು ಚೀನೀ ಕಾರ್ಮಿಕರಿಗೆ ಆದ್ಯತೆ ನೀಡುತ್ತವೆ ಎಂದು ಸ್ಯಾವೇಜ್ ಪ್ರತಿಪಾದಿಸಿದ್ದಾರೆ. ಆಧುನಿಕ ವಾಯುಯಾನ ಮತ್ತು ಇಂಟರ್‌ನೆಟ್ ಯುಗಕ್ಕೆ ಮುನ್ನ ಬರೆಯಲಾದ ಸಂವಿಧಾನದ 14ನೇ ತಿದ್ದುಪಡಿ, ಪ್ರಸ್ತುತ ಕಾಲಕ್ಕೆ ಹೊಂದಿಕೆಯಾಗುವುದಿಲ್ಲ ಎಂದು ಅವರು ವಾದಿಸಿದ್ದಾರೆ.

ಬಗೆಹರಿಯದ ಸಮಸ್ಯೆ: ಜನ್ಮಸಿದ್ಧ ಪೌರತ್ವವನ್ನು ನಿರ್ಬಂಧಿಸಲು ಜನವರಿ 2025 ರಲ್ಲಿ ಟ್ರಂಪ್ ಸಹಿ ಮಾಡಿದ ಆದೇಶದ ಕುರಿತು ಅಮೆರಿಕ ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆ ನಡೆಯುತ್ತಿದೆ. ಕೆನಡಾ ಮತ್ತು ಮೆಕ್ಸಿಕೊ ಸೇರಿದಂತೆ ಸುಮಾರು 36 ದೇಶಗಳಲ್ಲಿ ಇಂದಿಗೂ ಜನ್ಮಸಿದ್ಧ ಪೌರತ್ವ ಚಾಲ್ತಿಯಲ್ಲಿದೆ.

ಈ ವಿಷಯಕ್ಕೆ ಪ್ರಾಮುಖ್ಯತೆ ನೀಡುವುದಿಲ್ಲ: ಎಂಇಎ: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹಂಚಿಕೊಂಡಿರುವ ಅವಹೇಳನಕಾರಿ ಹೇಳಿಕೆಯ ಕುರಿತು ಭಾರತೀಯ ವಿದೇಶಾಂಗ ವ್ಯವಹಾರಗಳ ಸಚಿವಾಲಯ ಸಂಕ್ಷಿಪ್ತ ಪ್ರತಿಕ್ರಿಯೆ ನೀಡಿದೆ. ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಎಂಇಎ ವಕ್ತಾರ ರಣಧೀರ್ ಜೈಸ್ವಾಲ್, ಮೈಕಲ್ ಸ್ಯಾವೇಜ್ ಅವರ ಪಾಡ್‌ಕಾಸ್ಟ್ ಮತ್ತು ಅದಕ್ಕೆ ಸಂಬಂಧಿಸಿದ ಸೋಷಿಯಲ್ ಮೀಡಿಯಾ ಚಟುವಟಿಕೆಗಳ ವರದಿಯನ್ನು ನಾವು ನೋಡಿದ್ದೇವೆ ಎಂದಷ್ಟೇ ತಿಳಿಸಿದರು. ಈ ಕುರಿತ ಪ್ರತಿಕ್ರಿಯಿಸಿದ ಜೈಸ್ವಾಲ್, ಈ ಕುರಿತು ವರದಿಗಳನ್ನು ಗಮನಿಸಿದ್ದೇವೆ. ಈ ವಿಷಯಕ್ಕೆ ಪ್ರಾಮುಖ್ಯತೆ ನೀಡುವುದಿಲ್ಲ ಎಂದಿದ್ದಾರೆ. ಈ ಬಗ್ಗೆ ಯಾವುದೇ ರಾಜತಾಂತ್ರಿಕ ವಿಮರ್ಶೆ ಅಥವಾ ಖಂಡನೆ ವ್ಯಕ್ತಪಡಿಸಲು ಅವರು ನಿರಾಕರಿಸಿದರು.

ಜನಾಂಗೀಯ ನಿಂದನೆ ಎಂದ ಇರಾನ್: ಅಮೆರಿಕ ಅಧ್ಯಕ್ಷರು ಮರುಹಂಚಿಕೊಂಡಿರುವ ನರಕ ಎಂಬ ಅವಹೇಳನಕಾರಿ ಹೇಳಿಕೆ, ಯ ವಿರುದ್ಧ ಭಾರತ ಮತ್ತು ಚೀನಾದೊಂದಿಗೆ ಇರಾನ್ ಕೂಡ ಧ್ವನಿಗೂಡಿಸಿದೆ. ಈ ವಾಕ್ಚಾತುರ್ಯ, ಅಮೆರಿಕದ ರಾಜತಾಂತ್ರಿಕ ಪತನ ಮತ್ತು ಜಾಗತಿಕ ವಾಸ್ತವಗಳ ಬಗ್ಗೆ ಅವರಿಗಿರುವ ಅಜ್ಞಾನವನ್ನು ಪ್ರತಿಬಿಂಬಿಸುತ್ತದೆ ಎಂದು ಇರಾನ್ ಅಧಿಕಾರಿಗಳು ಕಿಡಿಕಾರಿದ್ದಾರೆ. ವಲಸಿಗರು ಬರ್ತ್ ಟೂರಿಸಂ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿನ ಪ್ರಾಬಲ್ಯದ ಮೂಲಕ ಅಮೆರಿಕದ ಕಾನೂನನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ ಎಂಬ ಮೈಕಲ್ ಸ್ಯಾವೇಜ್ ಅವರ ಆರೋಪವನ್ನು ಟ್ರಂಪ್ ಬೆಂಬಲಿಸಿದ್ದಕ್ಕೆ ಇರಾನ್ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ. ಈ ಹೇಳಿಕೆಯನ್ನು ಇರಾನ್ ಜನಾಂಗೀಯ ನಿಂದನೆ ಎಂದು ನೇರವಾಗಿ ಟೀಕಿಸಿದೆ.

ನೌಕಾಪಡೆ ಕಾರ್ಯದರ್ಶಿ ಜಾನ್ ಫೆಲನ್ ನಿರ್ಗಮನ

ವಾಷಿಂಗ್ಟನ್: ಯುಎಸ್ ಅಧ್ಯಕ್ಷ ಡೊನಾಲ್ಡ್ ಟ್ರಂಪ್‌ರ ಎರಡನೇ ಅವಧಿಯಲ್ಲಿ ಮೊದಲ ಬಾರಿಗೆ ಮಿಲಿಟರಿ ಸೇವೆಯ ಮುಖ್ಯಸ್ಥರೊಬ್ಬರು ಹುದ್ದೆ ತೊರೆದಿದ್ದು, ನೌಕಾಪಡೆಯ ಕಾರ್ಯದರ್ಶಿ ಜಾನ್ ಫೆಲನ್ ತಕ್ಷಣದಿಂದ ಜಾರಿಗೆ ಬರುವಂತೆ ನಿರ್ಗಮಿಸುತ್ತಿದ್ದಾರೆ ಎಂದು ಪೆಂಟಗನ್ ಬುಧವಾರ ಘೋಷಿಸಿದೆ. ನೌಕಾಪಡೆಯ ಅಂಡರ್ ಸೆಕ್ರೆಟರಿ ಹಂಗ್ ಕಾವೊ ಹಂಗಾಮಿ ಕಾರ್ಯದರ್ಶಿಯಾಗಿ ಅಧಿಕಾರ ವಹಿಸಿಕೊಳ್ಳಲಿದ್ದಾರೆ. ಕಾವೊ 25 ವರ್ಷಗಳ ಕಾಲ ನೌಕಾಪಡೆಯಲ್ಲಿ ಸೇವೆ ಸಲ್ಲಿಸಿದ ಅನುಭವ ಹೊಂದಿದ್ದು, ಈ ಹಿಂದೆ ವರ್ಜೀನಿಯಾದಲ್ಲಿ ಸೆನೆಟ್ ಮತ್ತು ಹೌಸ್ ಚುನಾವಣೆಗಳಲ್ಲಿ ಸ್ಪರ್ಧಿಸಿದ್ದರು. 2024 ರಲ್ಲಿ ನೇಮಕಗೊಂಡಿದ್ದ ಫೆಲನ್, ಖಾಸಗಿ ಹೂಡಿಕೆ ಸಂಸ್ಥೆಯ ಸ್ಥಾಪಕರಾಗಿದ್ದು ಟ್ರಂಪ್ ಅಭಿಯಾನಕ್ಕೆ ದೊಡ್ಡ ಮಟ್ಟದ ದೇಣಿಗೆ ನೀಡಿದ್ದರು. ಟ್ರಂಪ್, ಫೆಬ್ರವರಿ 2025 ರಿಂದ ರಕ್ಷಣಾ ಕಾರ್ಯದರ್ಶಿ ಪೀಟ್ ಹೆಗ್ಸೆತ್, ಭೂಸೇನೆಯ ಮುಖ್ಯಸ್ಥರು ಮತ್ತು ಜಂಟಿ ಮುಖ್ಯಸ್ಥರ ಸಮಿತಿಯ ಅಧ್ಯಕ್ಷರು ಸೇರಿದಂತೆ ಹಲವು ಉನ್ನತ ಸೇನಾ ನಾಯಕರನ್ನು ವಜಾಗೊಳಿಸಿದ್ದಾರೆ. ನಿರ್ಗಮಿಸುವ ಕೇವಲ ಒಂದು ದಿನದ ಮೊದಲು, ಫೆಲನ್, ವಾಷಿಂಗ್ಟನ್‌ನಲ್ಲಿ ನಡೆದ ನೌಕಾಪಡೆಯ ವಾರ್ಷಿಕ ಸಮ್ಮೇಳನದಲ್ಲಿ ಮಾತನಾಡಿದ್ದರು. ಅವರ ನಿರ್ಗಮನಕ್ಕೆ ಯಾವುದೇ ಅಧಿಕೃತ ಕಾರಣ ನೀಡಲಾಗಿಲ್ಲ.

ಬಿಜೆಪಿ ಅಭ್ಯರ್ಥಿ ಅಗ್ನಿಮಿತ್ರ ಪೌಲ್ ಮೇಲೆ ದಾಳಿ: ಸ್ವಲ್ಪದರಲ್ಲೇ ಪಾರು

ಪಶ್ಚಿಮ ಬಂಗಾಳದ ಆಸನ್‌ಸೋಲ್ ದಕ್ಷಿಣ ವಿಧಾನ ಸಭಾ ಕ್ಷೇತ್ರದ ಅಭ್ಯರ್ಥಿ ಅಗ್ನಿಮಿತ್ರ ಪೌಲ್ ಅವರ ಕಾರಿನ ಮೇಲೆ ಭಾರೀ ಗಾತ್ರದ ಬಂಡೆ ಯೊಂದನ್ನು ಉರುಳಿಸಿ ದಾಳಿ ನಡೆಸಲಾಯಿತು. ರಹಮತ್ ನಗರದ ಅಲ್ಪಸಂಖ್ಯಾತರ ಪ್ರದೇಶದಲ್ಲಿ ಸಾಗುತ್ತಿದ್ದಾಗ ಈ ದಾಳಿ ನಡೆಸಲಾಯಿತು.ಕಾರಿನ ಹಿಂಭಾಗ ಪೂರ್ಣ ಧ್ವಂಸವಾಗಿದ್ದು, ಕನ್ನಡಿಗಳು ಪುಡಿಯಾಗಿವೆ. ದೇವರ ದಯೆಯಿಂದ ನಾನು ಪಾರಾಗಿದ್ದೇನೆ. ಆದರೂ ನನ್ನ ಕಾರ್ಯದರ್ಶಿಗೆ ಏಟಾಗಿದೆ. ಇಂತಹ ಗೂಂಡಾಗಿರಿಯನ್ನು ಸಹಿಸಲು ಸಾಧ್ಯವಿಲ್ಲ.ಇದರ ಹಿಂದೆ ಯಾರಿದ್ದಾರೆ ಎಂಬುದು ಯಾರಿಗಾದರೂ ಅರ್ಥವಾದೀತು. ಅಲ್ಪಸಂಖ್ಯಾತರ ತುಷ್ಟೀಕರಣದಿಂದ ಯಾವ ರೀತಿ ಹಿಂಸೆಗೆ ಕುಮ್ಮಕ್ಕು ನೀಡಲಾಗುತ್ತಿದೆ ಎಂಬುದು ಕೂಡ ಇದರಿಂದ ಬಯಲಿಗೆ ಬಂದಿದೆ ಎಂದು ಹೇಳುವ ಮೂಲಕ ಅವರು ಟಿಎಂಸಿಯ ಗೂಂಡಾಗಿರಿಯನ್ನು ತರಾಟೆಗೆತ್ತಿಕೊಂಡರು.

27 ಅಭ್ಯರ್ಥಿಗಳನ್ನು ಖರೀದಿಸಿದ ಟಿಎಂಸಿ: ಹುಮಾಯುನ್ ಕಬೀರ್

ಈ ನಡುವೆ ತನ್ನ ಪಕ್ಷದ 27 ಅಭ್ಯರ್ಥಿಗಳನ್ನು ಆಳುವ ಟಿಎಂಸಿ ಖರೀದಿಸಿದೆ ಎಂದು ಆಮ್ ಜನತಾ ಉನ್ನಯನ್ ಪಕ್ಷ (ಎಜೆಯುಪಿ)ದ ನಾಯಕ ಹುಮಾಯುನ್ ಕಬೀರ್ ಆರೋಪಿಸಿದ್ದಾರೆ. ಕಬೀರ್ ಗುರುವಾರ ಬೆಳಗ್ಗೆಯೇ ಮತ ಚಲಾಯಿಸಿದ್ದು, ಬಳಿಕ ಮುರ್ಷಿದಾಬಾದ್ ಜಿಲ್ಲೆಯ ನವೋದಾ ವಿಧಾನಸಭಾ ಕ್ಷೇತ್ರದ ಶಿಬನಗರ ಗ್ರಾಮದಲ್ಲಿನ ಮತಗಟ್ಟೆಯಲ್ಲಿ ಟಿಎಂಸಿ ಬೆಂಬಲಿಗರು ಅವರ ವಾಹನಕ್ಕೆ ಮುತ್ತಿಗೆ ಹಾಕಿ ಪ್ರತಿಭಟನಾಕಾರರು ಅವರ ವಿರುದ್ಧ ಘೋಷಣೆಗಳನ್ನು ಕೂಗಿದರು.

ಪ್ರತಿಭಟನೆ ನಡೆಸಿದ ಹುಮಾಯೂನ್

ತನ್ನ ಬೆಂಬಲಿಗರ ಮೇಲೆ ನೋವ್ಡಾ ಪೊಲೀಸರು ಲಾಠಿ ಚಾರ್ಜ್ ಮಾಡಿದ್ದಾರೆಂಬ ಆರೋಪಗೈದ ಎಜೆಯುಪಿ ನಾಯಕ ಹುಮಾಯೂನ್, ಅಧಿಕಾರಿಗಳನ್ನು ಅಮಾನತು ಮಾಡಬೇಕೆಂದು ಪ್ರತಿಭಟನೆ ನಡೆಸಿದ್ದಾರೆ. ಸಂಘರ್ಷದಲ್ಲಿ ಭಾಗಿಯಾಗಿದ್ದ ಟಿಎಂಸಿ ಕಾರ್ಯಕರ್ತರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಬೇಕು ಎಂದು ಹುಮಾಯೂನ್ ಚುನಾವಣಾ ಆಯೋಗಕ್ಕೆ ಮನವಿ ಮಾಡಿದ್ದಾರೆ. ಮತದಾನದ ವೇಳೆ ಬಂಗಾಳದಲ್ಲಿ ಕಟ್ಟಿದ ಬಾಬ್ರಿ ಮಸೀದಿ ಸ್ಥಳಕ್ಕೆ ಕಬೀರ್ ಭೇಟಿ ನೀಡಿದ್ದಾರೆ.

ಇವಿಎಂನಲ್ಲಿ ತಾಂತ್ರಿಕ ದೋಷ

ಬೆಲ್ಡಾಂಗ ವಿಧಾನಸಭಾ ಕ್ಷೇತ್ರದ ಬೂತ್ ಸಂಖ್ಯೆ 156ರಲ್ಲಿ ಇಲೆಕ್ಟ್ರಾನಿಕ್ ವೋಟಿಂಗ್ ಮಶೀನ್ (ಇವಿಎಂ)ನಲ್ಲಿ ತಾಂತ್ರಿಕ ದೋಷ ಕಾಣಿಸಿಕೊಂಡಿದ್ದು, ಮತದಾನವನ್ನು ಅರ್ಧಕ್ಕೆ ನಿಲ್ಲಿಸಲಾಗಿತ್ತು. ಸಂಶೇರ್ ಗಂಜ್ ವಿಧಾನಸಭಾ ಕ್ಷೇತ್ರದ ಬೂತ್ ಸಂಖ್ಯೆ 212, ಕಂಡಿಯಲ್ಲಿ ಬೂತ್ ಸಂಖ್ಯೆ 130, ಕೂಚ್ ಬಿಹಾರ್‌ನ ಬೂತ್ ಸಂಖ್ಯೆ 229, ಮಾಲ್ಡಾ ಜಿಲ್ಲೆಯ ಹಬೀಬ್ ಪುರ್ ಕ್ಷೇತ್ರದ 231ನೇ ಬೂತ್, ಸಿಲಿಗುರಿ ಬೂತ್ ಸಂಖ್ಯೆ 26/31 ಮತ್ತು ನಂದಿ ಗ್ರಾಮದ ಇವಿಎಂ ತಾಂತ್ರಿಕ ದೋಷಗಳಿಂದ ಮತದಾನ ತಡವಾಯಿತು.

ಪಶ್ಚಿಮ ಬಂಗಾಳ ಮತ್ತು ತಮಿಳುನಾಡಿನಲ್ಲಿ ಪ್ರಜಾಪ್ರಭುತ್ವದ ಹಬ್ಬವಾದ ವಿಧಾನಸಭಾ ಚುನಾವಣೆಯು ಹಲವು ಅಹಿತಕರ ಘಟನೆಗಳಿಗೆ ಸಾಕ್ಷಿಯಾಗಿದೆ. ಟಿಎಂಸಿ ಗೂಂಡಾಗಳು ಚುನಾವಣಾ ಅಭ್ಯರ್ಥಿಗಳ ಮೇಲೆಯೇ ಹಲ್ಲೆ ನಡೆಸಿ ಉದ್ಧಟತನ ಮೆರಿದಿದೆ.

ಪ.ಬಂಗಾಳದಲ್ಲಿ ಟಿಎಂಸಿ ಗೂಂಡಾಗಳ ಅಟ್ಟಹಾಸ

ಪ.ಬಂ.ಬಿಜೆಪಿ ಅಭ್ಯರ್ಥಿಗೆ ಥಳಿತ: ವಿಡಿಯೋ ವೈರಲ್

ಕುಮಾರ್‌ಗಂಜ್: ಪಶ್ಚಿಮ ಬಂಗಾಳಲ್ಲಿ ಆಳುವ ಟಿಎಂಸಿಯ ಗೂಂಡಾಗಿರಿಗೆ ಪ್ರತ್ಯಕ್ಷ ಸಾಕ್ಷಿ ಎಂಬಂತೆ, ಚುನಾವಣೆಯ ಸಂದರ್ಭದಲ್ಲೇ ಕುಮಾರ್ ಗಂಜ್‌ನಲ್ಲಿ ಬಿಜೆಪಿ ಅಭ್ಯರ್ಥಿ ಸುವೇಂದು ಸರ್ಕಾರ್ ಮೇಲೆ ತೀವ್ರ ಹಲ್ಲೆ ನಡೆಸಲಾಗಿದೆ. ಪೊಲೀಸರ ಸಮ್ಮುಖದಲ್ಲೇ ಟಿಎಂಸಿ ಕಾರ್ಯಕರ್ತರು ಈ ಹಲ್ಲೆ ನಡೆಸಿರುವ ವಿಡಿಯೋ ವೈರಲ್ ಆಗಿದೆ. ಕುಮಾರ್ ಗಂಜ್‌ನಲ್ಲಿ ಮತದಾನದ ಮೇಲೆ ಹಿಂಸಾಚಾರದ ಕರಿನೆರಳು ಆವರಿಸಿತು. ಪ್ರದೇಶದಲ್ಲಿ ಗಲಭೆ ನಡೆದಿರುವ ಮಾಹಿತಿಯ ಹಿನ್ನೆಲೆಯಲ್ಲಿ ಸರ್ಕಾರ್ ಮತಗಟ್ಟೆಯತ್ತ ಹೋಗುತ್ತಿದ್ದಾಗ ಈ ಘಟನೆ ನಡೆದಿದೆ.ಬಿಜೆಪಿ ಅಭ್ಯರ್ಥಿಯನ್ನು ತಡೆದು ಥಳಿಸಲಾಗಿದ್ದು, ತದನಂತರ ಅವರನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ಕರೆದೊಯ್ಯಲಾಯಿತು ಎಂದು ಬಿಜೆಪಿ ನಾಯಕರು ತಿಳಿಸಿದ್ದಾರೆ. ಪೊಲೀಸರ ಸಮ್ಮುಖದಲ್ಲಿ ದಾಳಿ ನಡೆದಿರುವುದು ಅಲ್ಲಿನ ಗೂಂಡಾರಾಜ್‌ಗೆ ಸಾಕ್ಷಿಯಾಯಿತು.ಘಟನೆಯನ್ನು ಗಂಭೀರವಾಗಿ ಪರಿಗಣಿಸಿದ ಭಾರತೀಯ ಚುನಾವಣಾ ಆಯೋಗ, ತಕ್ಷಣ ಕ್ರಮ ಕೈಗೊಳ್ಳುವಂತೆ ಸೂಚಿಸಿದೆ, ಹಲ್ಲೆಗೆ ಸಂಬಂಧಿಸಿದ ವೀಡಿಯೊ ದೃಶ್ಯಗಳಲ್ಲಿ ಕಂಡುಬರುವ ವ್ಯಕ್ತಿಗಳನ್ನು ಬಂಧಿಸಲು ಆದೇಶಿಸಿದೆ. ಬಿಜೆಪಿಯ ಮತಗಟ್ಟೆ ಏಜೆಂಟ್ ಅನ್ನು ಟಿಎಂಸಿ ಕಾರ್ಯಕರ್ತರು ಮತಗಟ್ಟೆಗೆ ಪ್ರವೇಶಿಸದಂತೆ ತಡೆದಿದ್ದಾರೆ. ಇದು ಕ್ಷೇತ್ರದಲ್ಲಿ ಉದ್ವಿಗ್ನತೆಯನ್ನು ಹೆಚ್ಚಿಸಿತ್ತು. ಆದರೆ ಆಡಳಿತಾರೂಢ ಟಿಎಂಸಿ ಎಂದಿನಂತೆ ಈ ಆರೋಪಗಳನ್ನು ಅಲ್ಲಗಳೆದಿದೆ.

ಮೇ 4 ಟಿಎಂಸಿಯ ಎಕ್ಸ್‌ಪೈರಿ ಡೇಟ್

ಬಂಗಾಳ ಚುನಾವಣಾ ಪ್ರಚಾರದಲ್ಲಿ ಮೋದಿ ಭವಿಷ್ಯ

ಮಥುರಾಪುರ್: ಪಶ್ಚಿಮ ಬಂಗಾಳದಲ್ಲಿ 15 ವರ್ಷಗಳ ಕಾಲ ನಡೆದ ಟಿಎಂಸಿಯ ''ಮಹಾಜಂಗಲ್‌ರಾಜ್ ಮತ್ತು ಸಿಂಡಿಕೇಟ್‌ರಾಜ್'' ವ್ಯವಸ್ಥೆಗೆ ಮೇ 4 ಎಕ್ಸ್‌ಪೈರಿ ಡೇಟ್ ಆಗಿದ್ದು, ಅನಂತರ ಜನತೆ ಬಿಜೆಪಿ ಆಡಳಿತದಲ್ಲಿ ಭಯಮುಕ್ತರಾಗಿ ನೆಮ್ಮದಿಯ ಬಾಳುವೆ ನಡೆಸಬಹುದು ಎಂಬುದಾಗಿ ಪ್ರಧಾನಿ ನರೇಂದ್ರ ಮೋದಿ ಗುರುವಾರ ಬಂಗಾಲದ ಜನತೆಗೆ ಭರವಸೆ ನೀಡಿದರು.ಚುನಾವಣೆಯ ಎರಡನೇ ಹಂತದ ಮತದಾನಕ್ಕೂ ಮುನ್ನ ಕೃಷ್ಣನಗರದಲ್ಲಿ ರ‍್ಯಾಲಿಯನ್ನುದ್ದೇಶಿಸಿ ಮಾತನಾಡಿದ ಮೋದಿ, ರಾಜ್ಯದ ಮಹಿಳೆಯರು ಮತ್ತು ಮಕ್ಕಳ ಕಲ್ಯಾಣವನ್ನು ಗುರಿಯಾಗಿಟ್ಟುಕೊಂಡು 10 ಅಂಶಗಳ ಗ್ಯಾರಂಟಿ ನೀಡಿದ್ದಾರೆ. ನಮ್ಮ ಪಕ್ಷ ಅಧಿಕಾರಕ್ಕೆ ಬಂದರೇ ಮಹಿಳೆಯರು ಮತ್ತು ಹೆಣ್ಣುಮಕ್ಕಳ ಮೇಲೆ ದೌರ್ಜನ್ಯ ಎಸಗುವವರಿಗೆ ಶಿಕ್ಷೆಯಾಗುತ್ತದೆ ಎಂದು ಮೋದಿ ಪ್ರತಿಜ್ಞೆ ಮಾಡಿದರು. ಪ್ರತಿ ಬ್ಲಾಕ್‌ನಲ್ಲಿ ಮಹಿಳಾ ಠಾಣೆ ಇರುತ್ತದೆ. ಮಹಿಳೆಯರನ್ನು ದೊಡ್ಡ ಪ್ರಮಾಣದಲ್ಲಿ ಪೊಲೀಸ್ ಪಡೆಗೆ ನೇಮಿಸಿಕೊಳ್ಳಲಾಗುತ್ತದೆ ಎಂದರು. ಅಧಿಕಾರಕ್ಕೆ ಬಂದ ಒಂದು ವರ್ಷದೊಳಗೆ, 36,000 ರೂ.ಗಳನ್ನು ಮಹಿಳೆಯರ ಖಾತೆಗಳಿಗೆ ವರ್ಗಾಯಿಸಲಾಗುತ್ತದೆ. ಪದವೀಧರ ವಿದ್ಯಾರ್ಥಿನಿಯರಿಗೆ 50,000 ರೂ. ಹಾಗೂ ಗರ್ಭಿಣಿ ಮಹಿಳೆಯರಿಗೆ 21,000 ರೂ.ಗಳ ಆರ್ಥಿಕ ನೆರವು ಸಿಗುತ್ತದೆ ಎಂದು ಅವರು ಹೇಳಿದರು.ಈ ರೀತಿಯ ಹತ್ತು ಭರವಸೆಗಳನ್ನು ಜನತೆಗೆ ನೀಡಿದ್ದಾರೆ.

ಬಿಜೆಪಿ ಗೆದ್ದರೆ ನುಸುಳುಕೋರರಿಗೆ ಅವಕಾಶ ಇಲ್ಲ

ಬಾಲಾಘರ್: ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದದ್ದೇ ಆದರೆ ಒಬ್ಬನೇ ಒಬ್ಬ ನುಸುಳುಕೋರನಿಗೆ ರಾಜ್ಯಕ್ಕೆ ಪ್ರವೇಶಿಸಲು ಅವಕಾಶ ನೀಡುವುದಿಲ್ಲಷ್ಟೇ ಮಾತ್ರವಲ್ಲ, ಈಗಾಗಲೇ ಇಲ್ಲಿರುವ ಅಕ್ರಮ ನುಸುಳುಕೋರರನ್ನು ಹೊರಹಾಕಲಾಗುವುದು. ಪಶ್ಚಿಮ ಬಂಗಾಳವನ್ನು ಭೀತಿಮುಕ್ತ, ಮಹಿಳೆಯರಿಗೆ ಸುರಕ್ಷಿತ ರಾಜ್ಯವನ್ನಾಗಿಸಲಾಗುವುದು ಎಂಬುದಾಗಿ ಕೇಂದ್ರ ಗೃಹಸಚಿವ ಅಮಿತ್ ಶಾ ಗುರುವಾರ ಘೋಷಿಸಿದ್ದಾರೆ. ರಾಜ್ಯದಲ್ಲಿ ನನ್ನ 30ನೇ ಸಾರ್ವಜನಿಕ ರ‍್ಯಾಲಿ ಇದಾಗಿದೆ. ಪ.ಬಂ.ದಲ್ಲಿ ಅಕ್ರಮ ನುಸುಳುವಿಕೆಯಿಂದಾಗಿ ರಾಜ್ಯದ ಆರ್ಥಿಕತೆ ಮತ್ತು ದೇಶದ ಭದ್ರತೆಗೆ ಗಂಭೀರ ಹಾನಿಯುಂಟಾಗಿದೆ.ಈ ನುಸುಳುಕೋರರು ರಾಜ್ಯದ ಯುವಜನತೆಯ ಉದ್ಯೋಗಗಳನ್ನು ಕಸಿಯುತ್ತಿದ್ದಾರೆ.ಬಡವರ ಪಡಿತರವನ್ನು ಕಸಿದುಕೊಳ್ಳುತ್ತಿದ್ದಾರೆ.ದೇಶದ ಭದ್ರತೆಗೆ ಅಪಾಯ ತರುವ ಕೃತ್ಯಗಳಲ್ಲಿ ತೊಡಗಿದ್ದಾರೆ.

ಸೇಲಂನ ಬೂತ್‌ನೊಳಗೆ ಏಜೆಂಟರ ಮಧ್ಯೆ ಫೈಟ್

ಸೇಲಂ: ತಮಿಳುನಾಡಿನ ಸೇಲಂನ ಅರಿಸಿಪಾಳಯಂನಲ್ಲಿ ಬೂತ್ ಸಂಖ್ಯೆ 139ರಲ್ಲಿ ಏಕಾಏಕಿ ಸಂಘರ್ಷ ಏರ್ಪಟ್ಟಿದೆ. ಇಲ್ಲಿ ಎಐಎಡಿಎಂಕೆ ಮತ್ತು ಡಿಎಂಕೆ ಪಕ್ಷಗಳ ಬೂತ್ ಏಜೆಂಟರ ಮಧ್ಯೆ ಸಂಘರ್ಷ ಏರ್ಪಟ್ಟಿದೆ. ಪ್ರತ್ಯಕ್ಷ ಸಾಕ್ಷಿಗಳ ಪ್ರಕಾರ, ಎಐಎಡಿಎಂಕೆ ಪಕ್ಷದ ಎಂ.ಕಂದಸಾಮಿ ಮತ್ತು ಡಿಎಂಕೆ ಪಕ್ಷದ ಸಿ.ಸೆಂಥಿಲ್ ಮಧ್ಯೆ ಪೋಲಿಂಗ್ ಬೂತ್‌ನೊಳಗೆ ವಾಗ್ವಾದ ನಡೆದಿದೆ.

ವಾಗ್ವಾದದಿಂದ ಸಂಘರ್ಷ: ಸೆಂಥಿಲ್–ಕಂದಸಾಮಿ ನಡುವಿನ ವಾಗ್ವಾದವನ್ನು ಸ್ವಲ್ಪ ಕೇಳಿಸಿಕೊಂಡ ವಾರ್ಡ್ 27ರ ಮತದಾರೆ ಎಸ್.ಲೋಕನಾಯಕಿ, ತಮ್ಮ ಬಗ್ಗೆ ಮಾತನಾಡುತ್ತಿದ್ದಾರೆಂದು ತಪ್ಪುಕಲ್ಪನೆಯಿಂದ ಕಂದಸಾಮಿ ಅವರನ್ನು ಬೈಯ್ದಿದ್ದು, ಕಂದಸಾಮಿ ಜತೆಗಿನ ವಾಗ್ವಾದದ ವೇಳೆ ಅವರಿಗೆ ಕಪಾಳಮೋಕ್ಷ ಮಾಡಿದ್ದಾರೆ.

ಕಿರುಸುದ್ದಿ

ಬಿಕಾಜಿ ಫುಡ್ಸ್ ಸಂಸ್ಥಾಪಕ ರತನ್ ಅಗರ್ವಾಲ್ ನಿಧನ

ಹೊಸದಿಲ್ಲಿ: ಬಿಕಾಜಿ ಫುಡ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್‌ನ ಸಂಸ್ಥಾಪಕ ಹಾಗು ಅಧ್ಯಕ್ಷ ಶಿವ ರತನ್ ಅಗರ್ವಾಲ್ ಅವರು ವಯೋಸಹಜ ಕಾಯಿಲೆಯಿಂದ ನಿಧನರಾದರು. ಭಾರತೀಯ ಸಾಂಪ್ರದಾಯಿಕ ತಿಂಡಿಗಳನ್ನು ಜಾಗತಿಕ ವ್ಯಾಪಾರವಾಗಿ ಪರಿವರ್ತಿಸುವಲ್ಲಿ ಪ್ರವರ್ತಕರಾಗಿ ವ್ಯಾಪಕವಾಗಿ ಪರಿಗಣಿಸಲ್ಪಟ್ಟ ಅಗರ್‌ವಾಲ್, ಬಿಕಾಜಿಯನ್ನು ಮನೆ ಮಾತಾಗಿ ಪರಿವರ್ತಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.

ಪೈಲಟ್ ಸೆಲ್ಫಿಯಿಂದ ಎಫ್ 15ಕೆ ಜೆಟ್‌ಗಳ ಅಪಘಾತ!

ಸಿಯೋಲ್: 2021ರ ಯುದ್ಧ ವಿಮಾನಗಳ ಅಪಘಾತಕ್ಕೆ ಹಾರಾಟದ ವೇಳೆ ಪೈಲಟ್‌ಗಳು ಸೆಲ್ಫಿ ಚಿತ್ರಗಳು ಮತ್ತು ವಿಡಿಯೋ ಚಿತ್ರೀಕರಿಸಿದ್ದು ಕಾರಣವೆಂದು ದಕ್ಷಿಣ ಕೊರಿಯಾ ವಾಯುಪಡೆ ಗುರುವಾರ ಬಹಿರಂಗಗೊಳಿಸಿದ್ದು, ರಾಷ್ಟ್ರದ ಸಾರ್ವಜನಿಕರ ಕ್ಷಮೆಯಾಚಿಸಿದೆ. 2021ರ ಡಿಸೆಂಬರ್‌ನಲ್ಲಿ ಡೇಗೂನಲ್ಲಿ ಎಫ್–15ಕೆ ಯುದ್ಧ ವಿಮಾನಗಳ ಪರಸ್ಪರ ಡಿಕ್ಕಿಯಾಗಿದ್ದವು.

ಮಧ್ಯಪ್ರಾಚ್ಯ ಯುದ್ಧ ನಿಲ್ಲಿಸಲು ಚೀನಾ ಪ್ರಯತ್ನ

ಬ್ಯಾಂಕಾಕ್: ಮಧ್ಯಪ್ರಾಚ್ಯ ಯುದ್ಧದಲ್ಲಿ ಅನೌಪಚಾರಿಕ ಮಧ್ಯವರ್ತಿಯಾಗಿ ಚೀನಾ ಪಾತ್ರವು ವಿಶ್ವದ ಗಮನ ಸೆಳೆಯುತ್ತಿದೆ. ಅಮೆರಿಕ ಯುದ್ಧ ನೀತಿಗಳು ದೀರ್ಘಕಾಲದ ಮೈತ್ರಿ ಇರಾನ್‌ಗೆ ಒತ್ತಡ ಹಾಕುತ್ತಿರುವಾಗ, ಜಾಗತಿಕ ಮಟ್ಟದಲ್ಲಿ ಜವಾಬ್ದಾರಿಯುತ ಶಕ್ತಿಯಾಗಿ ಬಿಂಬಿಸಿಕೊಳ್ಳಲು ಚೀನಾ ಪ್ರಯತ್ನಿಸುತ್ತಿದೆ.

ಇತ್ತೀಚಿನ ವರ್ಷಗಳಲ್ಲಿ ಚೀನಾದ ಅಂತಾರಾಷ್ಟ್ರೀಯ ರಾಜತಾಂತ್ರಿಕ ನಡೆಗಳು ಹೆಚ್ಚಾಗಿವೆ. ತನ್ನ ಗಡಿಗಳಿಂದ ದೂರ ಯಾವುದೇ ಸಂಘರ್ಷಗಳಲ್ಲಿ ತೊಡಗಿಕೊಳ್ಳಲು ಹಿಂದಿನಿಂದ ಹಿಂದೇಟು ಹಾಕುತ್ತಿದ್ದು, ಆಗ್ನೇಯ ಏಷ್ಯಾದಿಂದ ಯುರೋಪ್‌ವರೆಗೆ ಸಂಘರ್ಷಗಳನ್ನು ಮಧ್ಯವರ್ತಿಯಾಗಿ ತಡೆಯುವ ಪ್ರಯತ್ನಗಳ ಮೂಲಕ ಅದು ಪ್ರಮುಖ ಜಾಗತಿಕ ಶಕ್ತಿಯಾಗಿ ಹೊರಹೊಮ್ಮಿದೆ. ಇರಾನ್ ಯುದ್ಧದ ಸಂದರ್ಭದಲ್ಲಿ ಬೀಜಿಂಗ್ ಅಧಿಕೃತ ಮಧ್ಯವರ್ತಿಯಾಗಿಲ್ಲ, ಆದರೆ ವಾಷಿಂಗ್ಟನ್ ಮತ್ತು ಟೆಹ್ರಾನ್ ಸೇರಿದಂತೆ ಎಲ್ಲ ಪಕ್ಷಗಳೂ ಸಂಘರ್ಷ ಶಮನಗೊಳಿಸಲು ಚೀನಾ ಪ್ರಮುಖ ಪಾತ್ರ ವಹಿಸಿದೆ ಎಂದು ಹೇಳುತ್ತಿವೆ. ನಿರ್ಬಂಧಿತ ಇರಾನಿಯನ್ ತೈಲದ ಅತಿದೊಡ್ಡ ಖರೀದಿ ದಾರನಾದ ಬೀಜಿಂಗ್ ತನ್ನ ಪ್ರಭಾವವನ್ನು ಬಳಸಿ ಇರಾನ್ ಅನ್ನು ಪಾಕಿಸ್ತಾನದಲ್ಲಿ ನಡೆದ ನೇರ ಮಾತುಕತೆಗೆ ಮರಳುವಂತೆ ಪ್ರೇರೇಪಿಸಿದೆ ಎನ್ನಲಾಗಿದೆ.

ಚೀನಾ ರಾಯಭಾರಿ-ಪಾಕ್ ಪ್ರಧಾನಿ ಚರ್ಚೆ: ಪಾಕಿಸ್ತಾನದಲ್ಲಿನ ಚೀನಾ ರಾಯಭಾರಿ ಜಿಯಾಂಗ್ ಜೈದೋಂಗ್ ಅವರು ಗುರುವಾರ ಪ್ರಧಾನಿ ಶೆಹಬಾಜ್ ಶರೀಫ್‌ರನ್ನು ಭೇಟಿಯಾಗಿ ಪಶ್ಚಿಮ ಏಷ್ಯಾದ ಯುದ್ಧ ಪರಿಸ್ಥಿತಿ ಹಾಗೂ ಅಮೆರಿಕಾ–ಇರಾನ್ ಮಧ್ಯೆ ಯುದ್ಧ ಅಂತ್ಯಗೊಳಿಸಲು ಇಸ್ಲಾಮಾಬಾದ್ ಕೈಗೊಂಡಿರುವ ಶಾಂತಿ ಪ್ರಯತ್ನಗಳ ಕುರಿತು ಚರ್ಚಿಸಿದರು.

ಐಆರ್‌ಎಸ್ ಅಧಿಕಾರಿ ಪುತ್ರಿ ಮೇಲೆ ಅತ್ಯಾಚಾರ

ಮೃತಯುವತಿ ದಿಲ್ಲಿ ಐಐಟಿ ಪದವೀಧರೆ

ಹೊಸದಿಲ್ಲಿ: ರಾಷ್ಟ್ರರಾಜಧಾನಿ ದಿಲ್ಲಿಯ ದಕ್ಷಿಣ ಭಾಗದ ಕೈಲಾಶ್ ಹಿಲ್ಸ್ ಪ್ರದೇಶದಲ್ಲಿ 22 ವರ್ಷದ ಯುವತಿಯ ಮೇಲೆ ನಡೆದ ಅತ್ಯಾಚಾರ ಮತ್ತು ಕ್ರೂರ ಹತ್ಯೆ ಪ್ರಕರಣ ದೇಶವನ್ನೇ ಬೆಚ್ಚಿಬೀಳಿಸಿದೆ. ಭಾರತೀಯ ಆದಾಯ ಸೇವೆ (ಐಆರ್‌ಎಸ್) ಅಧಿಕಾರಿಯ ಪುತ್ರಿಯಾಗಿದ್ದ ಐಐಟಿ ದಿಲ್ಲಿ ಪದವೀಧರೆ ಯುವತಿಯನ್ನು ಮನೆಗೆ ನುಗ್ಗಿದ ಮಾಜಿ ಕೆಲಸಗಾರನೇ ಅತ್ಯಾಚಾರ ನಡೆಸಿ ಕೊಂದಿರುವುದು ಪೊಲೀಸರ ಪ್ರಾಥಮಿಕ ತನಿಖೆಯಿಂದ ಬೆಳಕಿಗೆ ಬಂದಿದೆ.

ಪೊಲೀಸರ ಮಾಹಿತಿ ಪ್ರಕಾರ, 19 ವರ್ಷದ ರಾಹುಲ್ ಮೀನಾ ಎಂಬಾತ ಈ ಪ್ರಕರಣದ ಪ್ರಮುಖ ಆರೋಪಿಯಾಗಿದ್ದು, ಬುಧವಾರ ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದೆ. ನ್ಯಾಯಾಲಯವು ಆರೋಪಿಯನ್ನು ನಾಲ್ಕು ದಿನಗಳ ಪೊಲೀಸ್ ಕಸ್ಟಡಿಗೆ ಒಪ್ಪಿಸಿದೆ.

30 ನಿಮಿಷಗಳಲ್ಲಿ ಭೀಕರಕೃತ್ಯ: ಆರೋಪಿ ಬೆಳಿಗ್ಗೆ ಸುಮಾರು 6.30ರ ವೇಳೆಗೆ ಕಾಲೊನಿಗೆ ಪ್ರವೇಶಿಸಿ, 6.49ರ ವೇಳೆಗೆ ಮನೆಗೆ ನುಗ್ಗಿದ್ದಾನೆ. ಯುವತಿಯ ಪೋಷಕರು ಜಿಮ್‌ಗೆ ತೆರಳಿರುವ ಸಮಯವನ್ನು ಪೂರ್ವಭಾವಿಯಾಗಿ ತಿಳಿದಿದ್ದ ಆತ, ಮನೆಯ ಮೇಲಿನ ಮಹಡಿಯ ಸ್ಟಡಿ ರೂಂಗೆ ನೇರವಾಗಿ ತೆರಳಿ ದಾಳಿ ನಡೆಸಿದ್ದಾನೆ.

ಪೊಲೀಸರ ಪ್ರಕಾರ, ಮೊದಲು ಯುವತಿಯನ್ನು ಉಸಿರುಗಟ್ಟಿಸಿ ಪ್ರಜ್ಞೆ ತಪ್ಪಿಸಿದ ಬಳಿಕ ಅತ್ಯಾಚಾರ ನಡೆಸಿ, ನಂತರ ಗಂಭೀರವಾಗಿ ಹಲ್ಲೆ ಮಾಡಿ ಹತ್ಯೆಗೈದಿದ್ದಾನೆ. ಬಳಿಕ ರಕ್ತದ ಕಲೆಗಳಿದ್ದ ದೇಹವನ್ನು ಮೆಟ್ಟಿಲುಗಳ ಮೂಲಕ ಕೆಳಕ್ಕೆ ಎಳೆದೊಯ್ದಿದ್ದಾನೆ.

ಕೇಂದ್ರ ಸರ್ಕಾರ ನಮ್ಮ ಜತೆಗಿತ್ತು: ಜ.ನರವಣೆ

ಹೊಸದಿಲ್ಲಿ: 2020ರಲ್ಲಿ ಭಾರತ–ಚೀನಾ ನಡುವಿನ ಗಡಿ ಉದ್ವಿಗ್ನತೆಯ ಸಮಯದಲ್ಲಿ ಕೇಂದ್ರ ಸರ್ಕಾರ ತಮ್ಮ ಕೈಬಿಟ್ಟಿತ್ತು ಎಂಬ ಆರೋಪವನ್ನು ಸ್ವತಃ ನಿವೃತ್ತ ಸೇನಾ ಮುಖ್ಯಸ್ಥ ಜ.ಮನೋಜ್ ಮುಕುಂದ್ ನರವಣೆ ಅವರೇ ತಳ್ಳಿಹಾಕಿದ್ದಾರೆ.

ಆಗಿನ ಕಠಿಣ ಪರಿಸ್ಥಿತಿ ವೇಳೆಯಲ್ಲಿ ಕೇಂದ್ರ ಸರ್ಕಾರ ಸಂಪೂರ್ಣ ಬೆಂಬಲ ನೀಡಿದ್ದು, ಅಗತ್ಯ ಬಿದ್ದರೆ ಚೀನಾ ಸೈನಿಕರ ಮೇಲೆ ಗುಂಡು ಹಾರಿಸಲೂ ಭಾರತೀಯ ಸೇನೆಗೆ ಪೂರ್ಣ ಅಧಿಕಾರ ಇತ್ತು ಎಂದಿದ್ದಾರೆ.

ಖಾಸಗಿ ವಾಹಿನಿಯೊಂದಕ್ಕೆ ಸಂದರ್ಶನ ನೀಡಿರುವ ಜ.ನರವಣೆ ಅವರು, ರೆಚಿನ್ ಲಾ ಪಾಸ್ ಪ್ರದೇಶದಲ್ಲಿ ನಡೆದ ಮುಖಾಮುಖಿ ವೇಳೆ ಸರ್ಕಾರ ತಮಗೆ ನೀಡಿದ ನಿರ್ದೇಶನಗಳು ಸ್ಪಷ್ಟವಾಗಿದ್ದವು. ಯೋಧರ ಸುರಕ್ಷತೆಗೆ ಧಕ್ಕೆಯಾಗುವ ಪರಿಸ್ಥಿತಿ ಎದುರಾದರೆ ಗುಂಡು ಹಾರಿಸಲು ಹಕ್ಕು ಇತ್ತು ಎಂಬುದನ್ನೂ ಅವರು ಸ್ಪಷ್ಟಪಡಿಸಿದರು.

ಈ ವಿಚಾರದಲ್ಲಿ ಕೆಲವು ತಿಂಗಳ ಹಿಂದೆ ಸಂಸತ್ತಿನಲ್ಲಿ ರಾಜಕೀಯ ವಿವಾದ ಉಂಟಾಗಿತ್ತು. ಜ.ನರವಣೆ ಅವರ ಫೋರ್ ಸ್ಟಾರ್ಸ್ ಆಫ್ ಡೆಸ್ಟಿನಿ ಪುಸ್ತಕದಲ್ಲಿ ಪ್ರಧಾನಿಗಳು ನಿಮಗೆ ಸೂಕ್ತವೆಂದು ಭಾವಿಸಿದಂತೆ ಮಾಡಿ ಎಂದಿದ್ದರು ಎಂಬ ಉಲ್ಲೇಖವಿತ್ತು. ಆಗ ವಿಪಕ್ಷ ನಾಯಕ ರಾಹುಲ್ ಗಾಂಧಿ ಅವರು ಈ ಬಗ್ಗೆ ಪ್ರಸ್ತಾಪಿಸಿ, ವಿವಾದವೆಬ್ಬಿಸಿದ್ದರು.

ಆದರೆ, ಈ ಎಲ್ಲ ಆರೋಪಗಳನ್ನು ಜ.ನರವಣೆ ಅವರು ತಳ್ಳಿಹಾಕಿದ್ದಾರೆ. ಅಲ್ಲದೆ ತಾವು ಇದನ್ನು 'ಕಾರ್ಯಾಚರಣೆಯ ಸಂಪೂರ್ಣ ಸ್ವಾತಂತ್ರ್ಯ' ಎಂದು ಅರ್ಥೈಸಿಕೊಂಡಿದ್ದೇನೆ ಎಂದು ತಿಳಿಸಿದ್ದಾರೆ.

ಬದರಿನಾಥ ದೇವಾಲಯ ಪ್ರವೇಶಕ್ಕೆ ಮುಕ್ತ

ಡೆಹ್ರಾಡೂನ್: ಉತ್ತರಾಖಂಡದ ಗರ್ಹ್ವಾಲ್ ಹಿಮಾಲಯ ಪ್ರದೇಶದ ಬದರಿನಾಥ್ ದೇವಾಲಯದ ಬಾಗಿಲುಗಳು ಗುರುವಾರ ಭಕ್ತರಿಗಾಗಿ ಮತ್ತೆ ಪ್ರವೇಶಕ್ಕೆ ಮುಕ್ತವಾಗಿದೆ. ಪುನಾರಂಭದ ನಂತರದ ಮೊದಲ ಪೂಜೆಯನ್ನು ಪ್ರಧಾನಿ ನರೇಂದ್ರ ಮೋದಿಯವರ ಹೆಸರಿನಲ್ಲಿ ನಡೆಸಲಾಯಿತು. ಚಮೋಲಿ ಜಿಲ್ಲೆಯಲ್ಲಿರುವ ದೇವಾಲಯದ ಬಾಗಿಲುಗಳನ್ನು ವೈದಿಕ ಆಚರಣೆಗಳು ಮತ್ತು ಪ್ರಾರ್ಥನೆಗಳ ನಂತರ ಬೆಳಗ್ಗೆ 6.15ಕ್ಕೆ ತೆರೆಯಲಾಯಿತು. ದೇಶ–ವಿದೇಶಗಳಿಂದ ಸುಮಾರು 15,000 ಯಾತ್ರಾರ್ಥಿಗಳು ಈ ಸಮಾರಂಭದಲ್ಲಿ ಭಾಗವಹಿಸಿದ್ದರು. ಉತ್ತರಾಖಂಡದ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಮತ್ತು ಬಿಜೆಪಿ ರಾಜ್ಯ ಅಧ್ಯಕ್ಷ ಮಹೇಂದ್ರ ಭಟ್ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿ ಯಾತ್ರಾರ್ಥಿಗಳೊಂದಿಗೆ ಸಂವಹನ ನಡೆಸಿ ಆಡಳಿತಾತ್ಮಕ ವ್ಯವಸ್ಥೆಗಳ ಬಗ್ಗೆ ಪ್ರತಿಕ್ರಿಯೆ ಪಡೆದರು.

ಬಗೆದಷ್ಟು ಬಹಿರಂಗಗೊಳ್ಳುತ್ತಿದೆ ನಾಸಿಕ್ ಟಿಸಿಎಸ್ ಘಟಕದ ಹಗರಣ

ಪಾಸ್‌ವರ್ಡ್‌ನಲ್ಲೂ ಅಶ್ಲೀಲ ಭಾಷೆ

ಹೊಸದಿಲ್ಲಿ: ನಾಸಿಕ್‌ನ ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ (ಟಿಸಿಎಸ್) ಘಟಕದಲ್ಲಿ ನಡೆಯುತ್ತಿರುವ ಲೈಂಗಿಕ ಕಿರುಕುಳ ಮತ್ತು ಧಾರ್ಮಿಕ ಮತಾಂತರದ ತನಿಖೆಯ ವೇಳೆ, ಕಂಪನಿಯ ಪಾಸ್‌ವರ್ಡ್‌ಗಳನ್ನು ಅಶ್ಲೀಲ ಭಾಷೆಯಲ್ಲಿ ಸಂಗ್ರಹಿಸಿಡಲಾಗಿತ್ತು ಎಂಬ ಆಘಾತಕಾರಿ ಅಂಶವನ್ನು ಸಂತ್ರಸ್ತೆಯೊಬ್ಬರು ಬಹಿರಂಗಪಡಿಸಿದ್ದಾರೆ.

ಮಹಿಳಾ ಆಯೋಗದ ಮುಂದೆ ಹೇಳಿಕೆ ನೀಡಿರುವ ಸಂತ್ರಸ್ತೆ, ತರಬೇತಿ ದಿನಗಳಿಂದಲೂ ಆರೋಪಿ ರಜಾ ರಫೀಕ್ ಮೆಮನ್ ತನ್ನನ್ನು ಮಾನಸಿಕ ಕಿರುಕುಳ ಮತ್ತು ಅಶ್ಲೀಲ ಸಂಭಾಷಣೆಗೆ ಒಳಪಡಿಸುತ್ತಿದ್ದ ಎಂದು ತಿಳಿಸಿದ್ದಾರೆ. ಮೆಮನ್ ಧಾರ್ಮಿಕ ಭಾವನೆಗಳಿಗೆ ಧಕ್ಕೆ ತರುವಂತೆ ಮಾತನಾಡುತ್ತಿದ್ದ. ಈ ಬಗ್ಗೆ ಘಟಕದ ವ್ಯವಸ್ಥಾಪಕರಿಗೆ ದೂರು ನೀಡಿದರೂ ಯಾವುದೇ ಕ್ರಮ ಕೈಗೊಂಡಿರಲಿಲ್ಲ, ಇತರ ಇಬ್ಬರು ಆರೋಪಿಗಳಾದ ದಾನಿಶ್ ಮತ್ತು ತೌಸಿಫ್ ಅಪಪ್ರಚಾರ ಮಾಡಿದ್ದರು ಎಂದು ಸಂತ್ರಸ್ತೆ ದೂರಿದ್ದಾರೆ.

ಸುಳ್ಳು ಭರವಸೆ ನೀಡಿ ದೈಹಿಕ ಸಂಪರ್ಕ: ದಾನಿಶ್ ಶೇಖ್ ಎಂಬ ಸಹೋದ್ಯೋಗಿ ಮದುವೆಯ ಸುಳ್ಳು ಭರವಸೆ ನೀಡಿ ದೈಹಿಕ ಸಂಬಂಧ ಬೆಳೆಸಿದ್ದಾನೆ ಎಂಬ ದೂರಿನೊಂದಿಗೆ ಈ ಪ್ರಕರಣ ಬೆಳಕಿಗೆ ಬಂದಿತ್ತು. ದಾನಿಶ್ ಸಹೋದರಿ ನಿದಾ ಖಾನ್ ಸಂತ್ರಸ್ತೆಯ ಧರ್ಮದ ಬಗ್ಗೆ ಅವಹೇಳನಕಾರಿ ಮಾತುಗಳನ್ನಾಡಿ, ಮತಾಂತರಕ್ಕೆ ಒತ್ತಡ ಹೇರಿದ್ದರು ಎಂಬ ಆರೋಪವಿದೆ. ಪೊಲೀಸರ ತನಿಖೆ ಆರಂಭವಾದಂತೆ, ಫೆಬ್ರವರಿ 2022 ಮತ್ತು ಮಾರ್ಚ್ 2026ರ ನಡುವೆ ಹಿರಿಯ ಸಹೋದ್ಯೋಗಿಗಳು ತಮಗೆ ಲೈಂಗಿಕ ಕಿರುಕುಳ ನೀಡಿದ್ದಾರೆ ಎಂದು ಇನ್ನೂ ಏಳು ಮಹಿಳೆಯರು ದೂರು ನೀಡಿದ್ದಾರೆ. ಒಬ್ಬ ಪುರುಷ ಉದ್ಯೋಗಿ ಕೂಡ ಕೆಲಸದ ಸ್ಥಳದಲ್ಲಿ ಮತಾಂತರದ ಪ್ರಯತ್ನ ನಡೆದಿದೆ ಎಂದು ದೂರು ಸಲ್ಲಿಸಿದ್ದಾರೆ.

ಈ ಪ್ರಕರಣದಲ್ಲಿ ಎಚ್‌ಆರ ಮುಖ್ಯಸ್ಥೆ ಅಶ್ವಿನಿ ಚೈನಾನಿ ಸೇರಿದಂತೆ ಏಳು ಜನರನ್ನು ಪೊಲೀಸರು ಬಂಧಿಸಿದ್ದಾರೆ. ಬಂಧಿತ ಇತರ ಸಿಬ್ಬಂದಿಗಳಾದ ದಾನಿಶ್ ಶೇಖ್, ತೌಸಿಫ್ ಅತ್ತರ್, ರಜಾ ರಫೀಕ್ ಮೆಮನ್, ಶಾರುಖ್ ಖುರೇಷಿ, ಶಾಫಿ ಶೇಖ್ ಮತ್ತು ಆಸಿಫ್ ಅಫ್ತಾಬ್ ಅನ್ಸಾರಿಯನ್ನು ಸೇವೆಯಿಂದ ಅಮಾನತುಗೊಳಿಸಲಾಗಿದೆ. ಆರೋಪಿ ನಿದಾ ಖಾನ್ ಸದ್ಯ ತಲೆಮರೆಸಿಕೊಂಡಿದ್ದಾಳೆ.

ಕದನ ವಿರಾಮ ಅನಿರ್ದಿಷ್ಟಾವಧಿಗೆ ವಿಸ್ತರಣೆ। ಟೆಹ್ರಾನ್‌ನಲ್ಲಿ ಬೃಹತ್ ಮಿಲಿಟರಿ ರ‍್ಯಾಲಿ

ಇರಾನ್ ಬ್ಯಾಲಿಸ್ಟಿಕ್ ಕ್ಷಿಪಣಿ ಪ್ರದರ್ಶನ

ಟೆಹ್ರಾನ್: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಕದನ ವಿರಾಮವನ್ನು ಅನಿರ್ದಿಷ್ಟಾವಧಿಗೆ ವಿಸ್ತರಿಸಿದ ಬೆನ್ನಲ್ಲೇ, ಇರಾನ್, ರಾಜಧಾನಿ ಟೆಹ್ರಾನ್‌ನಲ್ಲಿ ನಡೆದ ಭಾರೀ ರ‍್ಯಾಲಿಯಲ್ಲಿ, ತನ್ನ ಸುದೀರ್ಘ ವ್ಯಾಪ್ತಿಯ ಬ್ಯಾಲಿಸ್ಟಿಕ್ ಕ್ಷಿಪಣಿಗಳನ್ನು ರಾಜಧಾನಿಯಲ್ಲಿ ಪ್ರದರ್ಶಿಸಿದೆ.

ಇರಾನ್ ಸರ್ಕಾರಿ ಸ್ವಾಮ್ಯದ ದೂರದರ್ಶನ, ರೆವಲ್ಯೂಷನ್ ಸ್ಕ್ವೇರ್ ಮೂಲಕ ಖದ್ರ್ ಬ್ಯಾಲಿಸ್ಟಿಕ್ ಕ್ಷಿಪಣಿಯನ್ನು ಸಾಗಿಸುತ್ತಿರುವ ದೃಶ್ಯಗಳನ್ನು ಪ್ರಸಾರ ಮಾಡಿದೆ. ಖದ್ರ್ ಕ್ಷಿಪಣಿಯು ಶಹಾಬ್–3ಎ ಮಾದರಿಯ ಸುಧಾರಿತ ಆವೃತ್ತಿಯಾಗಿದ್ದು, ಇದು ದ್ರವ ಮತ್ತು ಘನ ಇಂಧನ ತಂತ್ರಜ್ಞಾನವನ್ನು ಬಳಸುತ್ತದೆ. ಈ ಕ್ಷಿಪಣಿಗಳು ಕ್ಲಸ್ಟರ್ ಮ್ಯೂನಿಷನ್‌ಗಳನ್ನು ಉಡಾಯಿಸುವ ಸಾಮರ್ಥ್ಯ ಹೊಂದಿದ್ದು, ಇಸ್ರೇಲ್ ಮೇಲಿನ ದಾಳಿಯ ವೇಳೆ, ಇವುಗಳನ್ನು ಬಳಸಲಾಗಿತ್ತು. ಸಾವಿರಾರು ನಾಗರಿಕರು ಈ ರ‍್ಯಾಲಿಯಲ್ಲಿ ಪಾಲ್ಗೊಂಡು ರಾಷ್ಟ್ರಧ್ವಜಗಳನ್ನು ಬೀಸುತ್ತಾ ಮಿಲಿಟರಿ ಶಸ್ತ್ರಾಸ್ತ್ರಗಳನ್ನು ವೀಕ್ಷಿಸಿದರು.

ಗುಪ್ತಚರ ವರದಿಗಳು: ಇರಾನ್ ನೌಕಾಪಡೆ ಮತ್ತು ವಾಯುಪಡೆಗಳು ಸಂಪೂರ್ಣವಾಗಿ ನಾಶವಾಗಿವೆ ಎಂಬ ಟ್ರಂಪ್ ಅವರ ಹೇಳಿಕೆಗಳ ನಡುವೆಯೇ ಈ ಪ್ರದರ್ಶನ ನಡೆದಿದೆ. ಅಮೆರಿಕದ ಇತ್ತೀಚಿನ ಗುಪ್ತಚರ ವರದಿಯ ಪ್ರಕಾರ, ಇರಾನ್ ಇನ್ನೂ ಸಾವಿರಾರು ಕ್ಷಿಪಣಿಗಳು ಮತ್ತು ಕಾಮಿಕೇಜ್ ಡ್ರೋನ್‌ಗಳನ್ನು ಹೊಂದಿದೆ. ರಕ್ಷಣಾ ಗುಪ್ತಚರ ಸಂಸ್ಥೆಯ ನಿರ್ದೇಶಕ ಲೆಫ್ಟಿನೆಂಟ್ ಜನರಲ್ ಜೇಮ್ಸ್ ಆ್ಯಡಮ್ಸ್, ಹೌಸ್ ಆರ್ಮ್ಡ್ ಸರ್ವಿಸಸ್ ಕಮಿಟಿಗೆ ನೀಡಿರುವ ಹೇಳಿಕೆಯಲ್ಲಿ, ಈ ಶಸ್ತ್ರಾಸ್ತ್ರಗಳು ಪ್ರಾದೇಶಿಕ ಯುಎಸ್ ನೆಲೆಗಳು ಮತ್ತು ಮಿತ್ರರಾಷ್ಟ್ರಗಳಿಗೆ ಇಂದಿಗೂ ಬೆದರಿಕೆಯೊಡ್ಡಿವೆ ಎಂದು ತಿಳಿಸಿದ್ದಾರೆ.

ಶಸ್ತ್ರಾಗಾರದ ಸ್ಥಿತಿಗತಿ: ಅಮೆರಿಕ ಮತ್ತು ಇಸ್ರೇಲ್ ಪಡೆಗಳು ಐದು ವಾರಗಳ ಕಾಲ ನಿರಂತರ ವೈಮಾನಿಕ ದಾಳಿ ನಡೆಸಿದ ಹೊರತಾಗಿಯೂ ಇರಾನ್ ತನ್ನ ಶಸ್ತ್ರಾಗಾರವನ್ನು ಉಳಿಸಿಕೊಂಡಿದೆ ಎಂದು ರಕ್ಷಣಾ ಗುಪ್ತಚರ ಸಂಸ್ಥೆ ದೃಢಪಡಿಸಿದೆ. ಇರಾನ್‌ನ ಶೇ.50 ರಷ್ಟು ಕ್ಷಿಪಣಿ ಲಾಂಚರ್‌ಗಳು ಇನ್ನೂ ಸುಸ್ಥಿತಿಯಲ್ಲಿವೆ ಎಂದು ಸಿಎನ್‌ಎನ್ ತನಿಖಾ ವರದಿ ತಿಳಿಸಿದೆ. ಸಂಘರ್ಷದ ಅವಧಿಯಲ್ಲಿ ಭಾರಿ ಹಾನಿಯಾದರೂ ಇರಾನ್‌ನ ಮಿಲಿಟರಿ ಸಾಮರ್ಥ್ಯ ಉಳಿದುಕೊಂಡಿದೆ, ಎಂಬುದನ್ನು ಈ ಅಂಕಿಅಂಶಗಳು ಸೂಚಿಸುತ್ತವೆ. ಸದ್ಯಕ್ಕೆ ಕದನ ವಿರಾಮ ಜಾರಿಯಲ್ಲಿದ್ದು, ಎರಡೂ ದೇಶಗಳು ಮಿಲಿಟರಿ ಬೆಳವಣಿಗೆಗಳನ್ನು ಗಮನಿಸುತ್ತಿವೆ.



ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಪಂಜಾಬ್	6	5	0	1	11	+1.420
ರಾಜಸ್ಥಾನ	7	5	2	0	10	+0.790
ಆರ್‌ಸಿಬಿ	6	4	2	0	8	+1.171
ಹೈದರಾಬಾದ್	7	4	3	0	8	+0.820
ದಿಲ್ಲಿ	6	3	3	0	6	-0.130
ಗುಜರಾತ್	6	3	3	0	6	-0.821
ಮುಂಬೈ	6	2	4	0	4	+0.067
ಚೆನ್ನೈ	6	2	4	0	4	-0.780
ಲಖನೌ	7	2	5	0	4	-1.177
ಕೆಕೆಆರ್	7	1	5	1	3	-0.879

ಕಿರುಸುದ್ದಿ

ಆಯುಷ್ ಮಾಥ್ರೆ ಬದಲಿಗೆ ವೇಗಿ ಆಕಾಶ್ ಮಡಿವಾಳ್

ಮುಂಬೈ: ಗಾಯಾಳು ಆಯುಷ್ ಮಾಥ್ರೆ ಬದಲಿಗೆ ವೇಗಿ ಆಕಾಶ್ ಮಡಿವಾಳ್ ಅವರನ್ನು ಬದಲಿ ಆಟಗಾರರನ್ನಾಗಿ ಆಯ್ಕೆ ಮಾಡಿರುವುದಾಗಿ ಚೆನ್ನೈ ತಿಳಿಸಿದೆ. ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧ ನಡೆದ ಪಂದ್ಯದಲ್ಲಿ ಬ್ಯಾಟಿಂಗ್ ಮಾಡುತ್ತಿರುವ ವೇಳೆ ಕಾಲಿಗೆ ಗಾಯ ಮಾಡಿಕೊಂಡ ಅವರು, 12 ವಾರದ ರಿಹ್ಯಾಬ್ ಹಾಜರಾಗಲಿರುವ ನಿಟ್ಟಿನಲ್ಲಿ ಬದಲಿ ಆಟಗಾರರನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಚೆನ್ನೈ ಪಂದ್ಯಾವಳಿಗೂ ಮುನ್ನ ಎಲ್ಲಿಸ್ ಹೊರಬಿದ್ದಿದ್ದರು. ದಿಲ್ಲಿ ವಿರುದ್ಧದ ಪಂದ್ಯದ ವೇಳೆ ಖಲೀಲ್ ಅಹ್ಮದ್ ಗಾಯ ಮಾಡಿಕೊಂಡಿದ್ದರು. ಅವರೂ ಪಂದ್ಯಾವಳಿಯಿಂದ ಹೊರಬಿದ್ದ ನಂತರ ಚೆನ್ನೈ ತಂಡಕ್ಕೆ ಬೌಲಿಂಗ್ ವಿಚಾರದಲ್ಲಿ ಭಾರೀ ಹಿನ್ನಡೆಯಾಗಿತ್ತು. ಈಗಾಗಲೇ ತಂಡದಲ್ಲಿ ಸ್ಪೆನ್ಸರ್ ಜಾನ್ಸನ್ ಸೇರಿಕೊಂಡಿದ್ದಾರೆ. ಬೌಲಿಂಗ್ ಬಲವನ್ನು ಹೆಚ್ಚಿಸಲು ಆಕಾಶ್ ಅವರನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಈ ಹಿಂದೆ ಮಡಿವಾಳ್ ಮುಂಬೈ ಹಾಗೂ ರಾಜಸ್ಥಾನ ಪರ ಆಡಿದ್ದರು.

ಶೀಘ್ರವೇ ದಿಲ್ಲಿಗೆ ಸ್ಟಾರ್ಕ್: ವೇಗಿ ಮಿಚೆಲ್ ಸ್ಟಾರ್ಕ್ ಶೀಘ್ರವೇ ದಿಲ್ಲಿ ಕ್ಯಾಂಪ್‌ಗೆ ಸೇರಿಕೊಳ್ಳಲಿದ್ದಾರೆ. ಗಾಯದ ಕಾರಣದಿಂದ ಬಹುತೇಕ ಅರ್ಧ ಪಂದ್ಯಾವಳಿಯಿಂದ ದೂರ ಉಳಿದಿದ್ದ ಅವರು, ಭಾರತಕ್ಕೆ ಬರಲಿದ್ದು, ದಿಲ್ಲಿ ಕ್ಯಾಂಪ್ ಸೇರಿಕೊಳ್ಳುವ ನಿರೀಕ್ಷೆಯಿದೆ. ಮೇ 1ಕ್ಕೆ ನಡೆಯುವ ದಿಲ್ಲಿ-ರಾಜಸ್ಥಾನ ನಡುವಿನ ಪಂದ್ಯದಲ್ಲಿ ಆಡುವ ಸಾಧ್ಯತೆ ಇದೆ.

ಟಾರ್ಗೆಟ್ ಒಲಿಂಪಿಕ್ಸ್ ಪೋಡಿಯಮ್ ಯೋಜನೆಗೆ ಪ್ರೀತಿ, ಪ್ರಿಯಾ

ಹೊಸದಿಲ್ಲಿ: ಏಷ್ಯನ್ ಬಾಕ್ಸಿಂಗ್ ಎಲೈಟ್ ಚಾಂಪಿಯನ್‌ಶಿಪ್‌ನಲ್ಲಿ ಉತ್ತಮ ಪ್ರದರ್ಶನ ನೀಡಿರುವ ಪ್ರಿಯಾ, ಪ್ರೀತಿ ಪವಾರ್, ಅರುಂಧತಿ ಚೌಧರಿ ಮತ್ತು ಸಚಿನ್ ಅವರನ್ನು ಟಾರ್ಗೆಟ್ ಒಲಿಂಪಿಕ್ಸ್ ಪೋಡಿಯಮ್ ಯೋಜನೆಗೆ ಸೇರಿಸಲಾಗಿದೆ. ಅದಲ್ಲದೆ ಇನ್ನೂ ಮೂರು ಬಾಕ್ಸರ್‌ಗಳನ್ನು ಡೆವಲೆಪ್‌ಮೆಂಟ್ ಗುಂಪಿಗೆ ಸೇರಿಸಲಾಗಿದೆ ಎಂದು ಭಾರತೀಯ ಕ್ರೀಡಾ ಪ್ರಾಧಿಕಾರ ತಿಳಿಸಿದೆ. ಇತ್ತೀಚೆಗೆ ನಡೆದ 172ನೇ ಮಿಶನ್ ಒಲಿಂಪಿಕ್ಸ್ ಸೆಲ್‌ನಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ. ಪ್ರೀತಿ 54ಕೆಜಿ, ಪ್ರಿಯಾ 64ಕೆಜಿ ಮತ್ತು ಅರುಂಧತಿ 70ಕೆಜಿ ವಿಭಾಗದಲ್ಲಿ ಏಷ್ಯನ್ ಚಾಂಪಿಯನ್‌ಶಿಪ್‌ನಲ್ಲಿ ಚಿನ್ನದ ಪದಕ ಗೆದ್ದಿದ್ದರು. ಸಚಿನ್ 60 ಕೆಜಿ ವಿಭಾಗದಲ್ಲಿ ಬೆಳ್ಳಿ ಪದಕ ಗೆದ್ದಿದ್ದರು. ಮಿಶನ್ ಒಲಿಂಪಿಕ್ಸ್ ಸೆಲ್ ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಾರತೀಯರ ಪ್ರದರ್ಶನ ಪರಿಶೀಲಿಸಿ ಅವರನ್ನು ವಿವಿಧ ಗುಂಪುಗಳಲ್ಲಿ ಸೇರಿಸುತ್ತದೆ. ಪೋಡಿಯಂ ಗುಂಪಿನಲ್ಲಿರುವವರು ಹೆಚ್ಚಿನ ತರಬೇತಿ ಮತ್ತು ಬೆಂಬಲ ಪಡೆಯುತ್ತಾರೆ.

ಭಾರತಕ್ಕೆ ಹ್ಯಾಟ್ರಿಕ್ ಸೋಲು

ಜೊಹಾನ್ಸ್‌ಬರ್ಗ್(ದ.ಆಫ್ರಿಕಾ): ಲೌರಾ ವಾಲ್ವಾರ್ಡ್ತ್ ಅವರ ಸ್ಫೋಟಕ ಶತಕದ ನೆರವಿನಿಂದ ಮಿಂಚಿದ ದಕ್ಷಿಣ ಆಫ್ರಿಕಾ ಮಹಿಳಾ ತಂಡವು ಶೆಫಾಲಿ ವರ್ಮಾ, ಹರ್ಮನ್‌ಪ್ರೀತ್ ಕೌರ್ ಅವರ ಉತ್ತಮ ಬ್ಯಾಟಿಂಗ್ ಹೊರತಾಗ್ಯೂ ಭಾರತ ವಿರುದ್ಧ 9 ವಿಕೆಟ್‌ಗಳಿಂದ ಜಯಸಿತು. ದ.ಆಫ್ರಿಕಾ ವಿರುದ್ಧ 5 ಸರಣಿಯನ್ನಾಡುತ್ತಿರುವ ಭಾರತ ಮೊದಲಿನ ಮೂರು ಪಂದ್ಯಗಳಲ್ಲಿ ಸೋತು ಸರಣಿ ಕೈಬಿಟ್ಟಿದೆ. ಆದಾಗ್ಯೂ ಎರಡು ಪಂದ್ಯಗಳನ್ನಾಡಲಿದೆ. ಮೂರನೇ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಭಾರತ 4 ವಿಕೆಟ್ ನಷ್ಟಕ್ಕೆ 194 ರನ್ ಗಳಿಸಿತು. ತಂಡದ ಪರ ಶೆಫಾಲಿ 64, ಕೌರ್ 66 ರನ್ ಗಳಿಸಿದರು. ಆಫ್ರಿಕಾ ಪರ ಎಮ್ ಲಬಾ 2 ವಿಕೆಟ್ ಕಿತ್ತರು. ಗುರಿ ಬೆನ್ನತ್ತಿದ ದ.ಆಫ್ರಿಕಾ 16.3 ಓವರ್‌ಗಳಲ್ಲೇ 193 ರನ್‌ಗಳಿಸಿತು. ಲೌರಾ ಅಜೇಯ 115 ರನ್‌ಗಳಿಸಿದರು. ಅವರ ಇನ್ನಿಂಗ್ಸ್‌ನಲ್ಲಿ 14 ಬೌಂಡರಿ 5 ಸಿಕ್ಸರ್‌ಗಳು ಸೇರಿವೆ. ಸುನೆ ಲೂಸ್ ಅಜೇಯ 64 ರನ್ ಗಳಿಸಿದರು. ನಾಲ್ಕನೇ ಪಂದ್ಯ ಶನಿವಾರದಂದು ನಡೆಯಲಿದೆ.

ಇಂದು ತವರಲ್ಲಿ ಬೆಂಗಳೂರಿಗೆ ಕೊನೆಯ ಲೀಗ್ ಪಂದ್ಯ | ಗೆಲುವಿನ ತವಕದಲ್ಲಿ ಗುಜರಾತ್

ಟೈಟಾನ್ಸ್ ಸವಾಲು ಭೇದಿಸಿತೇ ಆರ್‌ಸಿಬಿ?

ಬೆಂಗಳೂರು: ಲೀಗ್ ಹಂತದ ತನ್ನ ಕೊನೆಯ ತವರು ಪಂದ್ಯವಾಡುತ್ತಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ಗೆಲುವಿನ ಹಳಿಗೆ ಬರಲು ಸಿದ್ಧವಾಗಿದೆ. ಶುಕ್ರವಾರ ನಡೆಯಲಿರುವ ಪಂದ್ಯದಲ್ಲಿ ಗುಜರಾತ್ ಟೈಟಾನ್ಸ್ ಮತ್ತು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಗಳು ಎದುರಾಗಲಿವೆ.

ಮೊದಲೇ ಘೋಷಿಸಿರುವ ಹಾಗೆ ಆರ್‌ಸಿಬಿ ಬೆಂಗಳೂರಲ್ಲಿ 5 ಮತ್ತು 2 ಪಂದ್ಯಗಳನ್ನು ರಾಯ್ಪುರದಲ್ಲಿ ಆಡಲಿದೆ. ಈಗಾಗಲೇ 4 ತವರು ಪಂದ್ಯಗಳನ್ನಾಡಿರುವ ಆರ್‌ಸಿಬಿ 5ನೇ ಪಂದ್ಯವನ್ನು ಶುಕ್ರವಾರ ಆಡಲಿದೆ. ಎಂದಿನಂತೆ ಚಿನ್ನಸ್ವಾಮಿ ಸಿದ್ಧವಾಗಿತ್ತು. ವಿರಾಟ್ ಕೊಹ್ಲಿ ಸೇರಿದಂತೆ ಪ್ರಮುಖರು ಗುರುವಾರ ಅಭ್ಯಾಸಕ್ಕಿಳಿದರು. ಇತ್ತ ಗುಜರಾತ್ ಕೂಡ ಅಭ್ಯಾಸ ಮಾಡಿತು. ಆಡಿರುವ ಕೊನೆ ಪಂದ್ಯದಲ್ಲಿ ಆರ್‌ಸಿಬಿ ದಿಲ್ಲಿ ಕ್ಯಾಪಿಟಲ್ಸ್ ವಿರುದ್ಧ ಸೋತಿದೆ. ಇತ್ತ ಗುಜರಾತ್ ಮುಂಬೈ ವಿರುದ್ಧ ಸೋತಿದೆ. ಎರಡೂ ತಂಡಗಳು ಲಯದ ಹುಡುಕಾಟದಲ್ಲಿವೆ.

ಆರ್‌ಸಿಬಿಗೆ ಆತ್ಮವಿಶ್ವಾಸ: ಹೈದರಾಬಾದ್, ಚೆನ್ನೈ, ಲಖನೌ ಹೀಗೆ ಬಂದ ತಂಡಗಳನ್ನೆಲ್ಲಾ ತವರಿನಲ್ಲಿ ಸೋಲಿಸಿರುವ ಬೆಂಗಳೂರು ಎಲ್ಲಾ ಪಂದ್ಯಗಳಲ್ಲಿ ಏಕಪಕ್ಷೀಯವಾಗಿ ಮೇಲುಗೈ ಸಾಧಿಸಿತ್ತು. ಆದರೆ ದಿಲ್ಲಿ ಕ್ಯಾಪಿಟಲ್ಸ್ ವಿರುದ್ಧ ನಡೆದ ಪಂದ್ಯದಲ್ಲಿ ಮಾತ್ರ ಸೋತಿದೆ. ರಜತ್ ಪಡೆ ಬಲಿಷ್ಠ ಬ್ಯಾಟಿಂಗ್ ಹಾಗೂ ಅನುಭವಿ ಬೌಲಿಂಗ್ ಬಳಗವನ್ನು ಹೊಂದಿದೆ. ಸಾಲ್ಟ್, ಕೊಹ್ಲಿ ಉತ್ತಮ ಆರಂಭ ಒದಗಿಸುತ್ತಿದ್ದರೆ, ರಜತ್ ಪಾಟಿದಾರ್ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ವಿಶ್ವಾಸ ಹೆಚ್ಚಿಸಿದ್ದಾರೆ. ಪಡಿಕ್ಕಲ್ ಲಯಕ್ಕೆ ಬರಬೇಕಿದೆ. ತಂಡದಲ್ಲಿ ಹೆಚ್ಚುವರಿ ಬ್ಯಾಟರ್‌ಗಳಿದ್ದಾರೆ. 7 ವಿಕೆಟ್ ಬಿದ್ದರೂ ಸಿಕ್ಸರ್ ಬಾರಿಸುವ ಸಾಮರ್ಥ್ಯ ಹೊಂದಿರುವುದೇ ತಂಡದ ದೊಡ್ಡ ಬಲ. ಬೌಲಿಂಗ್‌ನಲ್ಲಿ ಕೃಣಾಲ್, ಸುಯಶ್ ಸ್ಪಿನ್ ವಿಭಾಗದಲ್ಲಿ ಮಿಂಚಿದರೆ, ಡಫಿ, ಭುವನೇಶ್ವರ್ ಕುಮಾರ್ ಸೇರಿದಂತೆ ಪ್ರಮುಖರು ವಿಶ್ವಾಸ ಹೆಚ್ಚಿಸಿದ್ದಾರೆ. ಕಳೆದ ಪಂದ್ಯದಲ್ಲಿ ಹ್ಯಾಜೆಲ್ವುಡ್ ಮಾರಕ ಬೌಲಿಂಗ್ ದಾಳಿ ಮಾಡಿದ್ದರು.

ಗೆಲುವಿನ ತವಕದಲ್ಲಿ ಗುಜರಾತ್: ಇತ್ತ ಟೈಟಾನ್ಸ್ ಕಳೆದ ಪಂದ್ಯದಲ್ಲಿ ಭಾರೀ ಹಿನ್ನಡೆ ಅನುಭವಿಸಿದೆ. ಬ್ಯಾಟಿಂಗ್ ವಿಭಾಗ ಕುಸಿದು ಬಿದ್ದಿದೆ. ಆರಂಭಿಕ ಮೂವರು ಬ್ಯಾಟಿಗರು ಬಿಟ್ಟರೆ ಯಾವುದೇ ಬ್ಯಾಟಿಗರೂ ಮಿಂಚಿಲ್ಲ. ಮುಖ್ಯವಾಗಿ ಗುಜರಾತ್ ತಂಡದ ಬಲವಾಗಿದ್ದ ಸುದರ್ಶನ್ ಲಯದಲ್ಲಿಲ್ಲ. ಇತ್ತ ಗಿಲ್ ಉತ್ತಮ ಬ್ಯಾಟಿಂಗ್ ಮಾಡಿದರೂ ಅದು ಸಾಕಾಗುತ್ತಿಲ್ಲ.

ಬಟ್ಲರ್ ಸ್ಫೋಟಕ ಬ್ಯಾಟಿಂಗ್ ಮಾಡಿದ್ದಾರೆ. ಇನ್ನು ತಂಡದ ವಾಷಿಂಗ್ಟನ್ ಸುಂದರ್, ಶಾರುಖ್ ಖಾನ್ ಮಿಂಚಬೇಕಿದೆ. ಬೌಲಿಂಗ್ ವಿಚಾರಕ್ಕೆ ಬಂದರೆ, ವೇಗಿ ಪ್ರಸಿದ್ಧ ಕೃಷ್ಣ ಕಳೆದ ಪಂದ್ಯದಲ್ಲಿ ದುಬಾರಿಯಾಗಿದ್ದಾರೆ. ರಬಾಡ ತಮ್ಮ ಅಸಲು ಲಯಕ್ಕೆ ಬಂದರು. ಆದರೆ ಸ್ಪಿನ್ ವಿಭಾಗದಲ್ಲಿ ತಂಡ ಹಿನ್ನಡೆ ಅನುಭವಿಸಿದೆ. ರಶೀದ್ ಖಾನ್, ವಾಷಿ ವಿಕೆಟ್ ಕಿತ್ತಬೇಕಿದೆ.

ಪಿಚ್

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಪಿಚ್ ಸಿದ್ಧವಾಗಿತ್ತು. ಬೌಂಡರಿಗಳ ರೇಖೆ ಅಲ್ಪ ಹತ್ತಿರ ಇರುವುದರಿಂದ ಚಿನ್ನಸ್ವಾಮಿ ಕ್ರೀಡಾಂಗಣ ಯಾವಾಗಲೂ ಬ್ಯಾಟಿಂಗ್ ಸ್ನೇಹಿ ಪಿಚ್. ಹೆಚ್ಚಿನ ಬೌನ್ಸ್ ಇರುತ್ತೆ, ಬ್ಯಾಟ್‌ಗೆ ನೇರವಾಗಿ ಬರುತ್ತದೆ. ಸ್ಪಿನ್ನರ್‌ಗಳು ಮತ್ತು ವೇಗಿಗಳು ಅಲ್ಪ ಲಾಭ ಪಡೆಯಬಹುದು. ಇಬ್ಬನಿ ಕಾಟವೂ ಹೆಚ್ಚು ಇರಲ್ಲ. ಹೀಗಾಗಿ ಮೊದಲು ಬೌಲಿಂಗ್ ಮಾಡುವ ತಂಡ ಗೆಲ್ಲುವ ಸಾಧ್ಯತೆ ಹೆಚ್ಚು ಅನ್ನುತ್ತಾರೆ ಎಕ್ಸಪರ್ಟ್‌ಗಳು.

ಪಂದ್ಯದ ವಿವರ: ಯಾವಾಗ: ಶುಕ್ರವಾರ, ಎಲ್ಲಿ: ಬೆಂಗಳೂರು,ಸಮಯ: ಸಂಜೆ 7:30, ಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೋ ಹಾಟ್‌ಸ್ಟಾರ್

ನಮ್ಮ ಆಟ ಆಡಿರುವುದೇ ಮುಖ್ಯ: ಆರ್‌ಸಿಬಿ ನಿರ್ದೇಶಕ ಬೋಬಾಟ್

ನಾವು ಬ್ಯಾಟಿಂಗ್ ಹಾಗೂ ಬೌಲಿಂಗ್ ಎರಡರಲ್ಲೂ ಆಕ್ರಮಣಕಾರಿ ಕ್ರಿಕೆಟ್ ಆಡಲು ಬಯಸುತ್ತೇವೆ. ಅದಕ್ಕಿಂತ ಮುಖ್ಯವಾಗಿ, ಪಂದ್ಯ ನಿರ್ಣಾಯಕ ಕ್ಷಣಗಳಲ್ಲಿ ಧೈರ್ಯದಿಂದ ಆಡಬೇಕು. ಅದನ್ನು ನಿರಂತರವಾಗಿ ಮಾಡಿದ್ದರೆ ಫಲಿತಾಂಶಗಳು ಸ್ವತಃ ಬರುತ್ತವೆ, ಎಂದು ಆರ್‌ಸಿಬಿ ಕ್ರಿಕೆಟ್ ನಿರ್ದೇಶಕ ಮೊ ಬೋಬಾಟ್ ಹೇಳಿದರು. ಆರು ಪಂದ್ಯಗಳಲ್ಲಿ ನಾಲ್ಕು ಜಯಗಳಿಸಿರುವ ತಂಡದ ಸ್ಥಿತಿಗತಿಗಳ ಬಗ್ಗೆ ಮಾತನಾಡಿದ ಅವರು, ಅಂಕಪಟ್ಟಿಗಿಂತ ಪ್ರದರ್ಶನವೇ ಮುಖ್ಯವೆಂದು ಹೇಳಿದ್ದಾರೆ. ನಾಲ್ಕು ಗೆಲುವು ಸಂತೋಷಕರ, ಆದರೆ ಹೆಚ್ಚಿನ ಪಂದ್ಯಗಳಲ್ಲಿ ನಾವು ನಮ್ಮ ಶೈಲಿಯಲ್ಲಿ ಆಡಿದ್ದೇವೆ ಎಂಬುದು ಮುಖ್ಯ. ಅಂಕಪಟ್ಟಿ ಇನ್ನೂ ಕಠಿಣವಾಗಿದೆ, ಆದ್ದರಿಂದ ಮುಂದಿನ ಪಂದ್ಯಕ್ಕೇ ಗಮನ ಕೊಡುತ್ತಿದ್ದೇವೆ ಎಂದರು. ಕಳೆದ ಪಂದ್ಯ ಬಳಿಕ ಸಿಕ್ಕ ವಿರಾಮದ ಬಗ್ಗೆ ಮಾತನಾಡಿದ ಅವರು, ಆಟಗಾರರಿಗೆ ವಿಶ್ರಾಂತಿ ಮತ್ತು ಪುನಶ್ಚೇತನಕ್ಕೆ ಸಮಯ ಸಿಕ್ಕಿತು. ಹೆಚ್ಚು ಅವಕಾಶ ಸಿಗದ ಆಟಗಾರರೊಂದಿಗೆ ಕೆಲಸ ಮಾಡಲು ಸಹ ಸಾಧ್ಯವಾಯಿತು. ಇದರಿಂದ ತಂಡಕ್ಕೆ ಲಾಭವಾಗಿದೆ, ಎಂದು ಹೇಳಿದರು. ಗುಜರಾತ್ ವಿರುದ್ಧದ ಸವಾಲಿನ ಕುರಿತು ಮಾತನಾಡಿ, ಗುಜರಾತ್ ತಂಡದ ಸ್ಥಿರ ಪ್ರದರ್ಶನವನ್ನು ಒಪ್ಪಿಕೊಂಡರು. ಅದು ಉತ್ತಮ ತಂಡ. ಆದರೆ ನಾವು ಎದುರಾಳಿಯನ್ನು ಹೆಚ್ಚು ವಿಶ್ಲೇಷಿಸುವುದಿಲ್ಲ. ನಮ್ಮ ತಯಾರಿ, ನಮ್ಮ ಯೋಜನೆಗಳ ಜಾರಿಗೆ ಹೆಚ್ಚು ಗಮನ ಕೊಡುತ್ತೇವೆ, ಎಂದರು. ಮನೆ ಮೈದಾನದ ಪರಿಸ್ಥಿತಿಗಳ ಬಗ್ಗೆ ಅವರು, ನಗರ ಮತ್ತು ಕ್ರೀಡಾಂಗಣ ನಮ್ಮದೇ ಆದರೂ ಪಿಚ್ ಮೇಲೆ ನಮ್ಮ ಪ್ರಭಾವ ಕಡಿಮೆ. ಆಟಗಾರರು ಪರಿಸ್ಥಿತಿಯನ್ನು ಬೇಗ ಅರ್ಥಮಾಡಿಕೊಂಡು ಹೊಂದಿಕೊಳ್ಳಬೇಕು, ಅದೇ ಪ್ರಮುಖ, ಎಂದು ಹೇಳಿದರು.

ಲಖನೌಗೆ ರಾಜಸ್ಥಾನ ಆಘಾತ

ಲಖನೌ: ರಾಜಸ್ಥಾನ ವೇಗಿಗಳ ದಾಳಿಗೆ ತತ್ತರಿಸಿದ ಲಖನೌ ಸೂಪರ್ ಜೇಂಟ್ಸ್ ತಂಡವು ಒಂದೊಂದು ರನ್‌ಗಾಗಿ ಪರದಾಟ ನಡೆಸಿದ್ದು, 160 ರನ್ ಗುರಿ ಪೇರಿಸಲಾಗದೆ 40 ರನ್‌ಗಳಿಂದ ಸೋತಿತು.

ಜೋಫ್ರಾ ಆರ್ಚರ್(4-0-20-3), ನಾಂದ್ರೆ ಬರ್ಜರ್ (4-0-27-2) ಹಾಗೂ ಬ್ರಿಜೇಶ್ (3-0-18-2) ಕರಾರುವಾಕ್ ದಾಳಿಗೆ ಸಿಲುಕಿಕೊಂಡ ಲಖನೌ ಬ್ಯಾಟರ್‌ಗಳು ತೀರಾ ನಿರಾಶಾದಾಯಕ ಪ್ರದರ್ಶನ ನೀಡಿದರು. ಮಿಚೆಲ್ ಮಾರ್ಷ್(55, 41ಎ, 6ಬೌ, 2ಸಿ) ಹೋರಾಟ ನಡೆಸಿದ್ದು ಬಿಟ್ಟರೆ ಇನ್ನುಳಿದ ಯಾವುದೇ ಬ್ಯಾಟಿಗರು 25ರ ಗಡಿ ದಾಟಲೇ ಇಲ್ಲ. ಪರಿಣಾಮ 160 ರನ್ ಬೆನ್ನತ್ತಿದ ಲಖನೌ 18 ಓವರ್‌ಗಳಲ್ಲಿ 119 ರನ್‌ಗಳಿಗೆ ಪತನಗೊಂಡಿತು. ಇದಕ್ಕೂ ಮೊದಲು ಬ್ಯಾಟಿಂಗ್ ಮಾಡಿದ ರಾಜಸ್ಥಾನಕ್ಕೆ ಜಡೇಜಾ (43*,29ಎ, 2ಬೌ, 1ಸಿ) ಆಸರೆಯಾಗಿದ್ದರು. ಹೆಟ್ಮೇರ್, ಫೆರಾರಿಯಾ, ಜೈಸ್ವಾಲ್ ಕೂಡ ಉತ್ತಮ ಬ್ಯಾಟಿಂಗ್ ಮಾಡಿದ್ದರು. ಲಖನೌ ಪರ ಮೊಹ್ಸಿನ್, ಪ್ರಿನ್ಸ್ ಹಾಗೂ ಶಮಿ ತಲಾ 2 ವಿಕೆಟ್ ಪಡೆದುಕೊಂಡಿದ್ದರು.

ರಾಜಸ್ಥಾನ ಮೇಲುಗೈ: ರಾಜಸ್ಥಾನ ಜೈಸ್ವಾಲ್ ಹಾಗೂ ವೈಭವ್ ಸೂರ್ಯವಂಶಿ ಬ್ಯಾಟಿಂಗ್‌ನೊಂದಿಗೆ ಉತ್ತಮ ಆರಂಭ ಪಡೆಯಿತು. ಅಂತಿಮ ಎರಡು ಬಾಲ್‌ಗಳಲ್ಲಿ 2 ವಿಕೆಟ್ ಕಳೆದುಕೊಂಡರೂ ಪವರ್‌ಪ್ಲೇನಲ್ಲಿ 44 ರನ್ ಗಳಿಸಿತು. ಇತ್ತ ಲಖನೌ ಆತುರ ಪಟ್ಟಿತು. ಬದೋನಿ ರನ್ ಔಟ್‌ಗೆ ಬಲಿಯಾದ ನಂತರ ಪಂತ್ ಮತ್ತು ಮಾರ್ಕ್ರಂ ಬೇಗನೇ ವಿಕೆಟ್ ಕೊಟ್ಟರು. ತತ್ತರಿಸಿದ ಲಖನೌ, ಪವರ್‌ಪ್ಲೇನಲ್ಲಿ ನಿಧಾನಗತಿ ಬ್ಯಾಟಿಂಗ್ ಮಾಡಿತು. ಅಲ್ಲಿ 31 ರನ್ ಮಾತ್ರ ಗಳಿಸಿ ಪ್ರಮುಖ 3 ವಿಕೆಟ್‌ಗಳನ್ನು ಕಳೆದುಕೊಂಡಿತು. ಮಧ್ಯಮ ಓವರ್‌ಗಳಲ್ಲಿ ರಾಜಸ್ಥಾನ ಹಿನ್ನಡೆ ಅನುಭವಿಸಿತು. ಡಾಟ್ ಬಾಲ್‌ಗಳಿಂದ ಕಂಗೆಟ್ಟ ತಂಡವು ಜಡೇಜಾ ಆಸರೆ ಪಡೆಯಿತು. ಪರಾಗ್, ಹೆಟ್ಮೇರ್ ಕೂಡ ಅಲ್ಪ ಪ್ರಯತ್ನ ಪಟ್ಟರು. ಇತ್ತ ಲಖನೌ ಪರ ವೇಗಿಗಳು ಮಿಂಚಿದರು. ಮಧ್ಯಮ ಓವರ್‌ಗಳಲ್ಲಿ 66 ರನ್ ಮಾತ್ರ ಗಳಿಸಿದ ರಾಜಸ್ಥಾನ 3 ವಿಕೆಟ್ ಕಳೆದುಕೊಂಡಿತು. ಇತ್ತ ಲಖನೌ ಮಾರ್ಷ್ ಅವರ ಆಸರೆಯೊಂದಿಗೆ ಆರ್ ಹೋಲಿಕೆಗೆ ಮಧ್ಯಮ ಓವರ್‌ಗಳಲ್ಲಿ ಉತ್ತಮ ಬ್ಯಾಟಿಂಗ್ ಮಾಡಿತು. 3 ವಿಕೆಟ್ ಕಳೆದುಕೊಂಡರೂ, 80 ರನ್ ಗಳಿಸಿತು. ಕೊನೆಯ ಓವರ್‌ಗಳಲ್ಲಿ ರಾಜಸ್ಥಾನ ಜಡೇಜಾ ಅವರ ಅಬ್ಬರದ ಬ್ಯಾಟಿಂಗ್‌ನೊಂದಿಗೆ ಮಿಂಚಿತು. 49 ರನ್ ಗಳಿಸಿ ಸ್ಪರ್ಧಾತ್ಮಕ ಗುರಿ ನೀಡಿತು. ಲಖನೌಗೆ ಹೊರೆ. ಹೆಚ್ಚಿನ ರನ್‌ರೇಟ್ ದಾಟಬೇಕಿತ್ತು. ಆದರೆ ಮುಖ್ಯ ಬ್ಯಾಟರ್‌ಗಳೆಲ್ಲರೂ ಔಟಾಗಿದ್ದರು. ಅಂತಿಮ ಓವರ್‌ಗಳಲ್ಲಿ ಎರಡು ಓವರ್ ಮಾತ್ರ ನಿಂತ ಲಖನೌ 8 ರನ್ ಅನ್ನುವಷ್ಟರಲ್ಲಿ ಉಳಿದ ನಾಲ್ಕೂ ವಿಕೆಟ್ ಕಳೆದುಕೊಂಡು ಸೋತಿತು.

ಸಂಕ್ಷಿಪ್ತ ಸ್ಕೋರ್

ರಾಜಸ್ಥಾನ 20 ಓವರ್‌ಗಳಲ್ಲಿ 159/6: ಜಡೇಜಾ 43*, ಜೈಸ್ವಾಲ್ 22; ಮೊಹ್ಸಿನ್ 17/2

ಲಖನೌ 18 ಓವರ್‌ಗಳಲ್ಲಿ 119/10: ಮಾರ್ಷ್ 55, ಪೂರಣ್ 22; ಆರ್ಚರ್ 20/3, ಬ್ರಿಜೇಶ್ 18/2

ಹಾರ್ದಿಕ್ ಬಳಗಕ್ಕೆ 208 ರನ್ ದೊಡ್ಡ ಗುರಿ

ಸಂಜು ಶತಕದ ಅಬ್ಬರ

ಮುಂಬೈ: ಅಬ್ಬರದ ಶತಕ ಬಾರಿಸಿದ ಸಂಜು ಸ್ಯಾಮ್ಸನ್ ಮತ್ತೊಮ್ಮೆ ಚೆನ್ನೈ ತಂಡಕ್ಕೆ ಆಸರೆಯಾಗಿದ್ದು, ಮುಂಬೈಗೆ ಸಿಎಸ್‌ಕೆ ದೊಡ್ಡ ಗುರಿ ನೀಡಿದೆ. ಫಾಕ್ನೀರ್ ಕಡಿವಾಣದ ಹೊರತಾಗ್ಯೂ ಮಿಂಚಿದ ಚೆನ್ನೈ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 207 ರನ್ ಗಳಿಸಿತು.

ಸಂಜು(101*, 54ಎ, 10ಬೌ, 6ಸಿ) ವಿವಿಧ ದಾಖಲೆಗಳನ್ನು ಮಾಡಿದರು. ಐಪಿಎಲ್‌ನ 5ನೇ ಶತಕ ಬಾರಿಸಿದ ಅವರು, ಡಿಕಾಕ್ ಅವರ ವಿಕೆಟ್ ಕೀಪರ್ ಆಗಿ ಅತಿ ಶತಕದ ದಾಖಲೆ ಸರಿಗಟ್ಟಿದರು. ಅವರ ಆಟಕ್ಕೆ ಚೆನ್ನೈನ ವಿವಿಧ ಆಟಗಾರರ 20 ರನ್‌ಗಳ ಇನ್ನಿಂಗ್ಸ್ ಸಾಥ್ ಸಿಕ್ಕಿತು ಪರಿಣಾಮ ಚೆನ್ನೈ 207 ರನ್ ಮಾಡಿದೆ. ಸ್ಯಾಮ್ಸನ್ ಮೊದಲ ಓವರ್‌ನಿಂದಲೂ ಆಕ್ರಮಣಕಾರಿಯಾಗಿದ್ದರು. ಗಾಯಕ್ವಾಡ್ 22 ರನ್ ಮತ್ತು ಸರ್ಫರಾಜ್ ಖಾನ್ 14 ರನ್‌ಗೆ ವಿಕೆಟ್ ಒಪ್ಪಿಸಿದ ನಂತರ ಪವರ್‌ಪ್ಲೇನಲ್ಲಿ 73 ರನ್ ಗಳಿಸಿತು. ಮಧ್ಯಮ ಓವರ್‌ಗಳಲ್ಲಿ ಸಂಜು ನಾನ್ ಸ್ಟ್ರೈಕ್‌ನಲ್ಲಿ ನಿಂತರೆ ಇತ್ತ ಬ್ರೇವಿಸ್ ಹಾಗೂ ಕಾರ್ತಿಕ್ 21, 19 ರನ್‌ಗಳಿಸಿ ವಿಕೆಟ್ ಒಪ್ಪಿಸಿದರು. ಆದಾಗ್ಯೂ ಸಂಜು ಆಟದೊಂದಿಗೆ ಚೆನ್ನೈ ಮಧ್ಯಮ ಓವರ್‌ನಲ್ಲಿ 91 ರನ್ ಗಳಿಸಿತು. ಡೆತ್ ಓವರ್‌ನಲ್ಲಿ ಸಂಜು ಸ್ಯಾಮ್ಸನ್ ಇನ್ನಷ್ಟು ಸ್ಫೋಟಕ ಬ್ಯಾಟಿಂಗ್ ಮಾಡಿದರು. ಕೊನೆಯ ಓವರ್‌ನಲ್ಲಿ ಮೂರು ಸಿಕ್ಸರ್ ಸಿಡಿಸಿದ ಅವರು ಶತಕ ಪೂರೈಸಿಕೊಂಡರು. ಪವರ್‌ಪ್ಲೇನಲ್ಲಿ ಚೆನ್ನೈ 43 ರನ್ ಗಳಿಸಿತು.

ಧೋನಿ-ರೋಹಿತ್ ಇಲ್ಲದೆ ಪಂದ್ಯ: ವಾಂಖೆಡೆಯಲ್ಲಿ ನಡೆದ ಪಂದ್ಯದಲ್ಲಿ ಮಹೇಂದ್ರ ಸಿಂಗ್ ಧೋನಿ ಹಾಗೂ ರೋಹಿತ್ ಶರ್ಮ ಇಬ್ಬರೂ ಇರಲಿಲ್ಲ.

ತಾಯಿ ನಿಧನ, ಆದರೂ ಆಡಿದ ಮುಕೇಶ್: ಚೆನ್ನೈ ಸೂಪರ್ ಕಿಂಗ್ಸ್ ತಂಡದ ವೇಗಿ ಮುಕೇಶ್ ಚೌಧರಿ ತಾಯಿ ಪ್ರೇಮಾ ದೇವಿ ನಿಧನರಾದರು. ಆದಾಗ್ಯೂ ಮುಂಬೈ ವಿರುದ್ಧದ ಪಂದ್ಯದಲ್ಲಿ ಮುಕೇಶ್ ಚೌಧರಿ ತಂಡದಲ್ಲಿದ್ದರು. ಪವರ್‌ಪ್ಲೇನಲ್ಲೇ ಬೌಲಿಂಗ್ ಕೂಡ ಮಾಡಿದರು. ದೀರ್ಘಕಾಲ ಅನಾರೋಗ್ಯದಿಂದ ಬಳಲುತ್ತಿದ್ದ ಅವರು, ಗುರುವಾರ ನಿಧನರಾದರು. ಮುಕೇಶ್ ಕಂಬನಿ ಮಿಡಿದ ಚೆನ್ನೈ ತಂಡ ಮುಂಬೈ ವಿರುದ್ಧದ ಪಂದ್ಯವನ್ನು ಕೈಗೆ ಕಪ್ಪು ಪಟ್ಟಿ ಧರಿಸಿ ಆಡಿತು. ಅಲ್ಲದೆ ಸಂತಾಪ ಸಲ್ಲಿಸಿತು.

ಸಂಜು ಆಸರೆ

ಆರಂಭಿಕ ಓವರ್‌ಗಳಲ್ಲಿ ಸಂಜು ಸ್ಯಾಮ್ಸನ್ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಅಬ್ಬರಿಸಿದರು. ಮೊದಲಿನ 5 ಬಾಲ್‌ಗಳಲ್ಲಿ ಹೆಚ್ಚಿನ ರನ್ ಮಾಡದ ಅವರು, ಮೂರನೇ ಓವರ್ ಮಾಡಲು ಬಂದ ಹಾರ್ದಿಕ್ ಪಾಂಡ್ಯ ಅವರನ್ನು ದಂಡಿಸಿದರು. ಅದೇ ಓವರ್‌ನಿಂದ ಶುರುವಾದ ಅವರ ಆಟ, ಕೊನೆಯವರೆಗೂ ವಿಸ್ತರಿಸಿತು. ಗಾಯಕ್ವಾಡ್ 22, ಸರ್ಫರಾಜ್ 14ಕ್ಕೆ ವಿಕೆಟ್ ಒಪ್ಪಿಸಿದರು. ಮುಂದೆ ಬಂದ ದುಬೆ 5 ರನ್‌ಗೆ ವಿಕೆಟ್ ಒಪ್ಪಿಸಿದರು. ಆದಾದರೂ ಸಂಜು ಆಟಕ್ಕೆ ಕಡಿವಾಣ ಬೀಳಲಿಲ್ಲ. ವಿಕೆಟ್ ಬಿದ್ದಾಗ ನಿಂತು ಆಡಿದ ಸಂಜು 26 ಬಾಲ್‌ಗಳಲ್ಲಿ ಅರ್ಧ ಶತಕ ಬಾರಿಸಿದರು. ಬಂದ ಬ್ಯಾಟರ್‌ಗಳು 20 ರನ್ ಗಳಿಸಿ ವಿಕೆಟ್ ಒಪ್ಪಿಸುತ್ತಾ ಬಂದರು. ಆದರೆ ಸಂಜು ಸ್ಯಾಮ್ಸನ್ ಮಾತ್ರ ಮುಂಬೈ ತಂಡವನ್ನು ದಂಡಿಸುತ್ತಲೇ ಇದ್ದರು. ಡೆತ್ ಓವರ್‌ನಲ್ಲಿ ಇನ್ನಷ್ಟು ಸ್ಫೋಟಕ ಬ್ಯಾಟಿಂಗ್ ಮಾಡಿದ ಅವರು, 54 ಬಾಲ್‌ಗಳಲ್ಲಿ ಶತಕ ಪೂರೈಸಿದರು. 10 ಬೌಂಡರಿ ಮತ್ತು 6 ಸಿಕ್ಸರ್‌ನೊಂದಿಗೆ ಮಿಂಚಿದರು.

10-ಕೆ: ಮಹಿಳೆಯರಿಗೆ ಅವಕಾಶ

ಬೆಂಗಳೂರು: ಮಹಿಳಾ ಸಬಲೀಕರಣದಲ್ಲಿ ಕ್ರೀಡಾ ಪಾತ್ರ ದೊಡ್ಡದು, ಬೆಂಗಳೂರು ಓಪನ್ 10-ಕೆ ಓಟವು ಮಹಿಳೆಯರಿಗೆ ವಿಶೇಷ ಅವಕಾಶಗಳನ್ನು ನೀಡುತ್ತವೆ ಎಂದು ಡಬಲ್ ಒಲಿಂಪಿಕ್ ಪದಕ ವಿಜೇತೆ ಮತ್ತು ಟಿಸಿಎಸ್ ವರ್ಲ್ಡ್ 10ಕೆ ಬೆಂಗಳೂರು 2026 ರ ಅಂತಾರಾಷ್ಟ್ರೀಯ ಕೂಟದ ರಾಯಭಾರಿಯಾಗಿರುವ ಬ್ಲಾಂಕಾ ವ್ಲಾಸಿಕ್ ಅವರು ಮಹಿಳೆಯರನ್ನು ಸಬಲೀಕರಣಗೊಳಿಸುವಲ್ಲಿ ಕ್ರೀಡೆಯ ಪಾತ್ರವನ್ನು ಬಿಂಬಿಸಿದರು.

ಈ ಭಾನುವಾರ 36,000 ಭಾಗವಹಿಸುವವರು ಮತ್ತು 9000 ಕ್ಕೂ ಹೆಚ್ಚು ಮಹಿಳೆಯರು ಭಾಗವಹಿಸಲು ಸಜ್ಜಾಗಿದ್ದಾರೆ. ವ್ಲಾಸಿಕ್ ಕ್ರೀಡೆಯ ಪರಿವರ್ತಕ ಪರಿಣಾಮದ ಬಗ್ಗೆ ಮಾತನಾಡಿದರು. ವಿಶೇಷವಾಗಿ ಮಹಿಳೆಯರಿಗೆ. ಆತ್ಮವಿಶ್ವಾಸ ಮತ್ತು ಆತ್ಮವಿಶ್ವಾಸವನ್ನು ಬೆಳೆಸುವಲ್ಲಿ ಅದು ವಹಿಸುವ ಪಾತ್ರವನ್ನು ವ್ಲಾಸಿಕ್ ಒತ್ತಿ ಹೇಳಿದರು.ಕ್ರೀಡೆ ನನಗೆ ದೈನಂದಿನ ಜೀವನದ ಬೇರ್ಪಡಿಸಲಾಗದ ಭಾಗವಾಗಿದೆ. ಇದು ನಿಮ್ಮ ದೈಹಿಕ ಆರೋಗ್ಯದ ಮೇಲೆ ಮಾತ್ರವಲ್ಲ, ನಿಮ್ಮ ಮಾನಸಿಕ ಆರೋಗ್ಯ ಮತ್ತು ಒಟ್ಟಾರೆ ಆತ್ಮವಿಶ್ವಾಸದ ಮೇಲೂ ಪರಿಣಾಮ ಬೀರುತ್ತದೆ. ವಿಶೇಷವಾಗಿ ಮಹಿಳೆಯರಿಗೆ, ನಿಮ್ಮಲ್ಲಿ ನಂಬಿಕೆಯನ್ನು ಬೆಳೆಸುವ ಏನನ್ನಾದರೂ ಹೊಂದಿರುವುದು ತುಂಬಾ ಮುಖ್ಯ, ನೀವು ಒಂದು ಗುರಿಯನ್ನು ಸಾಧಿಸಿದಾಗ, ಇತರ ಗುರಿಗಳು ಸಹ ಸಾಧ್ಯ ಎಂದು ನೀವು ಅರಿತುಕೊಳ್ಳುತ್ತೀರಿ.ಭಾರತದಲ್ಲಿ ಹೆಚ್ಚು ಹೆಚ್ಚು ಮಹಿಳೆಯರು ಓಟವನ್ನು ತೆಗೆದುಕೊಳ್ಳುವುದನ್ನು ನೋಡುವುದು ಅದ್ಭುತವಾಗಿದೆ ಎಂದು ವ್ಲಾಸಿಕ್ ಹೇಳಿದರು.

ಮಹಿಳಾ ಸಬಲೀಕರಣದಲ್ಲಿ ಕ್ರೀಡೆ ಪಾತ್ರ ದೊಡ್ಡದು: ಬ್ಲಾಂಕಾ

ಶೂಟಿಂಗ್: ಭಾರತಕ್ಕೆ ಮತ್ತೆ 4 ಪದಕ

ಹೊಸದಿಲ್ಲಿ: ಭಾರತದ ಜೂನಿಯರ್ ಶೂಟಿಂಗ್ ತಂಡವು ಐಎಸ್‌ಎಸ್‌ಎಫ್ ಶೂಟಿಂಗ್ ವಿಶ್ವಕಪ್ ಕೂಟದಲ್ಲಿ ಗುರುವಾರದಂದು ಒಟ್ಟು ನಾಲ್ಕು ಪದಕಗಳನ್ನು ಗೆದ್ದಿದ್ದು, ಪದಕ ಪಟ್ಟಿಯಲ್ಲಿ ಮೂರನೇ ಸ್ಥಾನಕ್ಕೇರಿತು. ಕ್ಯಾರಿಯೋದ ಒಲಿಂಪಿಕ್ಸ್ ಶೂಟಿಂಗ್ ರೇಂಜ್‌ನಲ್ಲಿ ನಡೆದ ಕೂಟದಲ್ಲಿ ಭಾರತದ ಜೂನಿಯರ್ ಶೂಟರ್‌ಗಳು ಮೂರು ಬೆಳ್ಳಿ ಮತ್ತು ಒಂದು ಕಂಚಿನ ಪದಕ ಗೆದ್ದುಕೊಂಡರು. ಶೂಟರ್ ರೋಹಿತ್ ಕನ್ಯಾನ್ 50 ಮೀ. ರೈಫಲ್ ಪ್ರೋನ್ ಇವೆಂಟ್‌ನಲ್ಲಿ ಉತ್ತಮ ಪ್ರದರ್ಶನದೊಂದಿಗೆ ಬೆಳ್ಳಿ ಗೆದ್ದರು. 615.8 ಅಂಕಗಳನ್ನು ಗಳಿಸಿದ ಅವರು, ಬಂಗಾರಕ್ಕೆ ಕೇವಲ 0.5 ಅಂಕ ಹಿಂದಿದ್ದರು.ಕಜಕಿಸ್ತಾನದ ಒಲೆಗ್ ನೊಸ್ಕೋವ್ ಚಿನ್ನ ಗೆದ್ದರು. ಸೇಜಲ್ ಕಾಂಬ್ಳೆ ಮಹಿಳೆಯರ 25 ಮೀ. ಪಿಸ್ತೂಲ್ ಸ್ಪರ್ಧೆಯಲ್ಲಿ ಪದಕ ಗೆದ್ದುಕೊಂಡರು. ಅರ್ಹತಾ ಸುತ್ತಿನಲ್ಲಿ 580 ಅಂಕಗಳನ್ನು ಗಳಿಸಿದ್ದ ಅವರು, ಫೈನಲ್‌ನಲ್ಲಿ 27 ಹಿಟ್‌ಗಳನ್ನು ಮಾಡಿದರು.

ಶಿವಾ-ಚಿರಾಗ್‌ಗೆ ಬೆಳ್ಳಿ: 25 ಮೀ ಪಿಸ್ತೂಲ್ ಡಬಲ್ ಸ್ಪರ್ಧೆಯಲ್ಲಿ ಶಿವಾ ನರ್ವಾಲ್ ಮತ್ತು ಚಿರಾಗ್ ಶರ್ಮ ಕೂಡ ಬೆಳ್ಳಿ ಪದಕ ಗೆದ್ದುಕೊಂಡರು.

ಮೊದಲ ಬಾರಿಗೆ ತುಮಕೂರು ಆತಿಥ್ಯ | ಗೆದ್ದವರಿಗೆ ಭಾರತ ತಂಡದಲ್ಲಿ ಅವಕಾಶ

ಇಂದಿನಿಂದ ಜೂ.ರಾಷ್ಟ್ರೀಯ ಅಥ್ಲೆಟಿಕ್ಸ್

ತುಮಕೂರು: ತುಮಕೂರಿನಲ್ಲಿ ಶುಕ್ರವಾರದಿಂದ 24ನೇ ರಾಷ್ಟ್ರೀಯ ಕಿರಿಯರ (20 ವಯೋಮಿತಿ) ಅಥ್ಲೆಟಿಕ್ಸ್ ಕ್ರೀಡಾಕೂಟ ನಡೆಯಲಿದೆ. ತುಮಕೂರು ಜಿಲ್ಲಾಡಳಿತ ಮತ್ತು ಕರ್ನಾಟಕ ಅಥ್ಲೆಟಿಕ್ಸ್ ಸಂಸ್ಥೆ ಹಾಗೂ ತುಮಕೂರು ಜಿಲ್ಲಾ ಅಥ್ಲೆಟಿಕ್ಸ್ ಸಂಸ್ಥೆ ಸಹಯೋಗದೊಂದಿಗೆ ಮಹಾತ್ಮಗಾಂಧಿ ಕ್ರೀಡಾಂಗಣದಲ್ಲಿ ಮೂರು ದಿನಗಳ ಕಾಲ ಈ ಕ್ರೀಡಾಕೂಟ ಜರುಗಲಿದೆ ಎಂದು ಆಯೋಜಕರು ಗುರುವಾರ ತಿಳಿಸಿದರು.

28 ರಾಜ್ಯದ ಸುಮಾರು 1380 ಅಥ್ಲೀಟ್‌ಗಳು ಕ್ರೀಡಾಕೂಟದಲ್ಲಿ ಭಾಗವಹಿಸುತ್ತಿದ್ದು, ಒಟ್ಟು 40 ಸ್ಪರ್ಧೆಗಳು ನಡೆಯಲಿವೆ. ಕರ್ನಾಟಕದ 110 ಅಥ್ಲೀಟ್‌ಗಳು ಕಣದಲ್ಲಿದ್ದು, ಸ್ಥಳೀಯ ಅಂದರೆ ತುಮಕೂರಿನ 10 ಅಥ್ಲೀಟ್‌ಗಳು ತಮ್ಮ ಅಗ್ನಿಪರೀಕ್ಷೆ ಎದುರಿಸಲಿದ್ದಾರೆ. ತುಮಕೂರು ಮೊದಲ ಸಲ ಈ ಕ್ರೀಡಾಕೂಟಕ್ಕೆ ಆತಿಥ್ಯ ವಹಿಸುತ್ತಿದೆ.

ಮೂರು ದಿನಗಳವರೆಗೂ ಕೂಟ

ಏಪ್ರಿಲ್ 24ರಿಂದ 26ರವರೆಗೆ ನಡೆಯುವ ಕ್ರೀಡಾಕೂಟದಲ್ಲಿ 20 ವಯೋಮಿತಿಯ ಕ್ರೀಡಾಪಟುಗಳು ಭಾಗವಹಿಸಲಿದ್ದಾರೆ. ಈ ಕ್ರೀಡಾಕೂಟದಲ್ಲಿ ಉತ್ತಮ ಪ್ರದರ್ಶನ ನೀಡಿದ ಅಥ್ಲೀಟ್‌ಗಳು, ಭಾರತ ಜೂನಿಯರ್ ತಂಡಕ್ಕೆ ಆಯ್ಕೆಯಾಗಲಿದ್ದಾರೆ. ಹಾಗಾಗಿ ಈ ಕ್ರೀಡಾಕೂಟ ಭಾರತ ತಂಡದ ಆಯ್ಕೆ ಟ್ರಯಲ್ಸ್ ಆಗಿ ಪರಿಗಣಿಸಲಾಗಿದೆ.

ಏಷ್ಯನ್ ತಂಡದ ಆಯ್ಕೆ ಪ್ರಕ್ರಿಯೆ: ಮೇ 28ರಿಂದ 31ರವರೆಗೆ ಚೀನಾದ ಹಾಂಗ್‌ಕಾಂಗ್‌ನಲ್ಲಿ ಏಷ್ಯನ್ ಜೂನಿಯರ್ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್ ನಡೆಯಲಿದೆ. ಆಗಸ್ಟ್ 5ರಿಂದ 9ರವರೆಗೆ ಅಮೇರಿಕಾದ ಒರೆಗಾನ್ ನಲ್ಲಿ ವಿಶ್ವ ಜೂನಿಯರ್ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್ ಜರುಗಲಿದೆ. ಈ ಎರಡು ಕ್ರೀಡಾಕೂಟಗಳಿಗೆ ಭಾರತ ಜೂನಿಯರ್ ತಂಡವನ್ನ ಆಯ್ಕೆ ಮಾನದಂಡವೇ ಈ ಕ್ರೀಡಾಕೂಟವಾಗಿದೆ.

ಉದ್ದೀಪನ ಮದ್ದು ಪರೀಕ್ಷೆ: ಅಂತಾರಾಷ್ಟ್ರೀಯ ಕ್ರೀಡಾಕೂಟಕ್ಕೆ ಭಾರತದ ಪ್ರತಿನಿಧಿಗಳ ಆಯ್ಕೆ ಟ್ರಯಲ್ಸ್ ಇದಾಗಿರುವುದರಿಂದ ಅಥ್ಲೆಟಿಕ್ ಫೆಡರೇಷನ್ ಆಫ್ ಇಂಡಿಯಾದ ಅಧಿಕಾರಿಗಳು ಹಾಗೂ ತಾಂತ್ರಿಕ ವರ್ಗದವರು ಕ್ರೀಡಾಕೂಟದ ಸಂಪೂರ್ಣ ಉಸ್ತುವಾರಿ ನೋಡಿಕೊಳ್ಳುತ್ತಿದ್ದಾರೆ. ಫೋಟೋ ಫಿನಿಷ್ ಸೇರಿದಂತೆ ಅತ್ಯಾಧುನಿಕ ತಾಂತ್ರಿಕ ಉಪಕರಣಗಳನ್ನು ಈ ಕ್ರೀಡಾಕೂಟದಲ್ಲಿ ಬಳಸಲಾಗುತ್ತಿದೆ. ಅಥ್ಲೀಟ್‌ಗಳ ಉದ್ದೀಪನ ಮದ್ದು ಪರೀಕ್ಷೆ ಕೂಡ ನಡೆಯಲಿದೆ.

ಬೆಳಗ್ಗೆ-ಸಂಜೆ ಸ್ಪರ್ಧೆಗಳು: ಬೇಸಿಗೆ ಬಿಸಿಲಿನ ಹಿನ್ನಲೆಯಲ್ಲಿ ಕ್ರೀಡಾಕೂಟದ ಸ್ಪರ್ಧೆಗಳನ್ನ ಬೆಳಗ್ಗೆ ಮತ್ತು ಸಂಜೆ ನಡೆಸಲು ನಿರ್ಧರಿಸಲಾಗಿದೆ. ಸುಡು ಬಿಸಿಲಿನಲ್ಲಿ ಅಥ್ಲೀಟ್‌ಗಳು ದಣಿಯುವುದನ್ನ ತಡೆಯುವ ಸಲುವಾಗಿ ಬೆಳಗ್ಗೆ 6ರಿಂದ 10.30ರವರೆಗೆ ಸ್ಪರ್ಧೆಗಳು ನಡೆಯಲಿವೆ. ಮತ್ತೆ ಮಧ್ಯಾಹ್ನ 3.30ರಿಂದ ಆರಂಭವಾಗುವ ಸ್ಪರ್ಧೆಗಳು ರಾತ್ರಿ 8ಕ್ಕೆ ಮುಕ್ತಾಯವಾಗಲಿವೆ.

ಪದಬಂಧ

ರಾಜಾ ಸಂಗಮೇಶ ಹಿರೇಮಠ



5963

ಎಡದಿಂದ ಬಲಕ್ಕೆ
1.ತುಚ್ಛವಾದ ಬದುಕು ಎಂಬರ್ಥದ ಶಬ್ದ (4)
2.ಇದು ಬೇರೆಯ ಹೆಸರು (4)
4. ಹಣವನ್ನು ಸಂಪಾದಿಸು (3)
6.ಚಂದಿರನ ಬೆಳದಿಂಗಳು ತಿರುಗಿ ಮೂಡಿದೆ (4)
7.ಗಡಿಯ ಕಡೆಗೆ ಹೋಗಬೇಕೆಂಬ ಅವಸರ (4)
8.ಕನಿಕರವಿಲ್ಲಿ ತಿರುಗಿದೆ (3)
9.ಕಣ್ಣು-ನೇತ್ರದ ಸಮಾನಪದ (3)
10.ಮುಷ್ಕರ ಹೂಡಿ ಕುಳಿತ ವ್ಯಕ್ತಿ (4)
11.ಮರಿಗಾಗಿ ನಡೆಯುತ್ತಿರುವ ಕೆಲಸ (4)
12.ನೀರು-ವಿದ್ಯುತ್ತಿನ ಅಲೆಗಳು (3)
14.ಕೂಡಿಸು-ಜೋಡಿಸು ಎಂಬರ್ಥದ ಶಬ್ದ (4)
15.ಮಾತಿನ ನಡುವೆ ಇರುವ ಯಕ್ಷಿಣಿ (4)

ಮೇಲಿನಿಂದ ಕೆಳಕ್ಕೆ
1.ನಾನು ರಂಗನಿಗೆ ಕೊಟ್ಟ ಕಿತ್ತಳೆ (3)
3.ಕೆಂಪು ಬಣ್ಣದ ಶ್ರೀಗಂಧವಿದು (5)
5.ಅಡೆತಡೆಗಳಿಲ್ಲದೆ-ಸುಲಭವಾಗಿ ಎಂಬರ್ಥದ ಶಬ್ದ (3)
6.ಪರಡಿಯಲ್ಲಡಗಿದ ನೈವೇದ್ಯ (2)
8.ಕೊಪ್ಪಳ ಜಿಲ್ಲೆಯಲ್ಲಿರುವ ಸುವರ್ಣಗಿರಿ (5)
9.ಹಿತನುಡಿಗಳನ್ನು ಹೇಳಿದ ಹರಿಶ್ಚಂದ್ರನ ಮಗ (3)
10.ನಿಖರವಾದ-ಉತ್ತಮಸ್ಥಿತಿಯಿದು (2)
13. ಎಣಿಸಿ ದಾಖಲೆ ಮಾಡುವ ಪ್ರಕ್ರಿಯೆ (3)

5962 ಉತ್ತರ

ಎಡದಿಂದ ಬಲಕ್ಕೆ:
1.ನಾಗಭೂಷಣ 3.ಅಕ್ಷರ
5.ಗ್ರಹ 7.ಮೂರ್ಛೆತಿಳಿ
9.ತಿರುಗುಬಾಣ
10.ನಿಯಮಾವಳಿ
11.ಪತಿಗೃಹ
12.ಕೆಲ 15.ವಕೀಲ
16.ಗರುಡಧ್ವಜ

ಮೇಲಿನಿಂದ ಕೆಳಕ್ಕೆ :
1.ನಾಸಾಗ್ರ 2.ಗುಣ
4.ರವಳಿ 6.ಹಣದೊಡತಿ
7.ಮೂತಿ 8.ತಿಳಿವಳಿಕೆ
10.ಹನಿ 11.ಪಲ್ಲವ
13.ಜಟಿಲ 14.ಬೀಗ

CHANGE OF NAME

I, **AJAY RAGHAVENDRA BHEEMALINGAIAH** have changed my minor daughter name from **ADITHI** (Old Name) To **ADITHI AJAY RAGHAVENDRA** (New Name) Resident of Plot No 23, 5th Avenue, Midmac Layout, Near Chetan College, Gokul Road, Hubballi - Dharwad Pin: 580030, Karnataka, India, henceforth I will be called and recognized by new name for all future purposes, dated: 23/04/2026.

CHANGE OF NAME

I, **MOHAMMAD ATIF** (Old Name) Resident of Aisha Manzh New Colony Shiruru At Post Shiroor Tq: Kundapur 576228 (address), have changed my name as **MOULANA MOHAMMED ATIF** (New Name) henceforth I will be called and recognized by new name for all future purposes, dated: 23/04/2026.

CHANGE OF NAME

I, **MUBIN BEGUM** (Old Name) Resident of Nehru Nagar 1st Cross, Sagar - 577401, Dt: Shivamogga (address), have changed my name as **MUBEENA** (New Name) henceforth I will be called and recognized by new name for all future purposes, dated: 23/04/2026.

ಕ್ರಿಮಿ. ಅರ್ಜಿ ಸಂಖ್ಯೆ : 17/2026

ಮಾನ್ಯ 3ನೇ ಜೆ. ಎಮ್ ಎಫ್ ಸಿ ನ್ಯಾಯಾಲಯ, ಹುಬ್ಬಳ್ಳಿ ಇವರ ನ್ಯಾಯಾಲಯದಲ್ಲಿ

ಅರ್ಜಿದಾರ : ಶ್ರೀಮತಿ ಮಂಜುಳಾ ಕೋಂ. ನಾಗರಾಜ ಬದ್ದಿನಾಯಕ

ವಿರುದ್ಧ

ಎದುರುಗಾರರು : ಜನನ ವ ಮರಣ ನೋಂದಣಿ ವಿಭಾಗ
ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ
ವಲಯ ಕಚೇರಿ ನಂ. 07, ಗೋಕುಲ ರಸ್ತೆ,
ಹುಬ್ಬಳ್ಳಿ ಜಿ: ಧಾರವಾಡ

ಜಾಹೀರ ನೋಟಿಸು

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ,

ಅರ್ಜಿದಾರಳ ತಾಯಿಯಾದ, **ಶ್ರೀಮತಿ ಸಕ್ಕುಬಾಯಿ ಕೋಂ. ಫಕ್ಕೀರಪ್ಪ ಮುಳಗುಂದ** ಇವರು ದಿನಾಂಕ 10.02.1985 ರಂದು ಮರಣ ಹೊಂದಿರುತ್ತಾರೆ. ಸದರೀ ಅರ್ಜಿದಾರಳ ತಾಯಿಯು ಮರಣ ಹೊಂದಿದ ಬಗ್ಗೆ ಎದುರುಗಾರನ ಸಂಬಂಧಪಟ್ಟ ಜನನ ವ ಮರಣ ನೋಂದಣಾಧಿಕಾರಿಗಳು, ಹುಬ್ಬಳ್ಳಿ-ಧಾರವಾಡ ಮಹಾನಗರಪಾಲಿಕೆ, ಹುಬ್ಬಳ್ಳಿ ಇವರಲ್ಲಿ ಅರ್ಜಿದಾರಳು ತನ್ನ ತಾಯಿಯ ಮರಣ ಪ್ರಮಾಣ ಪತ್ರಕ್ಕಾಗಿ ಈ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದು, ಸದರೀಯವಳ ತಾಯಿಯ ಮರಣದ ಬಗ್ಗೆ ಯಾರದಾದರೂ ತಕರಾರು/ಹಕ್ಕು ಹಿತಾಸಕ್ತಿ ವಗೈರೆ ಇದ್ದಲ್ಲಿ, ದಿನಾಂಕ:26.05.2026 ರಂದು ನ್ಯಾಯಾಲಯದ ಮುಂದೆ ಮುಂಜಾನೆ 11.00 ಗಂಟೆಗೆ ತಾವಾಗಲೀ ತಮ್ಮ ಪರ ವಕೀಲರ ಮೂಲಕವಾಗಲೀ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಅರ್ಜಿದಾರಳ ಪ್ರಾರ್ಥನೆಯಂತೆ ಸದರ ಅರ್ಜಿಯನ್ನು ಇತ್ಯರ್ಥಪಡಿಸಲು ಬರುವದು ಅಂತಾ ಕೊಟ್ಟ ಜಾಹೀರ ನೋಟಿಸು.

ಈ ಹೊತ್ತು ಸನ್ 2026 ನೇ ಇಸ್ವಿ ಎಪ್ರಿಲ್ ಮಾಹೇ 22 ನೇ ದಿನದಂದು, ನಮ್ಮ ಸಹಿಯೊಂದಿಗೆ ಕೋರ್ಟಿನ ಮೊಹರು ಮಾಡಿಕೊಡಲ್ಪಟ್ಟಿತು.

ಕೋರ್ಟಿನ ಅಪ್ಪಣೆಯ ಮೇರೆಗೆ
ಸಹಿ/- ಶಿರಸ್ತೇದಾರರು
3ನೇ ಜೆ.ಎಮ್.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ

ಸಹಿ/- **ಎಸ್.ಸಿ.ಭಾಂಡೇಕರ,**
ಅರ್ಜಿದಾರರ ಪರ ವಕೀಲರು, ಹುಬ್ಬಳ್ಳಿ
ಹುಬ್ಬಳ್ಳಿ
ದಿನಾಂಕ : 22.04.2026

ಕ್ರಿಮಿನಲ್ ಮಿಸ್ ನಂ: 56/2026

ಮಾನ್ಯ ಹಿರಿಯ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಶಿಗ್ಗಾಂವ ಇವರ ನ್ಯಾಯಾಲಯಕ್ಕೆ

ಅರ್ಜಿದಾರರು : 1) ಶ್ರೀಮತಿ ಬಸೀರಾಬಿ ಕೋಂ ಅಲ್ಲಾಭಕ್ಷ ಸುಂಕದ, 2) ಶ್ರೀಮತಿ ಮೈಮುನ್ನಿಸಾ ಕೋಂ ಮಹಬೂಬಸಾಬ ಬಂಕಾಪುರ, 3) ಕುಮಾರಿ ಹುರಾಂಬಿ ತಂದೆ ಹಯಾತಸಾಬ ಚಾಕಾಪೂರ, 4) ಕುಮಾರಿ ಫಾತೀಮಾ ತಂದೆ ಹಯಾತಸಾಬ ಚಾಕಾಪೂರ, 5) ಶ್ರೀಮತಿ ಶಕೀಲಾ ಕೋಂ ಗೂಡುಸಾಬ ಜಕಾತಿ

ವಿರುದ್ಧ

ಎದುರುಗಾರ : ಮಾನ್ಯ ಮುಖ್ಯಾಧಿಕಾರಿಗಳು ಪುರಸಭೆ ಕಾರ್ಯಾಲಯ, ಶಿಗ್ಗಾಂವ, ಜನನ ವ ಮರಣ ನೋಂದಣಿ ಅಧಿಕಾರಿಗಳು ತಾ॥ ಶಿಗ್ಗಾಂವ, ಜಿ॥ ಹಾವೇರಿ

ಪತ್ರಿಕಾ ಪ್ರಕಟಣೆ

ಇದರಲ್ಲಿ ಅರ್ಜಿದಾರರ ತಾಯಿಯಾದ "ಶ್ರೀಮತಿ ಜುಲೇಖಾ ಕೋಂ ಹಯಾತಸಾಬ ಚಾಕಪೂರ" ಇವರು ದಿನಾಂಕ: 10-07-2005 ರಂದು ಶಿಗ್ಗಾಂವ ತಾಲೂಕ ಶಿಗ್ಗಾಂವ ಪಟ್ಟಣದಲ್ಲಿ ಫೋತಿ ಆಗಿರುತ್ತಾರೆ. ಸದರಿ ಫೋತಿಗೆ ಅರ್ಜಿದಾರರಾದ ನಾವು ಸರಳ ವಾರಸುದಾರರು ಇದ್ದು, ಅವರ ವಾರಸಾ ಪಡೆಯಲು ಫೋತಿಯವರ ಮರಣ ಪ್ರಮಾಣ ಪತ್ರವನ್ನು ಪಡೆಯುವ ಸಲುವಾಗಿ ಮೆ॥ ನ್ಯಾಯಾಲಯದಲ್ಲಿ ಈ ಪ್ರಕರಣವನ್ನು ದಾಖಲಿಸಿದ್ದು ಇದ್ದು, ಅದು ದಿನಾಂಕ: 27-05-2026 ರಂದು ಮುದ್ದತ್ತು ನೇಮಿಸಿದ್ದು ಇದ್ದು, ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾರಾದರೂ ಆಸಕ್ತಿಯುಳ್ಳವರು ಮೇಲಿನ ದಿನಾಂಕದಂದು ಮೆ॥ ನ್ಯಾಯಾಲಯಕ್ಕೆ ಖುದ್ದಾಗಿ ಅಥವಾ ವಕೀಲರ ಮೂಲಕ ಹಾಜರಾಗಿ ತಕರಾರು ವಗೈರೆ ಇದ್ದರೆ ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಏಕತರ್ಫಿಯಾಗಿ ಮುಂದಿನ ಆದೇಶ ಮಾಡಲಾಗುವುದು ಅಂತಾ ಕೊಟ್ಟ ಪತ್ರಿಕಾ ಪ್ರಕಟಣೆ.

ನ್ಯಾಯಾಲಯದ ಆದೇಶ ಹಾಗೂ ಮೊಹರನೊಂದಿಗೆ ಹೊರಡಿಸಲಾಗಿತು.

ಶಿಗ್ಗಾಂವ
ದಿನಾಂಕ: 23-04-2026

ಸಹಿ/- ಶಿರಸ್ತೇದಾರ
ಮಾನ್ಯ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ ಶಿಗ್ಗಾಂವ

ಅರ್ಜಿದಾರರ ಪರ ವಕೀಲರು
ಸಹಿ/- ಶ್ರೀ ಎಮ್.ಎಮ್. ಕಾರಡಗಿ
ವಕೀಲರು, ಶಿಗ್ಗಾಂವ

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯು ಅರ್ಹ ಟೆಂಡರುದಾರರಿಂದ ದ್ವಿ-ಹಂತದ ಟೆಂಡರ್ ಪದ್ಧತಿಯಲ್ಲಿ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರುಗಳನ್ನು ಆಹ್ವಾನಿಸಿದೆ.

ಪ್ರಧಾನ ಮುಖ್ಯ ಅಭಿಯಂತರರ ಕಚೇರಿ, 2ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009.

ಕ್ರ. ಸಂ	ಕಾಮಗಾರಿಯ ಹೆಸರು	ಟೆಂಡರಿಗಿಟ್ಟ ಮೌಲ್ಯ ಇಎಂಡಿ
ಐ.ಎಫ್.ಟಿ. ಸಂಖ್ಯೆ: ಬೆಂಜಮಂ/ಪ್ರಮುಅ/ಅಮುಅ(ಸಿಎಸ್&ಡಿಸಿಡಬ್ಲ್ಯೂ)/ತಾಂಸ(ಯುಎಫ್‌ಡಬ್ಲ್ಯೂ)/326/2026-27		ದಿನಾಂಕ: 23.04.2026
1.	ಬೆಂಗಳೂರು ಜಲಮಂಡಳಿ ಪರಿಮಿತಿಯ ಸಕಾನಿಅ(ಉತ್ತರ ಪೂರ್ವ-2)ಉಪ-ವಿಭಾಗದಡಿ ಬರುವ ಜಯಮಹಲ್ ಮತ್ತು ರಾಮಸ್ವಾಮಿಪಾಳ್ಯದ ಮಿಸ್ಸಿಂಗ್ ಬಿಟ್‌ಗಳಲ್ಲಿ ಯುಎಫ್‌ಡಬ್ಲ್ಯೂ ಅನ್ನು ಕಡಿತಗೊಳಿಸುವುದು ಮತ್ತು ನೀರು ಸರಬರಾಜು ವ್ಯವಸ್ಥೆಯ ಆಧುನೀಕರಣ ಮತ್ತು ಮರು ರೂಪಿಸುವ ಕಾಮಗಾರಿ.	ರೂ. 382.15 ಲಕ್ಷಗಳು ರೂ. 4.51 ಲಕ್ಷಗಳು
2.	ಬೆಂಗಳೂರು ಜಲಮಂಡಳಿ ಪರಿಮಿತಿಯ ಸಕಾನಿಅ(ದಕ್ಷಿಣ ಪಶ್ಚಿಮ-3)ಉಪ-ವಿಭಾಗದಡಿ ಬರುವ ಗವಿಪುರಂ ಎಕ್ಸ್‌ಟೆನ್ಷನ್ ಡಿಎಂಎ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ಯುಎಫ್‌ಡಬ್ಲ್ಯೂ ಅನ್ನು ಕಡಿತಗೊಳಿಸುವುದು ಮತ್ತು ನೀರು ಸರಬರಾಜು ವ್ಯವಸ್ಥೆಯ ಆಧುನೀಕರಣ ಮತ್ತು ಮರು ರೂಪಿಸುವ ಕಾಮಗಾರಿ.	ರೂ. 384.44 ಲಕ್ಷಗಳು ರೂ. 4.54 ಲಕ್ಷಗಳು

ಸಹಿ/- ಪ್ರಧಾನ ಮುಖ್ಯ ಅಭಿಯಂತರರು.

ಮೇಲ್ಕಂಡ ಕಾಮಗಾರಿಗಳಿಗೆ, ಭರ್ತಿ ಮಾಡಿದ ಟೆಂಡರ್ ದಾಖಲೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **08.05.2026** ರ **ಸಂಜೆ 4:00 ಗಂಟೆಯವರೆಗೆ.** ಟೆಂಡರ್‌ಗಳನ್ನು ತೆರೆಯುವ ದಿನಾಂಕ:**09.05.2026 ರ ಸಂಜೆ 4: 30 ಗಂಟೆಯ ನಂತರ.**

ಟೆಂಡರ್ ಮತ್ತು ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಭಾಗವಹಿಸುವ ಬಗ್ಗೆ ವಿವರಗಳನ್ನು **https://kppp.karnataka.gov.in** ಗೆ ಲಾಗಿನ್‌ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗಾಗಿ ಮೇಲಿನ ಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

ವಾ.ಸಾ.ಸಂ.ಇ/ವಾ.ಪ್ರ/ರೆ/334/2026-27

ಕರ್ನಾಟಕ ಸರಕಾರ

ಗುಲಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಲಬುರಗಿ

(ಕರ್ನಾಟಕ ಸರಕಾರ ಸ್ವಾಯತ್ತ ಸಂಸ್ಥೆ)
ಇ-ಮೇಲ್: directorgimsgulbarga@gmail.com ದೂ.08472-260252

ಸಂಖ್ಯೆ: GIMS/KLB/TENDER/SSH/CONS/CR/08/2026-27/183 ದಿನಾಂಕ:22/04/2026.

:: ಟೆಂಡರ ಪ್ರಕಟಣೆ ::

ಜಿಮ್ಸ್ ಆಸ್ಪತ್ರೆ ಕಲಬುರಗಿಯ ಸೂಪರ್ ಸ್ಪೇಷಾಲಿಟಿ ವಿಭಾಗದ ಮಾಡ್ಯೂಲರ್ ಓ.ಟಿ.ಗೆ ಅವಶ್ಯಕವಿರುವ ವೈದ್ಯಕೀಯ ಪರಿಕರಗಳನ್ನು ಖರೀದಿಸಲು ಅಧೀಕೃತ ಏಜೇನ್ಸಿ (ಸಂಸ್ಥೆ) ಯವರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆಯ (KTPP Act) ಅಧಿನಿಯಮ 1999 ಮತ್ತು ನಿಯಮಗಳು 2000 ರ ಪ್ರಕಾರ ದ್ವಿ-ಲಕೋಟೆ ಪದ್ದತಿಯಲ್ಲಿ ಇ-ಪ್ರೋಕ್ಯೂರ್‌ಮೆಂಟ ಮೂಲಕ ಟೆಂಡರ ಕರೆಯಲಾಗಿದೆ. ಎಲ್ಲ ವಿವರಗಳು https://kppp.karnataka.gov.in ಜಾಲತಾಣದಲ್ಲಿ ನೋಡಬಹುದಾಗಿದೆ.

01) ಟೆಂಡರ್ ಪ್ರಕಟಣೆ ದಿನಾಂಕ : No. GIMS/KLB/TENDER/SSH/CONS/CR/08/2026-27 Date:22.04.2026 IND. No: DME/2026-27/IND2266. 02) ಆನ್‌ಲೈನ್‌ನಲ್ಲಿ ಟೆಂಡರ್ ಫಾರಂಗಳನ್ನು ಡೌನ್‌ಲೋಡ್ ಮಾಡಿಕೊಂಡು, ಟೆಂಡರ್ ಅನ್ನು E-Procurement Portal ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ : 08-05-2026 ಸಾಯಂಕಾಲ 4:30ಕ್ಕೆ, 03) ಆನಲೈನ್ ಮುಖಾಂತರ ಪ್ರಶ್ನೆಗಳನ್ನು ಸಲ್ಲಿಸುವ ಕೋನೆಯ ದಿನಾಂಕ : 28-04-2026 ಸಾಯಂಕಾಲ 5.00 ಗಂಟೆಯವರೆಗೆ, 04) ಟೆಂಡರ ಪೂರ್ವಭಾವಿ ಸಭೆ : 30-04-2026 ಮಧ್ಯಾಹ್ನ 12:30ಕ್ಕೆ, 05) ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ : 11-05-2026 ಸಾಯಂಕಾಲ 5:00ಕ್ಕೆ, 06) ಹಣಕಾಸಿನ ಲಕೋಟೆಯನ್ನು ತೆರೆಯುವ ದಿನಾಂಕ : 12-05-2026 11:30ಕ್ಕೆ, 07) ಟೆಂಡರನ ಮೊತ್ತ : ರೂ.1,91,91,200/-, 08) ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ ಮೊತ್ತ : ರೂ.2,00,000/-, 09) ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ (ರಜಾ ದಿನಗಳನ್ನು ಹೊರತುಪಡಿಸಿ) : ನಿರ್ದೇಶಕರು, ಗುಲಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಲಬುರಗಿ. ದೂರವಾಣಿ ಸಂಖ್ಯೆ: 08472-260252, Office Email: directorgimsgulbarga@gmail.com Cell:+91 9482093568, Tender Section Email: gimstenderklb22@gmail.com Cell:+91 9972688602

ಸಹಿ/- ನಿರ್ದೇಶಕರು,
ಗುಲಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಲಬುರಗಿ.

ವಾ.ಸಾ.ಸಂ.ಇ/ಕಲಬುರಗಿ/67/ಕೆ.ಎಸ್.ಎಂ.ಸಿ.&ಎ/2026-27

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ

Email: ee_pwdbellary@yahoo.com ದೂರವಾಣಿ ಸಂ: 08392 266123

ಸಂ:ಕಾನಿಇ/ಲೋಇ/ಬವಿ/ಟಿ.ಎಸ್-6/ಕೆಕೆಆರ್‌ಡಿಬಿ/2025-26/401 ದಿನಾಂಕ: 22.04.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಆಸಕ್ತಿಯುಳ್ಳ ಗುತ್ತಿಗೆದಾರರಿಂದ ಈ ಕೆಳಕಾಣಿಸಿದ ಕಾಮಗಾರಿಗಳಿಗೆ ದ್ವಿ/ಏಕ ಲಕೋಟೆ ಪದ್ಧತಿಯಂತೆ ಟೆಂಡರುಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಪ್ರಕಟಣೆಯಲ್ಲಿನ ಕಾಮಗಾರಿಗಳನ್ನು ಅಂತರ್ಜಾಲದ ಮೂಲಕ ವೆಬ್ ಸೈಟ್ ವಿಳಾಸ **https:kppp.karnataka.gov.in**ವನ್ನು ಸಂದರ್ಶಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಕ್ರ ಸಂ	ಕಾಮಗಾರಿಗಳ ವಿವರ	ಅಂದಾಜು ಮೊತ್ತ ರೂ.ಲಕ್ಷಗಳಲ್ಲಿ
1)	PWD/2025-26/RD/WORK_INDENT35081	54.36
2)	PWD/2026-27/RD/WORK_INDENT35470	90.00
3)	PWD/2026-27/RD/WORK_INDENT35843	108.69
4)	PWD/2026-27/RD/WORK_INDENT35586	75.00
5)	PWD/2025-26/RD/WORK_INDENT35157	108.18
6)	PWD/2025-26/BR/WORK_INDENT35846	211.93

ಸೂಚನೆ : ಕಾರಣಾಂತರಗಳಿಂದ ಕೆಳಗೆ ತಿಳಿಯಪಡಿಸಿದ ಟೆಂಡರ್ ದಿನಾಂಕಗಳು ಬದಲಾದಲ್ಲಿ, ಮರು ಟೆಂಡರ್ ಆಹ್ವಾನಿಸಿದ್ದಲ್ಲಿ ಹಾಗೂ ಇನ್ನಿತರೆ ಬದಲಾವಣೆಗಳಿದ್ದಲ್ಲಿ ಗುತ್ತಿಗೆದಾರರು ಕೆ.ಪಿ.ಪಿ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಗಮನಿಸಬಹುದಾಗಿದೆ. ಇದಕ್ಕಾಗಿ ಪ್ರತ್ಯೇಕ ಜಾಹಿರಾತು ಹೊರಡಿಸಲಾಗುವುದಿಲ್ಲ.

ಟೆಂಡರಿಗಾಗಿ ನಿಗದಿಪಡಿಸಿದ ದಿನಾಂಕಗಳು ಕೆಳಗಿನಂತಿವೆ.

ಅ)ಕಾಮಗಾರಿಗಳಿಗೆ ನಿಗಧಿಪಡಿಸಿದ ಪ್ರಿ-ಬಿಡ್ ಸಭೆ ದಿನಾಂಕ ಮತ್ತು ಸಮಯ : **27.04.2026 ರಂದು 11.00 ಗಂಟೆಗೆ ಕಾರ್ಯನಿರ್ವಾಹಕ ಇಂಜನೀಯರ್, ಲೋಕೊಪಯೋಗಿ ಇಲಾಖಾ ವಿಭಾಗ, ಬಳ್ಳಾರಿ ಇವರ ಕಛೇರಿಯಲ್ಲಿ.** ಆ)ಟೆಂಡರ್ ಆಕ್ಷೇಪಣೆಗಳಿಗಾಗಿ ನಿಗದಿಪಡಿಸಲಾದ ದಿನಾಂಕ: **29.04.2026 ರಂದು 12.00 ಗಂಟೆಯ ವರೆಗೆ.** ಇ)ಕೆ.ಪಿ.ಪಿ ಪೋರ್ಟ್‌ಲ್ ಮುಖಾಂತರ ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **06.05.2026 ರಂದು 16.00 ಗಂಟೆಯ ವರೆಗೆ.** ಈ)ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ.: **07.05.2026 ರಂದು 16.30 ಗಂಟೆಗೆ ಕಾರ್ಯನಿರ್ವಾಹಕ ಇಂಜನೀಯರ್, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ ಇವರ ಕಛೇರಿಯಲ್ಲಿ ತೆರೆಯಲಾಗುವುದು**

ಸಹಿ/-ಕಾರ್ಯನಿರ್ವಾಹಕ ಇಂಜನೀಯರ್,
ಲೋಕೋಪಯೋಗಿ ಇಲಾಖೆ, ವಿಭಾಗ, ಬಳ್ಳಾರಿ

ವಾ.ಸಾ.ಸಂ.ಇ/ಬಳ್ಳಾರಿ/2026-27/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/77

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)
ಇವರ ಕಾರ್ಯಾಲಯ ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ
ಕನೀನಿನಿ, ಜಿಎಲ್‌ಬಿಸಿ, ವಿಭಾಗ ನಂ-1 ಘಟಪ್ರಭಾ ತಾ॥ಗೋಕಾಕ,

ಸಂ: ಘ.ಎ.ದಂ.ಕಾ./ವಿ-1/ಪಿಬಿ/2026-27/120 ದಿನಾಂಕ:22.04.2026

ಅಲ್ಪಾವಧಿ ಟೆಂಡರ ಪ್ರಕಟಣೆ

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ನೊಂದಾಯಿತ ಗುತ್ತಿಗೆದಾರರಿಂದ ಕಾರ್ಯನಿರ್ವಾಹಕ ಅಭಿಯಂತರರು, ಕನೀನಿನಿ, ಜಿಎಲ್‌ಬಿಸಿ, ವಿಭಾಗ ನಂ. 1 ಘಟಪ್ರಭಾ ಕಚೇರಿ ವ್ಯಾಪ್ತಿಯಲ್ಲಿ Standard Tender Document/ Works / (KW- 2) ಪದ್ಧತಿಯಂತೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಟೆಂಡರನ್ನು ಈ ಕೆಳಗಿನಂತೆ ಆಹ್ವಾನಿಸಲಾಗಿದೆ.

Notification No.119 dated: 22.04.2026

ಕ್ರ.ಸಂ 1. ಕಾಮಗಾರಿ ಇಂಡೆಂಟ್ ಸಂಖ್ಯೆ : KNNL/2025-26/CN/WORK_INDENT 4324, ಟೆಂಡರ್‌ಗೆ ಇಟ್ಟ ಮೊತ್ತ ರೂ. ಲಕ್ಷಗಳಲ್ಲಿ 41.52 ಮಿಸಲಾತಿ -

1. ಗುತ್ತಿಗೆದಾರರ ಸ್ಪಷ್ಟಿಕರಣಗಳಿಗಾಗಿ ಕೊನೆಯ ದಿನಾಂಕ 29.04.2026 [5.00 PM ಗೆ]. 2. ಟೆಂಡರ್‌ಗೆ ಅರ್ಜಿ ಮತ್ತು ಟೆಂಡರ ಸಲ್ಲಿಸುವ ಕೊನೆಯ ದಿನಾಂಕ:30.04.2026 [5.30 PM ಗೆ]. 4. KPP Portal ಮುಖಾಂತರ ತಾಂತ್ರಿಕ ಬಿಡ್/ ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 02.05.2026 [11.00 AM ಗೆ].

NOTE: ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಹಾಗೂ ಇತರೆ ಬದಲಾವಣೆಗಳಾದಲ್ಲಿ ಗುತ್ತಿಗೆದಾರರು KPP Portal ನಲ್ಲಿ ನೊಡಿಕೊಳ್ಳಬಹುದು.

ಸಹಿ/-ಕಾರ್ಯನಿರ್ವಾಹಕ ಅಭಿಯಂತರರು
ಘ.ಎ.ದಂ ಕಾಲುವೆ ವಿಭಾಗ ನಂ-1, ಘಟಪ್ರಭಾ

DIPR/BGM/RO-NO 140/KSMCA/2026-27

ಹೊಸ ದಿಗಂತ
ಜೋಳದ ಎನ್‌ಕ್ಲೇವ್,
ನೈರುತ್ಯ ರೈಲ್ವೇ ಕಚೇರಿ
ಎದುರು, ಎಸ್‌ಬಿಐ ಪಕ್ಕ
ಕೇಶ್ವಾಪುರ , ಹುಬ್ಬಳ್ಳಿ

ಕರ್ನಾಟಕ ಸರ್ಕಾರ

ಜಿಲ್ಲಾ ಪಂಚಾಯತ್, ಕೊಪ್ಪಳ. ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಕೊಪ್ಪಳ.

ಸಂಖ್ಯೆ:ಗ್ರಾ.ಕು.ನೀ & ನೈ/ವಿಕೊ/ಟೆಂಡರ್/2026-27/60 ದಿನಾಂಕ: 22/04/2026

ಅಲ್ಪಾವಧಿ ಟೆಂಡರ್ ಪ್ರಕಟಣೆ (ದ್ವಿತೀಯ ಕರೆ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಸಾರ್ವಜನಿಕ ಸಂಗ್ರಹಣೆಯಲ್ಲಿ, ಪಾರದರ್ಶಕತೆ ಅಧಿನಿಯಮ 1999 ರ ಪ್ರಕಾರ ಪಾರದರ್ಶಕತೆ ಆಕ್ಟ್ 2000 ನಿಯಮದಂತೆ Standard Bid Document KW ರ ನಿಯಮಗಳನ್ವಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ನೊಂದಾಯಿಸಿದ ಅರ್ಹ ಗುತ್ತಿಗೆದಾರರಿಂದ http://kppp.karnataka.gov.in ಪೋರ್ಟ್‌ಲ್, ಮುಖಾಂತರ ಈ ಕೆಳಗೆ ನಮೂದಿಸಿದ ಅನುಬಂಧದಲ್ಲಿಯ 2024-25 ನೇ ಸಾಲಿನ KKRDB ಯೋಜನೆಯಲ್ಲಿ ಮಂಜೂರಾದ ಕಾಮಗಾರಿಗೆ ಟೆಂಡರ್ ಆಹ್ವಾನಿಸಿದೆ. ಅರ್ಹ ಗುತ್ತಿಗೆದಾರರು ಇ-ಪ್ರೋಕ್ಯೂರಮೆಂಟ್ ಪೋರ್ಟ್‌ಲ್ http://kppp.karnataka.gov.in ಮುಖಾಂತರ ಭಾಗವಹಿಸಬಹುದು.

ಸಾಮಾನ್ಯ ಸೂಚನೆಗಳು: 1) ಗುತ್ತಿಗೆದಾರರು ಟೆಂಡರ್ ಬಿಡ್ ಡಾಕ್ಯೂಮೆಂಟ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬೇಕು. 2) ಪೂರ್ವಾರ್ಹತೆಗೆ ಬ ಎಲ್ಲಾ ಪ್ರಮಾಣ ಪತ್ರ ಹಾಗೂ ದಾಖಲೆಗಳನ್ನು ಸ್ಕ್ಯಾನ್ ಮಾಡಿ, ಆನ್‌ಲೈನ್‌ನಲ್ಲಿ ಟೆಂಡರ್ ಭರ್ತಿ ಸಮಯದಲ್ಲಿ ಲಗತ್ತಿಸಬೇಕು. 3) ನಿಗದಿತ ಇ.ಎಮ್.ಡಿ ಹಣವನ್ನು ಆನ್‌ಲೈನ್ ಮೂಲಕ ನಿಗದಿಪಡಿಸಿದಂತೆ ಸಂದಾಯ ಮಾಡಬೇಕು. 4) ಸಿಂಗಲ್ ಕವರ್ ಟೆಂಡರ್ ಆಹ್ವಾನಿಸಿದೆ.

ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಛೇರಿ ಕೆಲಸದ ವೇಳೆಯಲ್ಲಿ ಅಥವಾ http://kppp.karnataka.gov.in ದ್ವಾರ ಮಾಹಿತಿ ಪಡೆಯಬಹುದು. ಟೆಂಡರ್ ಹಾಗೂ ಮಾಹಿತಿಯನ್ನು ಸದರಿ ವೆಬ್‌ಸೈಟಿನಲ್ಲಿ ದಿನಾಂಕ: **23/04/2026** ರಿಂದ Download ಮಾಡಿಕೊಳ್ಳಬಹುದಾಗಿದೆ.

ಟೆಂಡರ್ ಪ್ರೋಸೆಸಿಂಗ್ ಶುಲ್ಕ: kppp.karnataka.gov.in ನಲ್ಲಿರುವಂತೆ ಟೆಂಡರ್ ಡೌನ್‌ಲೋಡ್ ಮಾಡಿಕೊಳ್ಳಲು ನಿಗದಿಪಡಿಸಿದ ದಿನಾಂಕ ಹಾಗೂ ಸಮಯ: **23/04/2026** ಸಮಯ 10:00 ಗಂಟೆಯಿಂದ **30/04/2026** ಸಮಯ 16:00 ಗಂಟೆವರೆಗೆ ಟೆಂಡರ್‌ಗಳನ್ನು ಸ್ವೀಕರಿಸುವ ದಿನಾಂಕ ಹಾಗೂ ಸಮಯ: **23/04/2026** ಸಮಯ 16:00 ಗಂಟೆಯಿಂದ **30/04/2026** ಸಮಯ 16:00 ಗಂಟೆವರೆಗೆ ತಾಂತ್ರಿಕ & ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಹಾಗೂ ಸಮಯ: **02/05/2026** ರಂದು 16:30 ಗಂಟೆಗೆ ಕಛೇರಿ ಸಮಯದಲ್ಲಿ ಅಥವಾ ರಜಾಇದ್ದ ಪಕ್ಷದಲ್ಲಿ ಮರುದಿನ

ಟಿಪ್ಪಣಿ: ಟೆಂಡರ್‌ನಲ್ಲಿ ಭಾಗವಹಿಸಿದ ಗುತ್ತಿಗೆದಾರರು ಪ್ರಮಾಣ ಪತ್ರಗಳ ಮೂಲ ದಾಖಲೆಗಳನ್ನು ಬಿಡ್ ತೆರೆದ 8 ದಿವಸದೊಳಗಾಗಿ ವಿಭಾಗ ಕಛೇರಿಗೆ ಪರಿಶೀಲನೆಗಾಗಿ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಅಂತಹ ಗುತ್ತಿಗೆದಾರರ ಉಮೇದುವಾರಿಕೆಯನ್ನು ಪರಿಗಣಿಸಲಾಗುವುದಿಲ್ಲ.

ಸಹಿ/-ಕಾರ್ಯಪಾಲಕ ಅಭಿಯಂತರರು,
ಗ್ರಾ.ಕು.ನೀ & ನೈರ್ಮಲ್ಯ ವಿಭಾಗ, ಕೊಪ್ಪಳ

ಡಿಐಪಿಆರ್/ಕೊಪ್ಪಳ/44/ಕೆಎಸ್‌ಎಂಸಿಎ/2026-27

ಕೆ.ಜಿ.ಎಫ್ ನಗರಾಭಿವೃದ್ಧಿ ಪ್ರಾಧಿಕಾರ

6ನೇ ಅಡ್ಡರಸ್ತೆ, ರಾಬರ್ಟ್‌ಸನ್‌ಪೇಟೆ, ಕೆ.ಜಿ.ಎಫ್-563122

ಸಂಖ್ಯೆ/ಕೆ.ಜಿ.ಎಫ್/ನಅಪ್ರಾ/ಇ.ಹ.ಪ್ರ/02/2025-26 ದಿನಾಂಕ:22.04.2026

ಇ-ಹರಾಜು ಪ್ರಕಟಣೆ

ಕೆ.ಜಿ.ಎಫ್ ನಗರಾಭಿವೃದ್ಧಿ ಪ್ರಾಧಿಕಾರವು ಅಭಿವೃದ್ಧಿ ಪಡಿಸಿರುವ ರಾಜೀವ್‌ಗಾಂಧಿ ವಸತಿ ಬಡಾವಣೆಯಲ್ಲಿನ ವಾಣಿಜ್ಯ ನಿವೇಶನಗಳ ಹರಾಜು ಪ್ರಕಟಣೆ. **(1)** ಇ-ಹರಾಜಿನಲ್ಲಿ ಪಾಲ್ಗೊಳ್ಳಲು ಆಸಕ್ತಿ ವ್ಯಕ್ತಪಡಿಸಲು ಕೊನೆಯ **ದಿನಾಂಕ: 22.05.2026ರ ಭಾರತೀಯ ಕಾಲಮಾನ 17.30 ಗಂಟೆವರೆಗೆ. (2)** ಇ-ಹರಾಜನ್ನು ತೆರೆಯುವ ಹಾಗೂ ನೇರ-ಬಿಡ್ಡಿಂಗ್ ಆರಂಭಿಸುವ **ದಿನಾಂಕ: 25.05.2026 ರ ಭಾರತೀಯ ಕಾಲಮಾನ 17.00 ಗಂಟೆಯ ನಂತರ. (3)** ಇ-ಹರಾಜು ಮುಕ್ತಾಯಗೊಳ್ಳಲು ಕೊನೆಯ **ದಿನಾಂಕ: 26.05.2026 ಭಾರತೀಯ ಕಾಲಮಾನ 17.30 ಗಂಟೆಗೆ.** (ಡೆಲ್ಟಾ ಟೈಮ್ 5.00 ನಿಮಿಷ ಇರುತ್ತದೆ.) ಇ-ಹರಾಜಿನಲ್ಲಿ ಭಾಗವಹಿಸಲು ಹೆಚ್ಚಿನ ಮಾಹಿತಿಗಾಗಿ ನಿವೇಶನದ ವಿವರಕ್ಕೆ ಸಂಪರ್ಕಿಸಬೇಕಾದ ಅಂತರ್ಜಾಲ: **http:// kppp.karnataka.gov.in**

ಕ್ರಮ ಸಂಖ್ಯೆ	ಬಡಾವಣೆಯ ಹೆಸರು	ನಿವೇಶನ ಸಂಖ್ಯೆ	ಅಳತೆ ಮೀ.ಗಳಲ್ಲಿ		ವಿಸ್ತೀರ್ಣ ಚ.ಮೀಗಳಲ್ಲಿ ಕನಿಷ್ಠ ಬೆಲೆ	ಪ್ರಾಧಿಕಾರದಿಂದ ನಿಗಧಿಪಡಿಸಿರುವ	ಷರಾ
			ಉ-ದ	ಪೂ-ಪ			
01	ರಾಜೀವ್ ಗಾಂಧಿ ವಸತಿ ಬಡಾವಣೆ	01	ಅನಿಯತ	ನಿಯತ	252.75	40,78,778-00	ಪ್ರತಿ ಚದುರ ಮೀಟರ್ ಪ್ರದೇಶದ ಬೆಲೆ ರೂ.16137.60
02		02	ಅನಿಯತ	ನಿಯತ	256.44	41,38,326-00	ಪ್ರತಿ ಚದುರ ಮೀಟರ್ ಪ್ರದೇಶದ ಬೆಲೆ ರೂ.16137.60
03		03	ಅನಿಯತ	ನಿಯತ	243.05	39,22,244-00	ಪ್ರತಿ ಚದುರ ಮೀಟರ್ ಪ್ರದೇಶದ ಬೆಲೆ ರೂ.16137.60
04		04	ಅನಿಯತ	ನಿಯತ	229.65	42,00,133-00	(ಮೂಲೆ ನಿವೇಶನ) ಪ್ರತಿ ಚದುರ ಮೀಟರ್ ಪ್ರದೇಶದ ಬೆಲೆ ರೂ.18289.28
05		05	ಅನಿಯತ	ನಿಯತ	188.86	30,47,747-00	ಪ್ರತಿ ಚದುರ ಮೀಟರ್ ಪ್ರದೇಶದ ಬೆಲೆ ರೂ.16137.60
06		06	ಅನಿಯತ	ನಿಯತ	293.32	47,33,481-00	ಪ್ರತಿ ಚದುರ ಮೀಟರ್ ಪ್ರದೇಶದ ಬೆಲೆ ರೂ.16137.60
ಹಿರಿಯ ದಿವಾಣಿ ನ್ಯಾಯಾಧೀಶರು, ನವಲಗುಂದ
ಸಹಿ/– (ಆರ್.ಎಮ್. ರಮಜೇನಿ)
ಅರ್ಜಿದಾರರ ಪರ ವಕೀಲರು ನವಲಗುಂದ

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಇಂಜಿನಿಯರವರ ಕಛೇರಿ,
ಲೋ.ಇ. ಉಡುಪಿ ವಿಭಾಗ - ಉಡುಪಿ - 576101
ದೂರವಾಣಿ & ಫ್ಯಾಕ್ಸ್: (0820) 2531802

ನಂ. ಪಿಡಬ್ಲ್ಯೂಡಿ:ಯುಡಿಎನ್:ಎನ್‌ಐಟಿ: 01:2025-26: ಎಇ-2 ದಿನಾಂಕ: 22.04.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

2025-26ನೇ ಸಾಲಿನ ರೂ. 5.02 ಲಕ್ಷ ಮತ್ತು 59.99 ಲಕ್ಷದ 5054-80-190-0-01-132- ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ ಬಂಡವಾಳ ವೆಚ್ಚ ಮತ್ತು ಕಾಲುಸಂಕ ಯೋಜನೆಯಡಿಯ 7 ಕಾಮಗಾರಿಗಳಿಗೆ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ ಅರ್ಹ ಗುತ್ತಿಗೆದಾರರಿಂದ 'ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್'' "kppp.karnataka.gov.in" ಮುಖಾಂತರ ಟೆಂಡರನ್ನು ಕರ್ನಾಟಕ ಟ್ರಾನ್ಸ್‌ಫರೆನ್ಸಿ ಇನ್ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಆ?ಯಕ್ಟ್ 2023ರಲ್ಲಿ ನಿರೂಪಿತ ಶರ್ತಗೊಳಪಟ್ಟು ಟೆಂಡರನ್ನು ಮುಖಾಂತರ ಆಹ್ವಾನಿಸಲಾಗಿದ್ದು ಇ-ಪ್ರೋಕ್ಯೂರ್ಮೆಂಟ್ ಪೋರ್ಟಲ್ "kppp.karnataka.gov.in" ಕಾಮಗಾರಿಯ ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:04.05.2026ರ ಸಂಜೆ 5.30ರ ವರೆಗೆ. ಹೆಚ್ಚಿನ ಮಾಹಿತಿಗಾಗಿ ಕಛೇರಿಯನ್ನು ಸಂಪರ್ಕಿಸುವುದು.

ಸಹಿ/- ಕಾರ್ಯಪಾಲಕ ಅಭಿಯಂತರರು
ಲೋಕೋಪಯೋಗಿ ಇಲಾಖೆ, ಉಡುಪಿ ವಿಭಾಗ, ಉಡುಪಿ

ಕರ್ನಾಟಕ ಸರ್ಕಾರ
ಹಿರಿಯ ಭೂವಿಜ್ಞಾನಿಯವರ ಕಛೇರಿ,
ಗಣಿ ಮತ್ತು ಭೂವಿಜ್ಞಾನ ಇಲಾಖೆ,
ಉತ್ತರ ಕನ್ನಡ ಜಿಲ್ಲೆ, ಕಾರವಾರ-581306
ದೂರವಾಣಿ ಸಂಖ್ಯೆ: 08382-227395

ಸಂಖ್ಯೆ: ಗಭೂಇ/ಉಕಜಿ/ಬೌಲ್ಡರ್/ಇ-ಹರಾಜು/2026-27
ದಿನಾಂಕ: 24-04-2026

ಇ-ಹರಾಜು ಪ್ರಕಟಣೆ

ಉತ್ತರ ಕನ್ನಡ ಜಿಲ್ಲೆಯ, ಕಾರವಾರ ತಾಲೂಕಿನ ಬಿಣಗಾ ಗ್ರಾಮದಿಂದ ಅಂಕೋಲಾ ತಾಲೂಕಿನ ಬಾಳೇಗುಳಿ ವ್ಯಾಪ್ತಿಯವರೆಗೆ ಚತುಷ್ಪಥ/ಷಟ್ಪಥವುಳ್ಳ ಹೆದ್ದಾರಿ NH-66 ನಿರ್ಮಾಣ ಪಥದಲ್ಲಿ ಉತ್ಪಾದನೆಯಾಗಿರುವ ಬೌಲ್ಡರ್ ಕಲ್ಲುಗಳನ್ನು ಇ-ಹರಾಜು ಮಾಡಲು ಅರ್ಹ ಅರ್ಜಿದಾರರು/ಕಂಪನಿ/ಸಂಸ್ಥೆಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಇ-ಹರಾಜು ಸಂಖ್ಯೆ: DMG/2026-27/AUCTION61 ಇ-ಹರಾಜು ನೋಟಿಫಿಕೇಷನ್ ಪ್ರತಿ ಮತ್ತು ಅನುಬಂಧಗಳನ್ನು e-portal web site:www.kppp.karnataka.gov.in ಮೂಲಕ ಡೌನಲೋಡ್ ಮಾಡಿಕೊಳ್ಳಬಹುದು. ಅನುಬಂಧಗಳನ್ನು ಡೌನ್‌ಲೋಡ್ ಮಾಡಿಕೊಂಡು ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ: 08-05-2026 ಆಗಿರುತ್ತದೆ. ಇ-ಹರಾಜು ಬಿಡ್ಡಿಂಗ್ ದಿನಾಂಕ: 14-05-2026 ರಂದು ಸಮಯ ನಿಗದಿಪಡಿಸಲಾಗಿದೆ. ಅರ್ಜಿಯನ್ನು ಹಾಗೂ ಬಿಡ್‌ಗಳನ್ನು ಆನ್‌ಲೈನ್‌ನಲ್ಲಿ ಇ-ಪ್ರೊಕ್ಯೂರಮೆಂಟ್ ಪ್ಲಾಟ್ ಫಾರಂ ಮುಖಾಂತರ ಸಲ್ಲಿಸುವುದು.

ಸಹಿ/–
ಹಿರಿಯ ಭೂವಿಜ್ಞಾನಿ/ಇ-ಹರಾಜು ಆಹ್ವಾನ ಪ್ರಾಧಿಕಾರಿ,
ಗಣಿ ಮತ್ತು ಭೂವಿಜ್ಞಾನ ಇಲಾಖೆ, ಕಾರವಾರ.

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಅಭಿಯಂತರವರ ಕಛೇರಿ,
ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ,
ಕಲಬುರಗಿ ವಿಭಾಗ, ಮಿನಿ ವಿಧಾನ ಸೌದ ಎದುರುಗಡೆ, ಐವಾನ-ಎ-ಶಾಹಿ ರೋಡ, ಕಲಬುರಗಿ, ದೂ.08472-220815

ಸಂಖ್ಯೆ : ಕಜಮ/ಕಾಪಾಅ/ತಾಂತ್ರಿಕ/ಕಿ.ಆ./ಯಾದಗಿರಿ/ನಗರೋತ್ಥಾನ ಹಂತ-3/11 ಕೆ.ವಿ./ಟೆಂಡರ್/2ನೇ ಕರೆ/2026-27/164 ದಿನಾಂಕ:22.04.2026

ಅಲ್ಪಾವಧಿ ಟೆಂಡರ್ ಪ್ರಕಟಣೆ ಇ-ಪ್ರೋಟಲ್ ಮುಖಾಂತರ

ಈ ಕೆಳಗೆ ವಿವರಿಸಿದಂತೆ ಈ ಕೆಳಗಿನ ಕೆಲಸಗಳಿಗೆ ಅರ್ಹತಾ ಮಾನದಂಡಗಳನ್ನು ಪೂರೈಸುವ ಸಂಸ್ಥೆಗಳು/ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. 1) ಕೆಲಸ ವಿವರಣೆ : ನಗರೋತ್ಥಾನ ಹಂತ-3 ರ ಅಡಿಯಲ್ಲಿ ಯಾದಗಿರಿ ನಗರಕ್ಕೆ ನೀರು ಸರಬರಾಜು ವ್ಯವಸ್ಥೆಯಡಿಯಲ್ಲಿ ಗುರುಮಿಟಕಲ್ ನೀರು ಸರಬರಾಜು ವ್ಯವಸ್ಥೆಯ 11 ಕೆ.ವಿ. ಎಕ್ಸ್‌ಪ್ರೆಸ್ ಫೀಡರನಿಂದ ಯಾದಗಿರಿ ಜಾಕ್ವೆಲಗೆ 11 ಕೆ.ವಿ. ಎಕ್ಸ್‌ಪ್ರೆಸ್ ಫೀಡರ್ ಲೈನ್ ಒದಗಿಸುವ ಕಾಮಗಾರಿ (ಲಂಪ್ಸಮ್ ಯಾವುದೇ ವೇರಿಯೇಷನ್ ಇರುವುದಿಲ್ಲ) 2) ಕೆಲಸದ ಅಂದಾಜು ಮೊತ್ತ (ರೂ.ಗಳಲ್ಲಿ) : **ರೂ.45,23,585.00** ಜಿ.ಎಸ್.ಟಿ. ಹೊರತುಪಡಿಸಿ. 3) ಮುಂಗಡ ಠೇವಣಿ ಮೊತ್ತ (ರೂಗಳಲ್ಲಿ) **ರೂ. 90,000.00/–** 4) ಟೆಂಡರ್ ಪ್ರಕ್ರಿಯೆ ಶುಲ್ಕ : ಕೆ.ಪಿ.ಪಿ. ಪ್ರೊಟಲ್‌ನಲ್ಲಿರುವಂತೆ. 5) ಕೆಲಸದ ಕಾಲಾವಧಿ: 06 ತಿಂಗಳು (ಮಳೆಗಾಲ ಸೇರಿ) 6) ಅರ್ಹತೆ ಮಾನದಂಡಗಳು : ಬಿಡ್ ದಾಖಲೆಗಳ ಪ್ರಕಾರ 7) ಮಾಹಿತಿಗಾಗಿ ಸಂಪರ್ಕಿಸಬೇಕಾದ ವಿಳಾಸ : ಕಾರ್ಯಪಾಲಕ ಅಭಿಯಂತರರು ಕನನೀಸ ಮತ್ತು ಒಚ ಮಂಡಳಿ, ವಿಭಾಗ ಕಲಬುರಗಿ, ಮಿನಿ ಮಿಧಾನ ಸೌಧ ಎದುರುಗಡೆ, ಐವಾನ್-ಎ-ಶಾಹಿ ರೋಡ್, ಕಲಬುರಗಿ. 8) ಟೆಂಡರ್‌ನನ್ನು ಡೌನ್‌ಲೋಡ್ ಮಾಡಲು ಪ್ರಾರಂಭಿಸಲು ದಿನಾಂಕ ಮತ್ತು ಸಮಯ : **24.04.2026 11.00 ಗಂಟೆಯಿಂದ.** 9) ಟೆಂಡರ್‌ನ್ನು ಇ-ಪ್ರೋಕ್ಯೂರ್‌ಮೆಂಟ್ ಮೂಲಕ ಸಲ್ಲಿಸಲು/ಅಪಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ : **08.05.2026 ಸಾ. 17.00 ಗಂಟೆವರೆಗೆ** 10) ತಾಂತ್ರಿಕ ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ: **11.05.2026 ಬೆ.11.00 ಗಂಟೆ ನಂತರ** 11) ಆರ್ಥಿಕ ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ : ಅರ್ಹ ಟೆಂಡರದಾರರಿಗೆ ಸುಚನೆ ನಿಡಲಾಗುವುದು. 12) ಅಂತರಜಾಲ ತಾಣದ ವಿಳಾಸ : https://kppp.karnataka.gov.in

ಸಹಿ/– ಕಾರ್ಯಪಾಲಕ ಅಭಿಯಂತರರು
ವಾ.ಸಾ.ಸಂ.ಇ.ಕಲಬುರಗಿ/70/ದೇಶಪಾಂಡೆ ಪಬ್ಲಿಸಿಟಿ/2026-27 ಕನನೀಸ ಮತ್ತು ಒಚ ಮಂಡಳಿ ವಿಭಾಗ, ಕಲಬುರಗಿ

ಎಸ್‌ಎಸ್‌ಎಲ್‌ಸಿ ಫಲಿತಾಂಶ 2025-26

ಕಲಬುರಗಿ ಎಸ್‌ಬಿಆರ್ ಶಾಲೆಗೆ ಶೇ. 98.24% ಅತ್ಯುತ್ತಮ ಫಲಿತಾಂಶ

ಅಭಿನಂದನೆ

ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ಅಧ್ಯಕ್ಷೆ ಪೂಜ್ಯ ಡಾ.ದಾಕ್ಷಾಯಿಣಿ ಎಸ್ ಅಪ್ಪ ಹಾಗೂ ಕಾರ್ಯದರ್ಶಿ ಬಸವರಾಜ ದೇಶಮುಖ ಅವರು ವಾರ್ಷಿಕ ಪರೀಕ್ಷೆಯಲ್ಲಿ ಅತಿ ಹೆಚ್ಚಿನ ಅಂಕಗಳನ್ನು ಗಳಿಸಿ ಪಾಲಕರ ಹಾಗೂ ಸಂಸ್ಥೆಯ ಕೀರ್ತಿಗೆ ಪಾತ್ರರಾದ ವಿದ್ಯಾರ್ಥಿಗಳಿಗೆ ಅಭಿನಂದಿಸಿ ಉಜ್ವಲ ಭವಿಷ್ಯಕ್ಕಾಗಿ ಆಶೀರ್ವದಿಸಿದ್ದಾರೆ.

ಕಲಬುರಗಿ: ಪ್ರಸಕ್ತ ವರ್ಷದ ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆಯಲ್ಲಿ ಎಸ್.ಬಿ.ಆರ್ ಶಾಲೆ ಅತ್ಯುತ್ತಮ ಸಾಧನೆ ಮಾಡಿ ಶೇ. 98.24 ಫಲಿತಾಂಶ ದಾಖಲಿಸಿದೆ.ರಾಜ್ಯ ಮಟ್ಟದಲ್ಲಿ ನಾಲ್ಕನೇ ರ್‍ಯಾಂಕ್ ಹಾಗೂ ಜಿಲ್ಲೆಯಲ್ಲಿ ಪ್ರಥಮ ಸ್ಥಾನವನ್ನು ಪಡೆದಿದೆ.

ವಿದ್ಯಾರ್ಥಿನಿಯರಾದ ಮೇಘನಾ ಎಂ.ಎಂ ಹಾಗೂ ಮಾಧವಿ ಎಂ ಅವರು ತಲಾ 622/625 (99.5%) ಅಂಕಗಳನ್ನು ಪಡೆದು ಶಾಲೆಗೆ ಕೀರ್ತಿ ತಂದಿದ್ದಾರೆ.

ಪ್ರಮುಖ ಸಾಧನೆಗಳು: 96%ಕ್ಕಿಂತ ಹೆಚ್ಚು ಅಂಕ ಪಡೆದವರು 61 ವಿದ್ಯಾರ್ಥಿಗಳು. 95% ರಿಂದ 96% ನಡುವೆ 21 ವಿದ್ಯಾರ್ಥಿಗಳು. 85%ಕ್ಕಿಂತ ಹೆಚ್ಚು (ಡಿಸ್ಟಿಂಕ್ಷನ್) 256 ವಿದ್ಯಾರ್ಥಿಗಳು.

ಇನ್ನು ಕೆಲವು ವಿದ್ಯಾರ್ಥಿಗಳ ಉನ್ನತ ಸಾಧನೆ

ಸಾತ್ವಿಕ್ ಡಿ ಪಾಟೀಲ್ 619/625 (99.04%), ಪ್ರಜ್ವಲ್ ಬಿ ಪಾಟೀಲ್ ? 618/625 (98.88%), ವಿನಯ ಆರ್.ಎಸ್ 618/625 (98.88%), ಒಟ್ಟು ಫಲಿತಾಂಶ ವಿವರ: ಫಸ್ಟ್ ಕ್ಲಾಸ್ (60% 84%) 263 ವಿದ್ಯಾರ್ಥಿಗಳು, ಸೆಕೆಂಡ್ ಕ್ಲಾಸ್ (50% 59%) 52 ವಿದ್ಯಾರ್ಥಿಗಳು, ಪಾಸ್ ಕ್ಲಾಸ್ (49%ಕ್ಕಿಂತ ಕಡಿಮೆ) 45 ವಿದ್ಯಾರ್ಥಿಗಳು, ಒಟ್ಟು ವಿದ್ಯಾರ್ಥಿಗಳು 616 100/100 ಅಂಕ ಪಡೆದವರು: ಕನ್ನಡ 49, ಹಿಂದಿ 41, ವಿಜ್ಞಾನ 3, ಗಣಿತ 8, ಸಮಾಜ ವಿಜ್ಞಾನ 50

ಎಕ್ಸಲಂಟ್ ಆಂಗ್ಲ ಶಾಲೆಗೆ ಶೇ. 98.06 ರಷ್ಟು ಫಲಿತಾಂಶ

ವಿಜಯಪುರ: ನಗರ ಹೊರ ವಲಯ ಇಟ್ಟಂಗಿಹಾಳದ ಎಕ್ಸಲಂಟ್ ಆಂಗ್ಲ ಮಾಧ್ಯಮ ಪ್ರಾಥಮಿಕ ಹಾಗೂ ಪ್ರೌಢಶಾಲೆ ಎಸ್‌ಎಸ್ ಎಲ್‌ಸಿ ಪರೀಕ್ಷೆಯಲ್ಲಿ ಶೇ. 98.06 ರಷ್ಟು ಫಲಿತಾಂಶ ಪಡೆದಿದೆ.

ವಿದ್ಯಾರ್ಥಿಗಳಾದ ಚಿತ್ರಾ ಬಿರಾದಾರ (619), ಸುಜಲ್ ರಾಠೋಡ (618), ಪ್ರೀತಮ್ ಎಸ್.ಎಲ್. (615), ಐಶ್ವರ್ಯ ಮಠಪತಿ (613), ವರ್ಷಾ ಬಿರಾದಾರ (612), ಪ್ರೀತಮ್ ಶಹಾಪೇಟಿ (611), ಆಕಾಶ ದೇಶಪಾಂಡೆ (611), ಪ್ರಜ್ಞಾ ಅರಬಿ (610), ಸಿಂಚನಾ ತೋಂಟಾಪುರ (609), ಕೀರ್ತನ ತರಗಟ್ಟಿ (609) 600 ಕ್ಕಿಂತ ಹೆಚ್ಚು ಅಂಕ ಪಡೆದು ಉತ್ತಮ ಸಾಧನೆ ತೋರಿದ್ದಾರೆ.

ಪರೀಕ್ಷೆಗೆ ಹಾಜರಾದ ಒಟ್ಟು 463 ವಿದ್ಯಾರ್ಥಿಗಳ ಪೈಕಿ 33 ವಿದ್ಯಾರ್ಥಿಗಳು 600 ಕ್ಕಿಂತ ಹೆಚ್ಚು ಅಂಕ ಪಡೆದಿದ್ದು, 145 ವಿದ್ಯಾರ್ಥಿಗಳು ಶೇ. 90 ಕ್ಕಿಂತ ಹೆಚ್ಚು ಅಂಕ ಗಳಿಸಿದ್ದಾರೆ. ಒಟ್ಟು ವಿದ್ಯಾರ್ಥಿಗಳಲ್ಲಿ 211 ವಿದ್ಯಾರ್ಥಿಗಳು ಅತ್ಯುತ್ತಮ ದರ್ಜೆ, 204 ವಿದ್ಯಾರ್ಥಿಗಳು ಪ್ರಥಮ ದರ್ಜೆ ಹಾಗೂ 29 ವಿದ್ಯಾರ್ಥಿಗಳು ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. ಕನ್ನಡ 40, ಹಿಂದಿ 73, ಗಣಿತ 4, ಸಮಾಜ ವಿಜ್ಞಾನ ವಿಷಯದಲ್ಲಿ 27 ವಿದ್ಯಾರ್ಥಿಗಳು ನೂರಕ್ಕೆ 100 ಅಂಕ ಪಡೆದಿದ್ದು, ವಿದ್ಯಾರ್ಥಿಗಳ ಈ ಸಾಧನೆಗೆ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಡಾ. ಶಿವಾನಂದ ಕೆಲೂರ, ಶಾಲೆಯ ಮುಖ್ಯ ಗುರು ತಳಜಾರಾಮ ಸುಕ್ತೆ ಹಾಗೂ ಶಿಕ್ಷಕ ವೃಂದ ಹರ್ಷ ವ್ಯಕ್ತಪಡಿಸಿದ್ದಾರೆ.

ಶೇ.99.99 ರಷ್ಟು ಫಲಿತಾಂಶ

ಹುಕ್ಕೇರಿ: ಪಟ್ಟಣದ ಪ್ರತಿಷ್ಠಿತ ಮಹಾವೀರ ಶಿಕ್ಷಣ ಸಂಸ್ಥೆ ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆಯಲ್ಲಿ ಶೇ.99.99 ರಷ್ಟು ಫಲಿತಾಂಶ ಪಡೆದಿದೆಎಂದು ಸಂಸ್ಥೆ ಅಧ್ಯಕ್ಷ ಮಹಾವೀರ ನಿಲಜಗಿ ಮತ್ತು ಉಪಾಧ್ಯಕ್ಷ ಪ್ರಜ್ವಲ ನಿಲಜಗಿ ಅವರು ತಿಳಿಸಿದ್ದಾರೆ.

ಸನ್ 2025-26 ನೇ ಸಾಲಿನ ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೇಯಲ್ಲಿ ಶಾಲೆಯ 77 ವಿದ್ಯಾರ್ಥಿಗಳು ಹಾಜರಾಗಿ ಅದರಲ್ಲಿ 40 ವಿದ್ಯಾರ್ಥಿಗಳು ಉನ್ನತ ಶ್ರೇಣಿ, 25 ಪ್ರಥಮ ಶ್ರೇಣಿ, 12 ದ್ವಿತೀಯ ಶ್ರೇಣಿಯಲ್ಲಿ ಉತ್ತೀರ್ಣ ಆಗಿದ್ದಾರೆಂದು ತಿಳಿಸಿದರು. ಭಾಗ್ಯಶ್ರೀ ಪಾಟೀಲ 612 (97.92%) ಅಂಕ ಪಡೆದು ಪ್ರಥಮ, ಚಂದನಾ ಅಂಬಾರಿ 582 (93.12%) ದ್ವಿತೀಯ ಹಾಗೂ ಅಂಕಿತಾ ನಾಯಿಕ ಮತ್ತು ಲಕ್ಷ್ಮೀ ಮುದಕನ್ನವರ ತಲಾ 581 (92.96%) ಅಂಕ ಪಡೆದು ತೃತೀಯ ಸ್ಥಾನ ಪಡೆದಿದ್ದಾರೆ.

100ಕ್ಕೆ 100ರಷ್ಟು ಫಲಿತಾಂಶ

ಬೀಳಗಿ : ಪಟ್ಟಣದ ಸ್ವಾಮಿ ವಿವೇಕಾನಂದ ಕನ್ನಡ ಮತ್ತು ಆಂಗ್ಲ ಮಾಧ್ಯಮ ಪ್ರೌಢ ಶಾಲೆ 2025-26ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ 27 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್, 71 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ, 28 ವಿದ್ಯಾರ್ಥಿಗಳು ದ್ವಿತೀಯ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. 100ಕ್ಕೆ 100ರಷ್ಟು ಫಲಿತಾಂಶ ಹೊಂದಿದೆ.

ಆಂಗ್ಲ ಮಾಧ್ಯಮದಲ್ಲಿ ವಾಸುದೇವ ಚವ್ಹಾಣ ಶೇ.95.68 ಪ್ರಥಮ ಸ್ಥಾನ, ಅಪೇಕ್ಷಾ ಹಳ್ಳಿ ಮತ್ತು ಸಂಗಮೇಶ ಮುಮದಾಪೂರ ಶೇ. 95.20 ದ್ವಿತೀಯ ಸ್ಥಾನ, ಅಂಕಿತಾ ಗಾಯಕವಾಡ ಶೇ. 95.04 ತೃತೀಯ ಸ್ಥಾನ ಪಡೆದುಕೊಂಡಿದ್ದಾರೆ. ಕನ್ನಡ ಮಾಧ್ಯಮದಲ್ಲಿ ಸುನಂದಾ ವಾಲಿಕಾರ ಶೇ. 92.16 ಪ್ರಥಮ ಸ್ಥಾನ, ಸುಸ್ಮಿತಾ ಗಡದ ಶೇ. 90.88 ದ್ವಿತೀಯ ಸ್ಥಾನ, ದಾನೇಶ್ವರಿ ನಾಗರಾಣ ಶೇ. 90.72 ತೃತೀಯ ಸ್ಥಾನ ಪಡೆದುಕೊಂಡಿದ್ದಾರೆ. ಈ ವಿದ್ಯಾರ್ಥಿಗಳಿಗೆ ಸಂಸ್ಥೆಯ ಸಂಸ್ಥಾಪಕ ಎಂ. ಎನ್. ಪಾಟೀಲ, ಆಡಳಿತಾಧಿಕಾರಿ ವಿ. ಎಸ್. ಮೇಟಿ, ಆಡಳಿತ ಮಂಡಳಿ, ಮುಖ್ಯೋಪಾಧ್ಯಯರಾದ ಜಿ. ಆರ್. ಪಾಟೀಲ, ಆರ್. ಎಸ್. ನಂದವಾಡಗಿ ಶುಭ ಹಾರೈಸಿದ್ದಾರೆ.

ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಯಕ್ಸಂಬಾದ ಜೊಲ್ಲೆ ಪ್ರೌಢಶಾಲೆಗೆ ಶೇ.99 ಫಲಿತಾಂಶ

ಚಿಕ್ಕೋಡಿ: ತಾಲೂಕಿನ ಯಕ್ಸಂಬಾ ಪಟ್ಟಣದ ಜೊಲ್ಲೆ ಶಿಕ್ಷಣ ಸಂಸ್ಥೆಯ ಶಿವಶಂಕರ ಜೊಲ್ಲೆ ಕನ್ನಡ ಪ್ರೌಢ ಶಾಲೆಗೆ ಶೇ.99ರಷ್ಟು ಎಸ್ ಎಸ್ ಎಲ್ ಸಿ ಫಲಿತಾಂಶ ಬಂದಿದೆ. ಒಟ್ಟು 61 ವಿದ್ಯಾರ್ಥಿಗಳಲ್ಲಿ 17 ಅತ್ಯುನ್ನತ ಶ್ರೇಣಿ, 32 ಪ್ರಥಮ ಶ್ರೇಣಿ, 11 ದ್ವಿತೀಯ ಶ್ರೇಣಿ ಪಡೆದು ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಮಂಜನಾಥ ಕುಂಬಾರ ಶೇ. 98.72, ಸರ್ವೇಶ ಮಗದುಮ್ಮ ಶೇ 97.76, ಅಮೃತಾ ಖೋತ ಶೇ.95.20 ಅಂಕಗಳನ್ನು ಪಡೆದು ಶಾಲೆಗೆ ಕೀರ್ತಿ ತಂದಿದ್ದಾರೆ.

ವಿದ್ಯಾರ್ಥಿಗಳ ಸಾಧನೆಗೆ ಜೊಲ್ಲೆ ಗ್ರುಪ್ ಸಂಸ್ಥಾಪಕ, ಮಾಜಿ ಸಂಸದ, ಬಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಅಣ್ಣಾಸಾಹೇಬ ಜೊಲ್ಲೆ, ಸಂಸ್ಥೆಯ ಅಧ್ಯಕ್ಷೆ, ನಿಪ್ಪಾಣಿ ಶಾಸಕಿ ಶಶಿಕಲಾ ಜೊಲ್ಲೆ, ಉದ್ಯಮಿ ಬಸವಪ್ರಸಾದ ಜೊಲ್ಲೆ, ಆಶಾಜ್ಯೋತಿ ಬುದ್ಧಿಮಾಂದ್ಯ ಮಕ್ಕಳ ವಸತಿ ಶಾಲೆಯ ಅಧ್ಯಕ್ಷ ಜ್ಯೋತಿಪ್ರಸಾದ ಜೊಲ್ಲೆ ಸೇರಿದಂತೆ ಸಂಸ್ಥೆಯ ಪದಾಽಕಾರಿಗಳು, ಶಿಕ್ಷಕರು, ಸಿಬ್ಬಂದಿ ವರ್ಗ ಅಭಿನಂದಿಸಿದ್ದಾರೆ.

ರಾಮಲಿಂಗೇಶ್ವರ ಶಿಕ್ಷಣ ಸಂಸ್ಥೆ: ಶೇ.92.68 ರಷ್ಟು ಫಲಿತಾಂಶ

ಮೂಡಲಗಿ: ತಾಲೂಕಿನ ಕಲ್ಲೋಳಿ ಪಟ್ಟಣದರಾಮಲಿಂಗೇಶ್ವರ ಶಿಕ್ಷಣ ಸಂಸ್ಥೆಯ ಪ್ರೌಢ ಶಾಲೆಯು ಎಸ್‌ಎಸ್‌ಎಲ್ ಸಿ ಪರೀಕ್ಷೆಯಲ್ಲಿ ಶೇ.92.68% ರಷ್ಟು ಫಲಿತಾಂಶ ಹೊಂದಿದೆಎಂದು ಸಂಸ್ಥೆಯ ಅಧ್ಯಕ್ಷ ಬಸಗೌಡ ಶಿವಗೌಡ ಪಾಟೀಲ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಒಟ್ಟು 41 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು, 7 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್, 14 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ಪಾಸಾಗಿದ್ದಾರೆ. ಕವಿತಾ ಮಾರುತಿ ನಬಾಪುರ 603/625(96.48%) ಪ್ರಥಮ ಸ್ಥಾನ, ಅನ್ನಪೂರ್ಣಾರಾಮಪ್ಪಾ ಮಾಯನ್ನವರ 601/625(96.16%) ದ್ವಿತೀಯ ಸ್ಥಾನ ಹಾಗೂ ಸಂಪದಾ ಹುಕ್ಕೇರಿ 592/625 (94.72%) ತೃತೀಯ ಸ್ಥಾನ ಪಡೆದಿದ್ದಾರೆ.

ಸ್ನೇಹಾ ಜಗದೀಶ ಮಠದ 587(93.92%), ಸ್ವಾತಿ ಬಾಳಪ್ಪಾ ಚೌಗಲಾ552(88.32%),ಮಹ್ಮದಯೂನುಸ್ ಸಲೀಮ್ ನದಾಫ್ 551(88.16%), ಸೌಮ್ಯಾ ಹಣಮಂತ ಹಾದಿಮನಿ 533(85.28%) ಡಿಸ್ಟಿಂಕ್ಷನ್ ನಲ್ಲಿ ಪಾಸಾಗಿದ್ದಾರೆ. ವಿದ್ಯಾರ್ಥಿಗಳ ಈ ಸಾಧನೆಗೆ ಸಂಸ್ಥೆಯಅಧ್ಯಕ್ಷ ಬಸಗೌಡ ಶಿವಗೌಡ ಪಾಟೀಲ, ಉಪಾಧ್ಯಕ್ಷರು, ಆಡಳಿತ ಮಂಡಳಿಯ ಸರ್ವ ಸದಸ್ಯರು ಅವಳಿ ಕಾಲೇಜಿನ ಪ್ರಾಚಾರ್ಯರು ಹಾಗೂ ಉಪನ್ಯಾಸಕ ಸಿಬ್ಬಂದಿ,ಕನ್ನಡ ಪ್ರಾಥಮಿಕ,ಆಂಗ್ಲ ಮಾಧ್ಯಮ ಹಾಗೂ ಪ್ರೌಢ ಶಾಲೆಯ ಮುಖ್ಯೋಪಾಧ್ಯಾಯರು ಹಾಗು ಶಿಕ್ಷಕ ಸಿಬ್ಬಂದಿ ಅಭಿನಂದಿಸಿದ್ದಾರೆ.

ಚಿನ್ಮಯ ವಿದ್ಯಾಲಯ ವಿದ್ಯಾರ್ಥಿಗಳ ಸಾಧನೆ

ಹುಬ್ಬಳ್ಳಿ: ನಗರದ ಚಿನ್ಮಯ ವಿದ್ಯಾಲಯ ವಿದ್ಯಾರ್ಥಿಗಳು ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದ್ದಾರೆ. ವಿದ್ಯಾಲಯದ ವಿದ್ಯಾರ್ಥಿ ಸಾಕ್ಷಿ ಕುಲಕರ್ಣಿ 625ಕ್ಕೆ 622 ಅಂಕ ಪಡೆಯುವ ಮೂಲಕ ರಾಜ್ಯಕ್ಕೆ ನಾಲ್ಕನೇ ಸ್ಥಾನ ಹಾಗೂ ಶಾಲೆಗೆ ಮೊದಲ ಸ್ಥಾನ ಪಡೆದಿದ್ದಾಳೆ. ಎಂ.ಸಾರ್ವಿಕಾ(612) ಶಾಲೆಗೆ ದ್ವಿತೀಯ, ವಿನಾಯಕ ನವಲಗುಂದ(607) ಪಡೆಯುವ ಮೂಲಕ ಶಾಲೆಗೆ ಮೂರನೇ ಸ್ಥಾನ ಪಡೆದಿದ್ದಾರೆ. ಪ್ರಸ್ತುತ ವರ್ಷ ವಿದ್ಯಾಲಯ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ 25 ನೇ ಬಾರಿಗೆ ಶೇ. 100 ರಷ್ಟು ಫಲಿತಾಂಶ ಪಡೆದಿದೆ. ಒಟ್ಟು 117 ವಿದ್ಯಾರ್ಥಿಗಳ ಪೈಕಿ 42 ವಿದ್ಯಾರ್ಥಿಗಳು ಎ+, 34 ಎ, 25 ಬಿ+, 12 ವಿದ್ಯಾರ್ಥಿಗಳು ಬಿ ಹಾಗೂ 2 ವಿದ್ಯಾರ್ಥಿಗಳು ಸಿ+ ಹಾಗೂ ಓರ್ವ ಸಿ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ಶಾಲೆಯ ಆಡಳಿತ ಮಂಡಳಿ ಹಾಗೂ ಶಿಕ್ಷಕರ ಸಿಬ್ಬಂದಿ ವಿದ್ಯಾರ್ಥಿಗಳ ಸಾಧನೆಗೆ ಅಭಿನಂದನೆ ಸಲ್ಲಿಸಿದ್ದಾರೆ.



ಎಸ್‌ಎಸ್‌ಎಲ್‌ಸಿ ಪರೀಕ್ಷೆ: ವೇದ ಅಕಾಡೆಮಿ ಶಾಲೆಗೆ ನೂರಕ್ಕೆ ನೂರು ಫಲಿತಾಂಶ

ವಿಜಯಪುರ: ನಗರ ಹೊರ ವಲಯ ಇಟ್ಟಂಗಿಹಾಳ ಬಳಿಯ ವೇದ ಅಕಾಡೆಮಿ ಶಾಲೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ನೂರಕ್ಕೆ 100 ರಷ್ಟು ಫಲಿತಾಂಶ ಪಡೆದಿದ್ದು, ಸಂಸ್ಥೆಯ ಅಧ್ಯಕ್ಷ ಡಾ. ಶಿವಾನಂದ ಕೆಲೂರ ಹರ್ಷವ್ಯಕ್ತಪಡಿಸಿದ್ದಾರೆ.

ಪರೀಕ್ಷೆಗೆ ಹಾಜರಾದ 93 ವಿದ್ಯರ್ಥಿಗಳಲ್ಲಿ 48 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿ, 37 ವಿದ್ಯರ್ಥಿಗಳು ಪ್ರಥಮ ದರ್ಜೆ ಪಡೆದಿದ್ದು, ಉಳಿದಂತೆ 8 ವಿದ್ಯರ್ಥಿಗಳು ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ.

ವಿದ್ಯಾರ್ಥಿಗಳಾದ ಮನಸ್ವಿ ತಳವಾರ ಹಾಗೂ ಪೃಥ್ವಿರಾಜ ನರೋಟೆ 611 (ಶೇ. 97.76) ಅಂಕಪಡೆದು ಶಾಲೆಗೆ ಪ್ರಥಮ ಸ್ಥಾನ ಪಡೆದಿದ್ದಾರೆ. ಭರತಕುಮಾರ ದೇಸಾಯಿ 610 (ಶೇ. 97.60), ಸಿದ್ಧನಗೌಡ ಸಾಲೋಡಗಿ 605 (ಶೇ. 96.80), ಚಿದಾನಂದ ಪಾಟೀಲ 604 (ಶೇ. 96.64), ಶುಭಾಂಗಿ ದಬಾಲೆ 604 (ಶೇ. 96.64), ಬಸನಗೌಡ ಪಾಟೀಲ 604 (ಶೇ. 96.64), ಪೂರ್ವಿ ಪಾಟೀಲ 599 (ಶೇ. 95.84), ಮಂಜೂರ ಪಟೇಲ 599 (ಶೇ. 95.84), ಮೌಲಾಲಿ ಚಪ್ಪರಬಂದ 599 (ಶೇ. 95.84) ಅಂಕಪಡೆದು ಶಾಲೆಗೆ ಕೀರ್ತಿ ತಂದಿದ್ದಾರೆ.

ಕನ್ನಡ 11, ಹಿಂದಿ 19, ಹಾಗೂ ಸಮಾಜ ವಿಜ್ಞಾನದಲ್ಲಿ 6 ವಿದ್ಯಾರ್ಥಿಗಳು ನೂರಕ್ಕೆ ನೂರು ಅಂಕ ಪಡೆದಿದ್ದಾರೆ. ವಿದ್ಯಾರ್ಥಿಗಳ ಅಭೂತಪೂರ್ವ ಸಾಧನೆಗೆ ಆಡಳಿತ ಮಂಡಳಿ ಹಾಗೂ ಸಿಬ್ಬಂದಿ ವರ್ಗ ಅಭಿನಂದಿಸಿದ್ದಾರೆ.

2025-26ನೇ ಎಸ್ ಎಸ್ ಎಲ್ ಸಿ ಫಲಿತಾಂಶ

ಶ್ರೀ ಭೋಗೇಶ್ವರ ಶಾಲೆಯ ಅಮೋಘ ಸಾಧನೆ

ಕಲಬುರಗಿ: ನಗರದ ಸಂತೋಷ ಕಾಲೊನಿಯ ಶ್ರೀ ಭೋಗೇಶ್ವರ ಕನ್ನಡ ಮಾಧ್ಯಮ ಪ್ರೌಢಶಾಲೆ,ಶ್ರೀ ದುಂಡಪ್ಪ ಸಾಧು ಮಹಾರಾಜ್ ಆಂಗ್ಲ ಮಾಧ್ಯಮ ಪ್ರೌಢಶಾಲೆ ಹಾಗೂ ಗಾಯತ್ರಿ ಕನ್ನಡ ಮಾಧ್ಯಮ ಕನ್ಯಾ ಪ್ರೌಢಶಾಲೆಯೂ ಪ್ರಸಕ್ತ 2025-26ನೇ ಸಾಲಿನ ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ 98.24 ಪ್ರತಿಶತ ಫಲಿತಾಂಶ ಪಡೆದು ಅಮೋಘ ಸಾಧನೆ ಮಾಡಿದೆ.

ಗಾಯತ್ರಿ ಕನ್ನಡ ಮಾಧ್ಯಮ ಕನ್ಯಾ ಪ್ರೌಢಶಾಲೆಯ ಸಿಂಚನಾ -614(98.24),ಕವಿತಾ-611(97.76), ಭಾರತಿ-592(94.72), ಸುಷ್ಮಾ -585(93.6), ಲಕ್ಷ್ಮಿ -573(91.68),ನಂದಿನಿ-546(87.36), ನಿವೇದಿತಾ -544(87.04), ದಿಯಾ-537(85.92), ಭವಾನಿ-504(80.64), ಪಲ್ಲವಿ -501(80.16), ಶಿಲ್ಪಾ-495(79.2),ಅಕ್ಷತಾ-494(79.04), ಸ್ವಾತಿ -459(73.44),ಸಿಂಚನಾ-454(72.64),ಸಾಧನಾ-451(72.16), ನಿಖಿತಾ -449(71.84), ವೈಷ್ಣವಿ -440(70.04),ರೂಪಾಲಿ-415(66.4), ಪ್ರಿಯಾ-410(65.6), ಭಾಗ್ಯಶ್ರೀ- 383(61.28), ಸಿದ್ದಮ್ಮ-367 (58.72)ಫಲಿತಾಂಶ ಪಡೆದಿದ್ದಾರೆ.

ಶ್ರೀ ದುಂಡಪ್ಪ ಸಾಧು ಮಹಾರಾಜ್ ಆಂಗ್ಲ ಮಾಧ್ಯಮ ಪ್ರೌಢಶಾಲೆಯ ಆದಿತ್ಯ -575(91.2), ಪ್ರವೀಣ್ -570(91.2), ಚಂದನ್ -536(85.76), ವಿಕಾಸ್ -514(82.24),ಮಾಲಕರಸಿದ್ದ -501(80.16), ಕೈಲಾಸ -(74.88), ಸಿದ್ಧಾರೂಢ -436(69.76), ಅಭಿಲಾಷ್ -422(67.33),ಸುದೀಪ್-402(64.33), ಶಿವಕುಮಾರ್ -368(58.88), ಎಂಡಿ ಅಖಿಲ್-366(58.56),ಸಾಯಿ ಸಮರ್ಥ -356(56), ಅಭಿಷೇಕ್ -321(51),ಅನಿಕೇತ್ -(49.76) ಪ್ರತಿಶತ ಫಲಿತಾಂಶ ಪಡೆದಿದ್ದಾರೆ.

ಶ್ರೀ ಭೋಗೇಶ್ವರ ಕನ್ನಡ ಮಾಧ್ಯಮ ಪ್ರೌಢಶಾಲೆಯ ರಾಹುಲ್ -581(92.96), ಸುಪ್ರೀತ್ -570(91.2),ನಂದೇಶ್-563(90.8), ಬಸವರಾಜ -549(87.84), ರೋಹಿತ್ -544(87.04), ಸುನೀಲ್ -543(86.88), ಅಭಿಷೇಕ್ -538(86.08),ಆಽಕೃಷ್ಣ-540(86.04), ವಿಶ್ವಾಸ -525(84),ನಂದೇಶ್ -520(83), ಮಹೇಶ್ -510(81.06), ಸಂಕಲ್ಪ -509(81.44), ಶರಣಬಸಪ್ಪಾ-502(80.32), ಸುಮೀತ್-492(78.72), ವಿರೇಶ್ -483(77.28), ಅನಿಕೇತ್-475(76), ಸಂಗಮೇಶ -470(75.2), ಪ್ರಮೋದ್ -468(74.88), ಸತೀಶ್ -466(74.56), ಸಂಕೇತ -454(72.64), ಶರಣಕುಮಾರ-451(72.60), ಪೃಥ್ವಿರಾಜ್-443(70.88), ಕರುಣೇಶ್-441(70.56), ಸುಮೀತ್ -436(69.76), ರೋಹಿತ್ -435(69.6), ಮಲ್ಲಿಕಾರ್ಜುನ-414(66.24), ಶರಣ-399(63.84), ಸ್ವರಿತ್ -396(63.36), ಸುಪ್ರೀತ್ -394(63.04), ಅಯಾನ್ -390(62.4),ಗೌರಿಶ್-381(60.96) ಫಲಿತಾಂಶ ಪಡೆದು ತೇರ್ಗಡೆಯಾಗಿದ್ದಾರೆ. ಈ ಫಲಿತಾಂಶಕ್ಕೆ ಸಂಸ್ಥೆಯ ಅಧ್ಯಕ್ಷರಾದ ಲಕ್ಷ್ಮಿಪುತ್ರ ಡಿ ರಾಂಪೂರೆ, ಕಾರ್ಯದರ್ಶಿ ಅಂಬಿಕಾ ಎಲ್ ರಾಂಪೂರೆ , ಸದಸ್ಯರು,ಸಿಬ್ಬಂದಿಗಳ ವರ್ಗದವರು ಅಭಿನಂದನೆ ತಿಳಿಸಿದ್ದಾರೆ.

ಮಲ್ಲಿಕಾರ್ಜುನ ಖರ್ಗೆ ಹೇಳಿಕೆ ಖಂಡಿಸಿ ಪ್ರತಿಭಟನೆ

ಕಾಂಗ್ರೆಸ್ ಕಚೇರಿಗೆ ಮುತ್ತಿಗೆ

ರಾಯಚೂರು: ಪ್ರಧಾನಿ ನರೇಂದ್ರ ಮೋದಿಅವರನ್ನು ಓರ್ವ ಭಯೋತ್ಪಾದಕ ಎಂದು ಕಾಂಗ್ರೆಸ್‌ನ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಇತ್ತೀಚೆಗೆ ನೀಡಿರುವ ಹೇಳಿಕೆ ಖಂಡಿಸಿ ಜಿಲ್ಲಾ ಕಾಂಗ್ರೆಸ್ ಕಾರ್ಯಾಲಯಕ್ಕೆ ಮುತ್ತಿಗೆ ಹಾಕಿ, ಮಲ್ಲಿಕಾರ್ಜುನ ಖರ್ಗೆ ಪ್ರತಿಕೃತಿ ದಹಿಸಿ, ಕೆಲ ಕಾಲ ಜಿಲ್ಲಾ ಕಾರ್ಯಾಲಯದ ಎದುರು ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಈ ಸಂದರ್ಭದಲ್ಲಿ ನಗರ ಶಾಸಕ ಶಿವರಾಜ ಪಾಟೀಲ ಮಾತನಾಡಿ, ಹಿರಿಯ ರಾಜಕಾರಣಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಕಾಂಗ್ರೆಸ್ ಪಕ್ಷದಲ್ಲಿ ಹಾಗೂ ರಾಜಕಾರಣದಲ್ಲಿ ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳುವುದಕ್ಕಾಗಿ ಪ್ರಧಾನಿ ನರೇಂದ್ರ ಮೋದಿ, ಬಿಜೆಪಿ ಪಕ್ಷ ಹಾಗೂ ಆರ್‌ಎಸ್‌ಎಸ್ ವಿರುದ್ಧ ಅಸಂವಿಧಾನಿಕ ಹೇಳಿಕೆಗಳನ್ನು ನೀಡುತ್ತಿರುವುದು ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಿ ಕಂಡುಬರುತ್ತಿದೆ ಎಂದರು.

ಪ್ರತಿಭಟನೆಯಲ್ಲಿ ಬಿಜೆಪಿ ಜಿಲ್ಲಾ ಯುವ ಮೋರ್ಚಾದ ಅಧ್ಯಕ್ಷ ಎನ್. ವಿನಾಯಕ ರಾವ್, ಪ್ರಮುಖರಾದ ರವೀಂದ್ರ ಜಲ್ದಾರ್, ಶಂಕರ ರೆಡ್ಡಿ, ಶಿವಕುಮಾರ ಪೊಲೀಸ ಪಾಟೀಲ, ಕಡಗೋಲ ಆಂಜನೇಯ, ಉಟ್ಕೂರ್ ರಾಘವೇಂದ್ರ, ಬಂಗಿ ನರಸರೆಡ್ಡಿ ಸೇರಿದಂತೆ ಅನೇಕರಿದ್ದರು.

ಮುಗಳಖೋಡದಲ್ಲಿ ವಿದ್ಯಾರ್ಥಿನಿಯರದ್ದೇ ಮೇಲುಗೈ

ಮುಗಳಖೋಡ : ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಫಲಿತಾಂಶ ಹೊರಬಿದ್ದಿದ್ದು ಇದರಲ್ಲಿಯೂ ಹೆಣ್ಣು ಮಕ್ಕಳ ಸಾಧನೆಯೇ ಅಪಾರವಾಗಿದೆ. ಹೆಣ್ಣು ಮಕ್ಕಳು ಯಾವುದಕ್ಕೂ ಕಡಿಮೆ ಇಲ್ಲ ಎಂಬುದು ಮತ್ತೆ ಸಾಽಸಿ ತೋರಿಸಿದ್ದಾರೆ.

ಅದರಂತೆಯೇ ಪಟ್ಟಣದ ಚವಿವ ಸಂಘದ ಬ. ನೀ. ಕುಲಿಗೋಡ ಪ್ರೌಢ ಶಾಲೆಯ ವಿದ್ಯಾರ್ಥಿಗಳು 2026ರ ಫಲಿತಾಂಶದಲ್ಲಿಯೂ ಸಹ ಹೆಚ್ಚು ಜನ ವಿದ್ಯಾರ್ಥಿನಿಯರೇ ಶ್ರೇಷ್ಠತೆಯ ಸ್ಥಾನದಲ್ಲಿ ತೇರ್ಗಡೆಯಾಗಿರುವುದು ವಿಶೇಷವಾಗಿದೆ.

ಇಲ್ಲಿಯ ಒಟ್ಟು 195 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು ಅದರಲ್ಲಿ 179 ಜನ ತೇರ್ಗಡೆ ಹೊಂದಿ ಒಟ್ಟು ಶಾಲೆಯ ಫಲಿತಾಂಶ 91.79% ರಷ್ಟಾಗಿದೆ.

ಮಂಜುಳಾ ಭೀಮಪ್ಪ ಕುಲಿಗೋಡ 606 ಅಂಕ ಪಡೆದು 96.96% ಪ್ರಥಮ ಸ್ಥಾನ, ಸೃಷ್ಟಿ ಹೊಸಟ್ಟಿ 594 ಅಂಕ ಪಡೆದು 95.04% ದ್ವಿತೀಯ ಸ್ಥಾನ ಹಾಗೂ ಜ್ಯೋತಿ ಪಾಲಬಾವಿ, 591 ಅಂಕ, ವೈಷ್ಣವಿ ಪಾಟೀಲ 591 ಅಂಕ ಪಡೆದು 94.64% ಮೂರನೇ ಸ್ಥಾನ ಇಬ್ಬರು ವಿದ್ಯಾರ್ಥಿಗಳು ಪಡೆದುಕೊಂಡು, ಕನ್ನಡ ವಿಷಯದಲ್ಲಿ 125ಕ್ಕೆ 125 ಮೂರು ಜನ, ಇಂಗ್ಲಿಷ್ ವಿಷಯದಲ್ಲಿ 2 ಜನ ಮತ್ತು ಹಿಂದಿಯಲ್ಲಿ 3 ಜನ ವಿದ್ಯಾರ್ಥಿಗಳು 100ಕ್ಕೆ 100 ಅಂಕ ಪಡೆದು ಶಾಲೆಯ ಕೀರ್ತಿ ಹೆಚ್ಚಿಸಿದ್ದಾರೆ.

ಶಾಲೆಯಲ್ಲಿ ಒಟ್ಟು ಅತ್ಯುನ್ನತವಾಗಿ 25, ಪ್ರಥಮ ಸ್ಥಾನದಲ್ಲಿ 85, ದ್ವಿತಿಯ ಸ್ಥಾನ 32, ತೃತೀಯ ಸ್ಥಾನದಲ್ಲಿ 37 ವಿದ್ಯಾರ್ಥಿಗಳು ತೇರ್ಗಡೆ ಹೊಂದಿ ಶಾಲೆಯ ಕೀರ್ತಿ ಹೆಚ್ಚಿಸಿದ್ದಾರೆ. ಎಲ್ಲ ವಿದ್ಯಾರ್ಥಿಗಳಿಗೆ ಸಂಸ್ಥೆಯ ಅಧ್ಯಕ್ಷರಾದ ಸಂಜಯ ಕುಲಿಗೋಡ, ಉಪಾಧ್ಯಕ್ಷ ಪ್ರಕಾಶ ಆದಪ್ಪಗೋಳ, ಕಾರ್ಯದರ್ಶಿ ಪರಪ್ಪ ಖೇತಗೌಡರ ಸೇರಿದಂತೆ ಆಡಳಿತ ಮಂಡಳಿಯ ಸರ್ವ ಸದಸ್ಯರು, ಮುಖ್ಯೋಪಾಧ್ಯಾಯರಾದ ಎಸ್. ಎಸ್. ಮಧಾಳೆ ಹಾಗೂ ಸಿಬ್ಬಂದಿ ವರ್ಗ, ಪಾಲಕರು ಹಾಗೂ ವಿದ್ಯಾರ್ಥಿ ವೃಂದವು ಶುಭ ಹಾರೈಸಿದ್ದಾರೆ. ನಿಕಟ ಪೂರ್ವ ಅಧ್ಯಕ್ಷರಾದ ಡಾ. ಸಿ. ಬಿ. ಕುಲಿಗೋಡ ವಿದ್ಯಾರ್ಥಿಗಳಿಗೆ ಶಾಲು ಹೊದಿಸಿ ಸತ್ಕರಿಸಿ ಶುಭ ಹಾರೈಸಿದ್ದಾರೆ.

> **ಗ್ರಾಮೀಣ ಭಾಗದ ವಿದ್ಯಾರ್ಥಿಗಳು ಗಮನವಿಟ್ಟು ಓದಿದರೆ ಯಾವ ನಗರದ ದೊಡ್ಡ ದೊಡ್ಡ ಸಂಸ್ಥೆಗಳ ಕಲಿಕೆಗೆ ಕಡಿಮೆ ಇಲ್ಲ ಎಂಬುದನ್ನು ಗ್ರಾಮದ ಶಾಲೆಯಲ್ಲಿಯೇ ಸಾಽಸಿ ತೋರಿಸಿದ್ದಾರೆ. ಅವರ ಮುಂದಿನ ಭವಿಷ್ಯ ಅತ್ಯುನ್ನತದಿಂದ ಕೂಡಿರಲಿ.**
>
> ■ **ಡಾ.ಸಿ.ಬಿ.ಕುಲಿಗೋಡ.**
> **ರಾಜ್ಯ ಉಪಾಧ್ಯಕ್ಷರು ಕೆಪಿಸಿಸಿ ಅಸಂಘಟಿತ ಕಾರ್ಮಿಕ ವರ್ಗ ಬೆಂಗಳೂರು**

> **ಹೆಚ್ಚು ಜನ ಶ್ರೇಷ್ಠತೆಯಲ್ಲಿ ತೇರ್ಗಡೆಯಾಗಿದ್ದು ನಮ್ಮ ಸಿಬ್ಬಂದಿ ವರ್ಗಕ್ಕೆ ಸಂತೋಷ ತಂದಿದೆ. ಮುಂದಿನ ಶೈಕ್ಷಣಿಕ ವರ್ಷ ಇನ್ನೂ ಹೆಚ್ಚಿನ ವಿದ್ಯಾರ್ಥಿಗಳನ್ನು ಶ್ರೇಷ್ಠತೆಯಲ್ಲಿ ಬರುವಂತೆ ಕಲಿಕೆಯಲ್ಲಿ ವೈಯಕ್ತಿಕ ಕಾಳಜಿ ವಹಿಸುತ್ತೇವೆ.**
>
> ■ **ಎಸ್.ಎಸ್.ಮಧಾಳೆ**
> **ಮುಖ್ಯೋಪಾಧ್ಯಾಯ, ಬ. ನೀ. ಕುಲಿಗೋಡ ಪ್ರೌಢಶಾಲೆ ಮುಗಳಖೋಡ.**

ಮುಂದಿನ ಮೂರ್‍ನಾಲ್ಕು ತಿಂಗಳಲ್ಲಿ ಮಹತ್ವದ ಬದಲಾವಣೆ: ಕೆ.ಎಸ್.ಈಶ್ವರಪ್ಪ

ಬಳ್ಳಾರಿ: ರಾಜ್ಯ ರಾಜಕಾರಣದಲ್ಲಿ ಮುಂದಿನ ಮೂರ್‍ನಾಲ್ಕು ತಿಂಗಳಲ್ಲಿ ಮಹತ್ವದ ಬದಲಾವಣೆಗಳು ಸಂಭವಿಸುವ ಸಾಧ್ಯತೆಯಿದೆ, ಕಾದುನೋಡಿ ಎಂದು ಮಾಜಿ ಉಪ ಮುಖ್ಯಮಂತ್ರಿ ಕೆ. ಎಸ್ ಈಶ್ವರಪ್ಪ ಭವಿಷ್ಯ ನುಡಿದಿದ್ದಾರೆ.

ನಗರದ ಸರ್ಕಾರಿ ಅತಿಥಿ ಗೃಹದಲ್ಲಿ ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಬೆಂಬಲಿಗರ ಕೆಲ ಸಚಿವರು ಗುಂಪು ಸೇರಿ ನಿತ್ಯ ಎಲ್ಲ ಆಯಾಮಗಳಲ್ಲಿ ಚರ್ಚೆ ನಡೆಸುತ್ತಿದ್ದಾರೆ. ಸಚಿವ ಸಂಪುಟ ವಿಸ್ತರಣೆ ಸಾಧ್ಯತೆಯ ಹಿನ್ನೆಲೆ ಸಚಿವ ಸ್ಥಾನ ಆಕಾಂಕ್ಷಿ ಕೆಲ ಶಾಸಕರು ದೆಹಲಿಗೆ ತೆರಳಿ ವರಿಷ್ಠರನ್ನು ಭೇಟಿ ಮಾಡಿ, ವಿವಿಧ ಬೆಂಬಲಿಗ ನಾಯಕರ ಮೂಲಕ ಒತ್ತಡ ಹಾಕಿ ಸಚಿವ ಸ್ಥಾನ ಗಿಟ್ಟಿಸಿಕೊಳ್ಳಬೇಕು ಎಂದು ಕಸರತ್ತು ನಡೆಸಿದ್ದಾರೆ. ಈ ಕುರಿತು ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಅವರು “ಯಾರು ದೆಹಲಿಗೆ ಹೋದರೂ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದು ಸಚಿವ ಸ್ಥಾನ ಆಕಾಂಕ್ಷಿ ಶಾಸಕರಿಗೆ ಪರೋಕ್ಷವಾಗಿ ಖಡಕ್ ಸೂಚನೆಗಳನ್ನು ನೀಡುತ್ತಿದ್ದಾರೆ, ರಾಜ್ಯ ರಾಜಕಾರಣದಲ್ಲಿ ಕೆಲ ತಿಂಗಳಲ್ಲೇ ಏನಾಗಲಿದೆ ಎಂಬುದನ್ನು ಕಾದು ನೋಡಿ ಎಂದರು. ರಾಜ್ಯ ಕಾಂಗ್ರೆಸ್ ನಲ್ಲಿ ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿಗಳ ಎರಡು ಗುಂಪುಗಳಾಗಿದ್ದು, ಪಕ್ಷ ‘ಒಡೆದ ಮನೆ’ಯಂತಾಗಿದೆ. ಶೀಘ್ರದಲ್ಲೇ ಅದು ಸ್ಫೋಟಗೊಳ್ಳಲಿದೆ ಎಂದು ಭವಿಷ್ಯ ನುಡಿದರು.

ದಾವಣಗೆರೆ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ವಿರುದ್ಧ ಕಾಂಗ್ರೆಸ್ ನಾಯಕರು ಕೆಲಸ ಮಾಡಿರುವ ಕುರಿತು ಪತ್ರಗಳು ಕೇಂದ್ರ ನಾಯಕರಿಗೆ ತಲುಪಿವೆ. ಕಾಂಗ್ರೆಸ್ ಪಕ್ಷ ಮುಸ್ಲಿಂ ನಾಯಕರನ್ನು ಕಡೆಗಣಿಸಿದ್ದು, ಅನೇಕ ಮುಖಂಡರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಕಾಂಗ್ರೆಸ್ ಮುಸ್ಲಿಂರನ್ನು ಓಟ್ ಬ್ಯಾಂಕ್ ಆಗಿ ಬಳಸಿಕೊಂಡಿದೆ ಹೊರತು, ಸಮುದಾಯಕ್ಕೆ ಯಾವುದೇ ಕೊಡುಗೆಗಳನ್ನು ನೀಡಿಲ್ಲ, ಅನ್ಯಾಯ ಮಾಡಿದೆ ಎಂದರು. ಉಚ್ಚಾಟಿತ ನಾಯಕರನ್ನು ಮರು ಸೇರ್ಪಡೆ ಮಾಡಿಕೊಳ್ಳುವುದಕ್ಕೆ ಸಂಬಂಧಿಸಿ ಪ್ರತಿಕ್ರಿಯಿಸಿದ ಅವರು, ಪಕ್ಷಕ್ಕೆ ಮರಳಿ ಸೇರ್ಪಡೆ ಮಾಡಿಕೊಳ್ಳದಿದ್ದರೆ ಉತ್ತರ ಪ್ರದೇಶ ಮಾದರಿಯಲ್ಲಿ ಪ್ರತಿಕ್ರಿಯೆ ನೀಡಲಾಗುವುದು ಎಂದರು. ಎಐಸಿಸಿ ಅಧ್ಯಕ್ಷ, ಹಿರಿಯ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರ ಹೇಳಿಕೆ ಅತ್ಯಂತ ಖಂಡನೀಯ. ಪ್ರಧಾನಿ ಮೋದಿ ಮತ್ತು ಆರ್‌ಎಸ್‌ಎಸ್ ಕುರಿತು ಮಾಡಿರುವ ಹೋಲಿಕೆಗಳು ಅತ್ಯಂತ ಖಂಡನೀಯ. ಈ ಅವರ ಹೇಳಿಕೆ ಅವರ ಘನತೆಗೆ ಶೋಭೆ ತರುವಂತಹದ್ದಲ್ಲ. ಈ ಕುರಿತು ಆಯೋಗದಿಂದ ನೋಟಿಸ್ ನೀಡಲಾಗಿದ್ದು, ಸಾರ್ವಜನಿಕ ಕ್ಷಮೆಯಾಚನೆ ಮಾಡಬೇಕು ಎಂದು ಒತ್ತಾಯಿಸಿದರು.

ಕಿರುಸುದ್ದಿ

ಇಂದು ಚಿತ್ರಗೀತೆಗಳ ಗಾಯನ

ಗದಗ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಗಳ ಸಂಯುಕ್ತ ಆಶ್ರಯದಲ್ಲಿ ನಗರದ ಜಿಲ್ಲಾಡಳಿತ ಭವನದ ಆಡಿಟೋರಿಯಂ ಹಾಲ್‌ದಲ್ಲಿ ಏ.24 ರಂದು ಬೆಳಗ್ಗೆ 11ಕ್ಕೆ ಡಾ.ರಾಜ್‌ಕುಮಾರ್ ಜನ್ಮದಿನಾಚರಣೆ ಹಮ್ಮಿಕೊಳ್ಳಲಾಗಿದೆ. ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಕಾರ್ಯಕ್ರಮದ ಉಪಸ್ಥಿತಿ ವಹಿಸುವರು. ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ.ಪಾಟೀಲ ಅಧ್ಯಕ್ಷತೆ ವಹಿಸಿ ಕಾರ್ಯಕ್ರಮ ಉದ್ಘಾಟಿಸುವರು. ಸರ್ಕಾರಿ ಮುಖ್ಯ ಸಚೇತಕ ಸಲೀಂ ಅಹ್ಮದ್ , ಕರ್ನಾಟಕ ರಾಜ್ಯ ಖನಿಜ ಅಭಿವೃದ್ಧಿ ನಿಗಮ ನಿಯಮಿತದ ಅಧ್ಯಕ್ಷ ಹಾಗೂ ಶಾಸಕ ಜಿ.ಎಸ್.ಪಾಟೀಲ, ಸಂಸದರಾದ ಬಸವರಾಜ ಬೊಮ್ಮಾಯಿ, ಪಿ.ಸಿ.ಗದ್ದಿಗೌಡರ, ಕರ್ನಾಟಕ ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಡಿ.ಆರ್.ಪಾಟೀಲ, ಶಾಸಕರಾದ ಸಿ.ಸಿ.ಪಾಟೀಲ, ಡಾ.ಚಂದ್ರು ಲಮಾಣಿ, ವಿಧಾನ ಪರಿಷತ್ ಶಾಸಕ ಎಸ್.ವಿ.ಸಂಕನೂರ, ಪ್ರದೀಪ ಶೆಟ್ಟರ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಅಕ್ಬರಸಾಬ ಬಬರ್ಜಿ, ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಬಿ.ಬಿ.ಅಸೂಟಿ ಆಗಮಿಸುವರು. ಕಲಾವಿದ ಗೌಡಪ್ಪ ಬೊಮ್ಮಪ್ಪನವರ ಮತ್ತು ಕಲಾ ತಂಡದವರಿಂದ ಡಾ.ರಾಜಕುಮಾರ್ ಚಿತ್ರಗೀತೆಗಳ ಗಾಯನ ಜರುಗಲಿದೆ.

ಉದ್ಘಾಟನೆ ನಾಳೆ

ನರಗುಂದ: ಪಟ್ಟಣದ ಸಿದ್ದರಾಮೇಶ್ವರ ನಗರದ ವಡ್ಡರ ಓಣಿಯಲ್ಲಿ ಏ.25 ರಂದು ಬೆಳಗ್ಗೆ 11.30ಕ್ಕೆ ಕರುನಾಡು ಕಾರ್ಮಿಕರ ವೇದಿಕೆ, ನರಗುಂದ ಘಟಕ, ಕೂಲಿ ಕಾರ್ಮಿಕರ ರೈತ ಹಾಗೂ ಶೋಷಿತರ ಕನ್ನಡಪರ ಸಂಘಟನೆ ವತಿಯಿಂದ ನೂತನ ಕಚೇರಿ ಉದ್ಘಾಟನಾ ಸಮಾರಂಭ ನೆರವೇರಲಿದೆ.

ಉದ್ಘಾಟನಾ ಸಮಾರಂಭದ ಸಾನ್ನಿಧ್ಯವನ್ನು ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ ವಹಿಸಲಿದ್ದಾರೆ. ಕರುನಾಡು ಕಾರ್ಮಿಕರ ವೇದಿಕೆಯ ಸಂಸ್ಥಾಪಕ ಅಧ್ಯಕ್ಷ ಹಾಗೂ ರಾಜ್ಯಾಧ್ಯಕ್ಷ ಚಂದ್ರಗೌಡರು ಅಧ್ಯಕ್ಷತೆ ವಹಿಸಲಿದ್ದಾರೆ. ಅತಿಥಿಗಳಾಗಿ ಕರುನಾಡು ಕಾರ್ಮಿಕರ ವೇದಿಕೆ ಮಹಿಳಾ ಅಧ್ಯಕ್ಷೆ ಲಕ್ಷ್ಮೀಗೌಡ, ಯಾಸಿನ್ ಮುಲ್ತಾನಿ, ಕಾರ್ಮಿಕ ಜಿಲ್ಲಾಧಿಕಾರಿ ಶ್ರೀಶೈಲ ಸೋಮನಕಟ್ಟಿ, ಸಿಪಿಐ ಮಂಜುನಾಥ ನಡುವಿನಮನಿ, ಅಸಿಸ್ಟಂಟ್ ಲೇಬರ್ ಕಮಿಶನರ್ ಸಚೀನ್, ತಹಶೀಲ್ದಾರ್ ಶ್ರೀಶೈಲ ತಳವಾರ, ಕಾರ್ಮಿಕ ನಿರೀಕ್ಷಕಿ ಪೂಜಾ ಶಿಂಧೆ, ಎಸ್. ಎಸ್. ಕಾಳಗಿ, ರಾಕೇಶ ಹಬೀಬ, ಸಂಜೀವ ನಲವಡೆ, ಜಿಲ್ಲಾಧ್ಯಕ್ಷ ಶಂಕರ ಸುರೇಬಾನ, ಭರತರಾಜ ಕಟ್ಟಿಮನಿ, ಮಾರುತಿ ಕಟ್ಟಿಮನಿ, ಜ್ಯೋತಿ ಹಡಪದ, ನಂದೀಶ ಮಠದ ಇರುವರೆಂದು ತಾಲೂಕಾಧ್ಯಕ್ಷ ರೆಹಮಾನಸಾಬ ಎಲಿಗಾರ ತಿಳಿಸಿದ್ದಾರೆ.

ನಿರ್ಗತಿಕ ಮಹಿಳೆ ನಿರಾಶ್ರಿತರ ಪರಿಹಾರ ಕೇಂದ್ರಕ್ಕೆ

ಮುಂಡರಗಿ: ಪಟ್ಟಣದಲ್ಲಿ ಭಿಕ್ಷೆ ಬೇಡುತ್ತಾ ಅಲೆದಾಡುತ್ತಿದ್ದ ನಿರ್ಗತಿಕ ಮಹಿಳೆಯನ್ನು ನಿರಾಶ್ರಿತರ ಪರಿಹಾರ ಕೇಂದ್ರಕ್ಕೆ ಕಳಿಸುವ ಮೂಲಕ ನೆರವು ನೀಡಲಾಯಿತು.

ಪಟ್ಟಣದ ಕೊಪ್ಪಳ ರಸ್ತೆಯಲ್ಲಿ ದಿನವಿಡೀ ಭಿಕ್ಷೆ ಬೇಡುತ್ತಾ ದಾರಿ ಹೋಕರನ್ನ, ಮಕ್ಕಳನ್ನು ಬಾಯಿಗೆ ಬಂದಂತೆ ಬೈಯುತ್ತಾ ಅಲೆದಾಡುತ್ತಿದ್ದ ನಿರ್ಗತಿಕ ಮಾನಸಿಕ ಅಸ್ವಸ್ಥ ಮಹಿಳೆಯನ್ನು ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಉದಯ್‌ಕುಮಾರ್ ಎಲಿವಾಳ ನಿರ್ಗತಿಕ ಪರಿಹಾರ ಕೇಂದ್ರ ಹುಬ್ಬಳ್ಳಿಯ ಸಂಸ್ಥೆಗೆ ಮಾಹಿತಿ ನೀಡಿ ನಿರ್ಗತಿಕ ಪರಿಹಾರ ಕೇಂದ್ರಕ್ಕೆ ಕಳಿಸುವ ಮೂಲಕ ಮಾನವೀಯತೆ ಮೆರೆದಿದ್ದಾರೆ. ಈ ವಿಷಯವಾಗಿ ಸಹಾಯಕ ನಿರ್ದೇಶಕಿ ನಂದಾ ಉರುಳಿಯವರನ್ನು ಸಂಪರ್ಕಿಸಿ ಅವರ ಸಿಬ್ಬಂದಿಯೊಂದಿಗೆ ಬಂದು ಈ ನಿರ್ಗತಿಕ ಮಹಿಳೆಯನ್ನು ತಮ್ಮ ವಶಕ್ಕೆ ಪಡೆದು ಆಕೆಗೆ ಚಿಕಿತ್ಸೆ ಹಾಗೂ ಪರಿಹಾರ ಕೇಂದ್ರದಲ್ಲಿ ದಾಖಲಿ ಮಾಡಿಕೊಳ್ಳಲು ಮಾಹಿತಿ ನೀಡಿದ ಹಿನ್ನೆಲೆಯಲ್ಲಿ ಇಂದು ಹುಬ್ಬಳ್ಳಿಯ ನಿರ್ಗತಿಕರ ಪರಿಹಾರ ಕೇಂದ್ರದ ವಾರ್ಡನ್ ಮಹೇಶಪ್ಪ ಮತ್ತು ಸಿಬ್ಬಂದಿ ವಾಹನದೊಂದಿಗೆ ಆಗಮಿಸಿ ಈ ನಿರ್ಗತಿಕ ಮಹಿಳೆಯನ್ನು ಮುಂಡರಗಿ ಪೊಲೀಸ್ ಠಾಣಾ ಆವರಣದಲ್ಲಿ ತಮ್ಮ ವಶಕ್ಕೆ ಪಡೆದು ಕರೆದುಕೊಂಡು ಹೋದರು.

ಮಾರುಕಟ್ಟೆ ಧಾರಣೆ

ಗದಗ — ಕ್ವಿಂಟಲ್

ಶೇಂಗಾ	3609-6589
ಅಜವಾನ	9971-9971
ಅಲಸಂದಿ	1419-6211
ಕಡಲೆ	3859-5469
ಉದ್ದು	2612-2612
ಔಡಲ	3612-3612
ಹೆಸರು	1044-6169
ಹುರಳಿ	3339-4365
ಜೋಳ	2377-4521
ಗೋವಿನಜೋಳ	1124-1711
ನವನಿ	2347-2702
ಕುಸಬಿ	4419-5669
ಸೂರ್ಯಕಾಂತಿ	5679-6252
ತೊಗರಿ	4014-4729
ಗೋಧಿ	1089-5521
ಒಟಾಣಿ	5200-5200
ಮಡಕಿ	6566-6566

ಗದಗ: ನಗರದ ಗಾಂಧಿ ವೃತ್ತದಲ್ಲಿ ಜೆಡಿಎಸ್ ಪಕ್ಷದ ವತಿಯಿಂದ ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆಯ ಲೋಕಸಭೆ ಹಾಗೂ ವಿಧಾನಸಭೆಯಲ್ಲಿ ಮಹಿಳೆಯರಿಗೆ ಶೇ.33ರಷ್ಟು ಮೀಸಲಾತಿ ಕಲ್ಪಿಸುವ ವಿಧೇಯಕಕ್ಕೆ ಲೋಕಸಭೆಯ ಪ್ರತಿಪಕ್ಷಗಳಾದ ಕಾಂಗ್ರೆಸ್ ಹಾಗೂ ಮೈತ್ರಿ ಇಂಡಿ ಕೂಟ ವಿರುದ್ಧ ಮತ ಚಲಾಯಿಸಿ ವಿಧೇಯಕಕ್ಕೆ ಹಿನ್ನಡೆಯಾದ ಹಿನ್ನೆಲೆ ಬೃಹತ್ ಪ್ರತಿಭಟನೆ ಮಾಡಲಾಯಿತು. ಜೆಡಿಎಸ್ ಪಕ್ಷದ ಜಿಲ್ಲಾಧ್ಯಕ್ಷ ಎಂ.ವೈ. ಮುಧೋಳ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹೆಚ್.ಹೆಚ್. ಕೊಪ್ಪಳ, ರಾಜ್ಯ ಸಂಘಟನಾ ಕಾರ್ಯದರ್ಶಿ ಈರಣ್ಣ ಬಾಳಿಕಾಯಿ ಇತರರಿದ್ದರು.

2ಎ ಜಾತಿ ಪ್ರಮಾಣ ಪತ್ರ, ನೀಡಲು ಒತ್ತಾಯ

ಗಜೇಂದ್ರಗಡ: ಹಂಡೇವಜೀರ್ ಸಮಾಜದ ವಿದ್ಯಾರ್ಥಿಗಳು, ಪಾಲಕರು ಮತ್ತು ಭಾರತ ವಿದ್ಯಾರ್ಥಿ ಫೆಡರೇಷನ್ ಎಸ್‌ಎಫ್‌ಐ ಗಜೇಂದ್ರಗಡ ತಾಲೂಕು ಸಮಿತಿಯ ನೇತೃತ್ವದಲ್ಲಿ ತಹಶೀಲ್ದಾರ್ ಕಚೇರಿ ಎದುರು 2 ಎ ಜಾತಿ ಪ್ರಮಾಣ ಪತ್ರ ನೀಡಲು ಒತ್ತಾಯಿಸಿ ಪ್ರತಿಭಟನೆ ಮಾಡಿದರು. ಎಸ್‌ಎಫ್‌ಐನ ರಾಜ್ಯ ಉಪಾಧ್ಯಕ್ಷ ಗಣೇಶ ರಾಠೋಡ ಮಾತನಾಡಿ, ಗಜೇಂದ್ರಗಡ ತಾಲೂಕಿನಲ್ಲಿ ಸುಮಾರು ನೂರಕ್ಕೂ ಹೆಚ್ಚು ಕುಟುಂಬಗಳು ಹಂಡೇವಜೀರ ಎಂಬ ಹಿಂದೂ ಲಿಂಗಾಯತ/ ಲಿಂಗವಂತ ಜಾತಿಯ ಉಪಜಾತಿಗೆ ಸೇರಿದವರಾಗಿದ್ದಾರೆ. ಹಂಡೇವಜೀರ ಎಂಬ ಉಪಜಾತಿಗೆ ಸೇರಿದ ಜನರು ನೂರಾರು ವರ್ಷಗಳಿಂದಲೂ ಅಖಂಡ ರೋಣ ತಾಲೂಕಿನಲ್ಲಿ ವಾಸಿಸುತ್ತಿದ್ದಾರೆ. ಇವರ ಕುಟುಂಬಗಳು ಶೈಕ್ಷಣಿಕವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ, ಹಿಂದುಳಿದಿದ್ದು, ಅದನ್ನು ಪರಿಗಣಿಸಿ ರಾಜ್ಯ ಸರ್ಕಾರ ಹಂಡೇವಜೀರ ಉಪಜಾತಿಗೆ ಸೇರಿದ ಸಮುದಾಯದವರಿಗೆ ಪ್ರವರ್ಗ 2ಎ ಎಂದು ವರ್ಗೀಕರಣ ಮಾಡಿ ಪ್ರಮಾಣಪತ್ರವನ್ನು ಒದಗಿಸುತ್ತಾ ಬಂದಿದೆ. ಕಳೆದ 30 ವರ್ಷಗಳಿಂದಲೂ ಕರ್ನಾಟಕ ಸರ್ಕಾರ ರಾಜ್ಯ ಪತ್ರ ಆದೇಶ ಅನುಸಾರದಲ್ಲಿ ಬರುವ ಉಪ ಜಾತಿ ಕ್ರಮ ಸಂಖ್ಯೆ 37ರಲ್ಲಿ ಹಿಂದೂ ಲಿಂಗಾಯತ/ ಲಿಂಗವಂತ ಉಪಜಾತಿಗೆ ಸೇರಿದ ಹಂಡೆವಜೀರ ಸಮಾಜಕ್ಕೆ 2ಎ ಜಾತಿ ಪ್ರಮಾಣಪತ್ರವನ್ನು ಒದಗಿಸುತ್ತಾ ಬಂದಿದ್ದಾರೆ. ಆದರೆ ಯಾವುದೋ ಕ್ಷುಲ್ಲಕ ಕಾರಣಕ್ಕಾಗಿ ಯಾರೋ ಒಬ್ಬರು ಮಾಡಿದ ತಪ್ಪಿಗೆ ಇಡೀ ಸಮಾಜವನ್ನು ಗುರಿ ಮಾಡಿ ಜಾತಿ-ಆದಾಯ ಪ್ರಮಾಣ ಪತ್ರ ನೀಡದೆ ಒಪ್ಪಿತವಲ್ಲದ ಕಾರಣಗಳನ್ನು ಕೊಟ್ಟು ಅರ್ಜಿಗಳನ್ನು ತಿರಸ್ಕರಿಸೋದು ಮತ್ತು ಆ ಸಮುದಾಯದ ಅರ್ಜಿ ಸ್ವೀಕರಿಸಲು ನಿರಾಕರಿಸೋದು ಸಲ್ಲ ಎಂದರು. ಎಸ್‌ಎಫ್‌ಐನ ಜಿಲ್ಲಾಧ್ಯಕ್ಷರಾದ ಚಂದ್ರು ರಾಠೋಡ, ಆಂದಪ್ಪ, ಶರಣಪ್ಪ, ಕಳಕನಗೌಡ ಮಾತನಾಡಿದರು.

ಗಜೇಂದ್ರಗಡ: ಹಂಡೇವಜೀರ್ ಸಮಾಜದ ವಿದ್ಯಾರ್ಥಿಗಳು, ಪಾಲಕರು ಮತ್ತು ಭಾರತ ವಿದ್ಯಾರ್ಥಿ ಫೆಡರೇಷನ್ ಎಸ್‌ಎಫ್‌ಐ ಗಜೇಂದ್ರಗಡ ತಾಲೂಕು ಸಮಿತಿಯ ನೇತೃತ್ವದಲ್ಲಿ ತಹಶೀಲ್ದಾರ್ ಕಚೇರಿ ಎದುರು 2 ಎ ಜಾತಿ ಪ್ರಮಾಣ ಪತ್ರ, ನೀಡಲು ಒತ್ತಾಯಿಸಿ ಪ್ರತಿಭಟನೆ ಮಾಡಿದರು.

ಎಸ್‌ಎಸ್‌ಎಲ್‌ಸಿ ಫಲಿತಾಂಶ ಪ್ರಕಟ | ಶೇ.95.24ರಷ್ಟು ಫಲಿತಾಂಶ

16ನೇ ಸ್ಥಾನಕ್ಕೇರಿದ ಗದಗ ಜಿಲ್ಲೆ

ಗದಗ: ಕಳೆದವರ್ಷ ಶೇ.67.72 ರಷ್ಟು ಫಲಿತಾಂಶದೊಂದಿಗೆ ಜಿಲ್ಲೆಯು ರಾಜ್ಯ ಮಟ್ಟದಲ್ಲಿ 17ನೇ ಸ್ಥಾನ ಪಡೆದಿತ್ತು. ಆದರೆ ಪ್ರಸಕ್ತ ವರ್ಷ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.95.24ರಷ್ಟು ದಾಖಲಿಸಿದರೂ ಕೇವಲ ಒಂದು ಸ್ಥಾನ ಜಿಗಿತ ಕಾಣುವ ಮೂಲಕ ಜಿಲ್ಲೆಯು 16ನೇ ಸ್ಥಾನದಲ್ಲಿ ತೃಪ್ತಿ ಹೊಂದಬೇಕಾದ ಪರಿಸ್ಥಿತಿ ಎದುರಾಗಿದೆ.

ಜಿಲ್ಲೆಯ 138 ಸರ್ಕಾರಿ ಪ್ರೌಢಶಾಲೆಗಳು, 105 ಅನುದಾನಿತ ಪ್ರೌಢಶಾಲೆಗಳು ಹಾಗೂ 73 ಅನುದಾನರಹಿತ ಪ್ರೌಢಶಾಲೆಗಳು ಸೇರಿ ಒಟ್ಟು 316 ಶಾಲೆಗಳಲ್ಲಿ ಪ್ರಸಕ್ತ ವರ್ಷ 14,612 ವಿದ್ಯಾರ್ಥಿಗಳ ಪೈಕಿ 13,916 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ. ಈ ಮೂಲಕ ಶೇ. 27.52ರಷ್ಟು ಏರಿಕೆ ಜೊತೆಗೆ ಶೇ.95.24ರಷ್ಟು ಫಲಿತಾಂಶ ದಾಖಲಾಗಿದ್ದರೂ 16ನೇ ಸ್ಥಾನದಲ್ಲೆ ಮುಂದುವರಿದಿದೆ. ಜಿಲ್ಲೆಯಲ್ಲಿ ಇಂಗ್ಲಿಷ್ ಮಾಧ್ಯಮದ ನಾಲ್ವರು ವಿದ್ಯಾರ್ಥಿಗಳೇ ಟಾಪರ್ ಆಗಿ ಹೊರಹೊಮ್ಮಿದ್ದಾರೆ. ರೋಣ ತಾಲೂಕಿನ ಇಟಗಿ ಗ್ರಾಮದ ಸರಕಾರಿಆದರ್ಶವಿದ್ಯಾಲಯದ ಪ್ರವೀಣಕುಮಾರ ಸೊಬಗಿನ 622 (ಶೇ.99.52) ಅಂಕಗಳೊಂದಿಗೆ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದಿದ್ದಾನೆ. ಮುಂಡರಗಿ ತಾಲೂಕಿನ ಎಸ್ ಎಫ್‌ಎಸ್ ಆಂಗ್ಲ ಮಾಧ್ಯಮ ಪ್ರೌಢಶಾಲೆಯ ಸಂಧ್ಯಾ ಲಮಾಣಿ 621(ಶೇ.99.36) ದ್ವಿತೀಯ, ಗಜೇಂದ್ರಗಡ ತಾಲೂಕಿನ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯ ಸುಷ್ಮಾ ತಾವರೆಪ್ಪ ನಾಯಕ ಹಾಗೂ ಮುಂಡರಗಿ ತಾಲೂಕಿನ ಕೊರ್ಲಹಳ್ಳಿಯ ಆದರ್ಶ ಮಹಾವಿದ್ಯಾಲಯದ ರೇವಂತರಡ್ಡಿ ಮುಂಡರಗಿ 620(ಶೇ. 99.20) ಅಂಕಗಳೊಂದಿಗೆ ತೃತೀಯ ಸ್ಥಾನ ಪಡೆದಿದ್ದಾರೆ.

ಸ್ಥಾನ	ತಾಲೂಕು	ಪರಿಕ್ಷೆಗೆಕುಳಿತವರು	ಪಾಸಾದವರು	ಶೇಕಡಾವಾರು
1	ಮುಂಡರಗಿ	1,897	1,849	97.47
2	ಶಿರಹಟ್ಟಿ	2,680	2,581	96.31
3	ಗದಗ ಗ್ರಾ.	2,462	2,355	95.65
4	ನರಗುಂದ	1,415	1,352	95.55
5	ರೋಣ	3,769	3,562	94.51
6	ಗದಗ ಶಹರ	2,389	2,217	92.80

ಬಾಲಕಿಯರೇ ಮೇಲುಗೈ

ಗ್ರಾಮೀಣ ಬಾಲಕರ ವಿಭಾಗದಲ್ಲಿ ಪರೀಕ್ಷೆಗೆ ಹಾಜರಾದ 4,053 ವಿದ್ಯಾರ್ಥಿಗಳ ಪೈಕಿ 3,807 ವಿದ್ಯಾರ್ಥಿಗಳು ಅಂದರೆ ಶೇ.93.93 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ. ಶಹರ ಬಾಲಕರ ವಿಭಾಗದಲ್ಲಿ ಪರೀಕ್ಷೆಗೆ ಹಾಜರಾದ 2,952 ವಿದ್ಯಾರ್ಥಿಗಳ ಪೈಕಿ 2,701 ವಿದ್ಯಾರ್ಥಿಗಳು ಅಂದರೆ ಶೇ.91.50 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ. ಶಹರ ಹಾಗೂ ಗ್ರಾಮೀಣ ಸೇರಿ ಪರೀಕ್ಷೆಗೆ ಹಾಜರಾದ 7,028 ಬಾಲಕರ ಪೈಕಿ 6,508 ಬಾಲಕರು (ಶೇ. 92.60) ತೇರ್ಗಡೆಯಾಗಿದ್ದಾರೆ. ಗ್ರಾಮೀಣ ಬಾಲಕಿಯರ ವಿಭಾಗದಲ್ಲಿ ಪರೀಕ್ಷೆಗೆ ಹಾಜರಾದ 4,299 ವಿದ್ಯಾರ್ಥಿನಿಯರ ಪೈಕಿ 4,209 ಅಂದರೆ ಶೇ.97.91 ವಿದ್ಯಾರ್ಥಿನಿಯರು ತೇರ್ಗಡೆಯಾಗಿದ್ದಾರೆ. ಶಹರ ಬಾಲಕಿಯರ ವಿಭಾಗದಲ್ಲಿ ಪರೀಕ್ಷೆಗೆ ಹಾಜರಾದ 3,308 ವಿದ್ಯಾರ್ಥಿನಿಯರ ಪೈಕಿ 3,199 ಅಂದರೆ ಶೇ.96.70 ವಿದ್ಯಾರ್ಥಿನಿಯರು ತೇರ್ಗಡೆಯಾಗಿದ್ದಾರೆ. ಶಹರ ಹಾಗೂ ಗ್ರಾಮೀಣ ಭಾಗ ಸೇರಿ ಪರೀಕ್ಷೆಗೆ ಹಾಜರಾದ 7,584 ಬಾಲಕಿಯರ ಪೈಕಿ 7,408 ಬಾಲಕಿಯರು (ಶೇ. 97.68) ತೇರ್ಗಡೆಯಾಗಿದ್ದಾರೆ.

ಪಾಸಾದ ವಿದ್ಯಾರ್ಥಿಗಳು ಇವರು..

ಗದಗ ಜಿಲ್ಲೆಯಲ್ಲಿ 994 ವಿದ್ಯಾರ್ಥಿಗಳು ಎ+, 2,258 ವಿದ್ಯಾರ್ಥಿಗಳು ಎ, 2,550 ವಿದ್ಯಾರ್ಥಿಗಳು ಬಿ+, 2,839 ವಿದ್ಯಾರ್ಥಿಗಳು ಬಿ, 2,631 ವಿದ್ಯಾರ್ಥಿಗಳು ಸಿ+ ಹಾಗೂ 2,644 ವಿದ್ಯಾರ್ಥಿಗಳು ಸಿ ದರ್ಜೆಯಲ್ಲಿ ಪಾಸಾಗಿದ್ದಾರೆ.

> **ಗದಗ ಜಿಲ್ಲೆಯ ಫಲಿತಾಂಶ ಸಮಾಧಾನ ತಂದಿದೆ. ನಮ್ಮ ಹಾಗೂ ಜಿಲ್ಲೆಯ ಸರ್ಕಾರಿ, ಅನುದಾನಿತ ಹಾಗೂ ಅನುದಾನ ರಹಿತ ಪ್ರೌಢಶಾಲೆಗಳ ಮುಖ್ಯಶಿಕ್ಷಕರ, ಶಿಕ್ಷಕರ ಪ್ರಯತ್ನದ ಫಲವಾಗಿ ಉತ್ತಮ ಫಲಿತಾಂಶ ಮೂಡಿಬಂದಿದೆ.**
>
> ■ **ಆರ್.ಎಸ್.ಬುರಡಿ, ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ**

ತಾಂತ್ರಿಕ ಸಾಂಸ್ಕೃತಿಕ ಮೇಳ ಮೀಲಾಂಜೆ-26

ಲಕ್ಷ್ಮೇಶ್ವರ: ಗ್ರಾಮೀಣ ಭಾಗದಲ್ಲಿ ಉನ್ನತ ತಾಂತ್ರಿಕ ಶಿಕ್ಷಣದಲ್ಲಿ ವಿಶಿಷ್ಟ ಹೆಸರು ಮಾಡಿರುವ ಪಟ್ಟಣದ ಶ್ರೀಮತಿ ಕಮಲಾ ಶ್ರೀ ವೆಂಕಪ್ಪ ಎಂ. ಅಗಡಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ರಾಷ್ಟ್ರೀಯ ಮಟ್ಟದ ತಾಂತ್ರಿಕ ಸಾಂಸ್ಕೃತಿಕ ಮೇಳ ಮೀಲಾಂಜೆ-26 ಹಾಗೂ ಪದವಿ ಪ್ರದಾನ ಸಮಾರಂಭಗಳು ಏ.25 ಮತ್ತು 26 ರಂದು ಹಮ್ಮಿಕೊಳ್ಳಲಾಗಿದೆ ಎಂದು ಕಾಲೇಜಿನ ಪ್ರಾಚಾರ್ಯ ಡಾ.ಪರಶುರಾಮ ಬಾರಕಿ ತಿಳಿಸಿದರು.

ಈ ಕುರಿತು ಪತ್ರಿಕಾಗೋಷ್ಠಿ ನಡೆಸಿ ಅವರು ಮಾತನಾಡಿ, ರಾಷ್ಟ್ರೀಯ ಮಟ್ಟದ ತಾಂತ್ರಿಕ ಸಾಂಸ್ಕೃತಿಕ ಮೇಳ ಮೀಲಾಂಜೆ ಏ.25ರ ಬೆಳಗ್ಗೆ 10 ಗಂಟೆಗೆ ಸಿವಿಲ್ ಸಭಾಂಗಣದಲ್ಲಿ ಕಾರ್ಯಕ್ರಮ ನಡೆಯಲಿದ್ದು, ಕಾಲೇಜಿನ ಹಳೆಯ ವಿದ್ಯಾರ್ಥಿ ಬೆಂಗಳೂರಿನ ಹರ್ಮನ್ ಮಿಲ್ಲರ ಭಾರತದ ಕಾರ್ಯಾಚರಣೆಗಳ ಮುಖ್ಯಸ್ಥ ಮಹೇಶ ಪಾಟೀಲ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ. ಏ.26 ರಂದು ಬೆಳಗ್ಗೆ 10 ಗಂಟೆಯಿಂದ 1 ಗಂಟೆಯವರೆಗೆ ಸುಮಾರು 345ಕ್ಕೂ ಅಧಿಕ ವಿದ್ಯಾರ್ಥಿಗಳು ಪದವಿ ಪೂರೈಸಿರುವ ಹಿನ್ನೆಲೆಯಲ್ಲಿ ಪದವಿ ಪ್ರದಾನ ಸಮಾರಂಭವು ನಡೆಯಲಿದೆ ಎಂದರು.

ಮುಖ್ಯ ಸಂಯೋಜಕ ಈರಣ್ಣ ಮಕರಬ್ಬಿ ಮಾತನಾಡಿ, ಶ್ರೇಷ್ಠ ಶಿಕ್ಷಣ ತಜ್ಞ ಸುರೇಶ ಕುಲಕರ್ಣಿ ಆಗಮಿಸಲಿದ್ದಾರೆ. ಎರಡು ಕಾರ್ಯಕ್ರಮಗಳ ಅಧ್ಯಕ್ಷತೆಯನ್ನು ಪ್ರಾಚಾರ್ಯ ಡಾ.ಪರಶುರಾಮ ಬಾರಕಿ ವಹಿಸಲಿದ್ದು, ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಗಮನಸೆಳೆಯಲಿವೆ ಎಂದರು. ಡಾ.ಸುಭಾಸ ಮೇಟಿ, ಡಾ.ಗಿರೀಶ ಯತ್ತಿನಹಳ್ಳಿ, ಪ್ರೊ. ವಿಕ್ರಮ ಶಿರೋಳ, ಪ್ರೊ. ಪ್ರತಿಮಾ ಮಹಾಪುರುಷ, ಪ್ರೊ. ಗಿರೀಶ ಹಳ್ಳಿ, ಪ್ರೊ. ರಾಘವೇಂದ್ರ ಎ., ಚಂದ್ರಮೌಳಿ ಜೋಶಿ, ಲಕ್ಷ್ಮಣ ಪಾಟೀಲ, ಪ್ರೊ. ಸೋಮಶೇಖರ ಕೆರಿಮನಿ, ಪ್ರೊ. ಎಸ್.ಎಫ್.ಕೊಡ್ಲಿ ಮುಂತಾದವರಿದ್ದರು. ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಬೆಳಗಾವಿ ವಿಭಾಗದ ಮಹಿಳಾ ವಾಲಿಬಾಲ್ ಪಂದ್ಯಾವಳಿ ಏ.24 ರಂದು ಕಾಲೇಜಿನ ಆವರಣದಲ್ಲಿ ನಡೆಯಲಿ ಎಂದು ಪ್ರೊ. ಎಸ್.ಎಫ್.ಕೊಡ್ಲಿ ತಿಳಿಸಿದರು.

ಅಭಿನವ ಚನ್ನಬಸವ ಶ್ರೀ ನೇತೃತ್ವದಲ್ಲಿ ಮಠ ಉತ್ತುಂಗದಲ್ಲಿ

ನರೇಗಲ್ಲ: ಚನ್ನಬಸವ ಸ್ವಾಮೀಜಿ ಆಶೀರ್ವಾದದಿಂದ ಶ್ರೀಮಠದಲ್ಲಿ ಅನೇಕ ಮಹತ್ವದ ಕಾರ್ಯಗಳು ನಡೆಯುತ್ತಿವೆ. ಈಗಿನ ಅಭಿನವ ಚನ್ನಬಸವ ಸ್ವಾಮೀಜಿ ನೇತೃತ್ವದಲ್ಲಿ ಶ್ರೀಮಠವು ಉತ್ತುಂಗದತ್ತ ಸಾಗುತ್ತಿದೆ. ಇಲ್ಲಿ ಶೈಕ್ಷಣಿಕ ಚಟುವಟಿಕೆಗಳು ಪ್ರಾರಂಭಗೊಂಡಿರುವುದು ಸಂತಸದ ವಿಷಯ ಎಂದು ಫಕೀರ ದಿಂಗಾಲೇಶ್ವರ ಸ್ವಾಮೀಜಿ ಹೇಳಿದರು.

ಅವರು ಸಮೀಪದ ನಿಡಗುಂದಿಕೊಪ್ಪದ ಶಾಖಾ ಶಿವಯೋಗ ಮಂದಿರದ ಶ್ರೀ ಚನ್ನಚೇತನ ಗುರುಕುಲ ಆಂಗ್ಲ ಮಾಧ್ಯಮ ಶಾಲೆಯ ಉದ್ಘಾಟನೆ ವೇಳೆ ಸಾನ್ನಿಧ್ಯ ವಹಿಸಿ ಮಾತನಾಡಿ, ಈ ಎಲ್ಲ ಕಾರ್ಯಗಳಿಗೆ ತಮ್ಮ ಸರ್ವಸ್ವವನ್ನೂ ಧಾರೆಯೆರೆದಿರುವ ಶಾಂತಗಿರಿಯ ಮಲ್ಲೇಶಪ್ಪ ಸಜ್ಜನ ದಂಪತಿ ದಾನ ಗುಣ ಶ್ಲಾಘನೀಯ. ತಮ್ಮ 15 ಎಕರೆ ಹೊಲವನ್ನು ಶ್ರೀಮಠಕ್ಕೆ ದಾನ ಮಾಡಿರುವುದರ ಜೊತೆಗೆ ತಮ್ಮ ಮನೆಯನ್ನೂ ಮಾರಿ ಬಂದ ಹಣವನ್ನೂ ಸಹ ಶ್ರೀಮಠಕ್ಕೆ ಕೊಟ್ಟಿರುವ ಅವರ ಔದಾರ್ಯ ದೊಡ್ಡದು. ಅದಕ್ಕಾಗಿ ಅವರಿಗೆ ಯಾವುದಾದರೊಂದು ಸಮಾರಂಭದಲ್ಲಿ ಆಧುನಿಕ ಶಿರಸಂಗಿ ಲಿಂಗರಾಜರು ಎಂಬ ಬಿರುದನ್ನು ನೀಡಿ ಗೌರವಿಸಬೇಕೆಂದು ಶಾಸಕ ಜಿ. ಎಸ್. ಪಾಟೀಲರಿಗೆ ಶ್ರೀಗಳು ಹೇಳಿದರು.

ಶಾಲಾ ಕಟ್ಟಡವನ್ನು ಉದ್ಘಾಟಿಸಿ ಶಾಸಕ ಜಿ. ಎಸ್. ಪಾಟೀಲ ಮಾತನಾಡಿ, ಆಂಗ್ಲ ಮಾಧ್ಯಮ ಶಾಲೆಗಳು ಬೇಕಾದಷ್ಟಿವೆ. ಆದರೆ ಗುರುಕುಲ ಮಾದರಿಯ ಶಾಲೆ ಇಲ್ಲಿ ಪ್ರಾರಂಭಗೊಂಡಿರುವುದು ಸಂತಸಕರ ಎಂದರು.

ಎಂಟು ಸಾಮೂಹಿಕ ವಿವಾಹಗಳು ಜರುಗಿದವು. ಹಾಲಕೆರೆಯ ಮುಪ್ಪಿನ ಬಸವಲಿಂಗ ಸ್ವಾಮೀಜಿ ಆಶೀರ್ವಚನ ನೀಡಿದರು. ಹಜರತ್ ನಿಜಾಮುದ್ದಿನ ಷಾ ಅಶ್ರಫ್ ಮಕಾಂದಾರ ಮಾತನಾಡಿದರು. ಅಭಿನವ ಚನ್ನಬಸವ ಸ್ವಾಮೀಜಿ ಆಶೀರ್ವಚನ ನೀಡಿದರು. ಹಾವೇರಿಯ ಡಾ. ಸದಾಶಿವ ಸ್ವಾಮೀಜಿ ಅಧ್ಯಕ್ಷತೆ ವಹಿಸಿದ್ದರು. ಡಿಡಿಪಿಐ ಆರ್. ಎಸ್. ಬುರಡಿ, ಬಿಇಒ ಎ. ಎನ್. ಕಂಬೋಗಿ, ಪ್ರಕಾಶ ಚಾಲೀಹಾಳ, ಗಿರೀಶಗೌಡ ಪಾಟೀಲ, ಶರಣಪ್ಪ ಬೆಟಗೇರಿ, ಶಿವಣ್ಣ ಅಣಗೌಡ್ರ, ಅಂದಾನಗೌಡ ಪಾಟೀಲ, ಅಂದಪ್ಪ ಬಿಚ್ಚೂರ ಮುಂತಾದವರಿದ್ದರು.

ಲಯನ್ಸ್ ಆಂಗ್ಲ ಮಾಧ್ಯಮ ಶಾಲೆ ತಾಲೂಕಿಗೆ ಪ್ರಥಮ

ನರಗುಂದ: ಪಟ್ಟಣದ ಲಯನ್ಸ್ ಶಿಕ್ಷಣ ಸಂಸ್ಥೆಯ ಲಯನ್ಸ್ ಆಂಗ್ಲ ಮಾಧ್ಯಮ ಶಾಲೆಯ ವಿದ್ಯಾರ್ಥಿಗಳು 2025-26ನೇ ಸಾಲಿನ ಎಸ್‌ಎಸ್‌ಎಲ್‌ಸಿಯಲ್ಲಿ ತಾಲೂಕಿಗೆ ಪ್ರಥಮ, ದ್ವಿತೀಯ ಸ್ಥಾನ ಗಳಿಸುವ ಮೂಲಕ ವಿಶೇಷ ಸಾಧನೆ ತೋರಿದ್ದಾರೆಂದು ಶಾಲೆಯ ಪ್ರಾಂಶುಪಾಲರು ತಿಳಿಸಿದ್ದಾರೆ.

ಲಿಖಿತಾ ಹಿರೇಮಠ ಶೇ.98.88 ಅಂಕ ಗಳಿಸಿ ತಾಲೂಕಿಗೆ ಪ್ರಥಮ ಹಾಗೂ ಕೇತನ ರಾಮಣ್ಣವರ ಶೇ.98.56 ಅಂಕ ಗಳಿಸಿ ತಾಲೂಕಿಗೆ ದ್ವಿತೀಯ ಸ್ಥಾನ ಗಳಿಸಿದ್ದಾರೆ. ಮಣಿಕಂಠ ಆನೇಗುಂದಿ ಶೇ.97.60 ಅಂಕ ಗಳಿಸಿ ಶಾಲೆಗೆ ತೃತೀಯ ಸ್ಥಾನ ಗಳಿಸಿದ್ದಾನೆ. ರಿಜ್ವಾನಾ ನದಾಫ್ ಶೇ.97.12, ತನಿಷಾ ಪುರೋಹಿತ ಶೇ.96.80, ಚಂದನ ಕವಲೂರು ಶೇ.96.48, ಪ್ರೀತಂ ಪಟ್ಟಣಶೆಟ್ಟಿ ಶೇ.96.16, ಶಾರದಾ ಸವದಿ ಶೇ.95.68, ಶ್ರೇಯಾ ಕುರುಬಗಟ್ಟಿ ಶೇ.95.36, ಶ್ರೇಯಾ ಬೇಲೇರಿ ಶೇ.95.36 ಅಂಕ ಗಳಿಸಿ ಒಟ್ಟು 10 ವಿದ್ಯಾರ್ಥಿಗಳು ಶೇ.95 ಅಂಕ ಗಳಿಸಿ ಅತ್ಯುನ್ನತ ಶ್ರೇಣಿ ಪಡೆದಿದ್ದಾರೆ. ನಿರಂಜನ ದಳವಾಯಿ ಶೇ.94.56, ಸೃಷ್ಟಿ ಚನ್ನಬಸಪ್ಪನವರ ಶೇ.94.40, ಪ್ರತಿಕ್ಷಾ ಮುನವಳ್ಳಿ ಶೇ.94.24, ಈಶ್ವರಪ್ಪ ಹೂಗಾರ ಶೇ.93.92, ಲಕ್ಷ್ಮಿ ಪೂಜಾರ ಶೇ.93.92, ನಿರಂಜನ ಚಕ್ರಸಾಲಿ 93.92, ರೋಹಿತ ಶೇಖಾವತ ಶೇ.93.96, ಶ್ರದ್ಧಾ ಮುಧೋಳೆ 92.96, ಗೌಡಪ್ಪಗೌಡ ಮುದಿಗೌಡ್ರ ಶೇ.92.80, ಶಶಾಂಕ ತಳವಾರ ಶೇ.91.52, ಕವನಾ ಮಾರ್ಗಿನಕೊಪ್ಪ ಶೇ.91.36, ಕೀರ್ತಿ ಕಾಲವಾಡ 91.20 ಅಂಕ ಗಳಿಸಿ ಒಟ್ಟು 12 ವಿದ್ಯಾರ್ಥಿಗಳು ಶೇ.90 ಕ್ಕಿಂತ ಹೆಚ್ಚು ಅಂಕ ಗಳಿಸಿ ಉನ್ನತ ಶ್ರೇಣಿ ಪಡೆದಿದ್ದಾರೆ. 80 ವಿದ್ಯಾರ್ಥಿಗಳಲ್ಲಿ 31 ವಿದ್ಯಾರ್ಥಿಗಳು ಡಿಸಿಂಕ್ಷನ್, ಫಸ್ಟ್ ಕ್ಲಾಸ್ 39, ಸೆಕೆಂಡ್ ಕ್ಲಾಸ್ 2 ವಿದ್ಯಾರ್ಥಿಗಳು ಹಾಗೂ 7 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಶಾಲೆಯ ಒಟ್ಟು ಫಲಿತಾಂಶ ಶೇ.98.75 ಆಗಿದ್ದು ಉತ್ತಮ ಸಾಧನೆ ತೋರಿದೆ. ವಿದ್ಯಾರ್ಥಿಗಳ ಸಾಧನೆಗೆ ಶಿಕ್ಷಣ ಸಂಸ್ಥೆ ಚೇರಮನ್ ಸಿ.ಸಿ.ಪಾಟೀಲ, ಕಾರ್ಯದರ್ಶಿ ಡಾ.ಪ್ರಭು ನಂದಿ, ವೈಸ್ ಚೇರಮನ ಉಮೇಶಗೌಡ ಪಾಟೀಲ, ಸಹ ಕಾರ್ಯದರ್ಶಿ ವಿಜಯಕುಮಾರ ಬೇಲೇರಿ ಹಾಗೂ ಆಡಳಿತ ಮಂಡಳಿ ಸದಸ್ಯರು, ಮುಖ್ಯೋಪಾಧ್ಯಾಯ ಜಿ.ಬಿ.ಹಿರೇಮಠ ಹಾಗೂ ಸಿಬ್ಬಂದಿ ಹರ್ಷ ವ್ಯಕ್ತಪಡಿಸಿದ್ದಾರೆ.

ಶೇ.90.4ರಷ್ಟು ಅಂಕ

ನರಗುಂದ: ಲಯನ್ಸ್ ಕನ್ನಡ ಮಾಧ್ಯಮ ಪ್ರೌಢಶಾಲೆಯ ಎಸ್ ಎಸ್‌ಎಲ್ಸಿ ವಾರ್ಷಿಕ ಪರೀಕ್ಷೆಯಲ್ಲಿ ವಿರೇಶ ಜವಳಿ ಶೇ.90.4ರಷ್ಟು ಅಂಕ ಗಳಿಸಿ ಶಾಲೆಗೆ ಪ್ರಥಮ, ಕವನಾ ಪಿಡ್ಡನಾಯ್ಕರ ಶೇ.88.32 ದ್ವಿತೀಯ ಹಾಗೂ ಸಂಜಿತಾ ನಾಯ್ಕರ ಹಾಗೂ ಪ್ರಗತಿ ಗುಗ್ಗರಿ ಶೇ.87.52 ತೃತೀಯ ಸ್ಥಾನ ಗಳಿಸಿದ್ದಾರೆ. ಅತ್ಯುನ್ನತ ಶ್ರೇಣಿ 4, ಪ್ರಥಮ ದರ್ಜೆ 7, ದ್ವಿತೀಯ ದರ್ಜೆ 40, ತೃತೀಯ ದರ್ಜೆ 2 ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದಾರೆ. ಸಂಸ್ಥೆಯ ಚೇರಮನ್ ಶಾಸಕ ಸಿ.ಸಿ.ಪಾಟೀಲ ಹಾಗೂ ಕಾರ್ಯದರ್ಶಿ ಡಾ.ಪ್ರಭು ಎಂ.ನಂದಿ ಹಾಗೂ ಸಂಸ್ಥೆಯ ವೈಸ್ ಚೇರಮನ್ ಉಮೇಶಗೌಡ ಸಿ.ಪಾಟೀಲ ಮತ್ತು ಸಹಕಾರ್ಯದರ್ಶಿ ವಿಜಯಕುಮಾರ ಬೇಲೇರಿ ಮತ್ತು ಆಡಳಿತ ಮಂಡಳಿ ನಿರ್ದೇಶಕರು, ಪ್ರಾಚಾರ್ಯ ಎಸ್.ಜಿ.ಜಕ್ಕಲಿ ಹಾಗೂ ಸಿಬ್ಬಂದಿ ಹರ್ಷವ್ಯಕ್ತಪಡಿಸಿದ್ದಾರೆ.

ಮಹರ್ಷಿ ಭಗೀರಥ ಜಯಂತಿ ಆಚರಣೆ

ಗದಗ: ಜಲವೇ ಜೀವನ ಎಂಬ ತತ್ವಕ್ಕೆ ಸಾಕ್ಷಿಯಾಗಿ, ಸಕಲ ಜೀವರಾಶಿಗಳ ಉದ್ಧಾರಕ್ಕಾಗಿ ಗಂಗೆಯನ್ನು ಧರೆಗೆ ತಂದು ಲೋಕಕಲ್ಯಾಣಕ್ಕಾಗಿ ಅಸಾಧ್ಯವಾದುದನ್ನು ಸಾಧಿಸಿದ ಮಹಾನ್ ಪುರುಷ ಮಹರ್ಷಿ ಭಗೀರಥ ಎಂದು ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ ಹೇಳಿದರು. ನಗರದ ಜಿಲ್ಲಾಡಳಿತ ಭವನದ ಆಡಿಟೋರಿಯಂ ಹಾಲ್‌ದಲ್ಲಿ ಗುರುವಾರ ಮಹರ್ಷಿ ಭಗೀರಥ ಜಯಂತಿಯನ್ನು ಜಿಲ್ಲಾಡಳಿತ ಜಿಪಂ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗಳ ಸಹಯೋಗದಲ್ಲಿ ಸಾಂಕೇತಿಕವಾಗಿ ಪುಷ್ಪಾರ್ಚನೆ ಮಾಡಿ ಮಾತನಾಡಿದರು. ಮಂಜುನಾಥ ಹುಯಿಲಗೋಳ ಸ್ವಾಗತಿಸಿ, ವಂದಿಸಿದರು. ಅಪರ ಜಿಲ್ಲಾಧಿಕಾರಿ ಡಾ.ದುರಗೇಶ್ ಕೆ.ಆರ್., ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಸಿ.ಆರ್. ಮುಂಡರಗಿ, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕಿ ನಂದಾ ಹಣಬರಹಟ್ಟಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಾಯಕ ನಿರ್ದೇಶಕ ವಸಂತ ಮಡ್ಲೂರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ರಾಜು ಸೊಪಡ್ಲ, ಬಿ.ಎಫ್.ಉಪ್ಪಾರ, ಪ್ರಧಾನ ಕಾರ್ಯದರ್ಶಿ ರಾಜು ಗಡ್ಡಿ, ಮರ್ಹಷಿ ಭಗೀರಥ ಉಪ್ಪಾರ ಸಂಘದ ಜಿಲ್ಲಾಧ್ಯಕ್ಷ ಭೀಮನಗೌಡ ಪಾಟೀಲ್ ಇತರರಿದ್ದರು.

ಶೇ.99.13ರಷ್ಟು ಫಲಿತಾಂಶ

ಮುಂಡರಗಿ: ಇಲ್ಲಿಯ ಶ್ರೀ ಜ.ಅ.ವಿದ್ಯಾ ಸಮಿತಿಯ ಎಂ.ಎಸ್.ಡಂಬಳ ಹೆಣ್ಣುಮಕ್ಕಳ ಪ್ರೌಢಶಾಲೆಯ ಈ ವರ್ಷದ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಫಲಿತಾಂಶ ಶೇ.99.13 ರಷ್ಟಾಗಿದೆ ಎಂದು ಶಾಲೆಯ ಮುಖ್ಯೋಪಾಧ್ಯಾಯ ಮೃತುಂಜ್ಯಯ ಕೋರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪರೀಕ್ಷೆಗೆ ಒಟ್ಟು 102 ವಿದ್ಯಾರ್ಥಿನಿಯರು ಹಾಜರಾಗಿದ್ದರು. ಅದರಲ್ಲಿ 101 ವಿದ್ಯಾರ್ಥಿನಿಯರು ಉತ್ತೀರ್ಣರಾಗಿದ್ದಾರೆ. ಅದರಲ್ಲಿ ಡಿಸ್ಟಿಂಕ್ಷನ್ 12 ವಿದ್ಯಾರ್ಥಿನಿಯರು, ಪ್ರಥಮ ಶ್ರೇಣಿಯಲ್ಲಿ 59, ದ್ವಿತೀಯ ಶ್ರೇಣಿಯಲ್ಲಿ 14 ಮತ್ತು ತೃತೀಯ ಶ್ರೇಣಿಯಲ್ಲಿ 16 ವಿದ್ಯಾರ್ಥಿನಿಯರು ಪಾಸಾಗಿದ್ದಾರೆ. ಪೂರ್ಣಿಮಾ ಆಳಪ್ಪನವರ (ಶೇ. 96.16) ಪ್ರಥಮ, ಅನಿತಾ ಬಾಲಣ್ಣವರ (ಶೇ. 95.04) ದ್ವಿತೀಯ ಹಾಗೂ ಸೌಂದರ್ಯ ರಜಪೂತ (ಶೇ.93.28) ತೃತೀಯ ಸ್ಥಾನ ಪಡೆದುಕೊಂಡಿದ್ದಾರೆ. ಹಿಂದಿ ವಿಷಯದಲ್ಲಿ ಪ್ರತೀಕ್ಷಾ ತಳಕಲ್ಲ 100 ಕ್ಕೆ 100 ಹಾಗೂ ಗಣಿತ ವಿಷಯದಲ್ಲಿ ಪೂರ್ಣಿಮಾ ಆಳಪ್ಪನವರ 100ಕ್ಕೆ 100 ಅಂಕಗಳನ್ನು ಗಳಿಸಿದ್ದಾರೆ.

ಅತ್ಯುತ್ತಮಫಲಿತಾಂಶಪಡೆದವಿದ್ಯಾರ್ಥಿನಿಯರಿಗೆಹಾಗೂಉತ್ತಮಫಲಿತಾಂಶ ಪಡೆಯಲು ಮಾರ್ಗದರ್ಶನ ನೀಡಿದ ಎಲ್ಲ ಶಿಕ್ಷಕ ಸಿಬ್ಬಂದಿಯವರಿಗೆ ನಾಡೋಜ ಡಾ. ಅನ್ನದಾನೀಶ್ವರ ಮಹಾಶಿವಯೋಗಿಗಳು ಹಾಗೂ ಉತ್ತರಾಧಿಕಾರಿ ಡಾ. ಮಲ್ಲಿಕಾರ್ಜುನ ಸ್ವಾಮೀಜಿ ಆಶೀರ್ವಾದಿಸಿದ್ದಾರೆ. ಸಂಸ್ಥೆಯ ಆಡಳಿತಾಧಿಕಾರಿಗಳು , ಪ್ರೌಢಶಾಲೆಯ ಪದಾಧಿಕಾರಿಗಳು ಹಾಗೂ ಮುಖ್ಯೋಪಾಧ್ಯಾಯರು ಮತ್ತು ಶಿಕ್ಷಕ ಸಿಬ್ಬಂದಿ ಹರ್ಷವ್ಯಕ್ತಪಡಿಸಿದ್ದಾರೆ.

ಶೇ.100ರಷ್ಟು ಫಲಿತಾಂಶ

ಮುಂಡರಗಿ: ಇಲ್ಲಿಯ ಶ್ರೀ ಜ.ಅ.ವಿ.ಸಮಿತಿಯ ಶ್ರೀ ಜ.ಅ.ಪ್ರೌಢಶಾಲೆಯಪ್ರಸ್ತುತಸಾಲಿನಎಸ್. ಎಸ್.ಎಲ್.ಸಿ ಪರೀಕ್ಷೆ ಫಲಿತಾಂಶ ಶೇ.100 ರಷ್ಟಾಗಿದೆ ಎಂದು ಉಪಪ್ರಾಚಾರ್ಯ ಎಸ್ .ಸಿ.ಚಕ್ಕಡಿಮಠ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪರೀಕ್ಷೆಗೆ ಒಟ್ಟು 47 ವಿದ್ಯಾರ್ಥಿಗಳು ಪರೀಕ್ಷಗೆ ಹಾಜರಾಗಿದ್ದರು. ಅವರಲ್ಲಿ ಎಲ್ಲರೂ ಉತ್ತೀರ್ಣರಾಗುವ ಮೂಲಕ ಪ್ರತಿಶತ 100 ಫಲಿತಾಂಶ ನೀಡಿದ್ದಾರೆ. 24 ಪ್ರಥಮ ಶ್ರೇಣಿ, 13 ದ್ವಿತೀಯ ಶ್ರೇಣಿ,10 ತೃತೀಯ ಶ್ರೇಣಿಯಲ್ಲಿ ಪಾಸಾಗಿದ್ದಾರೆ. ಮದರಸಾಬ ಮುಂಡರಗಿ (ಶೇ. 79.36) ಅಂಕಗಳಿಸಿ ಪ್ರಥಮ, ಕಾಶಿನಾಥ ದಂಡೀನ (ಶೇ. 79.04) ದ್ವಿತೀಯ ಮತ್ತು ಹಾಲಸ್ವಾಮಿ ಅಳವಂಡಿಮಠ (ಶೇ.78.08) ತೃತೀಯ ಸ್ಥಾನಪಡೆದಿದ್ದಾರೆ. ವಿದ್ಯಾರ್ಥಿಗಳ ಸಾಧನೆಗೆ ನಾಡೋಜ ಡಾ.ಅನ್ನದಾನೀಶ್ವರ ಮಹಾಶಿವಯೋಗಿಗಳು, ಆಡಳಿತ ಮಂಡಳಿಯ ಕಾರ್ಯಾಧ್ಯಕ್ಷರು ಮತ್ತು ಉಪಪ್ರಾಚಾರ್ಯ ಹಾಗೂ ಸಿಬ್ಬಂದಿ ಹರ್ಷವ್ಯಕ್ತಪಡಿಸಿದ್ದಾರೆ.

ಶೇ.95.91ರಷ್ಟು ಫಲಿತಾಂಶ

ಮುಂಡರಗಿ: ಇಲ್ಲಿಯ ಶ್ರೀ ಜ.ಅ.ವಿ.ಸಮಿತಿಯ ಜಗದ್ಗುರು ಅನ್ನದಾನೀಶ್ವರ ಆಂಗ್ಲ ಮಾಧ್ಯಮ ಶಾಲೆಯ ಪ್ರಸ್ತುತ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷಾ 1 ಫಲಿತಾಂಶ ಪ್ರಕಟಗೊಂಡಿದ್ದು, ಶೇ. 95.91 ರಷ್ಟಾಗಿದೆ ಎಂದು ಶಾಲೆಯ ಮುಖ್ಯೋಪಾಧ್ಯಾಯ ಆರ್ .ವಿ. ಕಡಿವಾಲರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪರೀಕ್ಷೆಗೆ 49 ವಿದ್ಯಾರ್ಥಿಗಳು ಹಾಜರಾಗಿದ್ದು, ಅದರಲ್ಲಿ 47 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. 5 ಉನ್ನತ ದರ್ಜೆಯಲ್ಲಿ , 24 ಪ್ರಥಮ , 8 ದ್ವಿತೀಯ ಸ್ಥಾನದಲ್ಲಿ ವಿದ್ಯಾರ್ಥಿಗಳು ಉತ್ತೀರ್ಣರಾಗಿರುತ್ತಾರೆ. ಶ್ರೀದೇವಿ ಏರಿ 593 (ಶೇ. 94.88) ಶಾಲೆಗೆ ಪ್ರಥಮ, ಸಿಂಚನ ಕೆ.ಎಚ್. 576 (ಶೇ. 92.16) ದ್ವಿತೀಯ , ಸುಷ್ಮಿತಾ ಗಾರವಾಡ 553 (ಶೇ. 88.48) ತೃತೀಯ ಸ್ಥಾನ ಪಡೆದಿದ್ದಾರೆ.

ವಿದ್ಯಾರ್ಥಿಗಳ ಸಾಧನೆಗೆ ನಾಡೋಜ ಡಾ. ಅನ್ನದಾನೀಶ್ವರ ಸ್ವಾಮೀಜಿ, ಶಾಲಾ ಆಡಳಿತ ಮಂಡಳಿಯ ಅಧ್ಯಕ್ಷ ಡಾ. ಅನ್ನದಾನಿ. ಮೇಟಿ, ಉಪಾಧ್ಯಕ್ಷ ಬಸವರಾಜ. ಬಿಸನಳ್ಳಿ , ಸದಸ್ಯರಾದ ಅಂದಪ್ಪ ಗೋಡಿ, ಜಗನ್ನಾಥ ಅಳವಂಡಿ, ಶಿವಕುಮಾರ ಹಿರೇಮಠ, ಶಾಲೆಯ ಮುಖ್ಯೋಪಾಧ್ಯಾಯ ಆರ್.ವಿ. ಕಡಿವಾಲರ ಹಾಗೂ ಸಿಬ್ಬಂದಿ ಹರ್ಷವ್ಯಕ್ತಪಡಿಸಿದ್ದಾರೆ.

ಜಿಲ್ಲೆಗೆ ಮುಂಡರಗಿ ಪ್ರಥಮ

ಮುಂಡರಗಿ: ಕಳೆದ ಮಾರ್ಚ್‌ನಲ್ಲಿ ನಡೆದ ಎಸ್.ಎಸ್. ಎಲ್.ಸಿ ಪರೀಕ್ಷೆ ಫಲಿತಾಂಶ ಪ್ರಕಟವಾಗಿದ್ದು, ಮುಂಡರಗಿ ತಾಲೂಕು ಶೇ.97.47 ಫಲಿತಾಂಶ ನೀಡಿ ಗದಗ ಜಿಲ್ಲೆಗೆ ಪ್ರಥಮ ಸ್ಥಾನವನ್ನು ಪಡೆದುಕೊಂಡಿದೆ ಎಂದು ಬಿಇಒ ಗಂಗಾಧರ ಅಣ್ಣಿಗೇರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ತಾಲೂಕಿನಲ್ಲಿ ಒಟ್ಟು 1897 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. ಅವರಲ್ಲಿ 1,849 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ತಾಲೂಕಿನ ಮುಂಡರಗಿ ಪಟ್ಟಣದ ಎಸ್. ಎಫ್.ಎಸ್ ಪ್ರೌಢಶಾಲೆಯ ಸಂಧ್ಯಾ ಲಮಾಣಿ 621 ಅಂಕಪಡೆದು ತಾಲೂಕಿಗೆ ಪ್ರಥಮ, ರಾಟಿ ಕೊರ್ಲಹಳ್ಳಿಯ ಆದರ್ಶ ವಿದ್ಯಾಲಯದ ರೇವಂತರಡ್ಡಿ ಮುಂಡರಗಿ 620 ಅಂಕ ಪಡೆದು ದ್ವಿತೀಯ ಸ್ಥಾನ ಮತ್ತು ರಾಟಿ ಕೊರ್ಲಹಳ್ಳಿಯ ಆದರ್ಶ ವಿದ್ಯಾಲಯದ ಶಾಂತಮ್ಮ ಸಜ್ಜನರ 618 ಅಂಕಗಳನ್ನು ಪಡೆದು ತೃತೀಯ ಸ್ಥಾನ ಪಡೆದುಕೊಂಡಿದ್ದಾರೆ. ಈ ವರ್ಷ ತಾಲೂಕಿನ 25 ಪ್ರೌಢಶಾಲೆಗಳು ಪ್ರತಿಶತ 100 ಕ್ಕೆ 100 ಫಲಿತಾಂಶ ಪಡೆದುಕೊಂಡಿವೆ. ಜಿಲ್ಲೆಯಲ್ಲಿ ಶೇ.100 ಅಷ್ಟು ಫಲಿತಾಶ ಪಡೆದ ಸರ್ಕಾರಿ ಶಾಲೆಗಳ ಸಂಖ್ಯೆ 63. ಇದರಲ್ಲಿ ಸಿಂಹ ಪಾಲು ಮುಂಡರಗಿ ಪಡೆದುಕೊಂಡಿರುವುದು ಹೆಮ್ಮೆಯ ಸಂಗತಿ ಎಂದರು. ತಾಲೂಕಿನಲ್ಲಿ ಶೇ.100ರಷ್ಟು ಫಲಿತಾಂಶ ನೀಡಿದ ಶಾಲೆಗಳಲ್ಲಿ 15 ಶಾಲೆಗಳುಸರ್ಕಾರಿಪ್ರೌಢಶಾಲೆಗಳು, 7 ಅನುದಾನಿತಪ್ರೌಢಶಾಲೆಗಳು ಮತ್ತು 3 ಅನುದಾನರಹಿತ ಪ್ರೌಢಶಾಲೆಗಳು ಎಂದರು.

ಏ.26ರಂದು ಮಹಾರಥೋತ್ಸವ

ಲಕ್ಷ್ಮೇಶ್ವರ: ಪಟ್ಟಣದ ಸೋಮೇಶ್ವರ ದೇವಸ್ಥಾನ ಜಾತ್ರಾ ಮಹೋತ್ಸವ ಅದ್ದೂರಿಯಾಗಿ ನಡೆಯಲಿದೆ ಎಂದು ಸೋಮೇಶ್ವರ ದೇವಸ್ಥಾನ ಭಕ್ತರ ಸೇವಾ ಟ್ರಸ್ಟ್ ಕಮಿಟಿ ಅಧ್ಯಕ್ಷ ಗುರುರಾಜ ಪಾಟೀಲ ಕುಲಕರ್ಣಿ ಹಾಗೂ ಜಾತ್ರಾ ಕಮಿಟಿ ಅಧ್ಯಕ್ಷ ಕುಬೇರಪ್ಪ ಮಹಾಂತಶೆಟ್ಟರ ಹೇಳಿದರು. ಅವರು ಸೋಮೇಶ್ವರ ದೇವಸ್ಥಾನದಲ್ಲಿ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿ, ಏ.25ರ ಸಂಜೆ 6.30ಕ್ಕೆ ನೂರಾರು ಮುತ್ತೈದೆಯರಿಗೆ ಉಡಿ ತುಂಬುವ ಕಾರ್ಯಕ್ರಮ, ಏ.26ರ ಸಂಜೆ 6ಕ್ಕೆ ಸೋಮೇಶ್ವರ ಮಹಾರಥೋತ್ಸವ ಸಾವಿರಾರು ಭಕ್ತರ ಸಮ್ಮುಖದಲ್ಲಿ ನಡೆಯಲಿದೆ. ಏ.27ರ ಸಂಜೆ 6ಕ್ಕೆ ಕಡುಬಿನ ಕಾಳಗ ನಡೆಯಲಿದ್ದು, ಏ.28ರ ರಾತ್ರಿ 8ಕ್ಕೆ ಓಕುಳಿ ಕಾರ್ಯಕ್ರಮ ಜರುಗಲಿದೆ. ದಿನನಿತ್ಯ ಸೋಮೇಶ್ವರನಿಗೆ ಪಂಚಾಮೃತ ಅಭಿಷೇಕ, ಕ್ಷೀರಾಭಿಷೇಕ, ರುದ್ರಾಭಿಷೇಕ, ಪೂಜಾ ಕಾರ್ಯಕ್ರಮಗಳು ಜರುಗಲಿವೆ ಎಂದರು. ಅರ್ಚಕರ ಸಮಿತಿ ಅಧ್ಯಕ್ಷ ದಿಗಂಬರ ಪೂಜಾರ, ಬಸವೇಶ ಮಹಾಂತಶೆಟ್ಟರ, ಸುರೇಶ ರಾಚನಾಯಕ, ಸಿದ್ದನಗೌಡ ಬಳ್ಳೊಳ್ಳಿ, ಬಸವರಾಜ ಮೆಣಸಿನಕಾಯಿ, ವಿರೂಪಾಕ್ಷಪ್ಪ ಆದಿ, ಪ್ರಕಾಶ ಮುಳಗುಂದ, ಪ್ರಕಾಶ ಕೊಂಚಿಗೇರಿಮಠ, ಕಂಚನಗೌಡ್ರ ಪಾಟೀಲ್, ಈರಣ್ಣ ಮುಳುಗುಂದ, ಭರಮಪ್ಪ ಕೊಡ್ಲಿ, ಬಂಗಾರಪ್ಪ ಮುಳಗುಂದ, ನಂದೀಶ ಬಂಡಿವಾಡ, ಮಯೂರಗೌಡ ಪಾಟೀಲ್, ಜಿ.ಎಸ್. ಗುಡಗೇರಿ, ಅರ್ಚಕ ಸಮೀರ ಪೂಜಾರ, ಸೋಮೇಶ್ವರ ಜಾತ್ರಾ ಕಮಿಟಿ, ಭಕ್ತರ ಸೇವಾ ಟ್ರಸ್ಟ್ ಅರ್ಚಕರ ಸೇವಾ ಸಮಿತಿ ಸದಸ್ಯರು ಇದ್ದರು.

ರೈತನ ಮಗಳು ರಾಜ್ಯಕ್ಕೆ ಮೂರನೇ ರ‍್ಯಾಂಕ್

•ಬ್ಯಾಡಗಿ: ಹಾವೇರಿ ಜಿಲ್ಲೆಯ ಬ್ಯಾಡಗಿ ತಾಲೂಕಿನ ಕದರಮಂಡಲಗಿ ಗ್ರಾಮದ ಸ್ಪಂದನ ಪ್ರೌಢಶಾಲೆಯ ವಿದ್ಯಾರ್ಥಿನಿ ನಿವೇದಿತಾ ಪರಶುರಾಮ್ ಅಜ್ಜಮ್ಮನವರ್ ಇವಳು 625 ಅಂಕಕ್ಕೆ 623 ಅಂಕ ಪಡೆದು ರಾಜ್ಯಕ್ಕೆ ಮೂರನೇ ಸ್ಥಾನ ಪಡೆದಿದ್ದಾಳೆ.

ಶಾಸಕರಿಂದ ಸನ್ಮಾನ: ರಾಜ್ಯಕ್ಕೆ ಮೂರನೇ ಸ್ಥಾನ ಪಡೆದ ನಿವೇದಿತಾ ವಿದ್ಯಾರ್ಥಿಗೆ ಕ್ಷೇತ್ರದ ಶಾಸಕರಾದ ಬಸವರಾಜ್ ಶಿವಣ್ಣನವರು ಅವರ ಮನೆಗೆ ಭೇಟಿ ನೀಡಿ ವಿದ್ಯಾರ್ಥಿಗೆ ಸನ್ಮಾನವನ್ನು ಮಾಡಿದರು.

ಈ ಸಂದರ್ಭದಲ್ಲಿ ತಾಲೂಕ ಅಧ್ಯಕ್ಷ ದಾನಪ್ಪ ಚೂರಿ, ಸುರೇಶ್ ಹುಳಬುತ್ತಿ, ಮಲ್ಲಿಕಾರ್ಜುನ್ ಕರಿಲಿಂಗಣ್ಣನವರ್ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿ ಎಸ್. ಜಿ. ಕೋಟಿ ಹಾಗೂ ಅನೇಕರು ಉಪಸ್ಥಿತರಿದ್ದರು.

ಜಿಲ್ಲಾ ಉಸ್ತುವಾರಿ ಸಚಿವರ ಮೆಚ್ಚುಗೆ

ರೈತನ ಮಗಳಾದ ನಿವೇದಿತಾ ಪರಶುರಾಮ ಅಜ್ಜಮ್ಮನವರ್ ಅವರು ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ರಾಜ್ಯಕ್ಕೆ ಮೂರನೇ ರ‍್ಯಾಂಕ್ ಹಾಗೂ ಜಿಲ್ಲೆಗೆ ಮೊದಲ ಸ್ಥಾನ ಪಡೆಯುವ ಮೂಲಕ ಸಾಧನೆ ತೋರಿರುವುದಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಶಿವಾನಂದ ಪಾಟೀಲ ಅವರು ಸಂತಸ ವ್ಯಕ್ತಪಡಿಸಿದ್ದಾರೆ. ಬ್ಯಾಡಗಿ ತಾಲೂಕು ಕದರಮಂಡಲಗಿ ಗ್ರಾಮದ ಸ್ಪಂದನಾ ಪ್ರೌಢಶಾಲೆ ವಿದ್ಯಾರ್ಥಿನಿ, ರೈತನ ಪುತ್ರಿ ನಿವೇದಿತಾ ಪರಶುರಾಮ ಅಜ್ಜಮ್ಮನವರ್ ಅವರು ರಾಜ್ಯಕ್ಕೆ ಮೂರನೇ ರ‍್ಯಾಂಕ್ ಪಡೆದು ಜಿಲ್ಲೆಗೆ ಕೀರ್ತಿ ತಂದಿದ್ದಾರೆ. ಕಳೆದ ವರ್ಷ ರಾಜ್ಯಕ್ಕೆ 13ನೇ ಸ್ಥಾನದಲ್ಲಿದ್ದ ಹಾವೇರಿ ಜಿಲ್ಲೆ ಈ ವರ್ಷ ಫಲಿತಾಂಶ ಉತ್ತಮಪಡಿಸಿಕೊಂಡು 7ನೇ ಸ್ಥಾನಕ್ಕೆ ಏರಿದೆ. ಮೂರನೇ ರ‍್ಯಾಂಕ್ ಪಡೆದ ನಿವೇದಿತಾ ವೈದ್ಯೆಯಾಗುವ ಕನಸು ಹೊಂದಿದ್ದು, ಅವರ ಕನಸು ನನಸಾಗಲಿ ಹಾಗೂ ತೇರ್ಗಡೆಯಾದ ಎಲ್ಲ ವಿದ್ಯಾರ್ಥಿಗಳ ಭವಿಷ್ಯ ಉಜ್ವಲವಾಗಲಿ ಎಂದು ಸಚಿವರು ಹಾರೈಸಿದ್ದಾರೆ.

ರಾಜ್ಯಕ್ಕೆ ದ್ವಿತೀಯ

• ವಿಜಯಪುರ: ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನ ನಾಗರಬೆಟ್ಟ ಆಕ್ಸಫರ್ಡ್ ಆಂಗ್ಲ ಮಾಧ್ಯಮ ಶಾಲೆಯ ವಿದ್ಯಾರ್ಥಿನಿಯರು ರಾಜ್ಯಕ್ಕೆ ಪ್ರಥಮ ಹಾಗೂ ದ್ವಿತೀಯ ಸ್ಥಾನ ಪಡೆದು ಅಮೋಘ ಸಾಧನೆ ಮಾಡಿದ್ದಾಳೆ. ವಿದ್ಯಾರ್ಥಿನಿ ಸೌಜನ್ಯ ಬಸವರಾಜ್ ಕಂದಕೂರ ಇಂಗ್ಲಿಷ್ ಮಾಧ್ಯಮದಲ್ಲಿ 625 ಕ್ಕೆ 625 ಅಂಕ ಪಡೆದು ವಿಶೇಷ ಸಾಧನೆ ತೋರಿದ್ದು, ಪಾಟೀಲ ಕನ್ನಡ ಮಾಧ್ಯಮ ಶಾಲೆಯ ವಿದ್ಯಾರ್ಥಿನಿ ನೇಹಾ ಗುರಡ್ಡಿ 625 ಕ್ಕೆ 624 ಅಂಕ ಪಡೆದು ರಾಜ್ಯಕ್ಕೆ ದ್ವಿತೀಯ ಸ್ಥಾನ ಪಡೆದಿದ್ದಾಳೆ.

ಆಟೋ ಡ್ರೈವರ್ ಮಗಳ ಸಾಧನೆ

ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶಾಲೆಗೆ ದ್ವಿತೀಯ ಸ್ಥಾನ

ಜಿ.ವ್ಹಿ. ದೀಪಾವಳಿ

•ರಾಣೇಬೆನ್ನೂರ: ಸಾಧನೆಗೆ ಪರಿಸ್ಥಿತಿ ಅಡ್ಡಿಯಾಗುವುದಿಲ್ಲ ಎಂಬ ಮಾತಿನಂತೆ ಆಟೋ ಚಾಲಕನ ಮಗಳು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ತನ್ನ ಶಾಲೆಗೆ ದ್ವಿತೀಯ ಸ್ಥಾನ ಪಡೆದು ಗಮನ ಸೆಳೆದಿದ್ದಾಳೆ.

ನಗರದ ಎನ್.ಆರ್. ಸಂಕೇತ ಪ್ರೌಢಶಾಲೆಯಲ್ಲಿ ಓದುತ್ತಿರುವ ಆಶಾ ನಾಗರಾಜ ಆರೇರ ಎಂಬ ವಿದ್ಯಾರ್ಥಿನಿ ಪ್ರಸಕ್ತ ಎಸ್ ಎಸ್ ಎಲ್ ಸಿ ವಾರ್ಷಿಕ ಪರೀಕ್ಷೆಯ ಫಲಿತಾಂಶದಲ್ಲಿ ಕನ್ನಡ-98, ಇಂಗ್ಲಿಷ್-119, ಹಿಂದಿ-97, ಗಣಿತ-95, ವಿಜ್ಞಾನ-85, ಸಮಾಜ -91 ಒಟ್ಟು 585 ಅಂಕಗಳನ್ನು ಪಡೆದು ಶೇ.93.06 ಫಲಿಂತಾಶ ಮಾಡಿ ಶಾಲೆಗೆ ದ್ವಿತೀಯ ಸ್ಥಾನ ಪಡೆದು ಶಾಲೆಗೆ ಕೀರ್ತಿ ತಂದಿದ್ದಾಳೆ.

ಇಲ್ಲಿನ ಉಮಾಶಂಕರನಗರದ ನಿವಾಸಿ ನಾಗರಾಜ ಆರೇರ ದಿನವಿಡೀ ಆಟೋ ಓಡಿಸುವುದರ ಮೂಲಕ ಕುಟುಂಬವನ್ನು ಸಾಗಿಸುತ್ತಿದ್ದಾರೆ. ಆರ್ಥಿಕ ಸಂಕಷ್ಟಗಳ ನಡುವೆಯೂ ಮಗಳ ವಿದ್ಯಾಭ್ಯಾಸಕ್ಕೆ ನೆರವಾಗಿದ್ದಾರೆ.

ಮಗಳು ಪ್ರತಿದಿನ ನಿಯಮಿತವಾಗಿ ಓದುವುದರ ಜೊತೆಗೆ ಶಾಲೆಯ ಶಿಕ್ಷಕರ ಮಾರ್ಗದರ್ಶನದಲ್ಲಿ ಸಮಯವನ್ನು ಸದುಪಯೋಗಪಡಿಸಿಕೊಂಡು ಉತ್ತಮ ಅಂಕಗಳನ್ನು ಗಳಿಸಿದ್ದಾಳೆ ಎಂದು ತಂದೆ ನಾಗರಾಜ ತಾಯಿ ರಾಧಾ ಮಗಳ ಸಾಧನೆ ನೆನೆದು ಆನಂದ ಭಾಷ್ಪ ಸುರಿಸಿದರು.

ನನ್ನ ತಂದೆಯ ಶ್ರಮವೇ ನನ್ನ ಪ್ರೇರಣೆ. ಅವರ ಕಷ್ಟ ನೋಡಿದಾಗ ಇನ್ನಷ್ಟು ಓದಲು ಮನಸ್ಸಾಯಿತು. ವೈದ್ಯೆಯಾಗಬೇಕೆಂಬ ಕನಸು ಇದೆ. ಅದನ್ನು ನಾನು ನೆರವೇರಿಸುತ್ತೇನೆ ಎಂದು ವಿದ್ಯಾರ್ಥಿನಿ ಆಶಯ ವ್ಯಕ್ತಪಡಿಸಿದ್ದಾಳೆ.

ಎಸ್ಸೆಸ್ಸೆಲ್ಸಿ: ದ.ಕನ್ನಡ , ಉಡುಪಿ ರಾಜ್ಯಕ್ಕೆ ಫಸ್ಟ್, ಕಲಬುರಗಿ ಲಾಸ್ಟ್

ಕಲಬುರಗಿ ಫಲಿತಾಂಶ: ಅದೇ ರಾಗ ಅದೇ ಹಾಡು!

ರಾಚಪ್ಪಾ ಜಂಬಗಿ

ದಿಗಂತ ವಿಶೇಷ

•ಕಲಬುರಗಿ: ಪ್ರಸಕ್ತ 2025-26ನೇ ಸಾಲಿನ ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ರಾಜ್ಯದ ದಕ್ಷಿಣ ಕನ್ನಡ ಹಾಗೂ ಉಡುಪಿ ಎಂದಿನಂತೆ ಪ್ರಥಮ ಸ್ಥಾನ ಪಡೆದುಕೊಂಡಿದ್ದರೇ, ಇತ್ತ ಕಲ್ಯಾಣ ಕರ್ನಾಟಕ ಭಾಗದ ಕೇಂದ್ರ ಸ್ಥಾನ ಕಲಬುರಗಿಯೂ ಕಳೆದ ಎರಡು ವರ್ಷಗಳಿಂದ ಅದೇ ರಾಗ ಅದೇ ಹಾಡು ಎಂಬಂತೆ ಕೊನೆ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿದೆ.

ಕಲ್ಯಾಣ ಕರ್ನಾಟಕ ಭಾಗದ ಸಮಗ್ರ ಶೈಕ್ಷಣಿಕ ಅಭಿವೃದ್ಧಿಗಾಗಿ ಮಂಡಳಿಯಿಂದ ವಿನೂತನ ಅಕ್ಷರ ಆವಿಷ್ಕಾರ ಯೋಜನೆ ಜಾರಿಗೆ ತಂದು, ಎರಡು ವರ್ಷ ಗತಿಸುತ್ತಿದ್ದರೂ, ಮೇಲಾಗಿ ಯೋಜನೆಯ 25 ಪ್ರತಿಶತ ಹಣ ಶಿಕ್ಷಣಕ್ಕಾಗಿ ಮೀಸಲಿಟ್ಟರು ಕಳೆದ ಎರಡು ವರ್ಷಗಳಿಂದ ಎಸ್ ಎಸ್ ಎಲ್ ಸಿ ಪರೀಕ್ಷೆಯ ಫಲಿತಾಂಶದಲ್ಲಿ ಯಾವುದೇ ರೀತಿಯ ಸುಧಾರಣೆ ಕಾಣದಿರುವುದು ಜಿಲ್ಲೆಯ ರಾಜಕೀಯ ನಾಯಕರ ಇಚ್ಛಾಶಕ್ತಿ ಕೊರತೆಗೆ ಹಿಡಿದ ಕನ್ನಡಿಯಾಗಿದೆ.

28.17 ಶೇಕಡಾವಾರು ಸುಧಾರಣೆ: ಕಲ್ಯಾಣ ಕರ್ನಾಟಕ ಭಾಗದ ಕೇಂದ್ರ ಸ್ಥಾನ ಕಲಬುರಗಿಯೂ ಕಳೆದ 2024-25ನೇ ಸಾಲಿನ ಎಸ್ ಎಸ್ ಎಲ್ ಸಿ ಪರೀಕ್ಷೆಯ ಫಲಿತಾಂಶಕ್ಕೆ ಹೋಲಿಸಿದರೆ ಈ ಬಾರಿ 28.17 ಶೇಕಡಾವಾರು ಫಲಿತಾಂಶದಲ್ಲಿ ಸುಧಾರಣೆ ಕಂಡಿದ್ದಾದರೂ, ರಾಜ್ಯದ ಜಿಲ್ಲಾವಾರು ಫಲಿತಾಂಶಗಳ ಸ್ಥಾನಮಾನ ಗಮನಿಸಿದಾಗ 2024-25ರಲ್ಲಿ (56.89) ರಾಜ್ಯಕ್ಕೆ ಕೊನೆ ಸ್ಥಾನ, 2025-26ರಲ್ಲಿ (85.06) ಪ್ರತಿಶತ ಪಡೆದರೂ ಕೊನೆ ಸ್ಥಾನ ಪಡೆದಿದಿರುವುದು ಈ ಭಾಗದ ಜನರಿಗೆ ಬೇಸರ ತರಿಸಿದೆ.

ಬೀದರ್
ಕಲಬುರ್ಗಿ
ಯಾದಗಿರಿ
ರಾಯಚೂರು
ಕೊಪ್ಪಳ
ಬಳ್ಳಾರಿ
ವಿಜಯನಗರ

ಟಾಪ್ ಸಚಿವರ ರಿಸಲ್ಟ್ ಲಾಸ್ಟ್

ಮುಖ್ಯಮಂತ್ರಿ ಸಿದ್ದರಾಮಯ್ಯ ಸಂಪುಟದ ಟಾಪ್ ಸಚಿವರು ಈ ಭಾಗದ ಆಯಾ ಜಿಲ್ಲೆಗಳ ಉಸ್ತುವಾರಿ ಸಚಿವರಾಗಿದ್ದರೂ, ಫಲಿತಾಂಶ ಮಾತ್ರ ಕೊನೆ ಸ್ಥಾನಗಳಲ್ಲಿ ಬಂದಿರುವುದು ಭಾಗದ ಸಾರ್ವಜನಿಕ ವಲಯದಲ್ಲಿ ಬಲು ಆಕ್ರೋಶಕ್ಕೆ ಕಾರಣವಾಗಿದೆ. ವಿಜಯನಗರ ಹೊರತು ಪಡಿಸಿದರೆ,ಸಚಿವ ಡಾ.ಶರಣಪ್ರಕಾಶ್ ಪಾಟೀಲರ ರಾಯಚೂರು ಜಿಲ್ಲೆ,ಸಚಿವ ಜಮೀರ್ ಅಹಮದ್ ಬಳ್ಳಾರಿ,ಶಿವರಾಜ್ ತಂಗಡಗಿಯವರ ಕೊಪ್ಪಳ, ಈಶ್ವರ ಖಂಡ್ರೆಯವರ ಬೀದರ್, ಶರಣಬಸಪ್ಪಾ ದರ್ಶನಾಪುರವರ ಯಾದಗಿರಿ ಹಾಗೂ ಪ್ರಿಯಾಂಕ್ ಖರ್ಗೆ ಉಸ್ತುವಾರಿಯ ಕಲಬುರಗಿ ಜಿಲ್ಲೆಯ ಫಲಿತಾಂಶ ಕುಸಿದಿದೆ. ಆಡಳಿತ ನಡೆಸುವ ಸರ್ಕಾರದಲ್ಲಿ ಪ್ರಭಾವಿ ಸಚಿವರಾಗಿದ್ದರು ಅವರವರ ಜಿಲ್ಲೆ ಫಲಿತಾಂಶದಲ್ಲಿ 20ನೇ ಸ್ಥಾನದ ನಂತರದ ಸ್ಥಾನ ಪಡೆದಿಕೊಂಡಿರುವುದು ಮಾತ್ರ ದುರ್ದೈವದ ಸಂಗತಿ.

ಕ.ಕ.ಜಿಲ್ಲೆಗಳು ಬಹುತೇಕ ಕೊನೆ ಸ್ಥಾನ

2025-26ನೇ ಸಾಲಿನ ಎಸ್ ಎಸ್ ಎಲ್ ಸಿ ಫಲಿತಾಂಶದಲ್ಲಿ ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳಲ್ಲಿ ವಿಜಯನಗರ ಹೊರತು ಪಡಿಸಿದರೆ ಬಹುತೇಕ ಎಲ್ಲಾ ಜಿಲ್ಲೆಗಳು 20ರ ನಂತರದ ಸ್ಥಾನ ಪಡೆದುಕೊಂಡಿವೆ. ವಿಜಯನಗರ-94.39 ಪ್ರತಿಶತ ಅಂಕ ಪಡೆದು ರಾಜ್ಯಕ್ಕೆ 10ನೇ ಸ್ಥಾನ ಪಡೆದರೇ, ರಾಯಚೂರು 94.41 ಅಂಕಗಳಿಂದ 21ನೇ ಸ್ಥಾನ ಪಡೆದಿದೆ. ಅದೇ ರೀತಿ ಬಳ್ಳಾರಿ 24ನೇ ಸ್ಥಾನ, ಕೊಪ್ಪಳ 25ನೇ ಸ್ಥಾನ, ಬೀದರ 28ನೇ ಸ್ಥಾನ, ಯಾದಗಿರಿ 31ನೇ ಸ್ಥಾನ ಹಾಗೂ ಕಲಬುರಗಿ 35ನೇ ಕೊನೆ ಸ್ಥಾನ ಪಡೆದಿದೆ.

> **ಎಸ್ಸೆಸ್ಸೆಲ್ಸಿ ಫಲಿತಾಂಶ 3ನೇ ವರ್ಷವೂ ಕೊನೆಯ ಸ್ಥಾನದಲ್ಲಿರುವುದು ಅತ್ಯಂತ ನಾಚಿಕೆಗೇಡಿನ ಸಂಗತಿ. ಶಿಕ್ಷಕರು ತಮ್ಮ ಮಟ್ಟಿಗೆ ಶ್ರಮಪಟ್ಟರೂ, ಜಿಲ್ಲೆಯ ದುರ್ಬಲ ಆಡಳಿತ ಮತ್ತು ನಿರ್ಲಕ್ಷ್ಯವೇ ಈ ದುಸ್ಥಿತಿಗೆ ಪ್ರಮುಖ ಕಾರಣ. ಮಂಡಳಿಯಿಂದ ಭಾಗದ ಶೈಕ್ಷಣಿಕ ಅಭಿವೃದ್ಧಿಗೆ ಅಕ್ಷರ ಆವಿಷ್ಕಾರ ಯೋಜನೆ ಜಾರಿಗೆ ತಂದು 25 ಪ್ರತಿಶತ ಹಣ ಮೀಸಲಿಟ್ಟರು, ಫಲಿತಾಂಶದಲ್ಲಿ ಮತ್ತೆ ಕೊನೆಗೆ ಬಂದಿದ್ದು ನಮ್ಮ ದುರ್ದೈವ.**
>
> ■ **ಡಾ.ಸುಧಾ ಹಾಲಕಾಯಿ,** ವೈದ್ಯರು, ಕಲಬುರಗಿ

ಎಸ್ಸೆಸ್ಸೆಲ್ಸಿ 2026

ಕುಮಟಾದ ದಿಶಾಂತ್ ರಾಜ್ಯಕ್ಕೆ ದ್ವಿತೀಯ

•ಕುಮಟಾ: ರಾಜ್ಯದ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಫಲಿತಾಂಶದಲ್ಲಿ ತಾಲೂಕಿನ ಬಾಡದ ವಿದ್ಯಾರ್ಥಿ ದಿಶಾಂತ್ ನಾಯ್ಕ ಅತ್ಯುತ್ತಮ ಸಾಧನೆ ಮಾಡಿ ರಾಜ್ಯ ಮಟ್ಟದಲ್ಲಿ ದ್ವಿತೀಯ ಸ್ಥಾನ ಪಡೆದಿದ್ದಾರೆ. ತಾಲೂಕು ಹಾಗೂ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದಿದ್ದಾನೆ.

ಕುಮಟಾ ತಾಲೂಕಿನ ಡಾ. ಎ.ವಿ. ಬಾಳಿಗಾ ಶಾಲೆಯ ವಿದ್ಯಾರ್ಥಿಯಾಗಿರುವ ದಿಶಾಂತ್, ಒಟ್ಟು 625 ಅಂಕಗಳಲ್ಲಿ 624 ಅಂಕಗಳನ್ನು ಗಳಿಸಿ ರಾಜ್ಯಮಟ್ಟದಲ್ಲಿ ಎರಡನೇ ಸ್ಥಾನ ಪಡೆದಿದ್ದಾನೆ. ಈ ಮೂಲಕ ತನ್ನ ಶಾಲೆ ಹಾಗೂ ಜಿಲ್ಲೆಗೆ ಕೀರ್ತಿ ತಂದಿದ್ದಾನೆ. ಚೇಷ್ಟಪುರ ಗ್ರಾಮದ ದಯಾನಂದ ನಾಯ್ಕ ಅವರ ಪುತ್ರನಾದ ದಿಶಾಂತ್, ತನ್ನ ಈ ಸಾಧನೆಗೆ ಶಿಕ್ಷಕರು ಹಾಗೂ ಪೋಷಕರ ನಿರಂತರ ಮಾರ್ಗದರ್ಶನ ಮತ್ತು ಪ್ರೋತ್ಸಾಹವೇ ಕಾರಣ ಎಂದು ತಿಳಿಸಿದ್ದಾನೆ. ಇದೇ ವೇಳೆ, ದಿಶಾಂತ್‌ನ ಈ ಸಾಧನೆಗೆ ಶಾಲೆಯ ಶಿಕ್ಷಕರು, ಬಂಧುಬಳಗ ಮತ್ತು ಸ್ಥಳೀಯರು ಅಭಿನಂದನೆ ಸಲ್ಲಿಸಿದ್ದಾರೆ.

ದಿವ್ಯಾ ದೇಸಾಯಿ ರಾಜ್ಯಕ್ಕೆ ಎರಡನೇ ಸ್ಥಾನ

•ಖಾನಾಪುರ: ತಾಲೂಕಿನ ಬೀಡಿ ಗ್ರಾಮದ ಹೋಲಿ ಕ್ರಾಸ್ ಇಂಗ್ಲಿಷ್ ಮೀಡಿಯಂ ಪ್ರೌಢಶಾಲೆಯ ವಿದ್ಯಾರ್ಥಿನಿ ದಿವ್ಯಾ ಪ್ರದೀಪ ದೇಸಾಯಿ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ 625 ಕ್ಕೆ 624 ಅಂಕ ಪಡೆದು ರಾಜ್ಯಕ್ಕೆ ಎರಡನೇ ಸ್ಥಾನ ಗಳಿಸಿದ್ದಾಳೆ. ಈಕೆಯ ತಂದೆ ಪ್ರದೀಪ ಅವರು ಕರ್ನಾಟಕ ಗ್ರಾಮೀಣ ಬ್ಯಾಂಕ್ ನಂದಗಡ ಶಾಖೆಯಲ್ಲಿ ಪಿಗ್ಮಿ ಕಲೆಕ್ಟರ್, ತಾಯಿ ಕಸಬಾ ನಂದಗಡ ಗ್ರಾಮ ಪಂಚಾಯತಿಯ ಮಾಜಿ ಅಧ್ಯಕ್ಷೆ. ಸಾಧಕಿ ವಿದ್ಯಾರ್ಥಿನಿಯನ್ನು ಶಾಸಕ ವಿಠ್ಠಲ ಹಲಗೇಕರ, ಬಿಇಒ ರಾಮಪ್ಪ ಸೇರಿದಂತೆ ಆಕೆಯ ಹೆತ್ತವರು, ಶಿಕ್ಷಕರು ಅಭಿನಂದಿಸಿದ್ದಾರೆ.

> **ಅಂದಿನ ಪಾಠವನ್ನು ಅಂದೇ ಮತ್ತೊಮ್ಮೆ ಓದುವುದು, ಮನನ ಮಾಡಿಕೊಳ್ಳುವುದು ಮತ್ತು ವಾರಾಂತ್ಯದಲ್ಲಿ ಕಳೆದ ವಾರದಲ್ಲಿ ಕಲಿತ ವಿಷಯಗಳನ್ನು ಮತ್ತೊಮ್ಮೆ ಓದಿ-ತಿಳಿದು ಮುಂದಿನ ಪಾಠಕ್ಕೆ ಅಣಿಯಾಗುವುದು. ಅರ್ಥವಾಗದ ಸಂಗತಿಯನ್ನು ಗುರುಗಳ ಬಳಿ ತೆರಳಿ ಮತ್ತೊಮ್ಮೆ ಕೇಳಿ ತಿಳಿಯುವುದು. ಇವು ನನಗೆ ಪರೀಕ್ಷೆಯಲ್ಲಿ ಹೆಚ್ಚಿನ ಅಂಕ ಪಡೆಯಲು ಸಾಧ್ಯವಾದ ಸಂಗತಿಗಳು.**
>
> ■ **ದಿವ್ಯಾ ದೇಸಾಯಿ, ರಾಜ್ಯಕ್ಕೆ ಎರಡನೇ ರ‍್ಯಾಂಕ್ ಪಡೆದ ಸಾಧಕಿ**

ಗಣ್ಯರಿಗೆ ಗೌರವ ಡಾಕ್ಟರೇಟ್ ಪ್ರದಾನ

•ಧಾರವಾಡ: ನಗರದ ಕರ್ನಾಟಕ ವಿಶ್ವವಿದ್ಯಾಲಯದ ಗಾಂಧಿ ಸಭಾಭವನದಲ್ಲಿ ಗುರುವಾರ ನಡೆದ 75ನೇ ಘಟಿಕೋತ್ಸವದಲ್ಲಿ ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ನಾಡಿನ ಮೂವರು ಗಣ್ಯರಿಗೆ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಿದರು.

ಘಟಿಕೋತ್ಸವದಲ್ಲಿ ಶಿಕ್ಷಣ ತಜ್ಞ ಪ್ರೊ. ಅಚ್ಯುತ ಸಾಮಂತ, ಕರ್ನಾಟಕದ ಮುಖ್ಯ ಚುನಾವಣಾ ಆಯುಕ್ತರಾದ ಜಿ.ಎಸ್. ಸಂಗ್ರೇಶಿ, ಹುಬ್ಬಳ್ಳಿಯ ಮಜೇಥಿಯಾ ಫೌಂಡೇಶನ್ ಸ್ಥಾಪಕರಾದ ಜಿತೇಂದ್ರ ಡಿ. ಮಜೆಥಿಯಾ ಅವರಿಗೆ ಗೌರವ ಡಾಕ್ಟರೇಟ್ ಪದವಿ ಪ್ರದಾನಿಸಿದರು.

ಚಾಲಕನ ಮಗಳು ಶಾಲೆಗೆ ಪ್ರಥಮ

•ಅಳ್ನಾವರ: ಸರ್ಕಾರಿ ಶಾಲೆ ಎಂದರೆ ಹಿಂಜರಿಕೆ ಮಾಡುತ್ತಿರುವ ಇಂದಿನ ದಿನದಲ್ಲಿ ತಾಲೂಕಿನಲ್ಲಿರುವ ಎರಡು ಸರ್ಕಾರಿ ಪ್ರೌಡ ಶಾಲೆಗಳು ಪ್ರಸಕ್ತ ಎಸ್.ಎಸ್.ಎಲ್.ಸಿ ಫಲಿತಾಂಶದಲ್ಲಿ ಅತ್ಯುತ್ತಮ ಫಲಿತಾಂಶವನ್ನು ಪಡೆಯುವ ಮೂಲಕ ಗ್ರಾಮೀಣ ಮಕ್ಕಳ ಶೈಕ್ಷಣಿಕ ಪ್ರಗತಿಗೆ ಕಾರಣವಾಗಿವೆ ಎನ್ನುವ ಮಾತುಗಳು ಕೇಳಿಬರುತ್ತಿವೆ.

ಅಳ್ನಾವರ ಪಟ್ಟಣದಲ್ಲಿರುವ ಸರಕಾರಿ ಪ್ರೌಡಶಾಲೆಯ ಫಲಿತಾಂಶ ಶೆ 97 ರಷ್ಟಾಗಿದ್ದರೆ ಬೆಣಚಿ ಗ್ರಾಮದ ಪ್ರೌಡಶಾಲೆಯ ಫಲಿತಾಂಶ ಶೇ 96 ರಷ್ಟಾಗಿದೆ.

ಅಳ್ನಾವರದ ಅಂಕಿತಾ ನಾರಾಯಣ ತಂಬಾಕದವರ ಶೇ 87.44 (609) ಅಂಕಗಳನ್ನು ಪಡೆಯುವ ಮೂಲಕ ಶಾಲೆಯ ಹೆಮ್ಮೆ ಎನಿಸಿದ್ದಾಳೆ. ಇವಳು ಕನ್ನಡದಲ್ಲಿ 125 ಕ್ಕೆ 125 ಮತ್ತು ಹಿಂದಿ ಹಾಗೂ ಸಮಾಜ ವಿಜ್ಞಾನದಲ್ಲಿ ನೂರಕ್ಕೆ ನೂರರಷ್ಟು ಅಂಕ ಪಡೆದು ಪ್ರತಿಭೆಯನ್ನು ಮೆರೆದಿದ್ದಾಳೆ.

ಬಾಲಕಿಯ ತಂದೆ ಖಾಸಗಿ ವಾಹನ ಚಾಲಕರಾಗಿದ್ದು ತಾಯಿ ಕೂಲಿ ಕಾರ್ಮಿಕಳಾಗಿದ್ದು, ಶೈಕ್ಷಣಿಕವಾಗಿ ಹಿಂದಿರುವ ಕುಟುಂಬದಲ್ಲಿ ಬೆಳೆದಿರುವ ಅಂಕಿತಾ ಮನೆಯಲ್ಲಿ ಕಡು ಬಡತನ ನಡುವೆ ಮನೆಯ ಕೆಲಸದಲ್ಲಿ ತಾಯಿಗೆ ನೆರವಾಗುವದರ ಜೊತೆಗೆ ಓದಿನಲ್ಲಿ ಏಕಾಗ್ರತೆ ಸಾಧಿಸಿ ಹೆಚ್ಚಿನ ಅಂಕ ಪಡೆದಿದ್ದಾಳೆ.

ರೈತನ ಮಗಳು ಜಿಲ್ಲೆಗೆ ಪ್ರಥಮ

•ಬಾದಾಮಿ: ಸತತ ನಾಲ್ಕು ಗಂಟೆ ಓದಿ ರೈತನ ಮಗಳು ಈಶ್ವರಿ ಹುಲ್ಲೂರು 625 ಕ್ಕೆ 621 ಅಂಕ ಪಡೆಯುವ ಮೂಲಕ ಉತ್ತಮ ಸಾಧನೆ ಮಾಡಿದ್ದಾಳೆ. ಬಸವಂತಪ್ಪ ಹುಲ್ಲೂರ ಅವರ ಮಗಳು ಈಶ್ವರಿ ಪ್ರಸಕ್ತ ವರ್ಷ ಶ್ರೀ ವೀರಪುಲಿಕೇಶಿ ಸಂಸ್ಥೆಯ ಜಿ.ಎನ್.ಹೋತ ಆಂಗ್ಲ ಮಾಧ್ಯಮ ಪ್ರೌಢಶಾಲೆಗೆ ಪ್ರಥಮ ಸ್ಥಾನ ಪಡೆದು ಕೀರ್ತಿ ತಂದಿದ್ದಾಳೆ. ಸುಮಾರು ಇಪ್ಪತ್ತೈದು ಜನ ಇರುವ ಅವಿಭಕ್ತ ಕುಟುಂಬದಲ್ಲಿ ಸಹೋದರ ಡಿಪ್ಲೋಮಾ ಓದುತ್ತಿದ್ದು, ಈಶ್ವರಿ ಸಹಿತ ವಿಜ್ಞಾನ ವಿಭಾಗದಲ್ಲಿ ಓದಿ ವೈದ್ಯಕೀಯ ಪದವಿ ಮಾಡುವ ಗುರಿ ಹೊಂದಿದ್ದಾಳೆ.

> **ನಾನು ಸತತ ಓದುತ್ತಿದ್ದೆ. ನನಗೆ ಉತ್ತಮ ಅಂಕ ಬರಬೇಕು ಎಂಬ ಗುರಿ ಇಟ್ಟು ಓದಿದ್ದೆ. ನನಗೆ ತುಂಬಾ ಖುಷಿಯಾಗಿದೆ. ವೈದ್ಯಕೀಯ ಪದವಿ ಮಾಡುವ ಗುರಿ ಇದೆ.**
>
> ■ **ಈಶ್ವರಿ ಹುಲ್ಲೂರ, ಜಿಲ್ಲೆಗೆ ಪ್ರಥಮ ಸ್ಥಾನ ಪಡೆದ ವಿದ್ಯಾರ್ಥಿನಿ**

> **ಬಾದಾಮಿ ತಾಲೂಕು ಜಿಲ್ಲೆಗೆ ಪ್ರಥಮ ಸ್ಥಾನ ಪಡೆದಿರುವುದು ಹೆಮ್ಮೆಯ ವಿಷಯ. ನಗರದ ಈಶ್ವರಿ ಹುಲ್ಲೂರ ಸಾಧನೆ ಶ್ಲಾಘನೀಯ.**
>
> ■ **ಭೀಮಸೇನ ಚಿಮ್ಮನಕಟ್ಟಿ, ಶಾಸಕರು**

ಹಿಂಜಜಾ ಸಮಿತಿಯಿಂದ

ಆನ್‌ಲೈನ್ ತರಬೇತಿ ಕಾರ್ಯಾಗಾರ

•ಹುಬ್ಬಳ್ಳಿ: ಇಂದಿನ ಡಿಜಿಟಲ್ ಯುಗದಲ್ಲಿ ಸಾಮಾಜಿಕ ಜಾಲತಾಣಗಳು ಕೇವಲ ಮನೋರಂಜನೆಗೆ ಸೀಮಿತವಾಗದೆ, ಅವು ರಾಷ್ಟ್ರರಕ್ಷಣೆ ಮತ್ತು ಧರ್ಮಜಾಗೃತಿಯ ಪ್ರಬಲ ಶಸ್ತ್ರವಾಗಬೇಕು ಎಂಬ ಉದ್ದೇಶದಿಂದ ಹಿಂದೂ ಜನಜಾಗೃತಿ ಸಮಿತಿಯ ವತಿಯಿಂದ ಯುವಕರಿಗಾಗಿ ರಾಜ್ಯ ಮಟ್ಟದ ಮೂರು ವಿಭಿನ್ನ ಆನ್‌ಲೈನ್ ತರಬೇತಿ ಕಾರ್ಯಾಗಾರಗಳನ್ನು ಆಯೋಜಿಸಲಾಗಿದೆ.

ಯುವಜನತೆ ತಮ್ಮಲ್ಲಿರುವ ತಾಂತ್ರಿಕ ಕೌಶಲ್ಯವನ್ನು ನಮ್ಮ ಉನ್ನತ ಸಂಸ್ಕೃತಿಯ ಪ್ರಸಾರಕ್ಕಾಗಿ ಮತ್ತು ಧರ್ಮದ ಮೇಲಾಗುವ ಆಘಾತಗಳನ್ನು ತಡೆಯಲು 'ಸೋಶಿಯಲ್ ಮೀಡಿಯಾ ವಾರಿಯರ್' ಆಗಿ ಕಾರ್ಯನಿರ್ವಹಿಸುವಂತೆ ಪ್ರೇರೇಪಿಸುವುದು ಈ ಶಿಬಿರಗಳ ಮುಖ್ಯ ಗುರಿಯಾಗಿದೆ.

7 ಅಕ್ಟೋಬರ್ 2002 ರಂದು ಸ್ಥಾಪನೆಯಾದ ಹಿಂದೂ ಜನಜಾಗೃತಿ ಸಮಿತಿಯು ಧರ್ಮ ಶಿಕ್ಷಣ, ಧರ್ಮ ಜಾಗೃತಿ, ಸಂಘಟನೆ, ರಾಷ್ಟ್ರ ಮತ್ತು ಧರ್ಮ ರಕ್ಷಣೆ ಎಂಬ ಪಂಚಸೂತ್ರಗಳ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿದೆ. ದೇವತೆಗಳ ವಿಡಂಬನೆ ತಡೆ, ಲವ್ ಜಿಹಾದ್ ಮತ್ತು ಹಲಾಲ್ ಜಿಹಾದ್‌ನಂತಹ ವಿಷಯಗಳ ಬಗ್ಗೆ ಜಾಗೃತಿ ಮೂಡಿಸುತ್ತಿರುವ ಸಮಿತಿಯು, ರಾಷ್ಟ್ರಧ್ವಜದ ಗೌರವ ಮತ್ತು ಐತಿಹಾಸಿಕ ಕೋಟೆಗಳ ಸಂರಕ್ಷಣೆಗಾಗಿ ನಿರಂತರ ಹೋರಾಡುತ್ತಿದೆ. ಆದ್ದರಿಂದ ಆನ್ ಕಾರ್ಯಾಗಾರಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಆಸ್ತಕರು ಭಾಗವಹಿಸಬೇಕು ಎಂದು ಸಮಿತಿ ಪ್ರಕಟಣೆಗೆ ತಿಳಿಸಿದೆ.

ಸಾಫಲ್ಯ ಮೂವೀಸ್
ಕೆ ಪದ್ಮಕಲಾ ಗುಂಡೂರಾವ್ ಕುಟುಂಬ ಅರ್ಪಿಸುವ.
ಇಂದಿನಿಂದ ಅಮೋಘ ಪ್ರಾರಂಭ
ಕನ್ನಡ ಬೆಳ್ಳಿ ತೆರೆಯ ಇತಿಹಾಸದಲ್ಲಿ ಪ್ರಪ್ರಥಮ ಬಾರಿಗೆ ಮಹಾಸಂತರ ಸಮಾಗಮ
ಶ್ರೀ ಶ್ರೀಪಾದರಾಜರು , ಶ್ರೀ ವ್ಯಾಸರಾಜರು , ಶ್ರೀ ವಾದಿರಾಜರು , ಶ್ರೀ ವೈಕುಂಠದಾಸರು
ಶ್ರೀ ಪುರಂದರದಾಸರು , ಶ್ರೀ ಕನಕದಾಸರು ಮತ್ತು ಕುಮಾರವ್ಯಾಸ , ತಿಮ್ಮಣ್ಣಕವಿ
ಯತಿಶ್ರೇಷ್ಠರ ದಾಸಶ್ರೇಷ್ಠರ ಮಹಿಮೆ, ಕೀರ್ತನೆಗಳ ಸಂಗಮ.
ಶ್ರೀ ಕೃಷ್ಣ ಲೀಲಾ ವಿಲಾಸ ವೈಭವದ ನಾಲ್ಕು ಕೀರ್ತನ ಮಾಲೆಯ ವಿಶೇಷ ಆಕರ್ಷಣೆ
ಸಂಕೀರ್ತನ
ವಿಜಯನಗರ ಸಾಮ್ರಾಜ್ಯ ಸುವರ್ಣ ಯುಗದ ಸಂತ ಸಮಾಗಮ
Sankeerthana
ವಸ್ತ್ರ ವಿನ್ಯಾಸ ಮತ್ತು ಕಲಾ ನಿರ್ದೇಶನ
ಕೆ ಪದ್ಮಕಲಾ ಗುಂಡೂರಾವ್
ನಿರ್ಮಾಪಕರು
ಕೆ. ಪದ್ಮಕಲಾ ಗುಂಡೂರಾವ್ - ಜೆ.ಎಮ್ ಪ್ರಹ್ಲಾದ್
ಡಿ.ಎಸ್ ಮಂಜುನಾಥ - ಹೆಚ್.ವಿಜಯ್‌ಭಾಸ್ಕರ್
ನಿರ್ದೇಶನ
ಡಿ.ಎಸ್. ಮಂಜುನಾಥ್
ಕಥೆ-ಚಿತ್ರಕಥೆ ಸಂಭಾಷಣೆ-ಶೀರ್ಷಿಕೆ ನಿರ್ದೇಶನ
ಜೆ. ಎಂ. ಪ್ರಹ್ಲಾದ್
ಸಂಕಲನ
ಸುರೇಶ್ ಅರಸ್
ಸಂಗೀತ
ಪ್ರವೀಣ್ ಡಿ ರಾವ್
ಛಾಯಾಗ್ರಹಣ
ಮೈಸೂರು ಸಿದ್ದರಾಜು
ಗ್ರಾಫಿಕ್ಸ್ & ಡಿಐ
ಅನಿಲ್ ಕುಮಾರ್
RAK STUDIO
ನಿರ್ಮಾಣ ನಿರ್ವಹಣೆ - ವಿಜಯ್‌ಭಾಸ್ಕರ್ ಹರಪನಹಳ್ಳಿ । 5.1 - ಕೃಷ್ಣನ್‌ಉನ್ನಿ ।
। ಪ್ರಚಾರ - ಪುರುಷೋತ್ತಮ್ ವಿ ಮೈಸೂರು ।
BANGALORE
SHOW TIMINGS & THEATRES
FROM TODAY
① INOX INOX MANTRI SQUARE MALLESHWARAM 7:00 PM
② INOX INOX MANTRI JUNCTION CENTRAL MALL - JPNAGARA 3:25 PM
③ PVR PVR SUPERPLEX FORUM MALL KONANAKUNTE - KANAKAPURA ROAD 6:10 PM
④ GOPALAN CINEMAS LEGACY MALL (SIRSI CIRCLE) 4:00 PM
⑤ MYSURU DRC MALL 4:05 PM
⑥ LAXMI CITY PRIDE - HUBLI 4:00 PM
⑦ INOX INOX CHANDAN BELGAUM 6:40 PM

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ಗೋಕರ್ಣ: ಮಹಾಬಲೇಶ್ವರ ಮಂದಿದರದ ರಥೋತ್ಸವ ಶಂಕರ ಪಂಚಮಿ ದಿನವಾದ ಮಂಗಳವಾರ ಸಂಜೆ ವಿಜೃಂಭಣೆಯಿಂದ ನಡೆಯಿತು.

ಎಸ್ಸೆಸ್ಸೆಲ್ಸಿ ಫಲಿತಾಂಶ: ವಿದ್ಯಾರ್ಥಿಗಳ ಸಾಧನೆ

ಜೊಯಿಡಾ: ತಾಲೂಕಿನ 2025-26 ನೇ ಸಾಲಿನ ಎಸ್ಸೆಸ್ಸೆಲ್ಸಿ ಫಲಿತಾಂಶ ಪ್ರಕಟಗೊಂಡಿದ್ದು, ಒಟ್ಟು 18 ಪ್ರೌಢಶಾಲೆಗಳಿದ್ದು10 ಪ್ರೌಢ ಶಾಲೆಗಳು ಶೇ. 100ರಷ್ಟು ಮತ್ತು ತಾಲೂಕಿನ ಒಟ್ಟು ಫಲಿತಾಂಶ ಶೇ. 94.25ರಷ್ಟು ದಾಖಲಾಗಿದೆ. ತಾಲೂಕಿನ ಕ್ಯಾಸಲರಾಕ್ ಸರ್ಕಾರಿ ಪ್ರೌಢಶಾಲೆ ವಿದ್ಯಾರ್ಥಿನಿ ನಿಧಿ ಶಾಂತಾರಾಮ್ ಮಹೇಕರ 625 ಕ್ಕೆ 611 ಅಂಕ ಪಡೆದು ತಾಲೂಕಿಗೆ ಪ್ರಥಮ , ಹರ್ಷಿತಾ ಲಿಂಗರಾಜ ಓಂಕಾರ್ ಅಣ್ಣನವರ ಕಿತ್ತೂರ ರಾಣಿ ಚೆನ್ನಮ್ಮ ರಾಮನಗರ 625 ಕ್ಕೆ 602 ದ್ವಿತೀಯ, ಜಾನ್ವಿ ನಾರಾಯಣ ಹಣಬರ ಕಿತ್ತೂರ ರಾಣಿ ಚೆನ್ನಮ್ಮ ರಾಮನಗರ 625 ಕ್ಕೆ 598 ಹಾಗೂ ಪ್ರಥ್ವಿರಾಜ ಪ್ರಶಾಂತ್ ದೇಸಾಯಿ ಸರ್ಕಾರಿ ಪ್ರೌಢಶಾಲೆ ಅನಮೋಡ 625 ಕ್ಕೆ 598 ಅಂಕ ಪಡೆದು ಇಬ್ಬರು ತಾಲೂಕಿಗೆ ಮೂರನೇ ಸ್ಥಾನ ಪಡೆದಿದ್ದಾರೆ. ತಾಲೂಕಿನಲ್ಲಿ ಒಟ್ಟು 748 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರು. ಇವರಲ್ಲಿ 705 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ತಾಲೂಕಿನ ಒಟ್ಟು ಫಲಿತಾಂಶ ಶೇ. 94.25ರಷ್ಟು ದಾಖಲಾಗಿದೆ.

ಪ್ರಗತಿ ವಿದ್ಯಾಲಯದ ವಿದ್ಯಾರ್ಥಿಗಳ ಸಾಧನೆ

ಕುಮಟಾ: 2025-26 ನೇ ಸಾಲಿನ ಎಸ್‌ಎಸ್ ಎಲ್‌ಸಿ ವಾರ್ಷಿಕ ಪರೀಕ್ಷೆಯಲ್ಲಿ ಪ್ರಗತಿ ವಿದ್ಯಾಲಯ ಆಂಗ್ಲ ಮಾಧ್ಯಮ ಪ್ರೌಢಶಾಲೆಯ ವಿದ್ಯಾರ್ಥಿಗಳು ಅತ್ಯಮೋಘ ಸಾಧನೆ ಮಾಡಿದ್ದಾರೆ. ಶಾಲೆಯು ಸತತ 15 ವರ್ಷಗಳಿಂದ ಶೇ.100ರಷ್ಟು ಫಲಿತಾಂಶವನ್ನು ಸಾಧಿಸುವುದರೊಂದಿಗೆ ಮಹತ್ವದ ಸಾಧನೆಗೈದಿದೆ.ಚೇತನ್ ಸತೀಶ್ ನಾಯ್ಕ 625 ಕ್ಕೆ 618 ಅಂಕ ಪಡೆದು ರಾಜ್ಯಕ್ಕೆ 8 ನೇ ರ‍್ಯಾಂಕ್ ಹಾಗೂ ಹಾಗೂ ತಾಲೂಕಿಗೆ ಮೂರನೇ ರ‍್ಯಾಂಕ್ ಪಡೆದಿದ್ದಾನೆ. ಪ್ರಣವ್. ಎಸ್. ಹೆಗಡೆ 625 ಕ್ಕೆ 616 ಅಂಕ ಪಡೆದು 10 ನೇ ರ‍್ಯಾಂಕ್ ಪಡೆದುಕೊಂಡಿದ್ದಾರೆ. ವೈಷ್ಣವಿ ಕೇಶವ್. ಅಂಬಿಗ 625ಕ್ಕೆ 615 ಅಂಕ, ಪರೀಕ್ಷೆಗೆ ಕುಳಿತಿರುವ 60 ವಿದ್ಯಾರ್ಥಿಗಳಲ್ಲಿ 12 ವಿದ್ಯಾರ್ಥಿಗಳು ಪ್ರತಿಶತ 95 ಕ್ಕಿಂತ ಹೆಚ್ಚು, 25 ವಿದ್ಯಾರ್ಥಿಗಳು ಪ್ರತಿಶತ 90 ಕ್ಕಿಂತ ಹೆಚ್ಚು , 35 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್ ಹಾಗೂ 58 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ತೇರ್ಗಡೆ ಹೊಂದಿ, ಶಾಲೆಯು 'ಎ' ಗ್ರೇಡ್ ಸ್ಥಾನ ಪಡೆದಿರುತ್ತದೆ.ಸಾಧನೆಗೈದ ವಿದ್ಯಾರ್ಥಿಗಳಿಗೆ ಸಂಸ್ಥೆಯ ಕಾರ್ಯಾಧ್ಯಕ್ಷ ಆರ್.ಜಿ. ಭಟ್ಟ ಹಾಗೂ ಸದಸ್ಯರು, ಪ್ರಾಂಶುಪಾಲ ಎಂ.ಜಿ.ಭಟ್ಟ, ಮುಖ್ಯೋಪಾಧ್ಯಾಯ ವಿವೇಕ ಆಚಾರಿ ಹಾಗೂ ಶಿಕ್ಷಕ ವೃಂದ ಅಭಿನಂದಿಸಿದ್ದಾರೆ.

ಎಪಿಎಂಸಿ ಕೃಷಿ ಧಾರಣೆ

ಶಿರಸಿ	ಕನಿಷ್ಠ	ಗರಿಷ್ಠ
ಕಾಳುಮೆಣಸು	60889	69099
ಬಿಳಿಗೋಟು	24199	38309
ಕೆಂಪುಗೋಟು	31211	40500
ಬೆಟ್ಟೆ	41899	53899
ರಾಶಿ	50300	54299
ಚಾಲಿ	44500	48600
ಬಿ.ಕಾಳುಮೆಣಸು	88800	89000
ಯಲ್ಲಾಪುರ	**ಕನಿಷ್ಠ**	**ಗರಿಷ್ಠ**
ಅಪಿ	58399	60119
ರಾಶಿ	48899	56200
ಬೆಟ್ಟೆ	38810	50799
ಕೆಂಪುಗೋಟು	16501	39699
ಬಿಳಿಗೋಟು	16612	40099
ಚಾಲಿ	38415	48501
ಕೋಕಾ	16501	35312
ಕಾಳುಮೆಣಸು	54615	67000

ಯಲ್ಲಾಪುರ : ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ರಾಜ್ಯಕ್ಕೆ ನಾಲ್ಕನೇ ಸ್ಥಾನ ಪಡೆದ ಬೀಸಗೋಡಿನ ಸರಕಾರಿ ಪ್ರೌಢಶಾಲೆ ವಿದ್ಯಾರ್ಥಿನಿ ಸಮೃದ್ಧಿ ಸಣ್ಣಪ್ಪ ಭಾಗವತ್ ಇವರನ್ನು ತಾಲೂಕ ಕ್ಷೇತ್ರ ಶಿಕ್ಷಣಾಧಿಕಾರಿ ರೇಖಾ ನಾಯ್ಕ್, ನೋಡಲ್ ಅಧಿಕಾರಿ ಪ್ರಕಾಶ್ ತಾರಿಕೊಪ್ಪ, ಶಿಕ್ಷಣ ಸಂಯೋಜಕ ಪ್ರಶಾಂತ್ ಜಿಎನ್ ಇವರುಗಳು ವಿದ್ಯಾರ್ಥಿನಿಯ ಮನೆಗೆ ತೆರಳಿ ಅಭಿನಂದಿಸಿ ಸನ್ಮಾನಿಸಿದರು. ಪ್ರೌಢಶಾಲೆ ಬಿಸಗೋಡ್ ಶಾಲೆಯ ಮುಖ್ಯಾಧ್ಯಾಪಕರಾದ ನೂತನ ನಾಯಕ್ ಶಿಕ್ಷಕರಾದ ಶ್ರೀಧರ್ ಹೆಗಡೆ ಸದಾನಂದ ದಬಗಾರ ಹಾಗೂ ರವಿಕುಮಾರ್ ಕೆಎನ್ ಇದ್ದರು.

ಭೂಮಿಯ ರಕ್ಷಣೆ ನಮ್ಮೆಲ್ಲರ ಹೊಣೆ

ಹೊನ್ನಾವರ : ಭೂಮಿ ನಮ್ಮದಲ್ಲ, ಆದರೆ ನಾವು ಭೂಮಿಕೆ ಸಂಬಂದಪಟ್ಟವರು, ಭೂಮಿ ಇದ್ದರೆ ಮಾತ್ರ ನಾವು ಹಾಗೂ ಸಕಲ ಜೀವಿಗಳು. ಆದ್ದರಿಂದ ಭೂಮಿಯ ರಕ್ಷಣೆ ನಮ್ಮೆಲ್ಲರ ಜವಾಬ್ದಾರಿಯಾಗಬೇಕು ಎಂದು ಹೊನ್ನಾವರ ಹೆಚ್ಚುವರಿ ಸಿವಿಲ್ ಜಡ್ಜ್ ಹಾಗೂ ಜೆ.ಎಮ್. ಎಫ್.ಸಿ ನ್ಯಾಯಾಧೀಶ ಅನಿಲ್ ಜೋನ್ ಸಿಕ್ವೆರಾ ಅಭಿಪ್ರಾಯಪಟ್ಟರು. ಅವರು ತಾಲೂಕಿನ ಕಾಸರಕೋಡನ ಅರಣ್ಯ ಇಲಾಖೆಯ ಕಸೂರಿನಾ ಸಭಾಭವನದಲ್ಲಿ ಬುಧವಾರ ತಾಲೂಕಾ ಕಾನೂನುಸೇವಾ ಸಮಿತಿ ಹೊನ್ನಾವರ, ವಕೀಲರ ಸಂಘ ಹೊನ್ನಾವರ, ಅರಣ್ಯ ಇಲಾಖೆ ಹೊನ್ನಾವರ ಹಾಗೂ ಅಭಿಯೋಜನೆ ಇಲಾಖೆ ಹೊನ್ನಾವರ ಇವರ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ವಿಶ್ವ ಭೂ ದಿನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಭೂಮಿಯಿಂದ ಎಲ್ಲವನ್ನು ಪಡೆದ ನಾವು ಭೂಮಿಯ ಕುರಿತು ತಾಳುವ ನಿರ್ಲಕ್ಷ್ಯ, ಉದಾಸೀನತೆ ಮುಂದಿನ ಪೀಳಿಗೆಗೆ ಮಾರಕವಾಗಿ ಕಾಡುತ್ತದೆ. ಆದ್ದರಿಂದ ಭೂಮಿಯ ರಕ್ಷಣೆಗೆ ಶುದ್ದ ಪರಿಸರಕ್ಕೆ ನಾವೆಲ್ಲರೂ ಒಟ್ಟಾಗಿ ದುಡಿಯೋಣ ಎಂದರು. ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಲೋಹಿತ ಜಿ. ಅಧ್ಯಕ್ಷತೆವಹಿಸಿ ಮಾತನಾಡಿದರು.ವಕೀಲರ ಸಂಘದ ಅಧ್ಯಕ್ಷ ವಿ.ಎಮ್.ಭಂಡಾರಿ, ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ ವಿಕ್ರಮ ನಾಯ್ಕ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದರು. ಉಪ ವಲಯ ಅರಣ್ಯಾಧಿಕಾರಿ ವಿನಾಯಕ ಕಡೆಕರ ಸ್ವಾಗತಿಸಿದರು. ಉಪ ವಲಯ ಅರಣ್ಯಾಧಿಕಾರಿ ಸುಬ್ರಹ್ಮಣ್ಯ ಗೌಡ ಕಾಯಕ್ರಮ ನಿರೂಪಿಸಿ ವಂದಿಸಿದರು. ವಲಯ ಅರಣ್ಯಾಧಿಕಾರಿ ಸವಿತಾ ದೇವಾಡಿಗ, ವಕೀಲರ ಸಂಘದ ಕಾರ್ಯದರ್ಶಿ ಉದಯ ಬಿ.ನಾಯ್ಕ ಚಿತ್ತಾರ ಉಪಸ್ಥಿತರಿದ್ದರು.

ಕುಮಟಾ: ಪಟ್ಟಣದ ನಾಮಧಾರಿ ಸಭಾಭವನದ ಆವರಣದಲ್ಲಿರುವ ವೆಂಕಟೇಶ್ವರ, ಶ್ರೀದೇವಿ ಮತ್ತು ಭೂ ದೇವಿ ದೇವರುಗಳ ವರ್ಧಂತಿ ಉತ್ಸವ ವಿಜೃಂಭಣೆಯಿಂದ ಸಂಪನ್ನಗೊಂಡಿತು.

ಎಸ್ಸೆಸ್ಸೆಲ್ಸಿಯಲ್ಲಿ ದಾಖಲೆಯ ಫಲಿತಾಂಶ

ಉ.ಕ ರಾಜ್ಯಕ್ಕೆ ಮೂರನೇ , ಶಿರಸಿ 6ನೇ ಸ್ಥಾನಕ್ಕೆ

ಕಾರವಾರ /ಶಿರಸಿ : ಉತ್ತರಕನ್ನಡ ಶೈಕ್ಷಣಿಕ ಜಿಲ್ಲೆಯು ಎಸ್ಸೆಸ್ಸೆಲ್ಸಿ ಫಲಿತಾಂಶ ಶೇ. 98.09 ದೊಂದಿಗೆ ರಾಜ್ಯದಲ್ಲಿ 3ನೇ ಸ್ಥಾನ ದಾಖಲಿಸಿದೆ.

ಶಿರಸಿ ಶೈಕ್ಷಣಿಕ ಜಿಲ್ಲೆಯು ಶೇ.97.21 ಫಲಿತಾಂಶದೊಂದಿಗೆ ಆರನೇ ಸ್ಥಾನದಲ್ಲಿದೆ. ಕಳೆದ ಬಾರಿ ಉ.ಕ ಜಿಲ್ಲೆಯು ಶೇ.90.08 ಫಲಿತಾಂಶ ದಾಖಲಿಸಿದರೆ, ಶಿರಸಿ ಜಿಲ್ಲೆ ಶೇ.86.96 ಫಲಿತಾಂಶ ಪಡೆದಿತ್ತು.

ಉ.ಕ ಜಿಲ್ಲೆಯಲ್ಲಿ 199 ಪ್ರೌಢಶಾಲೆಗಳಿದ್ದು 134 ಪ್ರೌಢಶಾಲೆಗಳು ಶೇ. 100 ರಷ್ಟು ಫಲಿತಾಂಶ ಪಡೆದಿದ್ದು, ಅದರಲ್ಲಿ47 ಸರ್ಕಾರಿ ಪ್ರೌಢಶಾಲೆ, 39ಅನುದಾನಿತ ಪ್ರೌಢಶಾಲೆಗಳು ಹಾಗೂ 48ಅನುದಾನ ರಹಿತ ಪ್ರೌಢಶಾಲೆಗಳು ಶೇ. 100 ಫಲಿತಾಂಶ ಪಡೆದಿವೆ.

ಜಿಲ್ಲೆಯ 25 ವಿದ್ಯಾರ್ಥಿಗಳು ರಾಜ್ಯದ 2 ರಿಂದ 10ನೇ ರ‍್ಯಾಂಕ್ ಪಡೆದಿರುವುದು ವಿಶೇಷ.

ಜಿಲ್ಲೆಯ 1 ರಿಂದ 10ನೇ ರ‍್ಯಾಂಕಗಳಲ್ಲಿ 49 ವಿದ್ಯಾರ್ಥಿಗಳು ಸ್ಥಾನ ಪಡೆದಿದ್ದಾರೆ. ಜಿಲ್ಲೆಯಲ್ಲಿ ಹೊನ್ನಾವರ ತಾಲೂಕು ಶೇ. 99.08 ಫಲಿತಾಂಶದೊಂದಿಗೆ ಮೊದಲ ಸ್ಥಾನ ಪಡೆದರೆ, ಭಟ್ಕಳ ಶೇ. 98.63 ಫಲಿತಾಂಶದೊಂದಿಗೆ ದ್ವಿತೀಯ ಸ್ಥಾನ, ಅಂಕೋಲಾ ಶೇ. 97.78 ಫಲಿತಾಂಶದೊಂದಿಗೆ ತೃತೀಯ ಸ್ಥಾನ, ಕುಮಟಾ ಶೇ.97.65 ಫಲಿತಾಂಶದೊಂದಿಗೆ ನಾಲ್ಕನೇ ಸ್ಥಾನ, ಹಾಗೂ ಕಾರವಾರ ತಾಲೂಕು ಶೇ. 97.25 ಫಲಿತಾಂಶದೊಂದಿಗೆ ಐದನೇ ಸ್ಥಾನದಲ್ಲಿದೆ.

ಗ್ರಾಮೀಣ ಮೇಲುಗೈ : ಉ.ಕ ಜಿಲ್ಲೆಯಲ್ಲಿ ಈ ಬಾರಿ ನಗರ ಪ್ರದೇಶಕ್ಕಿಂತ ಗ್ರಾಮೀಣ ವಿದ್ಯಾರ್ಥಿಗಳೇ ಮೇಲುಗೈ ಸಾಧಿಸಿದ್ದಾರೆ.

ಸಾಂದರ್ಭಿಕ ಚಿತ್ರ

ನಗರ ಪ್ರದೇಶದಲ್ಲಿ ಶೇ.97.40 ಫಲಿತಾಂಶ ದಾಖಲಾದರೆ, ಗ್ರಾಮೀಣ ಪ್ರದೇಶದ ಫಲಿತಾಂಶ ಶೇ.98.50 ಆಗಿದೆ.

ಅದೇ ರೀತಿ ವಿದ್ಯಾರ್ಥಿಗಳಿಗಿಂತ ವಿದ್ಯಾರ್ಥಿನಿಯರೇ ಮೇಲುಗೈ ಸಾಧಿಸಿದ್ದಾರೆ. ವಿದ್ಯಾರ್ಥಿಗಳು ಶೇ.97.40 ಫಲಿತಾಂಶ, ವಿದ್ಯಾರ್ಥಿನಿಯರು ಶೇ.98.50 ಫಲಿತಾಂಶ ಪಡೆದಿದ್ದಾರೆ.

ಶಿರಸಿ ಆರನೇ ಸ್ಥಾನಕ್ಕೆ : ಶಿರಸಿ ಶೈಕ್ಷಣಿಕ ಜಿಲ್ಲೆಯು 97.21 ರಷ್ಟು ದಾಖಲಾಗುವ ಮೂಲಕ ರಾಜ್ಯಮಟ್ಟದಲ್ಲಿ 6ನೇ ಸ್ಥಾನವನ್ನು ಅಲಂಕರಿಸಿದೆ. ಪರೀಕ್ಷೆಗೆ ಹಾಜರಾಗಿದ್ದ ಒಟ್ಟು 9,145 ವಿದ್ಯಾರ್ಥಿಗಳ ಪೈಕಿ 8,884 ವಿದ್ಯಾರ್ಥಿಗಳು ಯಶಸ್ವಿಯಾಗಿ ಉತ್ತೀರ್ಣರಾಗಿದ್ದು, ಕೇವಲ 261 ವಿದ್ಯಾರ್ಥಿಗಳು ಅನುತ್ತೀರ್ಣರಾಗಿದ್ದಾರೆ. ಜಿಲ್ಲೆಯ ಒಟ್ಟು 182 ಪ್ರೌಢಶಾಲೆಗಳಲ್ಲಿ 105 ಶಾಲೆಗಳು ನೂರಕ್ಕೆ ನೂರು ಫಲಿತಾಂಶ ದಾಖಲಿಸಿವೆ.

ವೈಯಕ್ತಿಕ ಸಾಧನೆಯಲ್ಲಿ ಶಿರಸಿಯ ಮಾರಿಕಾಂಬಾ ಪ್ರೌಢಶಾಲೆಯ ವಿದ್ಯಾರ್ಥಿನಿ ಲಿತಿಕಾ ನಾಗೇಶ ಮೊಗೇರ 623 ಅಂಕಗಳನ್ನು ಪಡೆಯುವ ಮೂಲಕ ರಾಜ್ಯಕ್ಕೆ ತೃತೀಯ ಹಾಗೂ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದು ಸಾಧನೆ ಮಾಡಿದ್ದಾಳೆ. ಯಲ್ಲಾಪುರದ ಬಿಸಗೋಡ ಸರ್ಕಾರಿ ಪ್ರೌಢಶಾಲೆಯ ಸಮೃದ್ಧಿ ಸಣ್ಣಪ್ಪ ಭಾಗ್ವತ ಹಾಗೂ ಸಿದ್ದಾಪುರದ ಪ್ರಶಾಂತಿ ಇಂಗ್ಲಿಷ್ ಪ್ರೌಢಶಾಲೆಯ ರಜತ ವಿನಾಯಕ ಶೇಟ್ ತಲಾ 622 ಅಂಕಗಳನ್ನು ಗಳಿಸಿ ರಾಜ್ಯಕ್ಕೆ 4ನೇ ಹಾಗೂ ಜಿಲ್ಲೆಗೆ ದ್ವಿತೀಯ ಸ್ಥಾನ ಹಂಚಿಕೊಂಡಿದ್ದಾರೆ. ಹಾಗೆಯೇ, 621 ಅಂಕಗಳನ್ನು ಪಡೆದ ಶಿರಸಿ ಅವೆಮರಿಯಾ ಪ್ರೌಢಶಾಲೆಯ ಪ್ರಥಮ ವಿಷ್ಣು ನಿಲೇಕಣಿ, ಲಯನ್ಸ್ ಪ್ರೌಢಶಾಲೆಯ ಅದಿತಿ ಅನಿಲ ನಾಯ್ಕ ಮತ್ತು ಚಂದನ ಆಂಗ್ಲ ಮಾಧ್ಯಮ ಪ್ರೌಢಶಾಲೆಯ ಸಾತ್ವಿಕ ಪೂಜಾರಿ ರಾಜ್ಯ ಮಟ್ಟದಲ್ಲಿ 5ನೇ ಹಾಗೂ ಜಿಲ್ಲಾ ಮಟ್ಟದಲ್ಲಿ 3ನೇ ಸ್ಥಾನವನ್ನು ತಮ್ಮದಾಗಿಸಿಕೊಂಡಿದ್ದಾರೆ.

ತಾಲೂಕುವಾರು ಸಿದ್ದಾಪುರ ತಾಲೂಕು ಶೇ. 99.74 ರಷ್ಟು ಫಲಿತಾಂಶ ದಾಖಲಿಸಿ ಅಗ್ರಸ್ಥಾನ ಪಡೆದಿದೆ. ಶಿರಸಿ ತಾಲೂಕು ಶೇ. 98.09 ಫಲಿತಾಂಶದೊಂದಿಗೆ ದ್ವಿತೀಯ ಸ್ಥಾನ ಗಳಿಸಿದೆ. ಶೇ. 97.62 ಫಲಿತಾಂಶ ಪಡೆದ ಯಲ್ಲಾಪುರ ತಾಲೂಕು ತೃತೀಯ ಸ್ಥಾನದಲ್ಲಿದ್ದು, ಮುಂಡಗೋಡ ತಾಲೂಕು ಶೇ. 96 ರಷ್ಟು ಫಲಿತಾಂಶದೊಂದಿಗೆ ನಾಲ್ಕನೇ ಸ್ಥಾನದಲ್ಲಿದೆ. ಹಳಿಯಾಳ ತಾಲೂಕು ಶೇ. 95.44 ರಷ್ಟು ಫಲಿತಾಂಶದೊಂದಿಗೆ ಐದನೆಯ, ಜೊಯ್ಡಾ ತಾಲೂಕು ಶೇ.94.38 ರಷ್ಟು ಫಲಿತಾಂಶದೊಂದಿಗೆ ಆರನೇ ಸ್ಥಾನದಲ್ಲಿವೆ.

ಸಾಹಿತ್ಯ ಸಮ್ಮೇಳನಕ್ಕೆ ಚಾಲನೆ ನೀಡಿದ ಶಾಸಕ ಹೆಬ್ಬಾರ

ಮುಂಡಗೋಡ: ವಿಶೇಷವಾಗಿ ಸಮಾಜ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡ ಡಾ.ಪಿ.ಪಿ.ಛಬ್ಬಿ ಅವರನ್ನು ಸಮ್ಮೇಳನದ ಅಧ್ಯಕ್ಷರನ್ನಾಗಿ ಮಾಡಿರುವುದು ಇಡೀ ಕನ್ನಡ ಸಾರಸ್ವತ ಲೋಕಕ್ಕೆ ಮತ್ತು ಸಾಹಿತ್ಯ ಸಮ್ಮೇಳನಕ್ಕೆ ಶೋಭೆ ತಂದಿದೆ ಎಂದು ಶಾಸಕ ಶಿವರಾಮ ಹೆಬ್ಬಾರ ಹೇಳಿದರು.

ಪಟ್ಟಣದ ಪರಿವೀಕ್ಷಣಾ ಮಂದಿರದಿಂದಹೊರಟಮುಂಡಗೋಡ ತಾಲೂಕು 8ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸಮ್ಮೇಳನಾಧ್ಯಕ್ಷರ ಮೆರವಣಿಗೆಗೆ ಗುರುವಾರ ಚಾಲನೆ ನೀಡಿ ಅವರು ಮಾತನಾಡಿದರು. ನಾವೆಲ್ಲರೂ ಸೇರಿ ಮುಂಡಗೋಡ ತಾಲೂಕಿನ 8ನೇ ಕನ್ನಡ ಸಾಹಿತ್ಯ ಸಮ್ಮೇಳನದ ಉದ್ಘಾಟನೆಯನ್ನು ಬಹಳ ಸಂತೋಷದಿಂದ ಮಾಡಿದ್ದೇವೆ. ನಿಜವಾಗಿಯೂ ಕನ್ನಡ ಭಾಷೆಯ ಉಳಿವಿಗಾಗಿ, ಕನ್ನಡದ ನೆಲ, ಜಲಕ್ಕಾಗಿ ಅಧ್ಯಕ್ಷರ ಆಯ್ಕೆಯಾಗಿದೆ. ನಿಕಟಪೂರ್ವ ಸಮ್ಮೇಳನದ ಅಧ್ಯಕ್ಷರಾಗಿ ಶೈಕ್ಷಣಿಕ ರಂಗದ ಎಸ್.ಫಕ್ಕೀರಪ್ಪ ಇದ್ದರು. ಇವತ್ತು ಸಾಮಾಜಿಕವಾಗಿ, ದುರ್ಬಲರ ದನಿಯಾಗಿ ಅನೇಕರ ಬದುಕಿಗೆ ರಕ್ಷಕರಾಗಿ ಇರುವ ಡಾ.ಛಬ್ಬಿ ಅವರನ್ನು ಆಯ್ಕೆ ಮಾಡುವ ಮೂಲಕ ನಮ್ಮ ತಾಲೂಕಿಗೆ ಹೊಸ ಶೋಭೆ ಬಂದಿದೆ. ಜಿಲ್ಲಾ ಘಟಕದ ಅಧ್ಯಕ್ಷ ಬಿ.ಎನ್.ವಾಸರೆ ಅವರ ನೇತೃತ್ವದಲ್ಲಿ ಹಲವು ವರ್ಷಗಳಿಂದ ರಾಜ್ಯ, ಜಿಲ್ಲಾ ಮತ್ತು ತಾಲೂಕು ಮಟ್ಟದ ಅನೇಕ ಸಾಹಿತ್ಯ ಸಮ್ಮೇಳನಗಳಲ್ಲಿ ಭಾಗಿಯಾಗಿದ್ದೇವೆ. ಕನ್ನಡ ತಾಯಿಯ ರಕ್ಷಣೆ ಎಲ್ಲರ ಹೊಣೆ ಎಂದರು. ಈ ವೇಳೆ ಸಮ್ಮೇಳನಾಧ್ಯಕ್ಷ ಡಾ.ಪಿ.ಪಿ.ಛಬ್ಬಿ, ಸರೋಜಾ ಛಬ್ಬಿ, ಮಾಜಿ ಶಾಸಕ ವಿ.ಎಸ್ .ಪಾಟೀಲ, ಜಿ.ಪಂ.ಮಾಜಿ ಸದಸ್ಯ ಎಲ್.ಟಿ.ಪಾಟೀಲ,ಕಸಾಪ ತಾಲೂಕು ಘಟಕದ ಅಧ್ಯಕ್ಷ ವಸಂತ ಕೊಣಸಾಲಿ, ಎಸ್.ಡಿ.ಮುಡೆಣ್ಣವರ,ವಿನಾಯಕ ಶೇಟ್ ಇದ್ದರು.

ಶೇ.98.48ರಷ್ಟು ಫಲಿತಾಂಶ ದಾಖಲು

ಅಂಕೋಲಾ: ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ತಾಲೂಕು ಉತ್ತಮ ಫಲಿತಾಂಶ ಪಡೆದಿದ್ದು ಶೇ.98.48 ರಷ್ಟು ಫಲಿತಾಂಶ ದಾಖಲಿಸಿದೆ.

ತಾಲೂಕಿನಲ್ಲಿ ಪರೀಕ್ಷೆಗೆ ಕುಳಿತಿದ್ದ 519 ಹುಡುಗರು ಮತ್ತು 601 ಹುಡುಗಿಯರು ಸೇರಿದಂತೆ ಒಟ್ಟು 1120 ವಿದ್ಯಾರ್ಥಿಗಳಲ್ಲಿ 502 ಹುಡುಗರು ಮತ್ತು 601 ಹುಡುಗಿಯರು ಸೇರಿ ಒಟ್ಟು 1103 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, ತಾಲೂಕಿನಲ್ಲಿ ಪರೀಕ್ಷೆಗೆ ಕುಳಿತ ಎಲ್ಲಾ ಹೆಣ್ಣು ಮಕ್ಕಳು ಉತ್ತೀರ್ಣರಾಗುವ ಮೂಲಕ ಮೇಲುಗೈ ಸಾಧಿಸಿದ್ದಾರೆ.

ಜೈಹಿಂದ್ ಆಂಗ್ಲ ಮಾಧ್ಯಮ ಶಾಲೆಯ ನಂದೀಶ ರಾಜು ನಾಯ್ಕ 615 ಅಂಕಗಳನ್ನು ಪಡೆದು ತಾಲೂಕಿಗೆ ಪ್ರಥಮ ಸ್ಥಾನ ಪಡೆದಿದ್ದು 614 ಅಂಕಗಳನ್ನು ಪಡೆದ ಜೈಹಿಂದ್ ಆಂಗ್ಲ ಮಾಧ್ಯಮ ಶಾಲೆಯ ಪುರುಷೋತ್ತಮ ವಿನಾಯಕ ಭಟ್ಟ ತಾಲೂಕಿಗೆ ದ್ವಿತೀಯ ಸ್ಥಾನ ಪಡೆದುಕೊಂಡಿದ್ದಾನೆ.ಟಿ

ಪಿ.ಎಂ.ಆಂಗ್ಲ ಮಾಧ್ಯಮ ಶಾಲೆಯ ರವೀಶ ನಿತೇಶ ನಾಯ್ಕ 613 ಅಂಕಗಳನ್ನು ಪಡೆದು ತಾಲೂಕಿಗೆ ತೃತೀಯ ಸ್ಥಾನ ಪಡೆದುಕೊಂಡಿದ್ದಾರೆ.ಜೆ.ಸಿ.ಆಂಗ್ಲ ಮಾಧ್ಯಮ ಶಾಲೆಯ ಸಮೃದ್ಧಿ ಮಧುಕರ ನಾಯ್ಕ 612,

ನಿರ್ಮಲ ಹೃದಯ ಪ್ರೌಢ ಶಾಲೆಯ ಅವನಿ ಬೀರಣ್ಣ ನಾಯಕ 610 ಮತ್ತು ಸ್ವೀಕಾರ ಅರುಣ ನಾಯ್ಕ 610, ಪಿ.ಎಂ. ಆಂಗ್ಲ ಮಾಧ್ಯಮ ಶಾಲೆಯ ಕಿಶನ ನಾಗೇಶ ನಾಯ್ಕ 609, ನಿರ್ಮಲ ಹೃದಯ ಪ್ರೌಢ ಶಾಲೆಯ ಬಶೀರ ಮೈನುದ್ದೀನ್ ಖಾನ್ 608 ಮತ್ತು ಮೌಲ್ಯ ಮಹೇಶ ನಾಯ್ಕ 607, ಅಗಸೂರು ಕೆ.ಪಿ ಎಸ್ ಶಾಲೆಯ ಶ್ರೇಯಾ ಅಶೋಕ ನಾಯ್ಕ 606 ತಾಲೂಕಿನಲ್ಲಿ ಹೆಚ್ಚು ಅಂಕ ಪಡೆದ 10 ಅಗ್ರ ಶ್ರೇಯಾಂಕಿತ ವಿದ್ಯಾರ್ಥಿಗಳಾಗಿದ್ದಾರೆ.

ತಾಲೂಕಿನ ಹಿಲ್ಲೂರಿನ ಸರ್ಕಾರಿ ಪ್ರೌಢ ಶಾಲೆ 100 ಪ್ರತಿಶತ ಫಲಿತಾಂಶ ದಾಖಲಿಸಿದೆ.

ತಾಲೂಕಿನ ವಿದ್ಯಾರ್ಥಿಗಳ ಎಸ್ಸೆಸ್ಸೆಲ್ಸಿ ಪರೀಕ್ಷೆಯ ಸಾಧನೆಗೆ ಕಾರವಾರ ಅಂಕೋಲಾಶಾಸಕ ಸತೀಶ ಸೈಲ್, ಕ್ಷೇತ್ರ ಶಿಕ್ಷಣಾಧಿಕಾರಿ ಮಂಗಳಲಕ್ಷ್ಮೀ ಪಾಟೀಲ್ ಅಭಿನಂಧನೆ ಸಲ್ಲಿಸಿದ್ದಾರೆ.

ಸುಲಕ್ಷಾ ನಾಯ್ಕಗೆ ಐದು ಚಿನ್ನದ ಪದಕ

ಅಂಕೋಲಾ: ತಾಲೂಕಿನ ಕೆ.ಎಲ್.ಇ ಶೇಷಗಿರಿ ಪಿಕಳೆ ಶಿಕ್ಷಣ ಮಹಾವಿದ್ಯಾಲಯದ ವಿದ್ಯಾರ್ಥಿನಿ ಸುಲಕ್ಷಾ ಸಂತೋಷ ನಾಯ್ಕ ಬಿ.ಇಡಿ ಪರೀಕ್ಷೆಯಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡಕ್ಕೆ ಐದು ಚಿನ್ನದ ಪದಕಗಳೊಂದಿಗೆ ಪ್ರಥಮ ಸ್ಥಾನಿಯಾಗಿದ್ದು, ಕರ್ನಾಟಕ ವಿಶ್ವವಿದ್ಯಾಲಯದ 75 ನೇ ವಾರ್ಷಿಕ ಘಟಿಕೋತ್ಸವದಲ್ಲಿ

ರಾಜ್ಯಪಾಲ ಥಾವರಚಂದ ಗೆಹ್ಲೋಟ್ ಅವರು ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ.ಸುಧಾಕರ್, ಕುಲಪತಿ ಡಾ.ಎ.ಎಂ.ಖಾನ್ ಅವರ ಉಪಸ್ಥಿತಿಯಲ್ಲಿ ಪದಕ ಪ್ರದಾನ ಮಾಡಿದರು.

ಕೆ.ಎಲ್.ಇ, ಶೇಷಗಿರಿ ಶಿಕ್ಷಣ ಮಹಾವಿದ್ಯಾಲಯದ ವಿದ್ಯಾರ್ಥಿನಿ ದೀಪಾಲಿ ನಾಯಕ ವಿಶ್ವವಿದ್ಯಾಲಯಕ್ಕೆ ದ್ವಿತೀಯ ಸ್ಥಾನ ಹಾಗೂ ಮಹಿಮಾ ಗೌಡ ತೃತೀಯ ಸ್ಥಾನ ಪಡೆದಿದ್ದು ಗೌರವಾನ್ವಿತ ರಾಜ್ಯಪಾಲರಿಂದ ಪ್ರಶಸ್ತಿ ಪ್ರಮಾಣ ಪತ್ರ ಪಡೆದರು.ವಿದ್ಯಾರ್ಥಿನಿಯರ ಸಾಧನೆಗೆ ಕೆ.ಎಲ್.ಇ. ಸಂಸ್ಥೆ ಬೆಳಗಾವಿಯ ಕಾರ್ಯಾಧ್ಯಕ್ಷ ಡಾ. ಅಮಿತ ಕೋರೆ, ಬಿ.ಇಡಿ. ವಿಭಾಗದ ಅಧ್ಯಕ್ಷ ಜಯಾನಂದ ಮುನವಳ್ಳಿ, ಸದಸ್ಯ ಕಾರ್ಯದರ್ಶಿ ಮಹಾದೇವ ಬಳಿಗಾರ, ಸ್ಥಳೀಯ ಸಮೂಹ ಸಂಸ್ಥೆಗಳ ಕಾರ್ಯದರ್ಶಿ ಡಾ.ಡಿ.ಎಲ್. ಭಟ್ಕಳ, ಸದಸ್ಯೆ ಮೀನಲ್ ನಾರ್ವೇಕರ್, ಪ್ರಾಚಾರ್ಯ ಡಾ.ವಿನಾಯಕ ಹೆಗಡೆ ಹಾಗೂ ಬೋಧಕ ಬೋಧಕೇತರ ಸಿಬ್ಬಂದಿ ಹರ್ಷ ವ್ಯಕ್ತಪಡಿಸಿದ್ದಾರೆ. ಐದು ಬಂಗಾರದ ಪದಕಗಳ ಸಾಧನೆಯೊಂದಿಗೆ ವಿಶ್ವವಿದ್ಯಾಲಯಕ್ಕೆ ಪ್ರಥಮ ಸ್ಥಾನ ಪಡೆದ ಸುಲಕ್ಷಾ ಸಂತೋಷ ನಾಯ್ಕ ತಾಲೂಕಿನ ಕುಂಬಾರಕೇರಿಯ ಸಂತೋಷ ಸುರೇಶ ನಾಯ್ಕ ಅವರ ಮಗಳಾಗಿದ್ದಾಳೆ.ಬಡತನದಲ್ಲೆ ಬೆಳೆದ ಪ್ರತಿಭಾವಂತೆಯ ಸಾಧನೆಗೆ ಕುಂಬಾರಕೇರಿ ಸುತ್ತ ಮುತ್ತಲಿನ ಜನತೆ ಹರ್ಷ ವ್ಯಕ್ತಪಡಿಸಿದ್ದಾರೆ.

ಭಟ್ಕಳ ಶೇ. 98.33ರಷ್ಟು ಫಲಿತಾಂಶ ದಾಖಲು

ಭಟ್ಕಳ: 2025-26ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆ ಫಲತಾಂಶ ಪ್ರಕಟಗೊಂಡಿದ್ದು, ಭಟ್ಕಳ ತಾಲೂಕು ಶೇ. 98.63 ರಷ್ಟು ಫಲಿತಾಂಶಗಳಿಸಿ ಜಿಲ್ಲೆಗೆ 2ನೇ ಸ್ಥಾನ ಪಡೆದು ಉತ್ತಮ ಸಾಧನೆ ಮಾಡಿದೆ.

ಪರೀಕ್ಷೆಗೆ ಕುಳಿತ 2040 ವಿದ್ಯಾರ್ಥಿಗಳಲ್ಲಿ 2012 ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದಾರೆ. ಈ ಬಾರಿ ಯೂ ತಾಲೂಕಿನಲ್ಲಿ ಹುಡುಗಿಯರೆ ಮೇಲುಗೈ ಸಾಧಿಸಿದ್ದಾರೆ. ಈ ಬಾರಿ ಅನುದಾನ ರಹಿತ ಶಾಲೆಗಳು ಶೇ. 99.15ರಷ್ಟು ಹಾಗೂ ಸರ್ಕಾರಿ ಅನುದಾನಿತ ಶಾಲೆ ಶೇ.96.44ರಷ್ಟು ಫಲಿತಾಂಶ ದಾಖಲು ಮಾಡಿದರೆ ಅದಕ್ಕಿಂತ ಹೆಚ್ಚಾಗಿ ತಾಲೂಕಿನ ಸರ್ಕಾರಿ ಶಾಲೆಗಳು ಶೇ. 99.52ರಷ್ಟು ಫಲಿತಾಂಶ ದಾಖಲು ಮಾಡಿ ಗಮನ ಸೆಳೆದಿದೆ. ಕಾಯ್ಕಿಣಿ ತೆರ್ನಮಕ್ಕಿಯ ಕರ್ನಾಟಕ ಪಬ್ಲಿಕ್ ಶಾಲೆಯ ವಿದ್ಯಾರ್ಥಿನಿ ಸಾನಿಕಾ ಬೈಲೂರು ಶೇಕಡಾ 99.36 ಅಂಕಗಳಿಸಿ ತಾಲೂಕಿಗೆ ಪ್ರಥಮ, ಆನಂದ ಆಶ್ರಮ ಪ್ರೌಢ ಶಾಲೆಯ ವಿದ್ಯಾರ್ಥಿ ಪ್ರಥಮ ನಾಗರಾಜ ನಾಯ್ಕ ಹಾಗೂ ತೆರ್ನಮಕ್ಕಿಯ ಕರ್ನಾಟಕ ಪಬ್ಲಿಕ್ ಶಾಲೆಯ ವಿದ್ಯಾರ್ಥಿನಿ ವರ್ಷಿತಾ ಶಿವಕುಮಾರ ನಾಯ್ಕ ಇಬ್ಬರೂ ಶೇ. 99.20 ರಷ್ಟು ಅಂಕ ಪಡೆದು ತಾಲೂಕಿಗೆ ದ್ವಿತೀಯ ಸ್ಥಾನ ಪಡೆದುಕೊಂಡಿದ್ದಾರೆ. ಶಿರಾಲಿಯ ಶ್ರೀವಲ್ಲಿ ಪ್ರೌಡಶಾಲೆಯ ವಿದ್ಯಾರ್ಥಿನಿ ವೈಬವಿ ದೇವಾನಂದ ನಾಯಕ ಶೇಕಡಾ 99.04 ಅಂಕಗಳಿಸಿ ತೃತೀಯ ಸ್ಥಾನ, ತೆರ್ನಮಕ್ಕಿಯ ಕರ್ನಾಟಕ ಪಬ್ಲಿಕ್ ಶಾಲೆಯ ವಿದ್ಯಾರ್ಥಿನ ಯೊಗೇಂದ್ರ ವೆಂಕಟೇಶ ನಾಯ್ಕ ಶೇ. 98.88 ರಷ್ಟು ನಾಲ್ಕನೆ ಸ್ಥಾನ ಪಡೆದುಕೊಂಡರೆ, ಹೆಬಳೆಯ ಕಿತ್ತೂರ ರಾಣಿ ಚೆನ್ನಮ್ಮಾ ವಸತಿ ಶಾಲೆಯ ವಿದ್ಯಾರ್ಥಿನಿ ಮೇಘಾ ಮಾದೇವ ಗೊಂಡ ಹಾಗೂ ಪಟ್ಟಣದ ವಿದ್ಯಾಭಾರತಿ ಆಂಗ್ಲ ಮಾದ್ಯಮ ಶಾಲೆಯ ವಿದ್ಯಾರ್ಥಿನಿ ಶ್ರೀರಕ್ಷಾ ಪೈ ಇಬ್ಬರೂ ಶೇ. 98.56ರಷ್ಟು ಅಂಕ ಪಡೆದು ಐದನೇ ಸ್ಥಾನ ಪಡೆದು ಪರೀಕ್ಷೆಯಲ್ಲಿ ಅತ್ಯುತ್ತಮ ಸಾಧನೆ ಮಾಡಿದ್ದಾರೆ. ವಿದ್ಯಾರ್ಥಿಗಳನ್ನು ಕ್ಷೇತ್ರ ಶಿಕ್ಷಣಾಧಿಕಾರಿ ವೆಂಕಟೇಶ ನಾಯಕ ಅಭಿನಂದಿಸಿದ್ದಾರೆ.

ಶ್ರೀಲಕ್ಷ್ಮೀಗೆ 4 ಚಿನ್ನದ ಪದಕ

ಯಲ್ಲಾಪುರ: ತಾಲೂಕಿನ ಮಾಗೋಡದ ಮೇಲಿನಕುಂಭತ್ತಿ ಗ್ರಾಮದ ಶ್ರೀಲಕ್ಷ್ಮೀ ವೆಂಕಟ್ರಮಣ ಹೆಗಡೆ ಕರ್ನಾಟಕ ವಿಶ್ವವಿದ್ಯಾಲಯದ 75ನೇ ವಾರ್ಷಿಕ ಘಟಿಕೋತ್ಸವದಲ್ಲಿ ಎಂ.ಕಾಂ.ನಲ್ಲಿ 4 ಚಿನ್ನದ ಪದಕ ಹಾಗೂ 3 ನಗದು ಬಹುಮಾನ ಪಡೆದಿದ್ದಾಳೆ.

ಗುರುವಾರ ಧಾರವಾಡದಲ್ಲಿ ನಡೆದ ಸಮಾರಂಭದಲ್ಲಿ ರಾಜ್ಯಪಾಲರಾದ ತ್ಯಾವರಚಂದ್ ಗೆಹ್ಲೊಟ ಅವರು ಶ್ರೀಲಕ್ಷ್ಮೀಗೆ ಚಿನ್ನದ ಪದಕ ಪ್ರದಾನ ಮಾಡಿದರು.

ಶ್ರೀಲಕ್ಷ್ಮೀ ಅಪ್ಪಟ ಗ್ರಾಮೀಣ ಪ್ರತಿಭೆಯಾಗಿದ್ದು, ಕೃಷಿಕ ದಂಪತಿಗಳಾದ ಮುಕಾಂಬೆ ಮತ್ತು ವೆಂಕಟ್ರಮಣ ಹೆಗಡೆ ಇವರ ಪುತ್ರಿ. ಇವಳು ತಾಲೂಕಿನ ಕುಗ್ರಾಮವಾದ ಮೊಟ್ಟೆಗದ್ದೆಯ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣ ಪಡೆದು ನಂತರ, ನಂದೊಳ್ಳಿಯ ಸರ್ಕಾರಿ ಪ್ರೌಢಶಾಲೆಯಲ್ಲಿ ಅಧ್ಯಯನ ಮಾಡಿದ್ದು, ಯಲ್ಲಾಪುರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಓದಿದ ಗ್ರಾಮೀಣ ಪ್ರತಿಭೆ. ಕೃಷಿಕನ ಪುತ್ರಿಯು ಇಂದು 4 ಬಂಗಾರದ ಪದಕದ ಒಡತಿ. ಪ್ರತಿಭಾನ್ವಿತಳಾದ ಇವಳ ಈ ಸಾಧನೆಗೆ ಇವಳ ಪೋಷಕರು ಸಂಬಂಧಿಕರು ಹಾಗೂ ಪ್ರಾಧ್ಯಾಪಕರು ಅಭಿನಂದಿಸಿದ್ದಾರೆ.

ಎಸ್ಸೆಸ್ಸೆಲ್ಸಿ ಫಲಿತಾಂಶ: ವಿದ್ಯಾರ್ಥಿಗಳು ಮೇಲುಗೈ

ಹಳಿಯಾಳ: ಶಿರಸಿ ಶೈಕ್ಷಣಿಕ ಜಿಲ್ಲೆಯ ಹಳಿಯಾಳ ತಾಲೂಕಿನ ಎಸ್ಸೆಸ್ಸೆಲ್ಸಿ ಫಲಿತಾಂಶದಲ್ಲಿ ಈ ಬಾರಿಯೂ ವಿದ್ಯಾರ್ಥಿಗಳು ಮೇಲುಗೈ ಸಾಧಿಸಿದ್ದು 96.73% ಫಲಿತಾಂಶದೊಂದಿಗೆ ಮೇಲುಗೈ ಸಾಧಿಸಿದ್ದಾರೆ.

ಹಳಿಯಾಳ ತಾಲೂಕಿನ ಒಟ್ಟೂ ಫಲಿತಾಂಶ ಶೇಕಡಾವಾರು ಶೇ.95.45ರಷ್ಟಾಗಿದ್ದು, ಹಳೆಯ ಫಲಿತಾಂಶಕ್ಕೆ ತಾಳೆ ಮಾಡಿದರೆ ಉತ್ತಮ ಬೆಳವಣಿಗೆಯಾಗಿದೆ.

ಒಟ್ಟೂ 14 ಪ್ರೌಢ ಶಾಲೆಗಳು ಪ್ರತಿಶತ ಶೇ.100ರಷ್ಟು ಫಲಿತಾಂಶ ದಾಖಲಿಸಿವೆ.

ಸೈಂಟ್ ಮೈಕಲ್ ಕಾನ್ವೆಂಟ್ ಇಂಗ್ಲೀಷ್ ಮಾಧ್ಯಮ ಪ್ರೌಢಶಾಲೆಯ ವಿದ್ಯಾರ್ಥಿನಿ ಕುಮಾರಿ ಸಬಾ ರಾಜೇಸಾಬ್ ಕೆಸ್ನೂರ ಹಾಗೂ ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆ ಮದ್ನಳ್ಳಿಯ ಕುಮಾರಿ ಸಂಧ್ಯಾ ಭರಮಣಿ ಬೀಡಕರ 614/625 ಅಂಕ ಪಡೆದು ಶೇ.98.24 ರಷ್ಟು ಪ್ರತಿಶತದೊಂದಿಗೆ ಪ್ರಥಮ ಸ್ಥಾನ ಪಡೆದಿದ್ದು, ದ್ವಿತೀಯ ಸ್ಥಾನವನ್ನು ಎರಡು ವಿದ್ಯಾರ್ಥಿಗಳು ಪಡೆದಿದ್ದು ಸೈಂಟ್ ಮೈಕಲ್ ಕಾನ್ವೆಂಟ್ ಇಂಗ್ಲೀಷ್ ಮಾಧ್ಯಮ ಪ್ರೌಢಶಾಲೆಯ ವಿದ್ಯಾರ್ಥಿ ಪ್ರಣವ ಪ್ರವೀಣ ನಾಯ್ಕ ಹಾಗೂ ಸರಕಾರಿ ಬಾಲಕಿಯರ ಪ್ರೌಢಶಾಲೆ ಹಳಿಯಾಳದ ವಿದ್ಯಾರ್ಥಿನಿ ವಿನಯಾ ರುದ್ರಪ್ಪಾ ಕೇಸರೇಕರ 611/625 ಅಂಕ ಪಡೆದು ಶೇ.97.76 ರಷ್ಟು ದಾಖಲಿಸಿದ್ದಾರೆ. ತೃತೀಯ ಸ್ಥಾನವನ್ನು ಕಾಳಿನದಿ ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟ್ ಪ್ರೌಢಶಾಲೆಯ ವಿದ್ಯಾರ್ಥಿ ಪ್ರಸಾದ ನಾಗರಾಜ ಮಿರಾಶಿ 610/625 ಅಂಕದೊಂದಿಗೆ ಶೇ.97.60ರಷ್ಟು ಅಂಕ ಪಡೆದುಕೊಂಡಿದ್ದಾರೆ. ಕ್ಷೇತ್ರ ಶಿಕ್ಷಣಾಧಿಕಾರಿ ಪ್ರಮೋದ ಮಹಾಲೆ ಹಾಗೂ ಶಿಕ್ಷಕ ಸಂಘದ ಅಧ್ಯಕ್ಷ ವಿದ್ಯಾರ್ಥಿಗಳಿಗೆ ಹಾಗೂ ಶಿಕ್ಷಕರಿಗೆ ಅಭಿನಂದನೆ ಸಲ್ಲಿಸಿದ್ದಾರೆ.

ಶೇ.96.08ರಷ್ಟು ಫಲಿತಾಂಶ

ಮುಂಡಗೋಡ: ಪ್ರಸಕ್ತ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ತಾಲೂಕಿನ ಪ್ರೌಢಶಾಲೆಗಳ ಒಟ್ಟು ಶೇಕಡಾವಾರು ಫಲಿತಾಂಶ ಶೇ. 96.08ರಷ್ಟು ಆಗಿದೆ. ಕಳೆದ ವರ್ಷ ತಾಲೂಕಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯ ಫಲಿತಾಂಶ ಶೇ. 65 ರಷ್ಟು ಆಗಿತ್ತು. ಈ ಬಾರಿ ಶೇ.96ರಷ್ಟು ಫಲಿತಾಂಶ ಮಾಡುವ ಮೂಲಕ ಶಿಕ್ಷಣ ಇಲಾಖೆ ಉತ್ತಮ ಸಾಧನೆ ಮಾಡಿದೆ.ತಾಲೂಕಿನ ಹುನಗುಂದ ಸರಕಾರಿ ಪ್ರೌಢ ಶಾಲೆಯ ವಿದ್ಯಾರ್ಥಿನಿ ಭಾಗ್ಯಲಕ್ಷ್ಮೀ ಬಸವರಾಜ ಬಿಸ್ನಳ್ಳಿ 616 ಅಂಕ ಪಡೆದು ತಾಲೂಕಿಗೆ ಪ್ರಥಮ, ಬ್ಲೂಮಿಂಗ್ ಬಡ್ ಪ್ರೌಡ್ ಶಾಲೆಯ ವಿದ್ಯಾರ್ಥಿ ರಿಷಿಕಾ ರಮೇಶ ಭೋವಿ 607ಅಂಕ ಪಡೆದು ದ್ವಿತೀಯ, ಕರಗಿನಕೊಪ್ಪ ಮುರಾರ್ಜಿ ವಸತಿ ಶಾಲೆಯ ವಿದ್ಯಾರ್ಥಿನಿ ಸಿಂಚನಾ ನಿಂಗಪ್ಪ ಬಾರ್ಕರ 606ಅಂಕ ಪಡೆದು ತೃತೀಯ ಸ್ಥಾನ ಪಡೆದುಕೊಂಡಿದ್ದಾಳೆ.ಈ ವರ್ಷ ತಾಲೂಕಿನಲ್ಲಿ 1149ವಿದ್ಯಾರ್ಥಿಗಳು ಎಸ್ಸೆಸ್ಸೆಲ್ಸಿ ಪರೀಕ್ಷೆ ಬರೆದಿದ್ದು, ಅದರಲ್ಲಿ 1104ವಿದ್ಯಾರ್ಥಿಗಳು ಉತ್ತೀಣರಾಗಿದ್ದಾರೆ.ಈ ಬಾರಿಯೂ ವಿದ್ಯಾರ್ಥಿನಿಯರೆ ಮೇಲಗೈ ಸಾಧಿಸಿದ್ದಾರೆ. ಒಟ್ಟಿನಲ್ಲಿ ವಿದ್ಯಾರ್ಥಿಗಳ ಸಾಧನೆಗೆ ಪಾಲಕರು ಶಾಲಾ ಶಿಕ್ಷಕರು ಹಾಗೂ ಆಡಳಿತ ಸಮಿತಿಯವರು ಅಭಿನಂದಿಸಿದ್ದಾರೆ.

ಬಿಸಗೋಡು ಪ್ರೌಢಶಾಲೆ ವಿದ್ಯಾರ್ಥಿಗಳ ಸಾಧನೆ

ಯಲ್ಲಾಪುರ: ತಾಲೂಕಿನ ಬಿಸಗೋಡು ಸರ್ಕಾರಿ ಪ್ರೌಢಶಾಲೆ ಎಸ್ ಎಸ್‌ಎಲ್ ಸಿ ಪರೀಕ್ಷೆಯಲ್ಲಿ ಸತತ ಮೂರನೇ ವರ್ಷ ನೂರಕ್ಕೆ ನೂರು ಫಲಿತಾಂಶ ಸಾಧಿಸಿ ಹ್ಯಾಟ್ರಿಕ ಸಾಧನೆ ಮಾಡಿದೆ ಸಮೃದ್ಧಿ ಸಣ್ಣಪ್ಪ ಭಾಗವತ್ 622 ಅಂಕ ಪಡೆದು ರಾಜ್ಯಕ್ಕೆ ನಾಲ್ಕನೇ ಹಾಗೂ ತಾಲೂಕಿಗೆ ಪ್ರಥಮ ಸ್ಥಾನ ಗಳಿಸಿದ್ದಾಳೆ. ಮಮತಾ ಗೋಪಾಲಕೃಷ್ಣ ಭಟ್ 612 ಅಂಕ ಪಡೆದು ದ್ವಿತೀಯ ಸ್ಥಾನ ಹಾಗೂ ದೀಕ್ಷಾ ದತ್ತಾತ್ರೇಯ ದೇವಳಿ 592 ಅಂಕ ಪಡೆದು ತೃತೀಯ ಸ್ಥಾನಗಳಿಸಿ ಶಾಲೆಗೆ ಕೀರ್ತಿ ತಂದಿದ್ದಾರೆ. ಅತ್ಯುತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷರು ಪದಾಧಿಕಾರಿಗಳು ಮುಖ್ಯ ಶಿಕ್ಷಕರು ಶಿಕ್ಷಕರು ಹಾಗೂ ಸಿಬ್ಬಂದಿ ಪಾಲಕರು ಅಭಿನಂದಿಸಿದ್ದಾರೆ.

ಕಿರುಸುದ್ದಿ

ಇಂದು ಡಾ.ರಾಜ್ ಕುಮಾರ್ ಜನ್ಮದಿನಾಚರಣೆ

ಹಾವೇರಿ: ಜಿಲ್ಲಾಡಳಿತ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕರ್ನಾಟಕ ಚಲನಚಿತ್ರ ಅಕಾಡೆಮಿ ಸಹಯೋಗದಲ್ಲಿ ವರನಟ ಡಾ.ರಾಜಕುಮಾರ್ ಅವರ 97ನೇ ಜನ್ಮ ದಿನಾಚರಣೆ ಕಾರ್ಯಕ್ರಮ ಏಪ್ರಿಲ್ 24ರಂದು ಬೆಳಗ್ಗೆ 11ಗಂಟೆಗೆ ಹಾವೇರಿ ನಗರದ ಗಾಂಧಿ ಭವನದಲ್ಲಿ ಜರುಗಲಿದೆ. ಕೇಂದ್ರ ಗ್ರಾಹಕರ ವ್ಯವಹಾರಗಳ ಆಹಾರ ಮತ್ತು ಸಾರ್ವಜನಿಕ ವಿತರಣಾ ಹಾಗೂ ಹೊಸ ಮತ್ತು ನವೀಕರಿಸಬಹುದಾದ ಇಂಧನ ಸಚಿವರಾದ ಪ್ರಹ್ಲಾದ ಜೋಶಿ ಹಾಗೂ ವಿಧಾನ ಪರಿಷತ್ ಸಭಾಪತಿಗಳಾದ ಬಸವರಾಜ ಹೊರಟ್ಟಿ ಅವರ ಗೌರವಾನ್ವಿತ ಉಪಸ್ಥಿತಿಯಲ್ಲಿ, ಜವಳಿ, ಕಬ್ಬು ಅಭಿವೃದ್ಧಿ ಸಕ್ಕರೆ ಮತ್ತು ಕೃಷಿ ಮಾರುಕಟ್ಟೆ ಹಾಗೂ ಹಾವೇರಿ ಜಿಲ್ಲಾ ಉಸ್ತುವಾರಿ ಸಚಿವರಾದ ಶಿವಾನಂದ ಪಾಟೀಲ ಅವರು ಉದ್ಘಾಟನೆ ನೆರವೇರಿಸಲಿದ್ದಾರೆ. ಕಾರ್ಯಕ್ರಮದಲ್ಲಿ ಗಣ್ಯರು ಭಾಗವಹಿಸಲಿದ್ದಾರೆ.

ಶೇ.96.72ರಷ್ಟು ಫಲಿತಾಂಶ

ಹಾನಗಲ್ಲ: 2025-26 ನೇ ಸಾಲಿನ ಎಸ್ಸೆಸ್ಸೆಲ್ಸಿ ಫಲಿತಾಂಶ ಪ್ರಕಟವಾಗಿದ್ದು, ತಾಲೂಕಿನಲ್ಲಿ ಈ ಬಾರಿ ಉತ್ತಮ ಫಲಿತಾಂಶ ದೊರೆತಂತಾಗಿದೆ. ಈ ಬಾರಿಯು ಹೆಣ್ಣು ಮಕ್ಕಳೇ ಮೇಲಿಗೈ ಸಾಧಿಸಿದ್ದಾರೆ. ತಾಲೂಕಿನ 14 ಪರೀಕ್ಷಾ ಕೇಂದ್ರದಲ್ಲಿ ಪರೀಕ್ಷೆ ನೆಡೆದಿದ್ದು, ಪರೀಕ್ಷೆಗೆ ಹಾಜರಾದ ಒಟ್ಟು ವಿದ್ಯಾರ್ಥಿಗಳ 3376 ಇದರಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳ 3242 ತಾಲೂಕಿನ ಒಟ್ಟಾರೆ ಫಲಿತಾಂಶ ಶೇ.96.72ರಷ್ಟಾಗಿದೆ. ಪರೀಕ್ಷೆಗೆ ಹಾಜರಾದ ಗಂಡು ಮಕ್ಕಳ 1476 ಇದರಲ್ಲಿ 1410 ಉತ್ತೀರ್ಣರಾಗಿದ್ದಾರೆ. ಹೆಣ್ಣು ಮಕ್ಕಳ ಸಂಖ್ಯೆ 1876 ಆಗಿದ್ದು ಉತ್ತೀಣರಾದ ಹೆಣ್ಣು ಮಕ್ಕಳ ಸಂಖ್ಯೆ 1832 ಆಗಿರುತ್ತದೆ ಹೆಣ್ಣು ಮಕ್ಕಳ ಫಲಿತಾಂಶ ಶೇ. 97.65ರಷ್ಟು ಒಟ್ಟಾರೆ ಹೆಣ್ಣು ಮಕ್ಕಳು ಎಸ್ ಫಲಿತಾಂಶದಲ್ಲಿ ಮೇಲುಗೈ ಸಾಧಿಸಿದ್ದಾರೆ. ಆಕ್ಸಫರ್ಡ ಪ್ರೌಢಶಾಲೆ ಹಾನಗಲ್ಲ ಈ ಶಾಲೆಯ ವಿದ್ಯಾರ್ಥಿನಿಯಾದ ಸಿಂಧೂ ಪವಾರ 621 ಅಂಕ ಪಡೆದು ತಾಲೂಕಿನಲ್ಲಿ ಪ್ರಥಮ ಸ್ಥಾನ, ಪ್ರೀಯಾ ದೊಡ್ಡಶಿವಪ್ಪ ಹರವಿ 618 ಅಂಕಗಳನ್ನು ಪಡೆದು ದ್ವಿತೀಯ ಸ್ಥಾನ, ನಿವೇದಿತಾ. ಎಸ್.ಶಿರೂರ 615 ಅಂಕ ಪಡೆದಿದ್ದು ತೃತೀಯ ಸ್ಥಾನ ಪಡೆದುಕೊಂಡದ್ದಾರೆ.

ಉತ್ತಮ ಸಾಧನೆ

ಸವಣೂರು: 2025-26ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆ-1 ಫಲಿತಾಂಶ ಪ್ರಕಟವಾಗಿದ್ದು, ಸವಣೂರು ತಾಲೂಕಿನ ವಿದ್ಯಾರ್ಥಿಗಳು ಉತ್ತಮ ಸಾಧನೆ ತೋರಿದ್ದಾರೆ. ಸವಣೂರು ತಾಲೂಕಿನಲ್ಲಿ ಒಟ್ಟು 2024 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, 1979 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಒಟ್ಟು ಉತ್ತೀರ್ಣ ಪ್ರಮಾಣ ಶೇ.97.78ರಷ್ಟಾಗಿದ್ದು, ಕಳೆದ ಮೂರು ವರ್ಷಗಳಿಂದ ಹಾವೇರಿ ಜಿಲ್ಲೆಗೆ ದ್ವಿತೀಯ ಸ್ಥಾನ ಪಡೆದು ಜಿಲ್ಲೆಗೆ ಕೀರ್ತಿ ತಂದಿದ್ದಾರೆ.

ಶಾಲಾವಾರು ವಿವರಗಳು : ಸರ್ಕಾರಿ ಶಾಲೆಗಳು 1169ರಲ್ಲಿ 1154 ಉತ್ತೀರ್ಣವಾಗಿದ್ದು ಶೇ.98.17ರಷ್ಟು, ಅನುದಾನಿತ ಶಾಲೆಗಳು 441ರಲ್ಲಿ 431 ಉತ್ತೀರ್ಣಗೊಂಡು ಶೇ.97.73ರಷ್ಟು ಅನುದಾನರಹಿತ ಶಾಲೆಗಳು 414ರಲ್ಲಿ 394 ಉತ್ತೀರ್ಣವಾಗಿದ್ದು ಶೇ.95.16ರಷ್ಟು ಫಲಿತಾಂಶ ದಾಖಲಿಸಿವೆ. ಹಿಂದಿನ ವರ್ಷ (2024-25) ತಾಲೂಕಿನ ಉತ್ತೀರ್ಣ ಪ್ರಮಾಣ ಶೇ.78.34 ಇದ್ದು, ಈ ವರ್ಷ 97.78ಗೆ ಏರಿಕೆಯಾಗಿ ಉತ್ತಮ ಪ್ರಗತಿ ದಾಖಲಿಸಿದೆ.

ನೀರು ಪೂರೈಕೆಯಲ್ಲಿ ವ್ಯತ್ಯಯ

ಬ್ಯಾಡಗಿ: ಪಟ್ಟಣದಲ್ಲಿ ಪ್ರಸ್ತುತ ಬೇಸಿಗೆ ಕಾಲದ ಹಿನ್ನಲೆಯಲ್ಲಿ ಬ್ಯಾಡಗಿ ಪಟ್ಟಣದ ಪುರಸಭೆ ವ್ಯಾಪ್ತಿಯಲ್ಲಿ ನೀರು ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಸಾರ್ವಜನಿಕರು ನೀರನ್ನು ಮಿತವಾಗಿ ಬಳಸಿ ಹಾಗೂ ನೀರು ಸಂಗ್ರಹಿಸಿ ಇಟ್ಟುಕೊಳ್ಳಬೇಕು ಎಂದು ಪುರಸಭೆ ಮುಖ್ಯ ಅಧಿಕಾರಿ ವಿನಯ್ ಕುಮಾರ್ ಹೋಳಿಯಪ್ಪಗೊಳ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ನೀರಿನ ಪೈಪ್ ಲೈನ್ ಗಳಲ್ಲಿ ಹಾಗೂ ನಳಗಳಲ್ಲಿ ನೀರಿನ ಸೋರಿಕೆ ಕಂಡುಬಂದಲ್ಲಿ ತಕ್ಷಣ ಪುರಸಭೆ ಕಾರ್ಯಾಲಯಕ್ಕೆ ತಿಳಿಸಬೇಕು ಎಂದು ಮನವಿ ಮಾಡಿದ್ದಾರೆ.

ವ್ಯಕ್ತಿ ಶವ ಪತ್ತೆ

ಹಾವೇರಿ: ನಗರದ ಕೆರಿಮತ್ತಿಹಳ್ಳಿ ರಸ್ತೆಯಲ್ಲಿ ರಾಜಕಾಲುವೆಯಲ್ಲಿ ಔಡಲ ಗಿಡಕ್ಕೆ ನೇಣು ಬಿಗಿದ ಸ್ಥಿತಿಯಲ್ಲಿ 35ರಿಂದ 40 ವರ್ಷದ ಪುರುಷ ಶವ ಪತ್ತೆಯಾಗಿದ್ದು, ಮೃತ ವ್ಯಕ್ತಿಯ ಕುರಿತು ಯಾವುದೇ ಮಾಹಿತಿ ಲಭ್ಯವಾಗಿರುವುದಿಲ್ಲ. ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ ಎಂದು ಹಾವೇರಿ ಶಹರ ಪೊಲೀಸ್ ಠಾಣೆ ಆರಕ್ಷಕ ನಿರೀಕ್ಷಕರು ತಿಳಿಸಿದ್ದಾರೆ. ಮೃತ ವ್ಯಕ್ತಿಯ 5.2 ಅಡಿ ಎತ್ತರ ಹೊಂದಿದ್ದು, ಶವ ಪೂರ್ತಿ ಕೊಳೆತ ಸ್ಥಿತಿಯಲ್ಲಿ ಪತ್ತೆಯಾಗಿದೆ. ಬಾದಾಮಿ ಬಣ್ಣದ ತುಂಬುತೋಳಿನ ಶರ್ಟ್, ಹಳದಿ ಬಣ್ಣದ ಟೀ ಶರ್ಟ್, ನೀಲಿ ಬನಿಯನ್ ಹಾಗೂ ನೀಲಿ ಬಣ್ಣದ ಶಾರ್ಟ್ಸ್ ಧರಿಸಿದ್ದಾಗಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಾವೇರಿ: ಹಾವೇರಿಯ ಹುತಾತ್ಮ ಮೈಲಾರ ಮಹದೇವಪ್ಪ ವೃತ್ತದಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿಕೆ ಖಂಡಿಸಿ ಬಿಜೆಪಿ ಯುವ ಮೋರ್ಚಾ ಕಾರ್ಯಕರ್ತರು ಖರ್ಗೆ ಭಾವಚಿತ್ರ ಸುಟ್ಟು ಪ್ರತಿಭಟನೆ ನಡೆಸಿದರು.

ಬಸವ ಜಯಂತಿ ಆಚರಣೆ

ಬ್ಯಾಡಗಿ: ಜಗಜ್ಯೋತಿ ಬಸವಣ್ಣನ ಜಾತ್ಯಾತೀತ ನಾಯಕ 12ನೇ ಶತಮಾನದಲ್ಲಿ ಅನುಭವ ಮಂಟಪ ಸ್ಥಾಪನೆ ಮಾಡುವುದರ ಮೂಲಕ ಎಲ್ಲಾ ವರ್ಗಗಳ ಜನರಿಗೆ ಸಮಾನ ಅವಕಾಶ ನೀಡಿದ ಮಹಾನ್ ನಾಯಕ ಬಸವಣ್ಣ ಎಂದು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ತಾಲೂಕ ಅಧ್ಯಕ್ಷ ವಿಶ್ವನಾಥ ಅಂಕಲಕೋಟಿ ಹೇಳಿದರು.

ಪಟ್ಟಣದ ಎಸ್ಎಸ್‌ಪಿ ಎನ್ ಶಾಲೆಯಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ತಾಲೂಕಘಟಕವತಿಯಿಂದ ಜಗಜ್ಯೋತಿ ಬಸವೇಶ್ವರ ಜಯಂತಿಯನ್ನು ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದವರು.

ಬಸವಣ್ಣನವರ ತತ್ವ ಆದರ್ಶಗಳನ್ನು ಪ್ರತಿಯೊಂದು ಸಮಾಜ ಪಾಲನೆ ಮಾಡುವುದರಿಂದಲೇ ನಮ್ಮ ದೇಶ ಜಾತ್ಯತೀತಪಥದಲ್ಲಿ ಹೆಮ್ಮರವಾಗಿ ಬೆಳೆದಿದೆ ಎಂದರು.

ಜಿಲ್ಲಾ ಕಸಾಪ ಅಧ್ಯಕ್ಷ ಲಿಂಗಯ್ಯ ಹಿರೇಮಠ್, ಶಾಲೆಯ ಪ್ರಾ. ಸುಭಾಷ್ ಎಲಿ ಮಾತನಾಡಿದರು.

ಅಭಾವಿಲಿಂ ಸದಸ್ಯರಾದ ಶಾಲೆಯ ಚೇರ್ಮನ್ ಚಂದ್ರಣ್ಣ ಶೆಟ್ಟರ್, ಎಂಆರ್ ಹೊಂಬರಡಿ, ಶಂಕರಗೌಡ ಪಾಟೀಲ್, ರಮೇಶ್ ಮೋಟೆಬೆನ್ನೂರ್, ಉಮೇಶ್ ಬಡ್ಡಿಯವರ್, ಸಿದ್ದಲಿಂಗಪ್ಪ ವಾಲಿ ಶೆಟ್ಟರ್ ಹಾಗೂ ಶಾಲೆಯ ಸಿಬ್ಬಂದಿ ಮತ್ತು ವಿದ್ಯಾರ್ಥಿ ವಿದ್ಯಾರ್ಥಿನಿಯರು ಪಾಲ್ಗೊಂಡಿದ್ದರು.

ಬ್ಯಾಡಗಿ: ಪಟ್ಟಣದ ಎಸ್ಎಸ್‌ಪಿ ಎನ್ ಶಾಲೆಯಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ತಾಲೂಕ ಘಟಕ ವತಿಯಿಂದ ನಡೆದ ಜಗಜ್ಯೋತಿ ಬಸವೇಶ್ವರ ಜಯಂತಿಯನ್ನು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ತಾಲೂಕ ಅಧ್ಯಕ್ಷ ವಿಶ್ವನಾಥ ಅಂಕಲಕೋಟಿ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು.

ರಾಜ್ಯಕ್ಕೆ ಹಾವೇರಿ 7ನೇ ಸ್ಥಾನ

ಹಾವೇರಿ: 2025-26ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷಾ ಫಲಿತಾಂಶ ಗುರುವಾರ ಪ್ರಕಟಗೊಂಡಿದ್ದು ಹಾವೇರಿ ಜಿಲ್ಲೆಗೆ ರಾಜ್ಯದಲ್ಲಿಯೇ 7ನೇ ಸ್ಥಾನ ದೊರೆತಿದೆ. ಕಳೆದ ವರ್ಷ 13ನೇ ಸ್ಥಾನದಲ್ಲಿದ್ದ ಜಿಲ್ಲೆ ಪ್ರಸಕ್ತ ವರ್ಷ ಆರು ಸ್ಥಾನ ಮೇಲಕ್ಕೇರಿದೆ. ಬ್ಯಾಡಗಿ ತಾಲೂಕಿನ ಕದರಮಂಡಲಗಿ ಸ್ಪಂದನಾ ಪ್ರೌಢಶಾಲೆ ವಿದ್ಯಾರ್ಥಿನಿ ನಿವೇದಿತಾ ಅಜ್ಜಮ್ಮನವರ 623 ಅಂಕಗಳಿಸಿ ರಾಜ್ಯಕ್ಕೆ ಮೂರನೇ ರ್‍ಯಾಂಕ್ ಪಡೆದಿರುವುದು ಜಿಲ್ಲೆಯ ಶಿಕ್ಷಕರ ವರ್ಗ ಹಾಗೂ ಶಿಕ್ಷಣ ಪ್ರೇಮಿಗಳಲ್ಲಿ ಸಂತಸ ಮೂಡಿಸಿದೆ.

ಜಿಲ್ಲೆಯಲ್ಲಿ ಪ್ರಸಕ್ತ ವರ್ಷ 21,316 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು 20,649 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಜಿಲ್ಲೆಯ ಒಟ್ಟು ಫಲಿತಾಂಶ 96.87ರಷ್ಟಾಗಿದೆ. ಕಳೆದ ವರ್ಷ 80.9ರಷ್ಟಾಗಿತ್ತು.

ಮಾಧ್ಯಮವಾರು ಫಲಿತಾಂಶ: ಕನ್ನಡ ಮಾಧ್ಯಮದಲ್ಲಿ ಪರೀಕ್ಷೆಗೆ ಹಾಜರಾದ 14369 ವಿದ್ಯಾರ್ಥಿಗಳಲ್ಲಿ 13930 ಮಕ್ಕಳು ಉತ್ತೀರ್ಣರಾಗಿದ್ದಾರೆ. ಆಂಗ್ಲ ಮಾಧ್ಯ ಮ ಪರೀಕ್ಷೆಗೆ 5070 ವಿದ್ಯಾರ್ಥಿಗಳಲ್ಲಿ 4979 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಉರ್ದು ಮಾಧ್ಯಮ ಪರೀಕ್ಷೆ ಬರೆದ 1877 ವಿದ್ಯಾರ್ಥಿಗಳಲ್ಲಿ 1740 ಮಕ್ಕಳು ಉತ್ತೀರ್ಣರಾಗಿದ್ದಾರೆ.

ಜಿಲ್ಲೆಗೆ ಟಾಪರ್: ಕನ್ನಡ ಮಾಧ್ಯಮದಲ್ಲಿ ಬ್ಯಾಡಗಿ ತಾಲೂಕಿನ ಕದರಮಂಡಲಗಿ ಸ್ಪಂದನಾ ಪ್ರೌಢಶಾಲೆಯ ವಿದ್ಯಾರ್ಥಿನಿ ನಿವೇದಿತಾ ಅಜ್ಜಮ್ಮನವರ 623 ಅಂಕಗಳಿಸುವ ಮೂಲಕ ರಾಜ್ಯಕ್ಕೆ ಮೂರನೇ ರ್‍ಯಾಂಕ್ ಹಾಗೂ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದುಕೊಂಡಿದ್ದಾಳೆ. ಬ್ಯಾಡಗಿ ತಾಲೂಕಿನ ಮಲ್ಲೂರ ಎಸ್ಎಸ್‌ಬಿಎಚ್‌ವಿ ಪ್ರೌಢಶಾಲೆಯ ಭುವನ್ ಮೋರೆ 621 ಅಂಕಗಳಿಸಿ ದ್ವಿತೀಯ ಹಾಗೂ ಬ್ಯಾಡಗಿ ತಾಲೂಕಿನ ಕೆರವಡಿ ಸರ್ಕಾರಿ ಪ್ರೌಢಶಾಲೆ ವಿದ್ಯಾರ್ಥಿನಿ ನೀತಾ ಇಂಡುವಳ್ಳಿ 620 ಅಂಕ ಪಡೆದು ತೃತೀಯ ಸ್ಥಾನ ಪಡೆದಿದ್ದು ಈ ಮೂಲಕ ಎಲ್ಲಾ ಮೂರು ಸ್ಥಾನಗಳನ್ನು ಬ್ಯಾಡಗಿ ತಾಲೂಕು ಬಾಚಿಕೊಂಡಂತಾಗಿದೆ.

ಆಂಗ್ಲ ಮಾಧ್ಯಮದಲ್ಲಿ ರಟ್ಟೀಹಳ್ಳಿಯ ನೋಬೆಲ್ ಪಬ್ಲಿಕ್ ಆಂಗ್ಲ ಮಾಧ್ಯಮ ಪ್ರೌಢ ಶಾಲೆಯ ವಿದ್ಯಾರ್ಥಿ ಉಮ್ಮೇಜವಾರಿಯಾ ಖಾಜಿ 622 ಅಂಕಗಳಿಸಿ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದಿದ್ದಾನೆ. ಹಾನಗಲ್ಲ ಆಕ್ಸಫರ್ಡ್ ಶಾಲೆಯ ಸಿಂಧೂ ಪವಾರ್ 621 ಹಾಗೂ ಹಾವೇರಿ ತಾಲೂಕಿನ ಹೊಸರಿತ್ತಿ ಪ್ರೇರಣಾ ಆಂಗ್ಲ ಮಾಧ್ಯಮ ಶಾಲೆಯ ಅನನ್ಯಾ ಕೋರಿ 621 ಅಂಕಗಳೊಂದಿಗೆ ಜಂಟೀಯಾಗಿ ದ್ವಿತೀಯ ಸ್ಥಾನ ಪಡೆದಿದ್ದಾರೆ. ಹಾವೇರಿ ತಾಲೂಕಿನ ಗುತ್ತಲ ಆರ್.ಕೆ. ಆಂಗ್ಲ ಮಾಧ್ಯಮ ಶಾಲೆ ಪ್ರಾರ್ಥನಾ ಪಸಗಿ 620 ಅಂಕ ಗಳಿಸಿ ತೃತೀಯ ಸ್ಥಾನ ಪಡೆದಿದ್ದಾರೆ. ಉರ್ದು ಮಾಧ್ಯಮದಲ್ಲಿ ಹಿರೇಕೆರೂರು ಪಟ್ಟಣದ ಸರ್ಕಾರಿ ಉರ್ದು ಪ್ರೌಢಶಾಲೆಯ ಫೈಜ್ ಅಹ್ಮದ್ ಕಮಲ್ 617 ಅಂಕಗಳಿಸಿ ಜಿಲ್ಲೆಗೆ ಪ್ರಥಮ, ಸವಣೂರು ತಾಲೂಕಿನ ಕಾರಡಗಿ ಸರ್ಕಾರಿ ಉರ್ದು ಪ್ರೌಢಶಾಲೆಯ ಅಬಿದಾಕೌಸರ್ ಶಾಂಬನ್ನವರ 615 (ದ್ವಿತೀಯ), ಹಾವೇರಿ ತಾಲೂಕಿನ ಕನವಳ್ಳಿ ಸರ್ಕಾರಿ ಉರ್ದು ಪ್ರೌಢ ಶಾಲೆಯ ಮದಿಹಾಬಾನು ತಾಸ್ಗಾವರ 612 (ತೃತೀಯ) ಪಡೆದುಕೊಂಡಿದ್ದಾರೆ.

ಶಿಗ್ಗಾವಿ ಫಸ್ಟ್, ರಾಣೆಬೆನ್ನೂರು ಲಾಸ್ಟ್

ಕ್ರ. ಸಂ	ತಾಲೂಕು	ಪರೀಕ್ಷೆಗೆ ಹಾಜರು	ಉತ್ತೀರ್ಣ	ಶೇಕಡಾ ವಾರು
1	ಶಿಗ್ಗಾವಿ	2782	2734	98.27
2	ಸವಣೂರ	2024	1979	97.78
3	ಹಾವೇರಿ	3829	3730	97.41
4	ಬ್ಯಾಡಗಿ	2026	1969	97.19
5	ಹಾನಗಲ್ಲ	3352	3242	96.72
6	ಹಿರೇಕೆರೂರು	2777	2679	96.47
7	ರಾಣೆಬೆನ್ನೂರು	4526	4316	95.36
	ಒಟ್ಟು	21316	20649	96.87

> 2025-26ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆ ಫಲಿತಾಂಶದಲ್ಲಿ ರಾಜ್ಯಮಟ್ಟದಲ್ಲಿ ಹಾವೇರಿ ಜಿಲ್ಲೆಗೆ 7ಸ್ಥಾನ ಹಾಗೂ ವಿಭಾಗಕ್ಕೆ 3ನೇ ಸ್ಥಾನ ಪಡೆದಿದೆ. ಜಿಲ್ಲಾಧಿಕಾರಿ ಹಾಗೂ ಜಿಪಂ ಸಿಇಒ ಅವರ ಮಾರ್ಗದರ್ಶನದಲ್ಲಿ ಮಕ್ಕಳಿಗೆ ಆಗಾಗ ತರಬೇತಿ ಕಾರ್ಯಾಗಾರ, ಶಿಕ್ಷಣ ತಜ್ಞರಿಂದ ಉಪನ್ಯಾಸ ಸೇರಿ ಪ್ರತಿ ಕಾರ್ಯವನ್ನೂ ಅಚ್ಚುಕಟ್ಟಾಗಿ ಮಾಡಿದ ಫಲವಾಗಿ ಜಿಲ್ಲೆಗೆ ಉತ್ತಮ ಫಲಿತಾಂಶ ಬಂದಿದೆ. ಫಲಿತಾಂಶದ ಕೀರ್ತಿ ಜಿಲ್ಲೆಯ ಮಕ್ಕಳು ಹಾಗೂ ಶಿಕ್ಷಕರಿಗೆ ಸಲ್ಲುತ್ತದೆ.
>
> ■ **ಮೋಹನ್ ದಂಡಿನ್,**
> **ಡಿಡಿಪಿಐ ಹಾವೇರಿ**

ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿಪೂಜೆ

ಹಾನಗಲ್ಲ: ಅಭಿವೃದ್ಧಿಗೆ ಕೊನೆ ಇಲ್ಲ, ಅದೊಂದು ನಿರಂತರ ಪ್ರಕ್ರಿಯೆ. ಕ್ಷೇತ್ರದ ಜನರಒತ್ತಾಸೆಯಂತೆಅಭಿವೃದ್ಧಿಕಾರ್ಯಗಳ ಜೊತೆಗೆ ಜನಕಲ್ಯಾಣಕ್ಕೂ ಗಮನ ಹರಿಸಲಾಗಿದೆ. ಹತ್ತು, ಹಲವು ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ಸಾರ್ವಜನಿಕ ಸಮಸ್ಯೆಗಳಿಗೂ ಒಂದೊಂದಾಗಿ ಪರಿಹಾರ ದೊರಕಿಸಲಾಗುತ್ತಿದೆ ಎಂದು ಶಾಸಕ ಶ್ರೀನಿವಾಸ ಮಾನೆ ಹೇಳಿದರು.

ತಾಲೂಕಿನ ಕಲ್ಲಾಪುರ ಗ್ರಾಪಂ ವ್ಯಾಪ್ತಿಯ ಗ್ರಾಮಗಳಲ್ಲಿ ಒಟ್ಟು 64 ಲಕ್ಷ ರೂ. ವೆಚ್ಚದಲ್ಲಿ ನಾನಾ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿಪೂಜೆ ನೆರವೇರಿಸಿದ ಅವರು, ಎಲ್ಲೋ ಕುಳಿತು ಅಭಿವೃದ್ಧಿ ಕಾಮಗಾರಿಗಳಿಗೆ ಅನುದಾನ ಬಿಡುಗಡೆ ಮಾಡುವ ಪದ್ಧತಿಗೆ ತಾಲೂಕಿನಲ್ಲಿ ತಿಲಾಂಜಲಿ ನೀಡಲಾಗಿದೆ. ಪ್ರಸಕ್ತ ಸಾಲಿನಲ್ಲಿ ಮುಖ್ಯಮಂತ್ರಿಗಳ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯಡಿ ಬಿಡುಗಡೆಯಾಗಿದ್ದ 50 ಕೋಟಿ ರೂ. ಅನುದಾನ ಇದೇ ಮಾದರಿಯಲ್ಲಿ ಹಂಚಿಕೆ ಮಾಡಿದ್ದು, ಮತ್ತೀಗ ಬಿಡುಗಡೆಯಾಗಿರುವ 25 ಕೋಟಿ ರೂ. ಅನುದಾನ ಸಹ ಪ್ರತಿ ಗ್ರಾಮಗಳಿಗೂ ಹಂಚಿಕೆ ಮಾಡಲಾಗುವುದು ಎಂದು ವಿವರಿಸಿದರು. 13ಸಾವಿರಕ್ಕೂ ಹೆಚ್ಚು ಕುಟುಂಬಗಳಿಗೆ ಹಕ್ಕುಪತ್ರ ವಿತರಿಸಿ ಶಾಶ್ವತ ಮನೆ ಮಾಲಿಕತ್ವ ನೀಡಲಾಗುತ್ತಿದೆ ಇದರಲ್ಲಿ ಹಾನಗಲ್ಲ ಮೊದಲ ಸ್ಥಾನದಲ್ಲಿದೆ ಎಂದು ಹೇಳಿದರು.

ಕೆಪಿಸಿಸಿ ಸದಸ್ಯ ಟಾಕನಗೌಡ ಪಾಟೀಲ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಂಜು ಗೊರಣ್ಣನವರ, ಬಗರ್ ಹುಕುಂ ಸಮಿತಿ ಅಧ್ಯಕ್ಷ ಪುಟ್ಟಪ್ಪ ನರೇಗಲ್, ಮುಖಂಡರಾದ ಸತ್ತಾರಸಾಬ, ರಜಾಕ್ ಹೊಂಬರಡಿ, ಮಂಜುನಾಥ ತರವಂದ, ವಸಂತ ದೊಡ್ಡಕೇರಿ, ಯಲ್ಲಪ್ಪ ಹೆಗ್ಗಣ್ಣನವರ, ಕುಮಾರಸ್ವಾಮಿ ಪಾಟೀಲ, ಲೋಕೇಶ ಹುಲಿ, ಗುಡ್ಡಪ್ಪ ಬ್ಯಾತನಾಳ, ಸಿದ್ದಪ್ಪ ಬಂಗೇರ, ಬಸವರಾಜ ಬಡೆಮ್ಮನವರ, ಸಂತೋಷ ಭೋವಿ, ಭರಮಗೌಡ ಚನ್ನಗೌಡ್ರ, ದೇವೇಂದ್ರಪ್ಪ ಕುರುಡಿ, ಮಲ್ಲಪ್ಪ ಯತ್ನಳ್ಳಿ, ಗಂಗಪ್ಪ ಕುರುಡಿ, ಮಾಲತೇಶ ಕುನ್ನೂರ, ಮಂಜಪ್ಪ ಶೇಷಗಿರಿ, ವೀರುಪಾಕ್ಷಪ್ಪ ಸಮ್ಮಸಗಿ, ಯಲ್ಲಪ್ಪ ಸಿರಿಗೆರೆ, ಶಿವು ತಳವಾರ ಇದ್ದರು.

ಸಂಸದ ಬಸವರಾಜ ಬೊಮ್ಮಾಯಿ ಸೂಚನೆ

ತಿಂಗಳಾಂತ್ಯಕ್ಕೆ ರಸ್ತೆ ಕಾಮಗಾರಿ ಪೂರ್ಣಗೊಳಿಸಿ

ಹಾವೇರಿ: ಸಾಗರಮಾಲಾ ಯೋಜನೆ ಅಡಿ ಕೈಗೆತ್ತಿಕೊಂಡಿರುವ ಹಾವೇರಿ ಯಿಂದ ಶಿರ್ಶಿಗೆ ಹೋಗುವ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ಈ ತಿಂಗಳು 30ರ ಒಳಗಾ ಗಿ ಎಲ್ಲ ರಸ್ತೆಯೂ ವಾಹನ ಸಂಚಾರಕ್ಕೆ ಸುಗಮವಾಗಬೇಕು ಎಂದು ಮಾಜಿ ಸಿಎಂ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಸೂಚಿಸಿದರು.

ಇಲ್ಲಿನ ತಾಪಂ ಕಚೇರಿ ಆವರಣದಲ್ಲಿರುವ ಲೋಕಸಭಾ ಸದಸ್ಯರ ಜನಸಂಪರ್ಕ ಕಾರ್ಯಾಲಯದಲ್ಲಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳ ಜತೆಗೆ ಸಭೆ ನಡೆಸಿ ಮಾತನಾಡಿ, ಹಾನಗಲ್ಲಿನ ನಾಲ್ಕರ ಕ್ರಾಸ್ ನಿಂದ ಸಮ್ಮಸಗಿವರೆಗಿನ ರಾಷ್ಟ್ರೀಯ ಹೆದ್ದಾರಿ ಸಂಪೂರ್ಣವಾಗಿ ಹಾಳಾಗಿದೆ. ಅದನ್ನು ವಾಹನ ಸಂಚಾರಕ್ಕೆ ಸುಗಮಗೊಳಿಸಬೇಕು ಹಾಗೂ ಹಾವೇರಿಯಿಂದ ಹಾನಗಲ್ ಸಂಪರ್ಕಿಸುವ ರಸ್ತೆ ಅಲ್ಲಲ್ಲಿ ಹಾಳಾಗಿದ್ದು ಅದನ್ನು ಸರಿಪಡಿಸಲು ಸೂಚಿಸಿದರು.

ಯೋಜನೆಯ ಕಾಮಗಾರಿ ವಿಳಂಬ ಮಾಡದೇ ಈ ತಿಂಗಳು ಮುಗಿಯುವಷ್ಟರಲ್ಲಿ ವಾಹನ ಸಂಚಾರಕ್ಕೆ ಸುಗಮಗೊಳಿಸಬೇಕು ಎಂದು ಎಚ್ಚರಿಸಿದರು.

ಈಗಾಗಲೇ ಮಾಡಿರುವ 5ಕಿಮೀ ರಸ್ತೆಯನ್ನು ವಾಹನ ಸಂಚಾರ ಮಾಡುವ ಹಾಗೇ ಮಾಡಿ ಉಳಿದ 3ಕಿಮಿ ಯಾವಾಗ ಮಾಡುತ್ತೀರಿ ಹೇಳಿ, ಕಂತ್ರಿಕೊಪ್ಪದಿಂದ ಸಮ್ಮಸಗಿವರೆಗೆ ರಸ್ತೆ ಸಂಪೂರ್ಣ ಹಾಳಾಗಿದೆ. ಅದನ್ನು ವಾಹನ ಸಂಚಾರಕ್ಕೆ ಅನುಕೂಲ ಮಾಡಬೇಕು. ಮೊದಲಿಗೆ ಇರುವ ರಸ್ತೆಯನ್ನು ಸಂಪೂರ್ಣವಾಗಿ ತೆಗೆದು 2ಪದರು ಹಾಕಿ ವಾಹನ ಸಂಚಾರಕ್ಕೆ ಸರಿ ಪಡಿಸಬೇಕು. ಅಕ್ಕಿಆಲೂರು ಬಸ್ ನಿಲ್ದಾಣದ ಎದುರಿಗೆ ರಸ್ತೆಯಲ್ಲಿ ನೀರು ನಿಲ್ಲುವುದನ್ನು ಸರಿ ಪಡಿಸಬೇಕು. ನಾನೇ ಕಾಮಗಾರಿ ವೀಕ್ಷಣೆಗೆ ಬರುತ್ತೇನೆ ಎಂದು ಹೇಳಿದರು.

ಹಾನಗಲ್ ನಾಲ್ಕರ ಕ್ರಾಸ್‌ಯಿಂದ 4.5 ಕಿ.ಮಿ ಹನುಮನಕೊಪ್ಪ ವರೆಗೆ ಡಿಬಿಎಂ (ಡೆನ್ಸ್ ಬಿಟುಮಿನಸ್ ಮ್ಯಾಕಡಮ್) ಮುಗಿದಿದೆ. ಹನುಮನಕೊಪ್ಪ ಯಿಂದ ಬ್ಯಾಲಹಳ್ಳಿ 2.5ಕೀ. ಮಿವರೆಗೆ ಜೆ.ಎಸ್.ಬಿ ವರೆಗೆ ಮುಗಿದಿದೆ. ಸಬ್ ಗ್ರೇಡ್ ಮಾಡಿ ಡಿಬಿಎಂ ಮುಗಿಸಲು 25ದಿನ ಬೇಕು ಬಾಲಹಳ್ಳಿಯಿಂದ ಕತ್ರಿಕೊಪ್ಪ 1 ಕಿಮೀವರೆಗೆ ಡಿಬಿಎಂ ಮಾಡಲು ಇದೇ ಮೇ 10ವರೆಗೆ ವಾಹನ ಸಂಚಾರಕ್ಕೆ ಮಾಡುತ್ತೇವೆ ಎಂದು ಅಧಿಕಾರಿಗಳು ಹೇಳಿದರು.

ಜಿಲ್ಲಾಧಿಕಾರಿ ಡಾ. ವಿಜಯಮಹಾಂತೇಶ ದಾನಮ್ಮನವರ, ಹೊನ್ನಾವರ ಎನ್ಎಚ್ಎಐನ ಪಿಡಿ ಎಂ.ಶಿವಕುಮಾರ, ಸ್ಟೇಟ್ ಇಂಜನಿಯರ್ ಅಮರ, ಟೀಮ್ ಲೀಡರ್ ವಿನಾಯಕ ಸೊಂಟಕ್ಕೆ, ರಾಘವೇಂದ್ರ, ಎಂ.ಎಸ್. ಖಾನ್ ಹಾಗೂ ಹಿರಿಯ ಇಂಜನಿಯರಗಳು ಉಪಸ್ಥಿತರಿದ್ದರು.

ವಿರೋಧ ಪಕ್ಷದ ನಡೆ ಖಂಡಿಸಿ ಪ್ರತಿಭಟನೆ

ರಾಣೇಬೆನ್ನೂರ: ಶಾಸನ ಸಭೆಯಲ್ಲಿ ಶೇ. 33ರಷ್ಟು ಮಹಿಳೆಯರಿಗೆ ಮೀಸಲಾತಿ ನೀಡಬೇಕು ಎಂಬ ವಿಧೇಯಕದ ವಿರುದ್ಧವಾಗಿ ಕಾಂಗ್ರೆಸ್‌ನವರು ನಡೆದುಕೊಂಡಿರುವುದು ಹಾಗೂ ಕೇಂದ್ರ ವಿರೋಧ ಪಕ್ಷದವರ ನಡೆ ಖಂಡನೀಯ ಎಂದು ಜೆಡಿಎಸ್ ತಾಲೂಕು ಟಕದ ವತಿಯಿಂದ ನಗರದ ಮಿನಿ ವಿಧಾನಸೌಧ ಎದುರು ಪ್ರತಿಭಟನೆ ನಡೆಸಲಾಯಿತು.

ಪಕ್ಷದ ಜಿಲ್ಲಾಧ್ಯಕ್ಷ ಮಂಜುನಾಥ ಗೌಡಶಿವಣ್ಣನವರ ಮಾತನಾಡಿ, ಮಹಿಳೆಯರಿಗೆ ಶಾಸನ ಸಭೆಯಲ್ಲಿ ಶೇ. 33ರಷ್ಟು ಮೀಸಲು ನೀಡಲು ಕೇಂದ್ರ ಸರ್ಕಾರ ಮಂಡಿಸಿದ ವಿಧೇಯಕ ಪ್ರತಿಪಕ್ಷಗಳ ವಿರೋಧದಿಂದ ಬಿದ್ದು ಹೋಗಿದೆ. ಇದರಿಂದ ಪ್ರತಿಪಕ್ಷದವರು ಮಹಿಳೆಯರಿಗೆ ಅನ್ಯಾಯ ಮಾಡಿದಂತಾಗಿದೆ. ಜೆಡಿಎಸ್ ಎಚ್.ಡಿ. ದೇವೇಗೌಡ್ರರು ರಾಜ್ಯದ ಸಿಎಂ ಆಗಿದ್ದಾಗ ಮಹಿಳೆಯರಿಗೆ ಸ್ಥಳಿಯ ಸಂಸ್ಥೆಗಳಲ್ಲಿ ಶೇ. 33ರಷ್ಟು ಮೀಸಲಾತಿ ನೀಡಿದರು. ಅಲ್ಲದೆ ದೇಶದ ಪ್ರಧಾನ ಮಂತ್ರಿಯಾಗಿದ್ದಾಗ ಪ್ರಥಮ ಬಾರಿಗೆ ಮಹಿಳೆಯರಿಗೆ ಮೀಸಲಾತಿ ವಿಧೇಯಕ ಮಂಡಿಸಿದ್ದರು. ಆದರೆ, ಬೆಂಬಲದ ಕೊರತೆಯಿಂದ ಹಾಗೂ ರಾಜಕೀಯಪಕ್ಷಗಳಒಡಂಬಡಿಕೆಯಿಲ್ಲದೆ ವಿಧೇಯಕ ಅಂಗೀಕಾರವಾಗಲಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ತಹಶೀಲ್ದಾರ್ ಆರ್.ಎಚ್. ಭಾಗವಾನ್ ಮೂಲಕ ರಾಜ್ಯಪಾಲರಿಗೆ ಮನವಿ ಸಲ್ಲಿಸಿದರು.

ಕಾಳಮ್ಮ ಬಡಿಗೇರ, ಸುನೀತಾ ಸೊಪ್ಪಿನ್, ರತ್ನವ್ವ ಅರ್ಕಾಚಾರಿ, ನೇತ್ರಾವತಿ ಮಡಿವಾಳರ, ಜಯಶ್ರೀ ಕೆ.ಎಸ್., ಅನಿತಾ ಗವಳಿ, ಕವಿತಾ ಎಂ.ಎಂ., ಪೂಜಾ ದೈವಜ್ಞ, ಪಾರ್ವತವ್ವ ಆಡೂರ ಮತ್ತಿತರರಿದ್ದರು.

ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ: ಜಿಲ್ಲೆಯ ಜನರಿಗೆ ನಿರಾಸೆ

ಹಾವೇರಿ: ಹಾವೇರಿಗೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ನೀಡದಿರುವುದಕ್ಕೆ ಜಿಲ್ಲೆಯ ಜನತೆಗೆ, ಎಲ್ಲ ಪಕ್ಷದ ನಾಯಕರಿಗೆ ನಿರಾಸೆಯಾಗಿದೆ. ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಏಕೆ ಬೇಕು ಎಂದು ಸಿಎಂ ಸಿದ್ದರಾಮಯ್ಯ ಅವರಿಗೆ ಮನವರಿಕೆ ಮಾಡಿಕೊಟ್ಟಿದ್ದೇವೆ. ಆಗ ಸಕಾರಾತ್ಮವಾಗಿ ಸ್ಪಂದಿಸಿದ್ದರು. ಬಜೆಟ್‌ನಲ್ಲಿ ಬರದಿರುವುದಕ್ಕೆ ನಿರಾಸೆಯಾಗಿದೆ ಎಂದು ಮಾಜಿ ಸಿಎಂ, ಸಂಸದ ಬಸವರಾಜ ಬೊಮ್ಮಾಯಿ ಬೇಸರ ವ್ಯಕ್ತಪಡಿಸಿದರು.

ನಗರದ ಸಂಸದ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಮೆಡಿಕಲ್ ಕಾಲೇಜು, ವಿಶ್ವವಿದ್ಯಾಲಯ, ಇಂಜನೀಯರಿಂಗ್ ಕಾಲೇಜು, ಲಾ ಕಾಲೇಜು ಮಾಡಿದ್ದು ಬಿಜೆಪಿ, ನಮ್ಮ ಜಿಲ್ಲೆ ರಾಷ್ಟ್ರೀಯ ಹೆದ್ದಾರಿಯಲ್ಲಿದೆ. ಏನಾದರೂ ಅನಾಹುತ ಆದರೆ ಬಹಳ ಜನರು ಹುಬ್ಬಳ್ಳಿ ಅಥವಾ ದಾವಣಗೆರೆಗೆ ಹೋಗಬೇಕಿದೆ. ಆಗ ಬಹಳಷ್ಟು ಜೀವಹಾನಿ ಆಗುತ್ತದೆ, ಹೀಗಾಗಿ ಸೂಪರ್ ಸ್ಪೆಷಾಲಿಟಿ ಬೇಕೆಂದು ಹೇಳಿದ್ದೆವು. ಅವರದು ಕೇವಲ ಮಾತಿನ ಸಹಾನುಭೂತಿ, ಈಗಲೂ ಸಹ ಮಾಡಿರುವ ಅನ್ಯಾಯ ಸರಿಪಡಿಸಲು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಅನುಮತಿ ಕೊಟ್ಟು ಪೂರಕ ಬಜೆಟ್‌ನಲ್ಲಾದರೂ ಹಣ ಒದಗಿಸಿದರೆ ಕೆಲಸ ಆರಂಭವಾಗುತ್ತದೆ. ಈಗಲೂ ಸಿಎಂಗೆ ಆಗ್ರಹಿಸುತ್ತೇನೆ. ಈಗಾಗಲೇ ಶಾಸಕರು ಜಿಲ್ಲಾ ಉಸ್ತುವಾರಿ ಸಚಿವರು ಒತ್ತಡ ಮಾಡಿದ್ದಾರೆ. ಆ ಒತ್ತಡಕ್ಕೆ ಸಿಎಂ ಮನ್ನಣೆ ಕೊಡಬೇಕು ಎಂದು ಒತ್ತಾಯಿಸಿದರು.

ಗೊಂದಲದಲ್ಲಿ ಮಕ್ಕಳು: ಎಸ್ಸೆಸ್ಸೆಲ್ಸಿ ಫಲಿತಾಂಶದ ಕುರಿತು ಪ್ರತಿಕ್ರಿಯಿಸಿ, ರಾಜ್ಯ ಸರ್ಕಾರ ಶಿಕ್ಷಣವನ್ನು ಹಿಂದಕ್ಕೆ ತಳ್ಳುತ್ತಿದೆ. ಪಾಸ್ ಪರ್ಸಂಟೇಜ್ ಕಡಿಮೆ ಮಾಡಿ ಮಕ್ಕಳ ಭವಿಷ್ಯದ ಜತೆ ಆಟವಾಡುತ್ತಿದೆ. ಪಾಸ್ ಆಗಲು ಇದ್ದ 35ಅಂಕಗಳನ್ನು 30ಕ್ಕೆ ಇಳಿಕೆ ಮಾಡಿದೆ. ಶಿಕ್ಷಕರ ಕೊರತೆಯಿದೆ, ಶಾಲೆಗಳಲ್ಲಿ ಸರಿಯಾದ ಬೋಧನೆ ಇಲ್ಲ, ಗುಣಮಟ್ಟದ ಶಿಕ್ಷಣ ಸಂಪೂರ್ಣ ಕುಸಿತವಾಗಿದೆ. ಇಂಟರ್ನಲ್‌ನಲ್ಲಿ 14 ಮಾರ್ಕ್ ಇದ್ದರೂ ಪಾಸ್ ಅಂತಾರೆ. ಹಾಗಾದರೆ ಶೇ.100 ಫಲಿತಾಂಶ ಬರಬೇಕಿತ್ತು. ಶೇ.15 ಮಾರ್ಕ್ ತೆಗೆದುಕೊಂಡು ಪಾಸ್ ಮಾಡುವ ರಾಜ್ಯ ಎಲ್ಲಿದೆ? ಶಿಕ್ಷಣವನ್ನು ಎಲ್ಲಿಗೆ ಕೊಂಡೊಯ್ಯುತ್ತಿದ್ದೀರಿ. ಈ ಮಕ್ಕಳು ಪಿಯುಸಿಗೆ ಹೋಗಿ ಪಾಸ್ ಆಗುವುದಿಲ್ಲ, ಸರ್ಕಾರಿ ಶಾಲೆಗಳ ತಳಪಾಯ ಸಂಪೂರ್ಣ ದುರ್ಬಲ. ಶಿಕ್ಷಣ ಸಚಿವರು ಕೇಳಿದರೆ 'ಸಿಎಂಗೆ ಕೇಳಿದ್ದೀನಿ' ಅಂತಾರೆ. ಸರ್ಕಾರದ ನಡೆಯಿಂದ ಮಕ್ಕಳು ಗೊಂದಲಕ್ಕೆ ಸಿಲುಕಿದ್ದಾರೆ ಎಂದು ದೂರಿದರು.

ಕಾಮಗಾರಿಗೆ ಶಾಸಕ ಭೂಮಿಪೂಜೆ

ಬ್ಯಾಡಗಿ: ಕಾಂಗ್ರೆಸ್ ಸರ್ಕಾರವು ಗ್ಯಾರಂಟಿ ಯೋಜನೆಗಳನ್ನು ನೀಡುವುದರ ಜೊತೆಗೆ ಪ್ರತಿಯೊಂದು ಗ್ರಾಮಗಳ ಅಭಿವೃದ್ಧಿಗೆ ಹೆಚ್ಚಿನ ಅನುದಾನ ನೀಡುತ್ತಿದೆ ಎಂದು ಶಾಸಕ ಬಸವರಾಜ ಶಿವಣ್ಣನವರ ಹೇಳಿದರು.

2025-26 ನೇ ಸಾಲಿನ ಮುಖ್ಯಮಂತ್ರಿಗಳ ಮೂಲ ಸೌಕರ್ಯ ಅಭಿವೃದ್ಧಿ ಕಾರ್ಯಕ್ರಮದ ಅಡಿಯಲ್ಲಿ ಸುಮಾರು ಒಂದು ಕೋಟಿ ರೂ.ವೆಚ್ಚದಲ್ಲಿ ಬ್ಯಾಡಗಿ ತಾಲೂಕಿನ ಕದರಮಂಡಲಗಿ ಬೆಳಕೇರಿ ರಸ್ತೆ ಹಾಗೂ ಆಯ್ದ ಭಾಗಗಳಲ್ಲಿ ರಸ್ತೆ ಸುಧಾರಣೆ ಮತ್ತು ಬೆಳಕೇರಿ ಗ್ರಾಮ ಪರಿಮಿತಿಯಲ್ಲಿ ಸಿಸಿ ಗಟಾರ ನಿರ್ಮಾಣ ಮಾಡುವುದರ ಜೊತೆಗೆ ಹಳ್ಳಕ್ಕೆ ತಡೆಗೋಡೆ ನಿರ್ಮಾಣ ಮಾಡುವ ಕಾರ್ಯಕ್ರಮಕ್ಕೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದರು.

ರಾಜ್ಯ ಸರ್ಕಾರವು ರಾಜ್ಯದಲ್ಲಿ ಪ್ರತಿಯೊಂದು ಬಡ ಕುಟುಂಬಗಳ ಆರ್ಥಿಕ ಪರಿಸ್ಥಿತಿಯನ್ನು ಸುಧಾರಣೆ ಮಾಡುವುದರ ಜೊತೆಗೆ ಪ್ರತಿಯೊಂದು ಗ್ರಾಮಗಳನ್ನು ಅಭಿವೃದ್ಧಿಯತ್ತ ಕೊಂಡೊಯ್ಯುವ ಕೆಲಸ ಮಾಡುತ್ತಿದೆ ಕ್ಷೇತ್ರದ ಪ್ರತಿಯೊಂದು ಗ್ರಾಮಕ್ಕೂ ಅಭಿವೃದ್ಧಿ ಯೋಜನೆಗಳನ್ನು ಮತ್ತು ಮೂಲಭೂತ ಸೌಕರ್ಯಗಳ ಜೊತೆಗೆ ಇನ್ನೂ ಹೆಚ್ಚು ಅಭಿವೃದ್ಧಿ ಯೋಜನೆಗಳನ್ನು ತರುವ ಸರ್ವ ಪ್ರಯತ್ನ ಮಾಡಲಾಗುವುದೆಂದು ಹೇಳಿದರು.

ಮುಖಂಡ ವಕೀಲರಾದ ಶಿವಪ್ಪ ಅಂಬಲಿ, ಮಾಲತೇಶ ದೊಡ್ಡಮನಿ, ಚನ್ನಬಸಪ್ಪ ದೇವರಗುಡ್ಡ, ಶಿವಪುತ್ರಪ್ಪ ಪೂಜಾರ, ಸಿದ್ದಪ್ಪ ದೇವರಗುಡ್ಡ, ಹನುಮಂತಪ್ಪ ಮಡಿವಾಳರ, ದ್ಯಾಮನಗೌಡ ಚಿಕ್ಕನ್ ಗೌಡ್ರು, ಪಿಡಬ್ಲ್ಯೂಡಿ ಇಲಾಖೆ ಅಧಿಕಾರಿ ಅಂಜನೆಯಪ್ಪ ಹಾಗೂ ಗುತ್ತಿಗೆದಾರ ರಮೇಶ ತೆಂಬದಮನಿ ಗ್ರಾಮದ ಮುಖಂಡರು ಉಪಸ್ಥಿತರಿದ್ದರು.

> ಯಾವುದೇ ರೀತಿಯ ರಾಜಕೀಯ ಮಾಡದೆ ನಿರಂತರವಾಗಿ ಪ್ರತಿಯೊಂದು ಗ್ರಾಮಗಳನ್ನು ಅಭಿವೃದ್ಧಿ ಕೆಲಸ ಮಾಡುತ್ತಿದ್ದೇನೆ ಕ್ಷೇತ್ರದ ಜನರ ನಿರೀಕ್ಷೆಗೆ ತಕ್ಕಂತೆ ಕೆಲಸ ಮಾಡಿಕೊಂಡು ಹೋಗುತ್ತಿದ್ದೇನೆ.
>
> ■ **ಬಸವರಾಜ ಶಿವಣ್ಣನವರ,**
> **ಶಾಸಕ**

ಮಲ್ಲಿಕಾರ್ಜುನ ಖರ್ಗೆ ಹೇಳಿಕೆ ಖಂಡಿಸಿ ಪ್ರತಿಭಟನೆ

ಹಾವೇರಿ: ಪ್ರಧಾನಿ ನರೇಂದ್ರ ಮೋದಿಯವರ ಬಗ್ಗೆ ಅವಹೇಳನಕಾರಿಯಾಗಿ ಹೇಳಿಕೆ ನೀಡಿದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನಡೆ ಖಂಡಿಸಿ ಗುರುವಾರ ನಗರದ ಹುತಾತ್ಮ ಮೈಲಾರ ಮಹದೇವಪ್ಪ ವೃತ್ತದಲ್ಲಿ ಬಿಜೆಪಿ ಯುವ ಮೋರ್ಚಾ ಪದಾಧಿಕಾರಿಗಳು ಖರ್ಗೆ ಭಾವಚಿತ್ರ ಸುಟ್ಟು ಹಾಕಿ, ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆ ನೇತೃತ್ವ ವಹಿಸಿದ್ದ ಬಿಜೆಪಿ ಯುವ ಮೋರ್ಚಾ ಜಿಲ್ಲಾಧ್ಯಕ್ಷ ಕಿರಣಕುಮಾರ ಕೋಣನವರ ಮಾತನಾಡಿ, ಎಐಸಿಸಿ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರು ರಾಜಕೀಯದಲ್ಲಿ ಹಿರಿಯರು, ಶಾಸಕರಾಗಿ, ಸಂಸದರಾಗಿ ಕಾರ್ಯನಿರ್ವಹಿಸಿದ್ದಾರೆ. ಆದರೆ ಸಂವಿಧಾನ ಬದ್ಧವಾಗಿ ಆಯ್ಕೆಯಾದ ವ್ಯಕ್ತಿಯನ್ನು ಭಯೋತ್ಪಾದಕರೆಂದು ಕರೆದಿರುವುದು ದೇಶದ ಸಂವಿಧಾನಕ್ಕೆ ಮಾಡಿದ ಅಪಮಾನವಾಗಿದೆ. ಮಲ್ಲಿಕಾರ್ಜುನ ಖರ್ಗೆ ಅವರು ತಮ್ಮ ಹೇಳಿಕೆಯನ್ನು ಈ ಕೂಡಲೇ ಹಿಂಪಡೆಯಬೇಕು, ಮತ್ತು ಪ್ರಧಾನ ಮಂತ್ರಿಯವರ ಕ್ಷಮೆ ಕೇಳಬೇಕು. ಇಲ್ಲವಾದಲ್ಲಿ ಯುವ ಮೋರ್ಚಾದಿಂದ ಎಲ್ಲಾ ಕಾಂಗ್ರೆಸ್ ಕಚೇರಿಗಳಿಗೆ ಮುತ್ತಿಗೆ ಹಾಕಬೇಕಾಗುತ್ತದೆ ಎಂದು ಎಚ್ಚರಿಸಿದರು.

ಮುಖಂಡ ಗವಿಸಿದ್ದಪ್ಪ ದ್ಯಾಮಣ್ಣನವರ, ಪ್ರತಿಭಟನೆಯಲ್ಲಿ ರಾಜ್ಯ ಅಲ್ಪಸಂಖ್ಯಾತರ ಮೋರ್ಚಾ ಉಪಾಧ್ಯಕ್ಷ ಅಲ್ಲಾಬಕ್ಷ ತಿಮ್ಮಾಪುರ ಮಾತನಾಡಿದರು. ಜಿಲ್ಲಾ ಪ್ರಧಾನ ಕಾರ್ಯದರ್ಶಿ ನೀಲಪ್ಪ ಚಾವಡಿ, ವಿಜಯಕುಮಾರ ಚಿನ್ನಿಕಟ್ಟಿ, ಬಸವರಾಜ ಕೋಳಿವಾಡ, ಭರತ್ ಹೊಸಮನಿ, ವಿವೇಕ ರಾಮಗೇರಿ, ನಿಖಿಲ್ ಡೊಗ್ಗೊಳ್ಳಿ, ಮನೋಜ ಜಾಧವ, ಹನುಮಂತ ಪಾಟೀಲ, ಸಚಿನ ಮಡಿವಾಳರ, ವಿಶ್ವ ತಹಸೀಲ್ದಾರ, ಮಂಜು ಮಲಗೋಡ, ನಿಖಿಲ ಹಿರೇಮಠ, ಮೃತ್ಯುಂಜಯ ಮುಷ್ಠಿ, ಮಹಿಳಾ ಮೋರ್ಚಾ ನಗರ ಘಟಕ ಅಧ್ಯಕ್ಷೆ ರೋಹಿಣಿ ಪಾಟೀಲ, ಜಗದೀಶ ದೊಡ್ಡಗೌಡರ ಸೇರಿದಂತೆ ಪಕ್ಷದ ಅನೇಕ ಮುಖಂಡರು, ಕಾರ್ಯಕರ್ತರು ಇದ್ದರು.

> ಕಾಂಗ್ರೆಸ್ ಪಕ್ಷದ ನಾಯಕರು ಮಾನಸಿಕ ಸ್ಥಿಮಿತ ಕಳೆದುಕೊಂಡು ಮಾತನಾಡುತ್ತಿರುವುದು ಶೋಭೆ ತರುವಂತಹದ್ದಲ್ಲ. ಇಡೀ ವಿಶ್ವವೇ ಒಪ್ಪಿಕೊಂಡಿರುವ ವಿಶ್ವ ನಾಯಕನ ಬಗ್ಗೆ ಭಯೋತ್ಪಾದಕ ಎಂದು ಕರೆಯುವುದು ದೇಶಕ್ಕೆ ಮಾಡುವ ಅಪಮಾನವಾಗಿದೆ.
>
> ■ **ಕಿರಣ ಕೊಳ್ಳಿ,** ಶಹರ ಘಟಕದ ಅಧ್ಯಕ್ಷ

> ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ತಮಿಳುನಾಡಿನ ಪತ್ರಿಕಾಗೋಷ್ಠಿಯಲ್ಲಿ ಪ್ರಧಾನಮಂತ್ರಿಯವರನ್ನು ಭಯೋತ್ಪಾದಕರೆಂದು ಕರೆದಿರುವುದು ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಗೆ ಅಗೌರವ ತೋರಿದಂತಾಗಿದೆ. ಖರ್ಗೆಯವರು ತಮ್ಮ ಹೇಳಿಕೆಗೆ ಕ್ಷಮೆಯಾಚಿಸಬೇಕು. ಇಲ್ಲದಿದ್ದಲ್ಲಿ 2029ರ ಚುನಾವಣೆಯಲ್ಲಿ ದೇಶದ ಜನತೆ ಕಾಂಗ್ರೆಸ್‌ಗೆ ತಕ್ಕಪಾಠ ಕಲಿಸುತ್ತಾರೆ.
>
> ■ **ಸಂತೋಷ ಆಲದಕಟ್ಟಿ,** ಜಿಲ್ಲಾ ಪ್ರಧಾನ ಕಾರ್ಯದರ್ಶಿ

ಕಿರುಸುದ್ಧಿ

ಚುನಾವಣೆ ಪ್ರಕ್ರಿಯೆ ಅನೂರ್ಜಿತ: ಸತೀಶ್ ಸ್ಪಷ್ಟನೆ.

ಬೆಳಗಾವಿ: ಬೆಳಗಾವಿ ತಾಲೂಕಿನ ನ್ಯಾಯಾಂಗ ನೌಕರರ ಸಂಘವು ಪರವಾನಿಗೆ ಪಡೆಯದೇ ಏ.18 ರಂದು ಚುನಾವಣೆ ಪ್ರಕ್ರಿಯೆ ನಡೆಸಿ ಎನ್.ಟಿ.ಲೋಕೇಶ ಅವರನ್ನು ಅಧ್ಯಕ್ಷರೆಂದು ಘೋಷಿಸಿಕೊಂಡಿದ್ದು, ಆದರೆ ಈ ಚುನಾವಣೆ ಪ್ರಕ್ರಿಯೆಗೆ ಜಿಲ್ಲಾ ನ್ಯಾಯಾಂಗ ನೌಕರರ ಸಂಘ ಬೆಳಗಾವಿ ಘಟಕ ಇವರ ಯಾವುದೇ ಮಾನ್ಯತೆ ನೀಡಿರುವುದಿಲ್ಲ ಎಂದು ಜಿಲ್ಲಾ ನ್ಯಾಯಾಂಗ ನೌಕರರ ಸಂಘದ ಅಧ್ಯಕ್ಷ ಸತೀಶ ಬುರುಡ ತಿಳಿಸಿದ್ದಾರೆ. ಈ ಚುನಾವಣೆ ಪ್ರಕ್ರಿಯೆ ಅನೂರ್ಜಿತ ಮತ್ತು ನಿಯಮ ಬಾಹಿರವಾಗಿರುತ್ತದೆ ಎಂದು ಸತೀಶ ಬುರುಡ ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

ಎಸ್ಸೆಸ್ಸೆಲ್ಸಿ: ಅಲ್ಪಸಂಖ್ಯಾತ ವಸತಿ ಶಾಲೆಗಳ ಸಾಧನೆ

ಬೆಳಗಾವಿ: ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬೆಳಗಾವಿ ಅಡಿನದಲ್ಲಿ ಕಾರ್ಯನಿರ್ವಹಿಸುತ್ತಿರುವ 05 ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ಪೈಕಿ 03 ವಸತಿ ಶಾಲೆಗಳು (ರಾಮತೀರ್ಥನಗರ, ಸಾಲಹಳ್ಳಿ, ಐನಾಪೂರ) ಶೇ.100ರಷ್ಟು ಮತ್ತು 02 ವಸತಿ ಶಾಲೆಗಳು (ಮೂಡಲಗಿ, ಹಿರೇಕೋಡಿ) ಶೇ.98ರಷ್ಟು ಫಲಿತಾಂಶವನ್ನು ಸಾಧಿಸಿದ್ದು, ಒಟ್ಟು 251 ವಿದ್ಯಾರ್ಥಿಗಳು ಎಸ್ಸೆಸ್ಸೆಲ್ಸಿ ಪರೀಕ್ಷೆಗೆ ಹಾಜರಾಗಿದ್ದು, ಡಿಸ್ಟಿಂಕ್ಷನ–79, ಪ್ರಥಮ ದರ್ಜೆ–142, ದ್ವಿತೀಯ ದರ್ಜೆ–17 ಮತ್ತು ತೃತೀಯ ದರ್ಜೆ–11 ಹೀಗೆ ಒಟ್ಟು 249 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, ಒಟ್ಟಾರೆಯಾಗಿ ಶೇಕಡಾ 99.20 ರಷ್ಟು ಫಲಿತಾಂಶ ಸಾಧಿಸಲಾಗಿದೆ ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಬೆಳಗಾವಿ ಜಿಲ್ಲಾ ಅಧಿಕಾರಿಗಳು ಅವರು ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

ಎಸ್ಸೆಸ್ಸೆಲ್ಸಿ ಫಲಿತಾಂಶ: ಅಶ್ವಿನಿ ಮಾದರ ಪ್ರಥಮ

ರಾಮದುರ್ಗ: ತಾಲೂಕಿನ ಓಬಳಾಪೂರದ ಡಿ.ಜಿ.ಪಾಟೀಲ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿಗಳು ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ನೂರಕ್ಕೆ ನೂರಷ್ಟು ಫಲಿತಾಂಶ ಪಡೆದ ಶಾಲೆಗೆ ಕೀರ್ತಿ ತಂದಿದ್ದಾರೆ. ಪರೀಕ್ಷೆಗೆ ಹಾಜರಾಗಿದ್ದ 51 ವಿದ್ಯಾರ್ಥಿಗಳಲ್ಲಿ 7 ವಿದ್ಯಾರ್ಥಿಗಳು ಉನ್ನತ ಶ್ರೇಣಿ, ಪ್ರಥಮ ಶ್ರೇಣಿ 31 ವಿದ್ಯಾರ್ಥಿಗಳು, ದ್ವಿತೀಯ ದರ್ಜೆ 4, ಉಳಿದ ವಿದ್ಯಾರ್ಥಿಗಳು ತೃತೀಯ ಶ್ರೇಣಿಯಲ್ಲಿ ಪಾಸಾಗಿದ್ದಾರೆ. ಅಶ್ವಿನಿ ಮಾದರ (602) 96.32% , ಅಕ್ಷತಾ ಹಂಸನೂರ (591)94.56%, ಚೈತ್ರಾ ಹಂಸನೂರ (590) 94.4% ಅಂಕ ಪಡೆದು ಶಾಲೆಗೆ ಕೀರ್ತಿ ತಂದಿದ್ದಾರೆ. ಅಶ್ವಿನಿ ಮಾದರ, ಚೈತ್ರಾ ಹಾಲಿಗೇರಿ, ಸುಕನ್ಯಾ ಅರಿಷಿನಗೋಡಿ ಮತ್ತು ಕಾವೇರಿ ಕರಡಿಗುಡ್ಡ ಕನ್ನಡ ವಿಷಯದಲ್ಲಿ 125ಕ್ಕೆ 125 ಅಂಕಗಳನ್ನು ಪಡೆದಿದ್ದಾರೆ. ಹಿಂದಿ ವಿಷಯದಲ್ಲಿ ಚೈತ್ರಾ ಹಾಲಿಗೇರಿ ಮತ್ತು ಕಾವೇರಿ ಕರಡಿಗುಡ್ಡ ಹಾಗೂ ಸಮಾಜ ವಿಜ್ಞಾನದಲ್ಲಿ ಅಶ್ವಿನಿ ಮಾದರ ನೂರಕ್ಕೆ ನೂರು ಅಂಕಗಳನ್ನು ಪಡೆದಿದ್ದಾರೆ. ಸಾಧನೆ ಮಾಡಿದ ವಿದ್ಯಾರ್ಥಿಗಳನ್ನ ಶಾಲೆಯ ಮುಖ್ಯೋಪಾಧ್ಯಾಯ ಎಸ್.ವೈ. ಸನ್ನಿ ಮತ್ತು ಶಿಕ್ಷಕರು ಹಾಗೂ ಗ್ರಾಮಸ್ಥರು ಅಭಿನಂದಿಸಿದ್ದಾರೆ.

ಎಸ್ಸೆಸೆಲಿ ಫಲಿತಾಂಶ: ಮಾಯೆನ್ನವರ ಪ್ರಥಮ

ಗೋಕಾಕ: ನಗರದ ಲಕ್ಷ್ಮಣರಾವ ಜಾರಕಿಹೊಳಿ ಕನ್ನಡ ಮಾಧ್ಯಮ ಪ್ರೌಢ ಶಾಲೆಯ ವಿದ್ಯಾರ್ಥಿಗಳು ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದ್ದಾರೆ. ಮೂವರು ವಿದ್ಯಾರ್ಥಿಗಳು ಡಿಸ್ಟಿಂಕ್ಷನನಲ್ಲಿ, 17ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. ಶ್ರೇಯಾ ಮಾಯನ್ನವರ 590(94.40)ಪ್ರಥಮ, ಭೀಮಪ್ಪ ಕರಿಗಾರ 583(93.28)ದ್ವಿತೀಯ, ಶಿವಾನಿ ಹೊಸಮನಿ 576(92.16)ತೃತೀಯ ಸ್ಥಾನ ಪಡೆದಿದ್ದಾರೆ. ವಿದ್ಯಾರ್ಥಿಗಳ ಈ ಸಾಧನೆಯನ್ನು ಸಂಸ್ಥೆಯ ಚೇರಮನ ಡಾ.ಭೀಮಶಿ ಜಾರಕಿಹೊಳಿ, ವ್ಯವಸ್ಥಾಪಕ ನಿರ್ದೇಶಕ ಸನತ ಜಾರಕಿಹೊಳಿ, ಮುಖ್ಯೋಪಾಧ್ಯಾಯ ಎ. ಸರಕಾವಸ ಹಾಗೂ ಸಿಬ್ಬಂಧಿ ಅಭಿನಂಧಿಸಿದ್ದಾರೆ.

ಅಳಗವಾಡಿ : ಭಗೀರಥ ಜಯಂತಿ ಅಂಗವಾಗಿ ಭಗೀರಥ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವ ಮೂಲಕ ಆಚರಣೆ ಮಾಡಲಾಯಿತು. ಮಾರುತಿ ಪಡಚಿ, ಯಲ್ಲಪ್ಪ ಶಿರಗೂರೆ, ಗೋಪಾಲ ಬಿದರಿ, ವಿಠ್ಠಲ ಪಡಚಿ, ಮುತ್ತಪ್ಪಾ ರಾಜಾಪೂರೆ, ವಿನಾಯಕ ಗುರುವ ದುಂಡಪ್ಪ ಹಾಲಾಣಿ, ಕಲ್ಲಪ್ಪ ಕುರಂವಾಡೆ ಮುಂತಾದವರು ಉಪಸ್ಥಿತರಿದ್ದರು.

ಎಸ್ಸೆಸ್ಸೆಲ್ಸಿ: ಚಿಕ್ಕೋಡಿಗೆ 23ನೇ ಸ್ಥಾನ

ಚಿಕ್ಕೋಡಿ: 2025–26ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷಾ ಫಲಿತಾಂಶ ಪ್ರಕಟಗೊಂಡಿದ್ದು, ಚಿಕ್ಕೋಡಿ ಶೈಕ್ಷಣಿಕ ಜಿಲ್ಲೆ ರಾಜ್ಯದಲ್ಲಿ 23ನೇ ಸ್ಥಾನಕ್ಕೇರಿದ್ದು, 2025ರಲ್ಲಿ 2ನೇ ಸ್ಥಾನ, 2024ರಲ್ಲಿ 25ನೇ ಸ್ಥಾನ ಪಡೆದುಕೊಂಡಿತ್ತು. ಶೈಕ್ಷಣಿಕ ಜಿಲ್ಲೆಯ ಎಂಟು ವಲಯಗಳ ಪೈಕಿ ನಿಪ್ಪಾಣಿ ವಲಯ ಮೊದಲ ಸ್ಥಾನ (ಶೇ.95.88) ಪಡೆದುಕೊಂಡಿದ್ದು, ಗೋಕಾಕ ಕೊನೆಯ ಸ್ಥಾನ (ಶೇ.92.16) ಪಡೆದುಕೊಂಡಿದೆ.

ಶೈಕ್ಷಣಿಕ ಜಿಲ್ಲೆಯಲ್ಲಿ ಒಟ್ಟು 41504 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. ಇವರಲ್ಲಿ 39049 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ನಿಪ್ಪಾಣಿ ವಲಯ ಶೇ.95.88, ಕಾಗವಾಡ–95.68, ಮೂಡಲಗಿ–ಶೇ.95.48, ಚಿಕ್ಕೋಡಿ–ಶೇ 94.16, ಹುಕ್ಕೇರಿ– ಶೇ.93.88, ರಾಯಬಾಗ–ಶೇ.93.39, ಅಥಣಿ–ಶೇ.93.19, ಗೋಕಾಕ ವಲಯ 92.16 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ.

ಚಿಕ್ಕೋಡಿ ಶೈಕ್ಷಣಿಕ ಜಿಲ್ಲೆಯಲ್ಲಿ ಪರೀಕ್ಷೆಗೆ ಹಾಜರಾದ 20853 ಬಾಲಕರ ಪೈಕಿ 19104 ಬಾಲಕರು ಉತ್ತೀರ್ಣರಾಗಿದ್ದು, ಪರೀಕ್ಷೆಗೆ ಹಾಜರಾದ 20651 ಬಾಲಕಿಯರ ಪೈಕಿ 19945 ಬಾಲಕಿಯರು ಉತ್ತೀರ್ಣರಾಗಿದ್ದಾರೆ ಎಂದು ಚಿಕ್ಕೋಡಿ ಡಿಡಿಪಿಐ ಆರ್.ಎಸ್.ಸೀತಾರಾಮು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಥಣಿ: ತಾಲೂಕಿನ ಕಟಗೇರಿ ಗ್ರಾಮದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿ ಪ್ರಾರ್ಥನಾ ನಾಗಪ್ಪ ಬಿರಾದಾರ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದುಕೊಂಡಿರುವ ಸುದ್ದಿ ತಿಳಿಯುತ್ತಿದ್ದಂತೆ ಕ್ಷೇತ್ರ ಶಿಕ್ಷಣಾಧಿಕಾರಿ ಎಂ. ಆರ್. ಮುಂಜೆ , ಅವರ ಕಾರ್ಯಾಲಯದ ಸಿಬ್ಬಂದಿ ವಿದ್ಯಾರ್ಥಿನಿಯ ಮನೆಗೆ ತೆರಳಿ ಸಿಹಿ ಹಂಚಿ ಸನ್ಮಾನಿಸಿ ಅಭಿನಂದಿಸಿದರು.

ಸರ್ಕಾರಿ ಪ್ರೌಢಶಾಲೆ ವಿದ್ಯಾರ್ಥಿಗಳ ಸಾಧನೆ

ಪ್ರಾರ್ಥನಾ ಬಿರಾದಾರ ರಾಜ್ಯಕ್ಕೆ ಪ್ರಥಮ, ದಶರಥ ದ್ವಿತೀಯ

ಅಥಣಿ: ಎಸ್ಸೆಸ್ಸೆಲ್ಸಿ ಫಲಿತಾಂಶ ಪ್ರಕಟವಾಗಿದ್ದು, ಚಿಕ್ಕೋಡಿ ಶೈಕ್ಷಣಿಕ ಜಿಲ್ಲೆಯ ಅಥಣಿ ತಾಲೂಕಿನ ಇಬ್ಬರು ವಿದ್ಯಾರ್ಥಿಗಳು ರಾಜ್ಯಮಟ್ಟದಲ್ಲಿ ಪ್ರಥಮ ಹಾಗೂ ದ್ವಿತೀಯ ಸ್ಥಾನ ಪಡೆಯುವ ಮೂಲಕ ತಾಲೂಕಿನ ಕೀರ್ತಿ ಹೆಚ್ಚಿಸಿದ್ದಾರೆ.

ಚಿಕ್ಕೋಡಿ ಶೈಕ್ಷಣಿಕ ಜಿಲ್ಲೆ ಅಥಣಿ ತಾಲೂಕಿನ ಕಟಗೇರಿ ಗ್ರಾಮದ ಸರ್ಕಾರಿ ಪ್ರೌಢಶಾಲೆ ವಿದ್ಯಾರ್ಥಿನಿ ಪ್ರಾರ್ಥನಾ ನಾಗರಾಜ ಬಿರಾದಾರ ಪಾಟೀಲ 625–625 ಅಂಕ ಪಡೆದು ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದುಕೊಂಡಿದ್ದಾಳೆ. ಸರ್ಕಾರಿ ಪ್ರೌಢ ಶಾಲೆಯಲ್ಲಿ ಓದಿದ ವಿದ್ಯಾರ್ಥಿನಿ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದಿರುವುದು ತಾಲೂಕಿಗೆ ಹೆಮ್ಮೆಯ ಮತ್ತು ಸಂತಸದ ಸಂಗತಿಯಾಗಿದೆ.

ಅಥಣಿ ತಾಲೂಕಿನ ಐಗಳಿ ಗ್ರಾಮದ ಆದರ್ಶ ಶಿಕ್ಷಣ ಸಂಸ್ಥೆ ವಸತಿ ನಿಲಯದ ಪ್ರೌಢ ಶಾಲೆಯಲ್ಲಿ ಶಿಕ್ಷಣ ಪಡೆದ ಬಡ ಕುಟುಂಬದ ವಿದ್ಯಾರ್ಥಿ ದಶರಥ ಶಿವಾಜಿ ಬೋಸಲೆ 62–624 ಅಂಕ ಪಡೆದು ರಾಜ್ಯಕ್ಕೆ ದ್ವಿತೀಯ ಸ್ಥಾನ ಪಡೆದುಕೊಂಡಿದ್ದಾನೆ. ವಿದ್ಯಾರ್ಥಿಗಳ ಸಾಧನೆಯನ್ನು ಅಥಣಿ ಮತಕ್ಷೇತ್ರದ ಶಾಸಕ ಲಕ್ಷ್ಮಣ ಸವದಿ, ಕ್ಷೇತ್ರ ಶಿಕ್ಷಣಾಧಿಕಾರಿ ಎಂ.ಆರ್.ಮುಂಜೆ, ಶಾಲೆ ಆಡಳಿತ ಮಂಡಳಿ ಸದಸ್ಯರು, ಶಿಕ್ಷಕರು ಮತ್ತು ಪಾಲಕರು ಸಂತಸ ವ್ಯಕ್ತಪಡಿಸಿ ವಿದ್ಯಾರ್ಥಿಗಳನ್ನು ಅಭಿನಂದಿಸಿದ್ದಾರೆ.

ತಾಲೂಕಿನ ಕಟಗೇರಿ ಗ್ರಾಮದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿ ಪ್ರಾರ್ಥನಾ ನಾಗಪ್ಪ ಬಿರಾದಾರ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದುಕೊಂಡಿರುವ ಸುದ್ದಿ ತಿಳಿಯುತ್ತಿದ್ದಂತೆ ಕ್ಷೇತ್ರ ಶಿಕ್ಷಣಾಧಿಕಾರಿ ಎಂ. ಆರ್. ಮುಂಜೆ , ಅವರ ಕಾರ್ಯಾಲಯದಸಿಬ್ಬಂದಿ ವಿದ್ಯಾರ್ಥಿನಿಯಮನೆಗೆ ತೆರಳಿ ಸಿಹಿ ಹಂಚಿ ಸನ್ಮಾನಿಸಿ ಅಭಿನಂದಿಸಿದರು.

ವಿದ್ಯಾರ್ಥಿನಿ ಪ್ರಾರ್ಥನಾ ಮಾತನಾಡಿ, ನಾನು ಎಲ್ಲಾ ವಿದ್ಯಾರ್ಥಿಗಳ ರೀತಿಯಲ್ಲಿ ಸಾಮಾನ್ಯವಾಗಿ ವಿದ್ಯಾಭ್ಯಾಸ ಮಾಡುತಿದ್ದೆ, ನನಗೆ 625ಕ್ಕೆ 625 ಅಂಕಗಳು ಬರುವ ಮೂಲಕ ರಾಜ್ಯಕ್ಕೆ ಪ್ರಥಮ ಸ್ಥಾನ ಬಂದಿರುವುದು ಸಂತಸ ತಂದಿದೆ. ನನಗೆ ಮಾರ್ಗದರ್ಶನ ಮಾಡಿದ ಎಲ್ಲಾ ಗುರುಗಳಿಗೆ, ಪ್ರೋತ್ಸಾಹ ನೀಡಿದ ತಂದೆ ತಾಯಿಗೆ ಧನ್ಯವಾದಗಳು ಹೇಳುತ್ತೇನೆ. ಸಾಧನೆಗೆ ಬಡತನ ಅಡ್ಡಿಯಾಗುವುದಿಲ್ಲ, ಸಾಧಿಸುವ ಛಲವಿದ್ದರೆ ಸಾಧನೆ ಸುಲಭ ಎಂಬುದಕ್ಕೆ ನಾನೇ ಉದಾರಣೆ. ನನ್ನ ಸಾಧನೆಯನ್ನು ಕಂಡು ಶಾಲೆಯ ಶಿಕ್ಷಕರು, ಕೇತ್ರ ಶಿಕ್ಷಣ ಅಧಿಕಾರಿಗಳು ಮನೆಗೆ ಬಂದು ಸಿಹಿ ಹಂಚಿ ಸನ್ಮಾನಿಸಿರುವುದು ನನಗೆ ಖುಷಿ ತಂದಿದೆ. ಅವರೆಲ್ಲರಿಗೂ ನಮ್ಮ ಕುಟುಂಬದ ಪರವಾಗಿ ಧನ್ಯವಾದ ಸಲ್ಲಿಸಿ ಹರ್ಷ ವ್ಯಕ್ತಪಡಿಸಿದಳು.

> **ನಮ್ಮ ತಾಲೂಕಿನ ವಿದ್ಯಾರ್ಥಿ ಸಾಧನೆ ನಮಗೆ ಹರ್ಷ ತಂದಿದೆ. ಬೆಳಗಾವಿ ಜಿಲ್ಲೆಗೆ ಈ ವಿದ್ಯಾರ್ಥಿನಿ ಪ್ರಥಮ ಬಂದಿದ್ದಾಳೆ. ಕಠಿಣ, ಸತತ ಪರಿಶ್ರಮದಿಂದ ಸಾಧನೆ ಮಾಡೋಕೆ ಸಾಧ. ನಮ್ಮ ತಾಲೂಕಿಗೆ ವಿದ್ಯಾರ್ಥಿನಿ ಮಾದರಿಯಾಗಿದ್ದಾಳೆ, ಪರೀಕ್ಷೆ ಮುಂಚಿತವಾಗಿ ಹಲವು ರೂಪುರೇಷೆಗಳನ್ನು ಸಿದ್ಧಪಡಿಸಿದ್ದರಿಂದ ಎಂಥಹಾ ಸಾಧನೆಗೆ ನಮ್ಮ ತಾಲೂಕಿನಲ್ಲಿ ಸಫಲವಾಗಿದೆ. ಸರ್ಕಾರಿ ಶಾಲೆ ಅಂದ್ರೆ ಮೂಗು ಮುರಿಯವರ ಮಧ್ಯದಲ್ಲಿ ಈ ವಿದ್ಯಾರ್ಥಿನಿ ಎಲ್ಲರಿಗೂ ಕೂಡ ಮಾದರಿಯಾಗಿದ್ದಾಳೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಹರ್ಷ ವ್ಯಕ್ತಪಡಿಸಿದರು.**
>
> **■ ಎಂ.ಆರ್.ಮುಂಜೆ,**
> **ಕ್ಷೇತ್ರ ಶಿಕ್ಷಣಾಧಿಕಾರಿ**

ಏ.26ರಂದು ವಿಶಗುರು ಬಸವ ಭಾವಚಿತ್ರ ಬೃಹತ್ ಮೆರವಣಿಗೆ

ಬೆಳಗಾವಿ: ವಿಶ್ವಗುರು ಜಗಜ್ಯೋತಿ ಬಸವೇಶ್ವರರ ಜಯಂತಿ ಅಂಗವಾಗಿ ಏ.26 ರಂದು ಬೆಳಗಾವಿಯಲ್ಲಿ ಬೃಹತ್ ಮೆರವಣಿಗೆ ಆಯೋಜಿಸಲಾಗಿದೆ ಎಂದು ಬಸವ ಜಯಂತಿ ಉತ್ಸವ ಸಮಿತಿ ಸಂಚಾಲಕ ಬಸವರಾಜ ರೊಟ್ಟಿ ಹೇಳಿದರು.

ಗುರುವಾರ ನಗರದ ಕನ್ನಡ ಸಾಹಿತ್ಯ ಭವನದಲ್ಲಿಪತ್ರಿಕಾಗೋಷ್ಠಿಯಲ್ಲಿಮಾತನಾಡಿ, ಏ.26ರಂದು ಸಂಜೆ 4ಕ್ಕೆ ನಗರ ಕಿತ್ತೂರು ರಾಣಿ ಚೆನ್ನಮ್ಮವೃತ್ತದಿಂದ ಪ್ರಾರಂಭವಾಗುವ ಮೆರವಣಿಗೆಯಲ್ಲಿ ಶಾಸಕರು, ಸಂಸದರು ಹಾಗೂ ಎಲ್ಲ ಬಸವಪರ ಸಂಘಟನೆಗಳ ಮುಖಂಡರು ಭಾಗವಹಿಸುವರು ಎಂದರು.

ಮೆರವಣಿಗೆ ಕಾಕತಿ ವೇಸ, ಗಣಪತಿ ಗಲ್ಲಿ, ಮಾರುತಿ ಗಲ್ಲಿ, ರಾಮದೇವ್ ಗಲ್ಲಿ, ಕಾಲೇಜ್ ರೋಡ್ ಮುಂತಾದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಲಿಂಗರಾಜ್ ಕಾಲೇಜಿನ ಆವರಣದಲ್ಲಿ ಮುಕ್ತಾಯಗೊಳ್ಳಲಿದೆ. ಮಹಿಳಾ ಘಟಕಗಳು, ಯುವಕ ಸಂಘಟನೆಗಳ ಹಾಗೂ ವಿವಿಧ ಸಂಘಟನೆಗಳ ಸದಸ್ಯರು ಸಾವಿರಾರು ಸಂಖ್ಯೆಯಲ್ಲಿ ಪಾಲ್ಗೊಳ್ಳುವ ನಿರೀಕ್ಷೆಯಿದೆ. ಇದರೊಂದಿಗೆ ವಿಶೇಷ ಆಕರ್ಷಣೆಯಾಗಿ ಲಿಂಗರಾಜ ಕಾಲೇಜ್ ಆವರಣದಲ್ಲಿ ಲೇಸರ್ ಶೋ, ಕ್ರ್ಯಾಕರ್ ಶೋ ಸೇರಿದಂತೆ ವಿವಿಧ ಆಕರ್ಷಕ ಕಾರ್ಯಕ್ರಮಗಳು ನಡೆಯಲಿವೆ ಎಂದರು.

ಜಯಂತಿ ಅಂಗವಾಗಿ ಬಸವೇಶ್ವರರ ಸಮಾನತೆ, ಶ್ರಮ ಹಾಗೂ ನೈತಿಕ ಮೌಲ್ಯಗಳ ಸಂದೇಶ ಜನರಿಗೆ ತಲುಪಿಸುವ ಉದ್ದೇಶದಿಂದ ಪೂಜೆ, ಅಭಿಷೇಕ, ಮೆರವಣಿಗೆ ಹಾಗೂ ಬಸವಾದಿ ಶರಣರ ಆಧಾರಿತ ಸಾಂಸ್ಕೃತಿಕ ಕಾರ್ಯಕ್ರಮ ರೂಪಿಸಲಾಗಿದೆ ಎಂದರು.

ಮೆರವಣಿಗೆ ಬಳಿಕ ಲಿಂಗರಾಜ್ ಕಾಲೇಜು ಮೈದಾನದಲ್ಲಿ ಮೆರವಣಿಗೆಯಲ್ಲಿ ಭಾಗವಹಿಸಿದ ಬಸವ ಭಕ್ತರಿಗೆ ಮಹಾಪ್ರಸಾದದ ವ್ಯವಸ್ಥೆ ಮಾಡಲಾಗಿದೆ. ಸಂಜೆ ಧಾರ್ಮಿಕ ಸಭೆ ನಡೆಯಲಿದ್ದು, ಉಪನ್ಯಾಸ ಆಯೋಜಿಸಲಾಗಿದೆ. ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಮಹೋತ್ಸವ ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿದರು.

ಈ ವೇಳೆ ಮುರುಗೇಂದ್ರಗೌಡ ಪಾಟೀಲ, ಅಶೋಕ ಮಳಗಲಿ, ಈರಣ್ಣ ದಯಣ್ಣವರ , ಶಂಕರ ಗುಡಸ್, ಮನೋಹರ ಪಡುಕಲಕಟ್ಟಿ, ರಮೇಶ ತುಬಚಿ, ಮುರುಗೆಪ್ಪ ಬಾಳಿ, ಮಾಂತೇಶ್ ಗುಡಸ್, ಕೆ. ಶರಣ ಪ್ರಸಾದ, ಆನಂದ್ ಗುಡಸ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಅನಧಿಕೃತ ಕಟ್ಟಡ ನಿರ್ಮಾಣ; ಜೆಸಿಬಿ ಗರ್ಜನೆ

ಬೆಳಗಾವಿ: ನಗರದಲ್ಲಿ ಪಾಲಿಕೆ ನಿಯಮ ಗಾಳಿಗೆ ತೂರಿ ಕಾನೂನು ಬಾಹಿರವಾಗಿ, ಮಾರುತಿ ಗಲ್ಲಿಯಲ್ಲಿ ಅನಧಿಕೃತವಾಗಿ ನಿರ್ಮಿಸಲಾದ ನಾಲ್ಕಂತಸ್ತಿನ ಕಟ್ಟಡದ ಮೇಲೆ ಮಹಾ ನಗರ ಪಾಲಿಕೆ ಅಧಿಕಾರಿಗಳು ಜೆಸಿಬಿಗಳ ಮೂಲಕ ಭಾಗಶಃ ತೆರವು ಕಾರ್ಯಾಚರಣೆ ನಡೆಸಿದರು.

ನಗರದ ಹೃದಯಭಾಗದಲ್ಲೇ ನಡೆದ ಈ ಕ್ರಮ ಸಾರ್ವಜನಿಕರಲ್ಲಿ ಕುತೂಹಲಕ್ಕೆ ಕಾರಣವಾಯಿತು.

ಈ ಕಾರ್ಯಾಚರಣೆ ಅಕ್ರಮ ಕಟ್ಟಡಗಳ ವಿರುದ್ಧ ಪಾಲಿಕೆ ಕಠಿಣ ಕ್ರಮ ಕೈಗೊಳ್ಳುತ್ತಿದೆ ಎಂಬ ಸಂದೇಶ ನೀಡಿದಂತಾಗಿದೆ. ಆದರೆ ಕಟ್ಟಡದ ಬಾಡಿಗೆದಾರ ಯುನುಸ್ ಜಮಾದಾರ್ ಯಾವುದೇ ಪೂರ್ವ ನೋಟಿಸ್ ನೀಡದೇ ಏಕಾಏಕಿ ತೆರವು ಕಾರ್ಯಾಚರಣೆ ನಡೆಸಲಾಗಿದೆ ಎಂದು ಆರೋಪಿಸಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಅಂಗಡಿಯಲ್ಲಿದ್ದ ವಸ್ತುಗಳನ್ನು ಹೊರ ತೆಗೆದುಕೊಳ್ಳಲು ಸಮಯ ಕೊಡದೆ ಲಕ್ಷಾಂತರ ರೂ. ನಷ್ಟ ಉಂಟಾಗಿದೆ ಎಂದು ದೂರಿದ್ದಾರೆ. ಇದರ ಜೊತೆಗೆ ಕಟ್ಟಡಕ್ಕೆ ಸಂಬಂಧಿಸಿದಂತೆ ನಕಲಿ ದಾಖಲೆಗಳ ಬಳಕೆ ನಡೆದಿದೆ ಎಂಬ ಆರೋಪಗಳು ಕೇಳಿಬಂದಿದ್ದು, ಅನುಮತಿ ಪ್ರಕ್ರಿಯೆಯಲ್ಲಿನಿರ್ಲಕ್ಷ್ಯವಿತ್ತೇಎಂಬ ಪ್ರಶ್ನೆಗಳು ಉದ್ಭವಿಸಿವೆ. ಮಹಾನಗರ ಪಾಲಿಕೆಯ ಅಧಿಕೃತ ಪ್ರತಿಕ್ರಿಯೆ ಇನ್ನೂ ಲಭ್ಯವಾಗಿಲ್ಲ.

ಕುಂದಾನಗರಿ ಜನತೆಗೆ ತಂಪೆರೆದ ಮಳೆರಾಯ

ಬೆಳಗಾವಿ: ರಾಜ್ಯದಲ್ಲೇ ಆಹ್ಲಾದಕರ ವಾತಾವರಣಕ್ಕೆಹೆಸರಾದ ಬೆಳಗಾವಿ ಈಗ ಬಿಸಿಲಿನ ಬೇಗೆಗೆ ಕಾಯ್ದು ಕೆಂಡವಾಗಿದೆ. ಹಿಂದೆಂದೂ ಕಾಣದ ಬಿಸಿ ವಾತಾವರಣ ಬೆಳಗಾವಿ ನಗರ ಹಾಗೂ ಜಿಲ್ಲೆಯಲ್ಲಿ ದಾಖಲಾಗಿದ್ದು, 40.1ಡಿಗ್ರಿ ಸೆಲ್ಸಿಯಸ್ ಉಷ್ಣತೆ ಜನಜೀವನ ಕಂಗೆಡಿಸಿ ಅನಾರೋಗ್ಯ ಉಂಟು ಮಾಡಿದೆ.

ತಂಪೆರೆದ ಮಳೆರಾಯ: ಈ ನಡುವೆ ಗುರುವಾರ ಇಳಿ ಮಧ್ಯಾಹ್ನ ಅರ್ಧ ಗಂಟೆ ಬಿರುಸಿನ ಮಳೆಯಾಗಿ ಬೆಳಗಾವಿಯಲ್ಲಿ ತಂಪೆರೆದಿದೆ. ಮಧ್ಯಾಹ್ನ 3:30ರಿಂದ ಅರ್ಧ ಗಂಟೆ ಸುರಿದ ತುರುಸಿನ ಮಳೆ ಜನಜೀವನಕ್ಕೆ ತುಸು ನೆಮ್ಮದಿ ನೀಡಿದೆ. ಜನ ಜಾನುವಾರು, ಪ್ರಾಣಿ ಪಕ್ಷಿಗಳಿಗೆ ಜೀವಚೈತನ್ಯ ಜೊತೆಗೆ ಒಣಗಿ ಬಿರುಕು ಬಿಟ್ಟ ಕಾಂಕ್ರೀಟ್ ಕಟ್ಟಡಗಳಿಗೆ ತೇವ ನೀಡಿ ಮಳೆ ಇಡೀ ವಾತಾವರಣವನ್ನು ತೊಳೆದಿಟ್ಟ ಗಾಜಿನಂತೆ ಪರಿವರ್ತನೆ ಮಾಡಿತು.

ಮಲ್ಲಿಕಾರ್ಜುನ ಖರ್ಗೆ ವಿರುದ್ಧ ಬಿಜೆಪಿ ಬೃಹತ್ ಪ್ರತಿಭಟನೆ

ಬೆಳಗಾವಿ: ಕಾಂಗ್ರೆಸ್ ನ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಪ್ರಧಾನಿ ನರೇಂದ್ರ ಮೋದಿಯವರನ್ನು ಭಯೋತ್ಪಾದಕ ಎಂದು ಅವಹೇಳನಕಾರಿಯಾಗಿ ಕರೆದಿದ್ದನ್ನು ಖಂಡಿಸಿ ಬೆಳಗಾವಿ ಬಿಜೆಪಿ ಜಿಲ್ಲಾ ಯುವ ಮೋರ್ಚಾ ಕಾರ್ಯಕರ್ತರು ಮಲ್ಲಿಕಾರ್ಜುನ ಖರ್ಗೆ ವಿರುದ್ಧ ಬೃಹತ್ ಪ್ರತಿಭಟನೆ ನಡೆಸಿದರು.

ಗುರುವಾರ ನಗರದ ಕನ್ನಡ ಸಾಹಿತ್ಯ ಭವನದಲ್ಲಿ ನೂರಾರು ಬಿಜೆಪಿ ಕಾರ್ಯಕರ್ತರು ಜಮಾವಣೆಗೊಂಡು, ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ವಿರುದ್ಧ ಅಸಮಾಧಾನ ಹೊರ ಹಾಕಿ ಚನ್ನಮ್ಮ ವೃತ್ತದಲ್ಲಿ ಭ್ರಷ್ಟ ಕಾಂಗ್ರೆಸ್ ಹಾಗೂ ಮಲ್ಲಿಕಾರ್ಜುನ ಖರ್ಗೆ ವಿರುದ್ಧ ಆಕ್ರೋಶ ಹೊರ ಹಾಕಿ ಕ್ಷಮೆ ಕೇಳುವಂತೆ ಆಗ್ರಹಿಸಿದರು.

ಕಾಂಗ್ರೆಸ್ ಸಂಸ್ಕೃತಿ ಇನ್ನೊಬ್ಬರ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡುವುದೇ ಅವರ ಕೆಲಸ. ಅದನ್ನೆ ಮಾಡಿಕೊಂಡು ಬಂದಿದ್ದರೂ ಈಗಲೂ ಹಳೆ ಚಾಳಿ ಮುಂದುವರೆಸಿಕೊಂಡು ಬರುತ್ತಿದ್ದಾರೆ. ಮಲ್ಲಿಕಾರ್ಜುನ ಖರ್ಗೆ ಅಧ್ಯಕ್ಷ ಸ್ಥಾನದಿಂದ ಕೂಡಲೇ ವಜಾ ಗೊಳಿಸಬೇಕೆಂದು ಪ್ರತಿಭಟನೆ ಮೂಲಕ ಆಗ್ರಹಿಸಿದರು. ಈ ವೇಳೆ ಬಿಜೆಪಿ ಮುಖಂಡ ಮುರುಗೇಂದ್ರಗೌಡ ಪಾಟೀಲ, ಪಂಡಿತ ಓಗ್ಲೆ, ಮಹಿಳಾ ಕಾರ್ಯ ಕರ್ತರು ಸೇರಿದಂತೆ ಹಲವು ಬಿಜೆಪಿ ಕಾರ್ಯಕರ್ತರು ಇದ್ದರು.

ಕೃಷ್ಣಾ ನದಿ ನೀರು ಕ್ಷೀಣ: ಹೊಲ-ಗದ್ದೆಗಳಿಗೆ ನುಸುಳಿದ ಮೊಸಳೆ

ಅಥಣಿ: ಬಿಸಿಲಿನ ಬೇಗುದಿಗೆ ಕೃಷ್ಣಾ ನದಿಯಲ್ಲಿನ ನೀರು ದಿನದಿಂದ ದಿನಕ್ಕೆ ಕಡಿಮೆಯಾಗುತ್ತಿದ್ದು, ಹಿಪ್ಪರಗಿ ಜಲಾಶಯದಲ್ಲಿ ನೀರಿನ ಪ್ರಮಾಣ ತೀರಾ ಕಡಿಮೆಯಾಗಿರುವುದರಿಂದ ಅಲ್ಲಿರುವ ಜಲಚರ ಪ್ರಾಣಿಗಳು ನೀರಿನಿಂದ ಹೊರಗಡೆ ಬಂದು ವಲಸೆ ಹೋಗುತ್ತಿವೆ. ಆಹಾರವನ್ನು ಅರಸಿಕೊಂಡು ಮೊಸಳೆಗಳು ರೈತರ ಹೊಲ-ಗದ್ದೆಗಳಿಗೆ ನುಸಳುತ್ತಿವೆ. ಇದರಿಂದ ನದಿ ಪಾತ್ರದ ಗ್ರಾಮಸ್ಥರಲ್ಲಿ ಆತಂಕ ಮೂಡಿಸಿದೆ.

ತಾಲೂಕಿನ ಶಿರಹಟ್ಟಿ ಗ್ರಾಮದ ನದಿ ಪಾತ್ರದಲ್ಲಿ ದೊಡ್ಡ ಮೊಸಳೆ ಕಂಡಿತ್ತು. ಗ್ರಾಮದ ರೈತರು ಮತ್ತು ಯುವಕರು ಒಗ್ಗೂಡಿ ಬಲೆ ಬೀಸಿ 12 ಅಡಿ ಉದ್ದದ ದೊಡ್ಡ ಮೊಸಳೆ ಸೆರೆ ಹಿಡಿದು ಹಗ್ಗದಿಂದ ಬಂಧಿಸಿ ವಾಹನದಲ್ಲಿ ಹಾಕಿಕೊಂಡು ಅಥಣಿಯ ಪ್ರಾದೇಶಿಕ ಅರಣ್ಯ ಇಲಾಖೆಗೆ ಒಪ್ಪಿಸಿದ್ದಾರೆ.

ಮೊಸಳೆಯನ್ನು ಹಿಡಕಲ್ ಜಲಾಶಯದ ನೀರಿನಲ್ಲಿ ಸುರಕ್ಷಿತವಾಗಿ ಬಿಡಲಾಗಿದೆ ಎಂದು ಅರಣ್ಯ ಅಧಿಕಾರಿ ರಾಕೇಶ ಅರ್ಜುನವಾಡ ತಿಳಿಸಿದ್ದಾರೆ.

ಕೃಷ್ಣಾ ನದಿಯಲ್ಲಿ ಹಾಗೂ ರೈತರ ಕಬ್ಬಿನ ತೋಟಗಳಲ್ಲಿ ಹಲವು ದಿನಗಳಿಂದ ಮೊಸಳೆ ಓಡಾಡುತ್ತಿವೆ. ಇದರಿಂದನಾಗರಿಕರಲ್ಲಿ ಭಯ ಮೂಡಿದ್ದು, ಸಂಬಂಧಪಟ್ಟ ಅಧಿಕಾರಿಗಳು ಮೊಸಳೆ ತೆರವು ಮಾಡಬೇಕು ಎಂದು ನದಿ ಪಾತ್ರದ ಗ್ರಾಮಸ್ಥರು ಆಗ್ರಹಿಸಿದ್ದಾರೆ.

ರೈತರು ದನ ಕರುಗಳ ಬಗ್ಗೆ ಎಚ್ಚರಿಕೆ ಇರಲಿ: ಕೃಷ್ಣಾ ನದಿ ನೀರಿನ ಪ್ರಮಾಣ ಕಡಿಮೆಯಾಗುತ್ತಿದ್ದಂತೆ ಅವುಗಳಿಗೆ ಆಹಾರದ ಕೊರತೆಯಿಂದಾಗಿ ನೀರಿನಿಂದ ಹೊರಗಡೆ ಬರುತ್ತವೆ. ಮಾನವರು ಕೂಡ ಹೊಟ್ಟೆಪಾಡಿಗಾಗಿ ಗುಳೇ ಹೋಗುವಂತೆ ಅವು ಕೂಡ ನೀರು ಇರುವ ಸ್ಥಳಕ್ಕೆ ವಲಸೆ ಹೋಗಲು ಹೊರಗೆ ಬರುತ್ತವೆ. ಆಹಾರಕ್ಕಾಗಿ ಅವು ಎಮ್ಮೆ, ಹಸು, ಮೇಕೆ, ಇನ್ನಿತರ ಸಾಕು ಪ್ರಾಣಿಗಳನ್ನ ಭೇಟಿಯಾಡುತ್ತವೆ. ಆದ್ದರಿಂದ ನದಿ ಪಾತ್ರದ ರೈತರು ಜಾಗೃತಿ ವಹಿಸಬೇಕು. ಈ ಸಂದರ್ಭದಲ್ಲಿ ಬಟ್ಟೆ ತೊಳೆಯಲು, ಸ್ನಾನ ಮಾಡಲು, ಧನಕರಗಳ ಮೈತೊಳೆಯಲು ಜನರು ನದಿ ನೀರಿಗೆ ಇಳಿಯಬಾರದು. ನದಿಯಿಂದ ಮೊಸಳೆಗಳು ಹೊರಗಡೆ ಬಂದಾಗ ನಮ್ಮ ಅರಣ್ಯ ಇಲಾಖೆ ಕಚೇರಿಗೆ ಇಲ್ಲವೇ ಅಗ್ನಿಶಾಮಕ ಠಾಣೆಗೆ ಮಾಹಿತಿ ನೀಡಬೇಕು ಎಂದು ಪ್ರಾದೇಶಿಕ ಅರಣ್ಯ ಅಧಿಕಾರಿ ರಾಕೇಶ ಅರ್ಜುನವಾಡ ಹೇಳಿದರು.

ಸನಾತನ ಧರ್ಮದ ರಕ್ಷಣೆಗೆ ಶ್ರಮಿಸಿ

ರಾಮದುರ್ಗ: ಸನಾತನ ಹಿಂದೂಧರ್ಮದ ಅಭಿವೃದ್ಧಿಗೆ ರಾಮಾನುಜಾಚಾರ್ಯರು ಕೊಡುಗೆ ಮಹತ್ವದ್ದಾಗಿದ್ದು ಪ್ರತಿಯೊಬ್ಬರು ರಾಮಾನುಜಾಚಾರ್ಯರಂತೆ ಸನಾತನ ಧರ್ಮದ ರಕ್ಷಣೆಗೆ ಶ್ರಮಿಸುವ ಮೂಲಕ ಧರ್ಮ ಸಂರಕ್ಷಿಸಲು ಶ್ರಮಿಸಬೇಕೆಂದು ವಿಜೇಯೇಂದ್ರಚಾರ್ಯ ಜೋಶಿ ಹೇಳಿದರು.

ಗುರುವಾರ ಪಟ್ಟಣದ ಲಕ್ಷ್ಮೀ ವೆಂಕಟೇಶ್ವರ ದೇವಸ್ಥಾನದಲ್ಲಿ ನಡೆದ ರಾಮಾನುಜಾಚಾರ್ಯರ 1009ನೇ ಜಯಂತ್ಯುತ್ಸವದಲ್ಲಿ ಮಾತನಾಡಿ, ಪ್ರತಿಯೊಬ್ಬರು ರಾಮಾನುಜಾಚಾರ್ಯರ ಆದರ್ಶ ಮತ್ತು ತತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ಲಾಲೂದಾಸ ಮಹಾರಾಜರು ಸಾನ್ನಿಧ್ಯ ವಹಿಸಿದರು. ವಿಶ್ವಹಿಂದೂ ಪರಿಷತ ತಾಲೂಕಾ ಅಧ್ಯಕ್ಷ ಪ್ರಕಾಶ ಸುಳೇಬಾವಿ, ಗೋಪಾಲಪ್ಪ ಮದಿ, ಜಾದವ, ಮಾಜಿ ಸೈನಿಕ ಮಂಡಲೀಕಪ್ಪ ನಡಗಡ್ಡಿ, ಪುರುಷೋತ್ತಮ ಲಾಹೋಟಿ, ಮನೋಜ ಕಾಂಕಾಣಿ, ಚಂದ್ರಕಂತ ಲಾಹೋಟಿ, ಮೋಹನ ವಾಳಿ, ಸಾಬಣ್ಣ ದೊಡಮನಿ ಸೇರಿದಂತೆ ಹಲವರಿದ್ದರು.

ಮೆರವಣಿಗೆ: ಪಟ್ಟಣದ ಪ್ರಮುಖ ಬೀದಿಗಳಲ್ಲಿ ರಾಮಾನುಜಾಚಾರ್ಯರ ಭಾವಚಿತ್ರದ ಮೆರವಣಿಗೆ ವಿಜೃಂಭಣೆಯಿಂದ ನಡೆಯಿತು.

ಕ್ರಿಕೆಟ್‌ಟೂರ್ನಮೆಂಟ್: ಸಿಆರ್ ಸುಪರ್ ತಂಡ ವಿಜೇತ

ಹುಕ್ಕೇರಿ: ತಾಲೂಕಿನ ಹೊಸೂರಗ್ರಾಮದಲ್ಲಿ ನಡೆದ 5ಸೀಜನ್ ಕ್ರಿಕೆಟ್ ಟೂರ್ನಮೆಂಟ್‌ನಲ್ಲಿ ಸಿಆರ್ ಸುಪರ್ ಬಾಯ್ಸ್ ತಂಡ ವಿಜೇತ ಆಗಿ ಟ್ರೋಫಿ ಗೆದ್ದುಕೊಂಡಿತು. ಇತ್ತೀಚಿಗೆ ನಡೆದ ಫೈನಲ್ ಪಂದ್ಯದಲ್ಲಿ ಎಂಪಿಆರ್ ಸರ್ಕಾರ ತಂಡ 9ವಿಕೆಟ್‌ನಿಂದ ಸೋಲಿಸಿದ ಸಿಆರ್ ಸುಪರ್‌ಬಾಯ್ಸ್ ಟ್ರೋಫಿ ತನ್ನದಾಗಿಸಿಕೊಂಡಿತ್ತು. ಎಂಪಿಆರ್ ಸರ್ಕಾರ ತಂಡ ರನ್ನರ್‌ಅಪ್‌ಆಯಿತು. ಖ್ಯಾತ ಗುತ್ತಿಗೆದಾರ ಅಭಿನಂದನ ಪಾಟೀಲ ಕೊಡ ಮಾಡಿದ ಟ್ರೋಫಿ, ನಗದು ಬಹುಮಾನ ವಿಜೇತ ತಂಡ ಪಡೆಯಿತು. ಗೆದ್ದ ತಂಡದ ಚೇತನ ಖಿನಾಜಿ, ರಮೇಶ ಕಾಂಬಳೆ,ಮೋಹಸಿನ ಡ್ಯಾಂ, ಅಮೀತ ಡ್ಯಾಂ, ಕಿರಣ ಪಾಟೀಲ, ಅಕ್ಬರ್ ಇಂಗಳಿ, ಅಲ್ತಾಫ್ ಇಂಗಳಿ, ಕೆಂಪಣ್ಣಾರಾಮಗೋನಟ್ಟಿ, ಅಕ್ಬರ್ ಸುಲ್ತಾನಪುರ, ಸಮ್ಮೇದ ಯರನಾಳ, ವಿವೇಕ್ ಕರಿ, ಸಮ್ಮೇದ ಖಿನಾಜಿ, ಕುಶಾಲ ನಾಗನೂರಿ ಮತ್ತಿತರರಿದ್ದರು.

ಎಸ್ಸೆಸ್ಸೆಲ್ಸಿ: ಸವದತ್ತಿಗೆ ಮೂರನೇ ಸ್ಥಾನ

ಸವದತ್ತಿ: ಎಸ್ಸೆಸ್ಸೆಲ್ಸಿ ಪರೀಕ್ಷೆಗೆ ಹಾಜರಾದವಿದ್ಯಾರ್ಥಿಗಳಸಂಖ್ಯೆ 5063 ಪಾಸಾದ ವಿದ್ಯಾರ್ಥಿಗಳ ಸಂಖ್ಯೆ 4849 ಅನುತ್ತೀರ್ಣ ವಿದ್ಯಾರ್ಥಿಗಳ ಸಂಖ್ಯೆ 214 ಶೇಕಡವಾರು ಫಲಿತಾಂಶ 95,77 ಜಿಲ್ಲಾ ಹಂತದಲ್ಲಿ ಸವದತ್ತಿ ತಾಲೂಕು ಮೂರನೇ ಸ್ಥಾನ ಪಡೆದಿರುತ್ತದೆ. 2024 25 ನೇ ಸಾಲಿನಲ್ಲಿ ಮೂರನೇ ಸ್ಥಾನ ಪಡೆದಿತ್ತು ಡಿಸ್ಟಿಂಕ್ಷನ್ ಶ್ರೇಣಿಯಲ್ಲಿ ಪಾಸಾದ ವಿದ್ಯಾರ್ಥಿಗಳ ಸಂಖ್ಯೆ 449 (10%) ಪ್ರಥಮ ಶ್ರೇಣಿಯಲ್ಲಿ ಪಾಸಾದ ವಿದ್ಯಾರ್ಥಿಗಳ ಸಂಖ್ಯೆ 885(17%) ದ್ವಿತೀಯ ಶ್ರೇಣಿಯಲ್ಲಿ ಪಾಸಾದ ವಿದ್ಯಾರ್ಥಿಗಳ ಸಂಖ್ಯೆ 937(19%) ತೃತೀಯ ಶ್ರೇಣಿಯಲ್ಲಿ ಪಾಸಾದ ವಿದ್ಯಾರ್ಥಿಗಳ ಸಂಖ್ಯೆ 2578 (51%) 6 ಕ್ಕಿಂತ ಅಧಿಕ ಅಂಕ ಗಳಿಸಿರುವ ವಿದ್ಯಾರ್ಥಿಗಳ ಸಂಖ್ಯೆ 78

ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ, ಕಿಟದಾಳದ ವಿದ್ಯಾರ್ಥಿನಿ ಶ್ರೇಯ ಅಡಿವೇಶ ಬೈಲವಾಡ 619 (ಶೇ.99,04%) ಅಂಕ ಪಡೆದು ಪ್ರಥಮ ಸ್ಥಾನ, ಸವದತ್ತಿ ಕುಮಾರೇಶ್ವರ ಆಂಗ್ಲ ಮಾಧ್ಯಮ ಪ್ರೌಢಶಾಲೆ ವಿದ್ಯಾರ್ಥಿ ಅಮೋಘ ಫಕೀರಪ್ಪ ನವಲಗುಂದ 618(ಶೇ.98–88) ಗಳಿಸಿ ತಾಲೂಕ ಹಂತದ ಟಾಪ್ ವಿದ್ಯಾರ್ಥಿಗಳಾಗಿ ಹೊರ ಹೊಮ್ಮಿದ್ದಾರೆ. ತಾಲೂಕಿನ ಹೊಸೂರು ಗ್ರಾಮದ ಎಸ್‌ಎನ್ ವಿವಿಎಸ್ ಪ್ರೌಢಶಾಲೆಯ ವಿದ್ಯಾರ್ಥಿನಿ ದಿವ್ಯ ಮಡಿವಾಳಪ್ಪ ಹೊಂಗಲ್ ತೃತೀಯ ಸ್ಥಾನ ಪಡೆದು 617 (ಶೇ.98 72) ತೃತೀಯ ಸ್ಥಾನ ಪಡೆದಿರುವ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ ಶಿವಾಪುರದ ರೇಣುಕಾ ಪ್ರವೀಣ್ ನರಿ 617(ಶೇ.98, 72) ಅಂಕ ಪಡೆದಿರುತ್ತಾರೆ ಶೇಕಡ ಅಂಕ ಪಡೆದಿರುತ್ತಾರೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಎ.ಎ.ಖಾಜಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ

ಮೂಡಲಗಿ ವಲಯಕ್ಕೆ ಶೇ. 95.48 ಫಲಿತಾಂಶ: ಬಿಇಒ

ಮೂಡಲಗಿ: ಪರೀಕ್ಷೆಗೆ ಹಾಜರಾದ ಒಟ್ಟು ವಿದ್ಯಾರ್ಥಿಗಳು 3483 ವಿದ್ಯಾರ್ಥಿನಿಯರು 3372 ಕ್ಷೇತ್ರಒಟ್ಟು 6855 ಉತ್ತುರ್ಣರಾದ ವಿದ್ಯಾರ್ಥಿಗಳು 6545 ವಲಯದ ಒಟ್ಟು ಪಲಿತಾಂಶ 95.48 ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಪ್ರಕಾಶ ಹಿರೇಮಠ ಹೇಳಿದರು.

ಶಿಕ್ಷಣಾಧಿಕಾರಿಗಳ ಕಾರ್ಯಾಲಯದಲ್ಲಿಕರೆದ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯತಿಳಿಸಿದ ಅವರು, 600ಕ್ಕಿಂತ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳು 170, ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳ ಸಂಖ್ಯೆ1422, ತಾಲೂಕಿಗೆ ಪ್ರಥಮರಾಜ್ಯಕ್ಕೆ ದ್ವಿತೀಯ

ವಿವೇಕ ಹಾಲಪ್ಪ ಸುಳ್ಳನ್ನವರ ಚೈತನ್ಯಆಶ್ರಮ ಆಂಗ್ಲ ಮಾಧ್ಯಮ ಶಾಲೆ ನಾಗನೂರ ಪಡೆದ ಅಂಕಗಳು 624, ಸುಚಿತ್ರಾ ಬಿ.ಎಸ್. ಚೈತನ್ಯ ಆಶ್ರಮಆಂಗ್ಲಮಾಧ್ಯಮ ಶಾಲೆ ನಾಗನೂರ ಪಡೆದ ಅಂಕಗಳು 621 ರಾಜ್ಯಕ್ಕೆಐದನೇ ಸ್ಥಾನ ತಾಲೂಕಿಗೆ 2 ನೇ ಸ್ಥಾನ, ಕಾವೇರಿ ವಿಠಲ ಅರಭಾವಿ ದಾನೇಶ್ವರ ಕನ್ನಡ ಮಾಧ್ಯಮ ಪ್ರೌಢ ಶಾಲೆ ಸತ್ತಿಗೇರತೋಟ ಅರಭಾವಿ ಪಡೆದ ಅಂಕ 621 ರಾಜ್ಯಕ್ಕೆ 5ನೇ ಸ್ಥಾನ, ಅಮೃತಾ ಶಿವಲಿಂಗ ನುಚ್ಚುಂಡಿ ಸರ್ಕಾರಿ ಪ್ರೌಢ ಶಾಲೆ ಶಿವಾಪೂರ ಪಡೆದ ಅಂಕ 620 ರಾಜ್ಯಕ್ಕೆ 6ನೇ ಸ್ಥಾನ, ದೇವಕಿ ಮಹಾಂತೇಶ ಒಬ್ಬನ್ನವರ ಮೊರಾರ್ಜಿ ದೇಸಾಯಿ ವಸತಿ ಶಾಲೆ ಮಲ್ಲಾಪೂರ ಪಿ.ಜಿ 620 ಅಂಕ ಪಡೆದು ರಾಜ್ಯಕ್ಕೆ 6ನೇ ಸ್ಥಾನ, ರೇವಪ್ಪ ಸಿದ್ದಪ್ಪ ಜೋಕಾನಟ್ಟಿ ಸರ್ಕಾರಿ ಪ್ರೌಢ ಶಾಲೆ ರಾಜಾಪೂರ 620 ರಾಜ್ಯಕ್ಕೆ 6ನೇ ಸ್ಥಾನ ತಾಲೂಕಿಗೆ 3 ನೇಸ್ಥಾನ ಪಡೆದಿದ್ದರೆ ಎಂದು ಮಾಹಿತಿ ನೀಡಿದರು.

ಕಿರುಸುದ್ದಿ

ಎಸೆಸೆಲ್ಸಿ ಫಲಿತಾಂಶ: ರಾಘವೇಂದ್ರ ಕಡತ ಪ್ರಥಮ

ಗೋಕಾಕ: ನಗರದ ಲಕ್ಷ್ಮಣರಾವ ಜಾರಕಿಹೊಳಿ ಆಂಗ್ಲ ಮಾಧ್ಯಮ ಪ್ರೌಢ ಶಾಲೆ ವಿದ್ಯಾರ್ಥಿಗಳು ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದ್ದಾರೆ ಇಬ್ಬರು ವಿದ್ಯಾರ್ಥಿಗಳು ಡಿಸ್ಟಿಂಕ್ಷನನಲ್ಲಿ, 13 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. ರಾಘವೇಂದ್ರ ಕಡತ 596(95.36)ಪ್ರಥಮ, ಸತೀಶ ಪೂಜೇರ 587(93.92)ದ್ವಿತೀಯ, ಅಕ್ಷತಾ ಬಡಿಗೇರ 549(87.84)ತೃತೀಯ ಸ್ಥಾನ ಪಡೆದಿದ್ದಾರೆ. ವಿದ್ಯಾರ್ಥಿಗಳ ಈ ಸಾಧನೆಯನ್ನು ಸಂಸ್ಥೆಯ ಚೇರಮನ ಡಾ.ಭೀಮಶಿ ಜಾರಕಿಹೊಳಿ, ವ್ಯವಸ್ಥಾಪಕ ನಿರ್ದೇಶಕ ಸನತ ಜಾರಕಿಹೊಳಿ, ಮುಖ್ಯೋಪಾಧ್ಯಾಯ ಎಚ್.ವಿ.ಪಾಗನೀಸ ಹಾಗೂ ಸಿಬ್ಬಂಧಿ ಅಭಿನಂಧಿಸಿದ್ದಾರೆ.

ಮಗನ ಫಲಿತಾಂಶ ನೋಡಿ ತಾಯಿ ಸಂತಸದ ಕಂಬನಿ

ಹಲ್ಯಾಳ: ಪ್ರತಿ ನಿತ್ಯ ಮನೆ ಮನೆಗೆ ತೆರಳಿ ಪೇಪರ್ ಹಾಕುವ ಬಾಲಕ ಆಕಾಶ ಬಿರಾದರ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ 625ಕ್ಕೆ 572 ಅಂಕ ಪಡೆದಿದ್ದಾನೆ. ತಾಯಿ ಅನಾರೋಗ್ಯದಲ್ಲಿದ್ದಾಗ ತಾಯಿಗೆ ಮನೆ ಕೆಲಸದಲ್ಲಿ ಮತ್ತು ಅಡುಗೆ ಮಾಡಲು ಪ್ರತಿನಿತ್ಯ ಸಹಾಯ ಮಾಡುತಿದ್ದ. ತಂದೆ ಲಾರಿ ಡ್ರೈವರ್ ಇದ್ರೂ ಮಕ್ಕಳ ಓದುವಿಗೆ ಏನು ಕೊರತೆ ಇಲ್ಲದಂತೆ ನೋಡಿಕೊಂಡಿದ್ದಾನೆ. ಬಡತನ ಮತ್ತು ಕಷ್ಟ ಸಮಯವನ್ನು ತನ್ನ ಸಾಧನೆಯ ಮೆಟ್ಟಿಲಾಗಿ ತಂದೆ ತಾಯಿ ನಂಬಿಕೆಗೆ ಅತ್ಯುತ್ತಮ ಸಾಧನೆ ಮಾಡಿದ್ದಾನೆ.

ಅಕ್ರಮ ಜಾಗ ಆಕ್ರಮಣ ಆರೋಪ: ಡಿಸಿಗೆ ಮನವಿ

ಬೆಳಗಾವಿ: ನಗರದಲ್ಲಿ ಅಕ್ರಮ ಜಾಗ ಅಕ್ರಮಣ ನಡೆಯುತ್ತಿರುವ ಬಗ್ಗೆ ಜಯ ಕರ್ನಾಟಕ ಸಂಘಟನೆ ತೀವ್ರ ಆಕ್ಷೇಪ ವ್ಯಕ್ತಪಡಿಸಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು. ನಗರದ ವ್ಯಾಪ್ತಿಯಲ್ಲಿ ಕೆಲವು ವ್ಯಕ್ತಿಗಳು ಸಾರ್ವಜನಿಕ ಹಾಗೂ ಸರ್ಕಾರಕ್ಕೆ ಸೇರಿದ ಜಾಗ ಅಕ್ರಮವಾಗಿ ಆಕ್ರಮಿಸಿಕೊಂಡಿರುವ ಬಗ್ಗೆ ಆರೋಪಿಸಲಾಗಿದೆ. ಈ ಕುರಿತು ಹಲವು ಬಾರಿ ಅಧಿಕಾರಿಗಳ ಗಮನಕ್ಕೆ ತಂದರೂ ಯಾವುದೇ ಪ್ರಯೋಜನೆ ಯಾಗಿಲ್ಲ ಎಂದು ಜಯ ಕರ್ನಾಟಕ ಸಂಘಟನೆಯ ಕಾರ್ಯಕರ್ತರು ಪ್ರತಿಭಟನೆಯಲ್ಲಿ ಆರೋಪಿಸಿದರು. ಇದರಿಂದ ಸಾರ್ವಜನಿಕರಿಗೆ ತೊಂದರೆ ಉಂಟಾಗುತ್ತಿದ್ದು, ಸ್ಥಳೀಯ ನಿವಾಸಿಗಳ ಹಿತಾಸಕ್ತಿಗೆ ಧಕ್ಕೆ ಉಂಟು ಮಾಡುತ್ತಿದೆ. ಕೂಡಲೇ ಅಕ್ರಮಣ ತಕ್ಷಣ ತೆರವುಗೊಳಿಸಿ, ಸಂಬಂಧಪಟ್ಟವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಸಾತೋಬ್ಬಾ ವಿಠಲ್ ಕಾಮಕರ್ ಪ್ರತಿಭಟನೆಯಲ್ಲಿ ಆಗ್ರಹಿಸಿದರು.

15 ಲಕ್ಷ ರೂ ಗಳಿಗೆ ರಾಘವೇಂದ್ರ ರಮೇಶ್ ನಾಯ್ಕ್ ಒಪ್ಪಂದ ಮಾಡಿಕೊಂಡಿದ್ದರು. ಆದರೆ ಮಾಡಿಕೊಂಡ ಒಪ್ಪಂದದ ನಿಯಮ ಮುರಿದ್ದು ಹೆಚ್ಚು ಭೂಮಿಯನ್ನು ಅಕ್ರಮ ಮಾಡಿಕೊಂಡಿದ್ದಾರೆ ಎಂದು ಪ್ರತಿಭಟನೆಯಲ್ಲಿ ಅಸಮಾಧಾನವನ್ನು ಹೋರ ಹಾಕಿದರು. ಈ ವೇಳೆ ಸಂಘಟನೆಯ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಸೇರಿದಂತೆ ಇತರರು ಇದ್ದರು.

ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೂಡಲಗಿ: 110 ಕೆವಿ ವಿದ್ಯುತ್ ವಿತರಣಾ ಕೇಂದ್ರ ಮೂಡಲಗಿ ಉಪ ಕೇಂದ್ರದಲ್ಲಿ 110ಕೆವಿ ಬಸ್, ಐ ಬಿಮ್ ನಲ್ಲಿ ಬಿರುಕುಕಂಡು ಬಂದಿರುವ ಕಾರಣ ತುರ್ತು ನಿರ್ವಹಣೆಯ ಕಾರ್ಯ ಕೈಗೊಳ್ಳುತ್ತಿರುವುದರಿಂದ ಶುಕ್ರವಾರ ಏ.24ರಂದು ಬೆಳಗ್ಗೆ 8ರಿಂದ ಮಧ್ಯಾಹ್ನ 3ರವರೆಗೆ ಮೂಡಲಗಿ, ಗುರ್ಲಾಪೂರ, ಪಟ್ಟಣದಲ್ಲಿ ಹಾಗೂ ಎಲ್ಲ ಗ್ರಾಮಗಳಲ್ಲಿ ಮತ್ತು ನೀರಾವರಿ ಪಂಪ್ ಸೆಟ್ ಮಾರ್ಗದ ವಿದ್ಯುತ್ ಪೂರೈಕೆಯಲ್ಲಿ ವಿದ್ಯುತ್ ವ್ಯತ್ಯಯಉಂಟಾಗಲಿದೆ ಕಾರಣ ಸಾರ್ವಜನಿಕರು ಸಹಕರಿಸಬೇಕು ಎಂದು ಹೆಸ್ಕಾಂ ಸಹಾಯಕಕಾರ್ಯ ನಿರ್ವಾಹಕಎಂಜಿನಿಯರ್ ಎಂ.ಎಸ್. ನಾಗನ್ನವರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಯಬಾಗ: ತಹಶೀಲ್ದಾರ್ ಕಚೇರಿಯಲ್ಲಿ ಮಹರ್ಷಿ ಭಗೀರಥ ಜಯಂತಿಯನ್ನು ಆಚರಿಸಲಾಯಿತು. ಗ್ರೇಡ್-2 ತಹಶೀಲ್ದಾರ್ ಡಿ.ಎಸ್. ಜಮಾದಾರ, ಉಪ ತಹಶೀಲ್ದಾರ್ ಪರಮಾನಂದ ಮಂಗಸೂಳಿ, ಕರ್ನಾಟಕ ರಾಜ್ಯ ಉಪ್ಪಾರ ಮಹಾಸಭಾ ರಾಜ್ಯ ಉಪಾಧ್ಯಕ್ಷೆ ಸಿದ್ದವ್ವ ಖಿಲಾರೆ, ಇವರು ಬರೆದಂತ ಪುಸ್ತಕ ಕೊಟ್ಟು ತಾಲೂಕಾ ಉಪ್ಪಾರ ಸಮಾಜದ ವತಿಯಿಂದ ಅಭಿನಂದನದಿಸಲಾಯಿತು. ತಾಲೂಕು ಅಧ್ಯಕ್ಷೆ ಸುನಂದಾ ಉಪ್ಪಾರ, ಉಪಾಧ್ಯಕ್ಷೆ ದೊಡ್ಡವ್ವ ಉಪ್ಪಾರ, ಮಾಯಕ್ಕಾ ಹಾರೂಗೇರಿ, ಲಕ್ಷ್ಮೀ ಅಳಗವಾಡಿ, ಮಾಯಕ್ಕಾ ಮೂಡಲಗಿ, ಮತ್ತು ಮುಖಂಡರಾದ, ಮಾಯಾಪ್ಪ ಕುಗೆ, ಗೋಪಾಲ ಬಿದರಿ, ಅಜಿತ್ ಮುಂಜಿ ಹಾಜರಿದ್ದರು.

ವಿಶ್ವ ಪಶು ವೈದ್ಯಕೀಯ ದಿನಾಚರಣೆ ನಾಳೆ

ಬೆಳಗಾವಿ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ, ಪಶುಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ಬೆಂಗಳೂರು ಹಾಗೂ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ. ಬೆಳಗಾವಿ ಇವರ ಸಂಯುಕ್ತ ಆಶ್ರಯದಲ್ಲಿ ವಿಶ್ವ ಪಶುವೈದ್ಯಕೀಯ ದಿನಾಚರಣೆ ನಿಮಿತ್ತ ಏ.25 ರಂದು ಬೆಳಿಗ್ಗೆ 11ಕ್ಕೆ ಮಹಾಂತೇಶ ನಗರದ ಸ್ಪೇಷಾಲಿಟಿ ಪಶುವೈದ್ಯಕೀಯ ಆಸ್ಪತ್ರೆ ಆವರಣದಲ್ಲಿ 9ನೇ ಸುತ್ತಿನ ಕಾಲು ಬಾಯಿ ರೋಗದ ಲಸಿಕಾ ಕಾರ್ಯಕ್ರಮದ ಉದ್ಘಾಟನೆ ಆಯೋಜಿಸಲಾಗಿದೆ.

ಸಚಿವ ಸತೀಶ ಜಾರಕಿಹೊಳಿ ಉದ್ಘಾಟಿಸುವರು. ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಮುಖ್ಯ ಅತಿಥಿಗಳಾಗಿ ಆಗಮಿಸುವರು. ಪಶು ಸಂಗೋಪನೆ ಮತ್ತು ರೇಷ್ಮೆ ಸಚಿವ ಕೆ.ವೆಂಕಟೇಶ್ ಅವರು ಕಾಯಕ್ರಮಕ್ಕೆ 9ನೇ ಸುತ್ತಿನ ಕಾಲು ಬಾಯಿ ರೋಗದ ಲಸಿಕಾ ಕಾರ್ಯಕ್ರಮಕ್ಕೆ ಚಾಲನೆ ನೀಡುವರು. ಬೆಳಗಾವಿ ಉತ್ತರ ಕ್ಷೇತ್ರದ ಶಾಸಕ ಆಸೀಫ್ ಸೇಠ್ ಅಧ್ಯಕ್ಷತೆ ವಹಿಸುವರು.

ರಾಜ್ಯ ಸಭೆ ಸಂಸದ ಈರಣ್ಣ ಕಡಾಡಿ, ಚಿಕ್ಕೋಡಿ ಲೋಕಸಭಾ ಸಂಸದೆ ಪ್ರಿಯಾಂಕಾ ಜಾರಕಿಹೊಳಿ, ಜಿಲ್ಲಾ ಲೋಕಸಭಾ ಸಂಸದ ಜಗದೀಶ್ ಶೆಟ್ಟರ, ಉತ್ತರ ಕನ್ನಡ ಲೋಕಸಭಾ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಅವರುಗಳು ಗೌರವಾನ್ವಿತ ಅತಿಥಿಗಳಾಗಿ ಆಗಮಿಸಲಿದ್ದಾರೆ. ಜಿಲ್ಲೆಯ ಎಲ್ಲ ಸಂಸದರು, ಶಾಸಕರು, ಪರಿಷತ್ ಸದಸ್ಯರು, ಜನಪ್ರತಿಧಿಗಳು ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ.

ಬೆಳಗಾವಿ : ಎಂ.ಕೆ.ಹುಬ್ಬಳ್ಳಿಯ ಮಲಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆಯಲ್ಲಿ ಸಾಂಸ್ಕೃತಿಕ ನಾಯಕ, ಜಗಜ್ಯೋತಿ ಶ್ರೀ ಬಸವೇಶ್ವರ ಜಯಂತಿ ಆಚರಿಸಲಾಯಿತು. ಕಾರ್ಖಾನೆಯ ಅಧ್ಯಕಕ್ಷ ಯಗಿರುವ ವಿಧಾನಪರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳಿ ಬಸವೇಶ್ವರರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದರು.ಈ ವೇಳೆ ಕಾರ್ಖಾನೆಯ ಉಪಾಧ್ಯಕ್ಷರು, ನಿರ್ದೇಶಕರು ಸಿಂಬಂದ್ದಿಗಳು ಸೇರಿದಂತೆ ಹಲವರು ಇದ್ದರು.

ಎಸ್ಸೆಸ್ಸೆಲ್ಸಿ ಫಲಿತಾಂಶ: ವಿದ್ಯಾರ್ಥಿನಿ ಅನನ್ಯಾ ತಾಲೂಕಿಗೆ 2 ರ್‍ಯಾಂಕ್

ಚ.ಕಿತ್ತೂರಿಗೆ ಸಂಜನಾ ಪ್ರಥಮ

ಚನ್ನಮ್ಮನ ಕಿತ್ತೂರು: ಎಸ್ಸೆಸ್ಸೆಲ್ಸಿ ಪರೀಕ್ಷೆಫಲಿತಾಂಶದಲ್ಲಿ ಬೆಳಗಾವಿ ಜಿಲ್ಲೆ ಚನ್ನಮ್ಮನ ಕಿತ್ತೂರು ತಾಲೂಕು ಪ್ರಥಮ ಸ್ಥಾನ ಗಳಿಸಿ ರಾಜ್ಯಕ್ಕೆ ಐದನೇ ಸ್ಥಾನ ಪಡೆಯುವ ಮೂಲಕ ಶೈಕ್ಷಣಿಕ ವಲಯದ ಸಾಧನೆ ಗಮನ ಸೆಳೆದಿದೆ.

ವಿದ್ಯಾರ್ಥಿಗಳು ತಾಲೂಕಿನಲ್ಲಿ ಒಟ್ಟು 1662 ವಿದ್ಯಾರ್ಥಿಗಳು ಹಾಜರಾಗಿದ್ದರು. ಅದರಲ್ಲಿ 1,623 ವಿದ್ಯಾರ್ಥಿಗಳು ಉತ್ತೀರ್ಣರಾಗಿ ಶೇ.97.55ರಷ್ಟು ಫಲಿತಾಂಶ ಪಡೆದು ಕಳೆದ ವರ್ಷದ ರಾಜ್ಯಕ್ಕೆ 34 ಸ್ಥಾನ ಪಡೆದಿದ್ದ ತಾಲೂಕು ಈ ವರ್ಷ ರಾಜ್ಯಕ್ಕೆ 5ನೇ ಸ್ಥಾನ ಪಡೆಯುವ ಮೂಲಕ ರಾಜ್ಯದ ಗಮನ ಸೆಳೆದಿದೆ ಕಿತ್ತೂರು ತಾಲೂಕು.

ಕಳೆದ ಸಾಲಿನಲ್ಲಿ 18 ವಿದ್ಯಾರ್ಥಿಗಳು 600ಕ್ಕೂ ಹೆಚ್ಚು ಅಂಕ ಪಡೆದುಕೊಂಡಿದ್ದರೂ ಈ ಬಾರಿ 66 ವಿದ್ಯಾರ್ಥಿಗಳು 600ಕ್ಕೂ ಹೆಚ್ಚು ಅಂಕ ಪಡೆದುಕೊಂಡಿರುವುದು ವಿಶೇಷ.

ಕಿತ್ತೂರಿನ ವಾ.ಎಸ್.ಬಿ. ಸ್ಮಾರಕ ಸೆಂಟ್ರಲ್ ಹಿಂದು ಆಂಗ್ಲ ಮಾಧ್ಯಮ ಶಾಲೆಯ ವಿದ್ಯಾರ್ಥಿನಿ ರೋಷಣಿ ಎಮ್ಮಿ 623 ಅಂಕ ಪಡೆದು ಜಿಲ್ಲೆಗೆ ಪ್ರಥಮ ಸ್ಥಾನ ಪಡೆದು ರಾಜ್ಯಕ್ಕೆ ತೃತೀಯ ಸ್ಥಾನ ಪಡೆದಿದ್ದಾಳೆ. ಗಡಗಿ ಪ್ರೌಢ ಶಾಲೆಯ ಕನ್ನಡ ಮಾಧ್ಯಮದ ಸಂಜನಾ ಅವರಾದಿ 623 ಅಂಕ ಪಡೆಯುವ ಮೂಲಕ ತಾಲೂಕಿಗೆ ಪ್ರಥಮ ಸ್ಥಾನ ಪಡೆದು. ರಾಜ್ಯಕ್ಕೆ ತೃತೀಯ ಸ್ಥಾನ ಪಡೆದಿದ್ದಾಳೆ. ಸರಕಾರಿ ಪ್ರೌಢ ಶಾಲೆಯ ವಿದ್ಯಾರ್ಥಿನಿ ಅನನ್ಯಾ ನೇಸರಗಿ 622 ಅಂಕ ಪಡೆಯುವ ಮೂಲಕ ತಾಲೂಕಿಗೆ ಎರಡನೇ ಸ್ಥಾನ. ರಾಜ್ಯಕ್ಕೆ 4ನೇ ಸ್ಥಾನ ಪಡೆದು ಶಾಲೆಗೆ ಕಿರ್ತಿ ತಂದಿದ್ದಾರೆ.

ಕಿತ್ತೂರು ತಾಲೂಕಿನಲ್ಲಿ ನಿವಾಸ ಶಾಲೆಯ ತರಬೇತಿ ಮೂಲಕ ಪ್ರತಿ ಶಾಲೆಯಲ್ಲಿ ಉತ್ತಮ ಸಾಧನೆ ಮಾಡಿದ ಎರಡು ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿಕೊಂಡು ಅವರನ್ನು ವಸತಿ ಶಾಲೆಯಲ್ಲಿ ಇಟ್ಟು 40 ವಿದ್ಯಾರ್ಥಿಗಳಿಗೆ ತರಬೇತಿ ನೀಡಲಾಗಿತ್ತು. ಪರಿಣಾಮ ಇಲ್ಲಿ ಶಿಕ್ಷಣ ಪಡೆದ 36 ವಿದ್ಯಾರ್ಥಿಗಳು 600ಕ್ಕೂ ಹೆಚ್ಚು ಅಂಕ ಪಡೆದು ವಿಶೇಷ ಸಾಧನೆ ಮಾಡಿದ್ದಾರೆ. ಕಿತ್ತೂರು ತಾಲೂಕಿನಲ್ಲಿ ಶೈಕ್ಷಣಿಕ ಗುಣಮಟ್ಟ ಹೆಚ್ಚಿಸಲು ಶಾಸಕ ಬಾಬಾಸಾಹೇಬ ಪಾಟೀಲ ತಮ್ಮ ವಿಶೇಷ ಪ್ರಯತ್ನದ ಮೂಲಕ ಕ್ಷೇತ್ರ ಶಿಕ್ಷಣಾಧಿಕಾರಿ ಚನ್ನಬಸಪ್ಪ ತುಬಾಕದ ಅವರ ಕಾರ್ಯ ಚಟುವಟಿಕೆಯಿಂದ ಕಳೆದ ಎರಡು ವರ್ಷದಲ್ಲಿ ಹೊಸ ಹೊಸ ಪ್ರಯೋಗಗಳ ಮೂಲಕ ಕಿತ್ತೂರು ತಾಲೂಕು ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ರಾಜ್ಯ ಮತ್ತು ಜಿಲ್ಲೆಯ ಮಟ್ಟದಲ್ಲಿ ಪರಿಕ್ಷಾ ಫಲಿತಾಂಶದಲ್ಲಿ ಗಣನೀಯ ಸಾಧನೆ ಮಾಡಿದೆ.

ವಿವಿಧ ಕಾಮಗಾರಿಗಳಿಗೆ ಭೂಮಿಪೂಜೆ

ಆಕ್ಕೋಡಿ: ಹಿರೇಕೋಡಿ ಗ್ರಾಮದಲ್ಲಿ 26.85 ಕೋಟಿ ರೂ. ಮೊತ್ತದಲ್ಲಿ ವಿವಿಧ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಮುಂದಿನ ದಿನಗಳಲ್ಲಿ ಗ್ರಾಮದಲ್ಲಿ ಚರಂಡಿ, ರಸ್ತೆ, ಸಮುದಾಯ ಭವನ, ಶಾಲೆ, ಕಾಲೇಜುಗಳ ಕಟ್ಟಡ ನಿರ್ಮಾಣ ಮಾಡುವ ಮೂಲಕ ಸಮಗ್ರವಾಗಿ ಅಭಿವೃದ್ಧಿ ಮಾಡಲಾಗುವುದು ಎಂದು ಶಾಸಕ ಗಣೇಶ ಹುಕ್ಕೇರಿ ಹೇಳಿದರು.

ತಾಲ್ಲೂಕಿನ ಹಿರೇಕೋಡಿ ಗ್ರಾಮದಲ್ಲಿ ಗುರುವಾರ 1.25 ಕೋಟಿ ರೂ. ಮೊತ್ತದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡುತ್ತಾ, ಗ್ರಾಮದಲ್ಲಿ 16 ಕೋಟಿ ರೂ. ಮೊತ್ತದಲ್ಲಿ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ಪಿಯು ಕಾಲೇಜು ಕಟ್ಟಡ, 8.88 ಕೋಟಿ ರೂ. ವೆಚ್ಚದಲ್ಲಿ ವಸತಿ ಶಾಲೆಯ ಬಹುಮಹಡಿ ಕಟ್ಟಡ, 1.97 ಕೋಟಿ ರೂ. ಅನುದಾನದಲ್ಲಿ ಶಾಲೆಗಳಿಗೆ ಹೆಚ್ಚುವರಿ ಕೊಠಡಿ ನಿರ್ಮಾಣ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿದೆ. ಶೀಘ್ರದಲ್ಲಿಯೇ ಕಾಮಗಾರಿಗಳನ್ನು ಪೂರ್ಣಗೊಳಿಸಿ ಲೋಕಾರ್ಪಣೆ ಮಾಡುವ ಭರವಸೆ ನೀಡಿದರು.

ಗ್ರಾಮದಲ್ಲಿ ಶಾಸಕ ಗಣೇಶ ಹುಕ್ಕೇರಿ 50 ಲಕ್ಷ ರೂ. ವೊತ್ತದಲ್ಲಿ ಗ್ರಾಮದ ಪರಿಶಿಷ್ಟ ಜಾತಿ ಕಾಲೋನಿ ಸೇರಿದಂತೆ ವಿವಿಧೆಡೆ ಸಿ.ಸಿ.ರಸ್ತೆ ಹಾಗೂ ಚರಂಡಿ ನಿರ್ಮಾಣ, 50 ಲಕ್ಷ ರೂ. ವೊತ್ತದಲ್ಲಿ ರಸ್ತೆ ನಿರ್ಮಾಣ ಹಾಗೂ 25 ಲಕ್ಷ ರೂ. ವೊತ್ತದಲ್ಲಿ ಹನುಮಾನ ದೇವಸ್ಥಾನದ ಕಟ್ಟಡ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆಯನ್ನು ನೆರವೇರಿಸಿದರು.

ಈ ಸಂದರ್ಭದಲ್ಲಿ ಮಾಜಿ ತಾಲೂಕು ಪಂಚಾಯಿತಿ ಸದಸ್ಯ ಸುರೇಶ ಚೌಗಲಾ, ಬಾಬರ್ ಪಟೇಲ, ಬಾಬಾಸಾಬ ಗುಡಿಮನಿ, ಮಹಾದೇವ ಪವಾಡಿ, ದಾದಾ ಪಟೇಲ, ರಾಮಾ ಬಂಡಗರ, ಅನ್ವರ್ ಮುಜಾವಾರ, ನಿಜಾಮ್ ಪಟೇಲ್, ಅಜೀತ ಘೋಸರವಾಡೆ, ಮಲ್ಲಿಕಾರ್ಜುನ ಚೌಗಲೆ, ಜಿತು ಕಾಂಬಳೆ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ಬಿ.ಎ.ನಾಯಕವಾಡಿ, ಕಿರಿಯ ಅಭಿಯಂತರ ಜಿ ಎಸ್ ಕಾಮಕರ, ಗುತ್ತಿಗೆದಾರ ರಾವಸಾಬ ಫಕೀರೆ, ಪಿಡಿಒ ರೇಖಾ ಬೆಳಕೂಡೆ ಇತರರು ಇದ್ದರು.

ಯರಗಟ್ಟಿ: ಪಟ್ಟಣದ ತಹಶೀಲ್ದಾರ್ ಕಚೇರಿ ಸಭಾಂಗಣದಲ್ಲಿ ಮಹರ್ಷಿ ಭಗೀರಥ ಜಯಂತಿ ಏರ್ಪಡಿಸಲಾಗಿತು. ತಹಶೀಲ್ದಾರ್ ಎಂ.ವಿ ಗುಂಡಪ್ಪಗೋಳ ಮಹರ್ಷಿ ಭಗೀರಥ ಭಾವಚಿತ್ರಕ್ಕೆ ಪೂಜೆ ಪುಷ್ಪಾರ್ಚನೆ ಸಲ್ಲಿಸಿದರು. ಮಹಾದೇವ ಯಡ್ರಾಂವಿ, ಪಾಂಡು ಕಲಕುಟ್ರಿ, ಮಾರುತಿ ಬಂಡ್ರೋಳಿ, ಎ.ಕೆ. ಕುಲಮೂರ, ಕೃಷ್ಣ ಉಪ್ಪಾರ, ಎಂ.ಬಿ.ಕಲಕುಟ್ರಿ, ಮಹಾದೇವ ಮುರಗೋಡ, ಮುದಕಪ್ಪ ಬನ್ನೂರ, ಕಲ್ಲೋಳೆಪ್ಪ ಉಪ್ಪಾರ, ಕರೆಪ್ಪ ಕಲಕುಟ್ರಿ, ಲಕ್ಷ್ಮಣ ಪಾಟೀಲ, ಲಕ್ಷ್ಮಣ ಗೊಡಕುಂದರಗಿ, ಮಾರುತಿ ಕುಲಮಗೇರಿ, ಪುಂಡಲೀಕ ಉಪ್ಪಾರ, ಬಸವರಾಜ ಮನಿಕಟ್ಟಿ, ನಿಂಗಪ್ಪ ಹೊಟ್ಟಿ ಸೇರಿದಂತೆ ತಾಲೂಕಾ ಆಡಳಿತದ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ಶಾಸಕ ಗಣೇಶ ಹುಕ್ಕೇರಿಯಿಂದ ಗೋಶಾಲೆ ಉದ್ಘಾಟನೆ

ಚಿಕ್ಕೋಡಿ: ಗೋಶಾಲೆ ಸ್ಥಾಪಿಸುವ ಮೂಲಕ ದೇಶಿಯ ಹಸುಗಳ ರಕ್ಷಣೆ ಮಾಡಬೇಕಾದ ಗುರುತರ ಜವಾಬ್ದಾರಿಯು ರೈತರದಾಗಿದೆ. ವೇದಾಮೃತ ಗೋಶಾಲಾ ಚಾರಿಟೇಬಲ್ ಟ್ರಸ್ಟ್ ಗೋಶಾಲೆಯನ್ನು ತೆರೆದಿದ್ದು ಹೆಮ್ಮೆಯ ಸಂಗತಿಯಾಗಿದೆ ಎಂದು ಶಾಸಕ ಗಣೇಶ ಹುಕ್ಕೇರಿ ಹೇಳಿದರು.

ತಾಲ್ಲೂಕಿನ ಬಸವನಾಳಗಡ್ಡೆಯಲ್ಲಿ ವೇದಾಮೃತ ಗೋಶಾಲಾ ಚಾರಿಟೇಬಲ್ ಟ್ರಸ್ಟ್ ನಿಂದ ತೆರೆಯಲಾದ ಗೋಶಾಲೆಯನ್ನು ಗುರುವಾರ ಉದ್ಘಾಟಿಸಿ ಮಾತನಾಡಿದ ಅವರು, ವಿಧಾನ ಪರಿಷತ್ ಸದಸ್ಯ ಪ್ರಕಾಶ ಹುಕ್ಕೇರಿ ಪ್ರಯತ್ನದಿಂದ ಈ ಭಾಗದ ಸಹಸ್ರಾರು ಹೆಕ್ಟೇರ್ ಜಮೀನು ನೀರಾವರಿಗೊಳಪಟ್ಟಿದೆ. ಕೃಷಿಯೊಂದಿಗೆ ರೈತರು ಉಪಕಸುಬನ್ನಾಗಿ ದೇಶಿಯ ಆಕಳುಗಳನ್ನು ಸಾಕಬೇಕು. ಬಸವರಾಜ ಮಗದುಮ್ಮ ಅವರು ತೆರೆದಿರುವ ಗೋಶಾಲೆಯಲ್ಲಿ ಮುಂಬರುವದ ದಿನಗಳಲ್ಲಿ ಸಾವಿರಕ್ಕೂ ಹೆಚ್ಚು ಹಸುಗಳಿಗೆ ಆಶ್ರಯ ದೊರೆಯುವಂತಾಗಲಿ'' ಎಂದು ಆಶಿಸಿದರು.

ಬೆಂಗಳೂರಿನ ಡಿವೈಎಸ್ಪಿ ಬಸವರಾಜ ಮಗದುಮ್ಮ ಮಾತನಾಡಿ, ದೇಶಿಯ ಹಸುಗಳ ಸಾಕಾಣಿಕೆಯಿಂದ ಕೃಷಿ ಹಾಗೂ ಕೃಷಿಕ ಉಳಿಯಲು ಸಾಧ್ಯವಿದೆ. ಜವಾರಿ ಆಕಳುಗಳನ್ನು ಸಾಕುವ ಮೂಲಕ ಕೃಷಿಯನ್ನು ರೈತರು ಶ್ರೀಮಂತಗೊಳಿಸಬೇಕು. ನಶಿಸಿ ಹೋಗುತ್ತಿರುವ ದೇಶಿಯ ತಳಿ ಉಳಿಸುವುದೇ ಗೋಶಾಲೆ ಸ್ಥಾಪನೆಯ ಉದ್ದೇಶವಾಗಿದೆ'' ಎಂದರು.

ಬೆಂಗಳೂರಿನ ಉದ್ಯಮಿ ಎಮ್ ನವೀನಕುಮಾರ ಮಾತನಾಡಿ, ಬದುಕು ಬಹುದೊಡ್ಡ ವಿಸ್ಮಯ ಲೋಕವಾಗಿದೆ. ಸಮಾಜಮುಖಿ ಕೆಲಸಗಳನ್ನು ಮಾಡುವ ಮೂಲಕ ಮಣ್ಣಿನ ಋಣ ತೀರಿಸಬೇಕಿದೆ. ಗೋಶಾಲೆಯೇ ಎಲ್ಲಕ್ಕಿಂತ ದೊಡ್ಡ ದೇವಾಲಯವಾಗಿದೆ. ಈ ಗೋಶಾಲೆಯು ಗೋ ದೇವಾಲಯವಾಗಲಿ ಎಂದು ಹೇಳಿದರು.

ಚಿಕ್ಕೋಡಿಯ ಸಂಪಾದನಾ ಸ್ವಾಮೀಜಿ, ನಿಪ್ಪಾಣಿಯ ಪ್ರಾಣಲಿಂಗ ಸ್ವಾಮೀಜಿ ಸಾನ್ನಿಧ್ಯದಲ್ಲಿ ನಡೆದ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವೇದಾಮೃತ ಗೋಶಾಲಾ ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷ ಚನ್ನಪ್ಪ ಮಾಲಿಪಾಟೀಲ ವಹಿಸಿದ್ದರು. ಕಾರ್ಯಕ್ರಮದಲ್ಲಿ ಉದ್ಯಮಿ ಆಶಿಷ್ ಜೈನ್, ಶಿವಾನಿ ಮಗದುಮ್ಮ, ಬೆಂಗಳೂರಿನ ಡಿವೈಎಸ್ಪಿ ಪುಟ್ಟು ಓಬಳರೆಡ್ಡಿ, ಶಿಲ್ಪಾ ನವೀನಕುಮಾರ, ರಾಮಾ ಮಾನೆ, ಶಿವಮೂರ್ತಿ ಪಡಲಾಳೆ, ವಿಜಯ ಮಾಂಜರೇಕರ, ಸುರೇಶ ಚೌಗಲಾ, ವಸಂತ ಶಹಾ, ಕಾಶಿನಾಥ ಮಾಳಿ, ಪ್ರಕಾಶ ವಂಟಮುತ್ತೆ, ಶಂಕರ ತೋರಸೆ, ರವಿ ಹಂಪಣ್ಣನವರ, ಅನಿಲ ಮಾನೆ, ತಿರುಮಲೇಶ, ವರ್ಧಮಾನ ಸದಲಗೆ ಇತರರು ಇದ್ದರು.

ಅಕ್ರಮ ಗಣಿಗಾರಿಕೆ; ಕ್ರಮಕ್ಕೆ ಟೋಪಣ್ಣವರ ಒತ್ತಾಯ

ಬೆಳಗಾವಿ: ಬೆಳಗಾವಿ ತಾಲೂಕಿನ ಪಶ್ಚಿಮ ಮತ್ತು ಖಾನಾಪುರ ಭಾಗದಲ್ಲಿ ಅಕ್ರಮ ಗಣಿಗಾರಿಕೆ ಬೃಹತ್ ಪ್ರಮಾಣದಲ್ಲಿ ನಡೆಯುತ್ತಿದೆ. ಇದಕ್ಕೆ ಕಡಿವಾಣ ಹಾಕಬೇಕು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ 8 ಜನರ ಮೇಲೆ ಕೇಸ್ ದಾಖಲಾಗಿದೆ ಎಂದು ರಾಜಕುಮಾರ ಟೋಪಣ್ಣವರ ಹೇಳಿದರು.

ನಗರದ ಕನ್ನಡ ಸಾಹಿತ್ಯ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಕೆಲ ದಿನಗಳ ಹಿಂದೆ ಅಕ್ರಮ ಗಣಿಗಾರಿಕೆ ಮೇಲೆ ಪ್ರಕರಣ ದಾಖಲಾಗಿರುವುದು. ಸಣ್ಣವರ ಮೇಲೆ ಇವರು ಸರ್ಕಾರಿ ಜಮೀನಿನಲ್ಲಿ ಗಣಿಗಾರಿಕೆ ಮಾಡುತ್ತಿದ್ದರು. ಇದು ಅಂತರರಾಜ್ಯ ಗಣಿಗಾರಿಕೆಗೆ ಸಂಬಂಧಿಸಿದ್ದು, ಇದರ ಬಗ್ಗೆ ಸಂಪೂರ್ಣ ತನಿಖೆಯಾಗಬೇಕು ಎಂದರು.

ಬೆಳಗಾವಿ ದಕ್ಷಿಣ ಮತಕ್ಷೇತ್ರದ ಶಾಸಕ ಅಭಯ ಪಾಟೀಲ್ ಪತ್ರ ಬರೆದಿದ್ದಾರೆ. ಅಕ್ರಮ ಗಣಿಗಾರಿಕೆಗೆಯ ಬಗ್ಗೆ ಸಂಬಂಧಿಸಿದರ ಮೇಲೆ ಕ್ರಮ ಕೈಗೊಳ್ಳಬೇಕೆಂದು ಬರೆದಿದ್ದಾರೆ. ಅದಕ್ಕೆ ನಾನು ಸ್ವಾಗತಿಸುತ್ತೇನೆ ಎಂದರು.

ಮಾಲಿನಿ ರೆಸಿಸೋಸಿ 12ನೇ ಸರ್ವೆದಲ್ಲಿ ಮೈನಿಂಗ್ ಮಾಡ್ತಿದ್ದಾರೆ. ಅದರ ಬಗ್ಗ ಸಂಪೂರ್ಣ ತನಿಖೆಯಾಗಬೇಕು ಸರ್ವೆ ನಂ.285ನಲ್ಲಿ ಮೈನಿಂಗ್ ಮಾಡಲು ಅನುಮತಿಯಿಲ್ಲ ಎಂದು ಪ್ರಶ್ನಿಸಿದರು.

ಮಾಲಿನಿ ರಿಸೋರ್ಸಸ್ ಎಂಬ ಕಂಪನಿಯಿಂದ ನಡೆಯುತ್ತಿರುವ ಅಕ್ರಮ ಗಣಿಗಾರಿಕೆ ಬಗ್ಗೆ ಯಾಕೆ ಮೌನ ಏಕೆ ಎಂದಿರುವ ಅವರು, ಮಾಲಿನಿ ರಿಸೋರ್ಸ್‌ಸ್ನ ನಿಜವಾದ ಮಾಲೀಕರು ಯಾರು, ಮಾಹಿತಿಯ ಪ್ರಕಾರ, ಸಂತೋಷಕುಮಾರ್ ಪಾಟೀಲ ಮತ್ತು ತವನ ಪಾಟೀಲ, ಅವರು ಶಾಸಕರ ಕುಟುಂಬ ಸಂಬಂಧ ಹೊಂದಿರುವವರು. ಈ ಕಂಪನಿಗೆ ಸಂಬಂಧಪಟ್ಟವರಾಗಿದ್ದಾರೆ ಎಂಬ ಪ್ರಶ್ನೆಗಳು ಎದುರಾಗುತ್ತಿವೆ.ಇದರಿಂದ ಗಂಭೀರ ಅನುಮಾನಗಳು ಮೂಡುತ್ತವೆ ಎಂದಿದ್ದಾರೆ.

ಸಾಮಾಜಿಕ ಕಾರ್ಯಕರ್ತ ಸುಜೀತ್ ಮುಳಗುಂದ ಇದ್ದರು.

ಅನಧಿಕೃತ ಡಬ್ಬಾ ಅಂಗಡಿ ತೆರವು ಕಾರ್ಯಾಚರಣೆ

ಸಂಕೇಶ್ವರ: ಪಟ್ಟಣದ ಲಿಂಕ್ ರಸ್ತೆಯಲ್ಲಿ ಟ್ರಾಫೀಕ್ ಸಮಸ್ಯೆ ಉಂಟು ಮಾಡುತ್ತಿದ್ದ ಅನಧಿಕೃತ ಡಬ್ಬಾ ಅಂಗಡಿಗಳನ್ನು ಪುರಸಭೆಯವರು ಗುರುವಾರ ಬೆಳಂಬೆಳ್ಳಿಗ್ಗೆ ಕಾರ್ಯಾಚರಣೆ ನಡೆಸಿ ತೆರವುಗೊಳಿಸಿದರು.

ಪುರಸಭೆ ಮುಖ್ಯಾಧಿಕಾರಿ ಪ್ರಕಾಶ ಮಠದ ಅವರ ಆದೇಶದ ಮೆರೆಗೆ ರಸ್ತೆಯನ್ನೇ ಅತಿಕ್ರಮಿಸಿದ ಡಬ್ಬಾ ಅಂಗಡಿಗಳನ್ನು ಪುರಸಭೆಯ ಸಿಬ್ಬಂದಿಗಳು ತೆರವುಗೊಳ್ಳಿಸಿದ್ದು, ಈ ಅಂಗಡಿಗಳಿಂದ ದ್ವಿಚಕ್ರ ವಾಹನ ಸವಾರರು ರಸ್ತೆ ಮಧ್ಯದಲ್ಲಿ ತಮ್ಮ ವಾಹನ ನಿಲ್ಲಿಸುತ್ತಿದರು ಇದರಿಂದ ನಿತ್ಯ ಟ್ರಾಫಿಕ್ ಸಮಸ್ಯೆ ಉಂಟಾಗುತ್ತಿತ್ತು. ಈ ಬಗ್ಗೆ ಸಾರ್ವಜನಿಕರಿಂದ ಪುರಸಭೆಯ ಅಧಿಕಾರಿಗಳಿಗೆ ವ್ಯಾಪಕ ದೂರುಗಳು ಕೇಳಿ ಬಂದಿದ್ದವು. ಸಂಪೂರ್ಣ ರಸ್ತೆಯನೇ ಅತಿಕ್ರಮಣ ಮಾಡಿಕೊಂಡಿದರಿಂದ ಸಾರ್ವಜನಿಕರಿಗೆ, ವಾಹನ ಸವಾರರಿಗೆ, ಬಸ್ ಸಂಚಾರಕ್ಕೆ ನಿತ್ಯ ತೊಂದರೆ ಅನುಭವಿಸುತ್ತಿದರು.

> ರಸ್ತೆ ಮೇಲೆ ಅನಧಿಕೃತವಾಗಿ ಡಬ್ಬಾ ಅಂಗಡಿಗಳನ್ನು ಇಟ್ಟುಕೊಂಡು ಸಂಚಾರಕ್ಕೆ ತೊಂದರೆ ಉಂಟು ಮಾಡುತ್ತಿದ್ದರೆ ಅವುಗಳನ್ನು ಕಾರ್ಯಾಚರಣೆ ನಡೆಸಿ ತೆರವುಗೊಳಿಸಲಾಗುವುದು.
>
> ■ ಪ್ರಕಾಶ ಮಠದ, ಪುರಸಭೆಯ ಮುಖ್ಯಾಧಿಕಾರಿ

ಮಹರ್ಷಿ ಭಗೀರಥರ ತತ್ವಾದರ್ಶಗಳು ಇಂದಿಗೂ ಪ್ರಸ್ತುತ

ಮೂಡಲಗಿ: ದೃಢ ಸಂಕಲ್ಪ ಮತ್ತು ಕಠಿಣ ಪರಿಶ್ರಮ ಹೊಂದಿದ್ದ ಭಗೀರಥ ಮಹರ್ಷಿ ತಮ್ಮ ಪೂರ್ವಜರ ಮುಕ್ತಿಗಾಗಿ ರಾಜಸುಖವನ್ನೇ ತ್ಯಜಿಸಿದ ಮಹಾನ್ ಋಷಿ ಎಂದು ಶಾಸಕ ಮತ್ತು ಬೆಮುಲ್ ಅಧ್ಯಕ್ಷ ಬಾಲಚಂದ್ರ ಜಾರಕಿಹೊಳಿಯವರು ಹೇಳಿದರು.

ಗುರುವಾರ ಪಟ್ಟಣದ ಹೊರವಲಯದಲ್ಲಿರುವ ಭಗೀರಥ ವೃತ್ತ (ಮೂಡಲಗಿ ಕ್ರಾಸ್)ದಲ್ಲಿರುವ ಮಹರ್ಷಿ ಭಗೀರಥ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಮಾತನಾಡಿ, ಮಹರ್ಷಿ ಭಗೀರಥರ ತತ್ವ ಆದರ್ಶಗಳು ಇಂದಿಗೂ ಪ್ರಸ್ತುತವಾಗಿದ್ದು, ಅವುಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಸಮಾಜದ ಬೆಳವಣಿಗೆಗೆ ಶ್ರಮಿಸುವಂತೆ ಅವರು ತಿಳಿಸಿದರು.

ಭಗೀರಥ ಮಹಾರಾಜನು ಕಠಿಣ ತಪಸ್ಸಿನಿಂದ ತಮ್ಮ ಪೂರ್ವಜರ ಮುಕ್ತಿಗಾಗಿ ಸ್ವರ್ಗದಲ್ಲಿದ್ದ ಗಂಗಾ ನದಿಯನ್ನು ಭೂಮಿಗೆ ತಂದು ಅವರ ಆತ್ಮಕ್ಕೆ ಮುಕ್ತಿ ನೀಡಿದ ಮಹಾನ್ ಪುರುಷರಾಗಿದ್ದರು. ಇದಕ್ಕಾಗಿ ಹಿಮಾಲಯ ಪರ್ವತದಲ್ಲಿ ಕಠಿಣ ತಪಸ್ಸು ಮಾಡಿದ್ದರು. ಆದರ ಫಲವೇ ಗಂಗಾ ನದಿಯನ್ನು ಭೂಮಿಗೆ ತಂದ ಪುಣ್ಯವಂತನು ಭಗೀರಥರು ಎಂದರು.

ಪ್ರತಿವರ್ಷವೂಭಗೀರಥಮಹರ್ಷಿ, ಜಗಜ್ಯೋತಿ ಬಸವೇಶ್ವರರು, ಭಕ್ತ ಕನಕದಾಸರು, ಸಂವಿಧಾನ ಶಿಲ್ಪಿ ಡಾ. ಬಾಬಾಸಾಹೇಬ್ ಬಿ.ಆರ್.ಅಂಬೇಡ್ಕರ್ ಅವರಂತಹ ಮಹಾನ್ ಪುರುಷರ ಜಯಂತಿ ಕಾರ್ಯಕ್ರಮಗಳನ್ನು ಆಚರಿಸಿ ಅವರಿಗೆ ಗೌರವವನ್ನು ಸಲ್ಲಿಸುತ್ತಿದ್ದೇವೆ. ಆದರೆ, ಅವರ ಆದರ್ಶಗಳನ್ನು ಮೈಗೂಡಿಸಿಕೊಂಡು ಹೋಗಬೇಕಿದೆ. ಕೇವಲ ಜಯಂತಿ ಕಾರ್ಯಕ್ರಮಗಳಿಗೆ ಮೀಸಲಿಡದೇ ಪ್ರತಿ ದಿನವೂ ಮಹಾನ್ ವ್ಯಕ್ತಿಗಳನ್ನು ಸ್ಮರಿಸಬೇಕು. ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಬೇಕು. ಶಿಕ್ಷಣದಿಂದ ಸಮಾಜದಲ್ಲಿ ಅನೇಕ ಬದಲಾವಣೆಗಳನ್ನು ತರಲು ಸಾಧ್ಯವಿದೆ ಎಂದು ಶಾಸಕ ಬಾಲಚಂದ್ರ ಜಾರಕಿಹೊಳಿಯವರು ತಿಳಿಸಿದರು.

ಈ ಸಂದರ್ಭದಲ್ಲಿ ಮೂಡಲಗಿ ತಹಶೀಲ್ದಾರ ಶ್ರೀಶೈಲ ಗುಡುಮೆ, ಪುರಸಭೆ ಮಾಜಿ ಅಧ್ಯಕ್ಷ ರಾಮಣ್ಣ ಹಂದಿಗುಂದ, ಸರ್ಕಲ್ ಇನ್ಸ್ಪೆಕ್ಟರ್ ಶ್ರೀಶೈಲ ಬ್ಯಾಕೋಡ, ಸಮಾಜದ ಮುಖಂಡರಾದ ಈಶ್ವರ ಕಂಕಣವಾಡಿ, ಅಜ್ಜಪ್ಪ ಕಂಕಣವಾಡಿ, ಹಣಮಂತ ಪೂಜೇರಿ, ಮುತ್ತೆಪ್ಪ ಬಿರನಾಳ, ಲಕ್ಷ್ಮಣ ಅಡಿಹುಡಿ, ಅಲ್ಲಪ್ಪ ಕಂಕಣವಾಡಿ, ವೈ.ಆರ್.ಹಂದಿಗುಂದ, ಭರಮಣ್ಣ ಕಪ್ಪಲಗುದ್ದಿ, ಸುಭಾಸ ಗೋಡ್ಯಾಗೋಳ, ಪರಸಪ್ಪ ಉಪ್ಪಾರ ಸೇರಿದಂತೆ ಅನೇಕ ಗಣ್ಯರು, ಅಧಿಕಾರಿಗಳು ಉಪಸ್ಥಿತರಿದ್ದರು.

ರೈತರಿಗೆ ಬೀಜ ಗೊಬ್ಬರಗಳ ಕೊರತೆಯಾಗದಂತೆ ನೋಡಿಕೊಳ್ಳಿ

ಚನ್ನಮ್ಮನ ಕಿತ್ತೂರು: ರೈತರಿಗೆ ಮುಂಗಾರು ಹಂಗಾಮಿಗೆ ಬೇಕಾಗುವ ಅಗತ್ಯ ಬೀಜ ಗೊಬ್ಬರಗಳ ಕೊರತೆಯಾಗದಂತೆ ನೋಡಿಕೊಳ್ಳಬೇಕೆಂದು ಶಾಸಕ ಬಾಬಾಸಾಹೇಬ ಪಾಟೀಲ ಹೇಳಿದರು.

ತಾಲೂಕ ಪಂಚಾಯತಿ ಸಭಾ ಭವನದಲ್ಲಿ ಇತ್ತೀಚೆಗೆ ನಡೆದ ಕೆಡಿಪಿ ಸಭೆಯಲ್ಲಿ ಮಾತನಾಡಿ, ಅನಗತ್ಯವಾಗಿ ಬೀಜ ಹಾಗೂ ಗೊಬ್ಬರಗಳ ಕೃತಕ ಅಭಾವ ಸೃಷ್ಟಿಸಿ ಗೊಂದಲ ಮೂಡಿಸುವವರ ಬಗ್ಗೆ ಗಮನ ಹರಿಸಿ ಕ್ರಮ ಜರುಗಿಸಬೇಕೆಂದು ಅಧಿಕಾರಿಗಳಿಗೆ ಕಟ್ಟು ನಿಟ್ಟಾಗಿ ಸೂಚಿಸಿದರು.

ಈಗ ಬೇಸಿಗೆ ಕಾಲವಿರುವದರಿಂದ ರೈತರ ಜಮೀನುಗಳಿಗೆ ನೀರನ್ನು ಹಾಯಿಸಲು ವಿದ್ಯುತ್‌ನ ಕೊರತೆಯಾಗುತ್ತದೆ ಮತ್ತು ವಿದ್ಯುತ್ ಪರಿವರ್ತಕಗಳು ಮೇಲಿಂದ ಮೇಲೆ ದುರಸ್ತಿಗೆ ಬರುತ್ತವೆ ಅವರಿಗೆ ಸಕಾಲದಲ್ಲಿ ಅವರ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕು ಮತ್ತು ಇದಕ್ಕೂ ಪೂರ್ವದಲ್ಲಿ ಹೆಸ್ಕಾಂ ಕಚೇರಿಗೆ ಬಂದ ರೈತರ ಜೊತೆಗೆ ನೀವುಗಳು ಸೌಜನ್ಯದಿಂದ ವರ್ತಿಸುವದನ್ನುಕಲಿತುಕೊಳ್ಳಬೇಕು, ಕುಡಿಯುವ ನೀರಿನ ಕೊರತೆ ಕಂಡು ಬರುವ ಗ್ರಾಮಗಳಿಗೆ ನೂತನ ಬೋರವೆಲ್ ಕೊರೆಸುವ ಮೂಲಕವಾಗಲಿ ಅಥವಾ ಹೊಳೆಯಿಂದ ಬರುವ ನೀರಿನ ಮೂಲಕವಾಗಲಿ ಸರಬರಾಜು ಮಾಡಲು ಕ್ರಮ ಜರುಗಿಸಬೇಕು.

ಈಗಾಗಲೇ ಶಿಕ್ಷಕರ ಕೊರತೆ ಕಂಡು ಬರುವ ಶಾಲೆಗಳಿಗೆ ಬರುವ ಶೈಕ್ಷಣಿಕ ವರ್ಷ ಪ್ರಾರಂಭವಾಗುವ ಪೂರ್ವದಲ್ಲಿಯೇ ಅಥಿತಿ ಶಿಕ್ಷಕರನ್ನು ನೇಮಿಸಿಕೊಂಡು ಗುಣ ಮಟ್ಟದ ಶಿಕ್ಷಣಕ್ಕೆ ಆದ್ಯತೆ ನೀಡಬೇಕೆಂದು ಕ್ಷೇತ್ರ ಶಿಕ್ಷಣಾಕಾಧಿರಿಗಳಿಗೆ ತಿಳಿಸಿದರು.

ಎಪಿಎಮ್‌ಸಿಯಲ್ಲಿ ಸತತವಾಗಿ ವ್ಯಾಪಾರ ವಹಿವಾಟುಗಳು ನಡೆಯಬೇಕು ಆ ನಿಟ್ಟನಲ್ಲಿ ಅಧಿಕಾರಿಗಳು ಕೆಲಸ ನಿರ್ವಹಿಸಬೇಕು ಮತ್ತು ಅವಶ್ಯವಿರುವ ಕೋಲ್ಡ ಸ್ಟೋರೇಜ್ ನಿರ್ಮಿಸಲು ನಿವೇಶನ ಗುರುತಿಸಬೇಕೆಂದು ಅಧಿಕಾರಿಗಳಿಗೆ ತಿಳಿಸಿದರು. ಸರಕಾರದ ಪಂಚ ಗ್ಯಾರಂಟೀ ಯೋಜನೆಯಲ್ಲಿ ಒಂದಾದ ಗೃಹ ಲಕ್ಷ್ಮೀ ಯೋಜನೆಯಿಂದ ಯಾವದೇ ಫಲಾನುಭವಿಯುಈಯೋಜನೆಯಿಂದ ಹೊರಗುಳಿಯಬಾರದು ಏನೇ ಸಮಸ್ಯೆಗಳಿದ್ದರೂ ಅದಕ್ಕೆ ಪರಿಹಾರ ಕಂಡುಕೊಳ್ಳಬೇಕು ಎಂದರು.

ಸರಕಾರಿ ಆಸ್ಪತ್ರೆಗಳಲ್ಲಿ ಮಧ್ಯಾಹ್ನದ ನಂತರ ವೈದ್ಯರಾಗಲಿ, ಸಿಬ್ಬಂದಿಗಳಾಗಲಿ ಯಾರೂ ಇರುವದಿಲ್ಲವೆಂಬು ದೂರುಗಳು ಕೇಳಿ ಬರುತ್ತಿವೆ ಇದಕ್ಕೆ ಕಡಿವಾಣ ಹಾಕಬೇಕು ಇಲ್ಲದಿದ್ದರೆ ಇದೇ ರೀತಿ ಮುಂದುವರೆದರೆ ಅವರ ಮೇಲೆ ಯೋಗ್ಯ ಕ್ರಮ ಜರುಗಿಸಬೇಕೆಂದು ತಿಳಿಸಿದರು. ಯಾವದೇ ಸರಕಾರದ ಯೋಜನೆಗಳು ನಿಜವಾದ ಫಲಾನುಭವಿಗಳಿಗೆ ದೊರೆಯುವಂತೆ ನೋಡಿಕೊಳ್ಳಬೇಕೆಂದು ಅಧಿಕಾರಿಗಳಿಗೆ ತಿಳಿಸಿದರು.

ತಾಲೂಕ ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿ ನಿಂಗಪ್ಪ ಮಸಳಿ, ಗ್ಯಾರಂಟಿ ಅಧ್ಯಕ್ಷ ಗಂಗಪ್ಪ ಹುರಕಡ್ಲಿ ಸೇರಿದಂತೆ ತಾಲೂಕಾ ಮಟ್ಟದ ಎಲ್ಲ ಅಧಿಕಾರಿಗಳು ಉಪಸ್ಥಿತರಿದ್ದರು.

ಕಿರುಸುದ್ದಿ

ಸುಶಾಂತ ಬುರ್ಲಿ ಜಿಲ್ಲೆಗೆ ಪ್ರಥಮ

ರಬಕವಿ-ಬನಹಟ್ಟಿ: ರಾಮಪೂರದ ಪೂರ್ಣಪ್ರಜ್ಞ ಆಂಗ್ಲ ಮಾಧ್ಯಮ ಶಾಲೆಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಸುಶಾಂತ ಶ್ರೀಶೈಲ ಬುರ್ಲಿ 612 ಅಂಕ ಪಡೆದು ಜಿಲ್ಲೆಗೆ ಪ್ರಥಮ ಸ್ಥಾನ ಪಡೆದಿದ್ದಾನೆ.ಇಂಗ್ಲೀಷ್-124, ಕನ್ನಡ-99, ಹಿಂದಿ-100, ಗಣಿತ-100, ವಿಜ್ಞಾನ-98, ಸಾಮಾನ್ಯ ವಿಜ್ಞಾನ-100 ಅಂಕ ಪಡೆದಿದ್ದಾನೆ. ಸುಶಾಂತನ ತಂದೆ ರಾಮಪೂರದ ಸರ್ಕಾರಿ ಮಾಧ್ಯಮಿಕ ಶಾಲೆಯಲ್ಲಿ ಆಂಗ್ಲ ಶಿಕ್ಷಕರಾಗಿದ್ದರೆ, ತಾಯಿ ಶೈಲಾ ಬನಹಟ್ಟಿ ಕೆಎಚ್‌ಡಿಸಿಯ ಪ್ರಾಥಮಿಕ ಸರ್ಕಾರಿ ಶಾಲೆಯಲ್ಲಿ ಶಿಕ್ಷಕಿಯಾಗಿ ವೃತ್ತಿ ನಿರ್ವಹಿಸುತ್ತಿದ್ದಾರೆ.

ಕಾಳಿದಾಸ ಪ್ರೌಢಶಾಲೆಗೆ ಶೇ. 91.93 ಫಲಿತಾಂಶ

ಬಾದಾಮಿ: ಪಟ್ಟಣದ ಪ್ರತಿಷ್ಠಿತ ಶ್ರೀ ಕಾಳಿದಾಸ ಪ್ರೌಢಶಾಲೆಯಲ್ಲಿ ಪ್ರಸಕ್ತ ವರ್ಷದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.91.93ರಷ್ಟು ಫಲಿತಾಂಶ ಬಂದಿದೆ.

ಶ್ವೇತಾ ಮಾನಗೌಡ ವೀರಲಿಂಗನ ಗೌಡ್ರ(ಶೇ.91.20) ಪ್ರಥಮ, ಗಿರೀಶ ಮಲ್ಲಪ್ಪ ಚಿಮ್ಮನಕಟ್ಟಿ (ಶೇ.88.16) ದ್ವಿತೀಯ ಹಾಗೂ ಬಸವ್ವ ಪೂರ್ಣಾನಂದ ಕುರಿ(ಶೇ.83.20) ತೃತೀಯ ಸ್ಥಾನ ಪಡೆದಿದ್ದಾರೆ. ಇನ್ನುಳಿದಂತೆ ಒಟ್ಟು 64 ಜನರು ನೋಂದಣಿ ಮಾಡಿಸಿ ಕೊಂಡಿದ್ದರು. ಇದರಲ್ಲಿ 62 ಜನರು ಪರೀಕ್ಷೆಗೆ ಹಾಜರಾಗಿದ್ದು, ಇಬ್ಬರು ಗೈರುಹಾಜರಾಗಿದ್ದರು. 5 ಜನ ಅನುತ್ತೀರ್ಣರಾಗಿದ್ದಾರೆ. ಒಟ್ಟು 57 ಜನರು ಉತ್ತೀರ್ಣ ರಾಗಿದ್ದಾರೆ. ಒಟ್ಟು ಶೇ.91.93 ಫಲಿತಾಂಶ ಬಂದಿದೆ ಎಂದು ಮುಖ್ಯ ಶಿಕ್ಷಕರು ತಿಳಿಸಿದ್ದಾರೆ.

ಅಭಿನಂದನೆ; ಉತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಮಾಜಿ ಸಚಿವ, ಸಂಸ್ಥೆಯ ಅಧ್ಯಕ್ಷ ಬಿ.ಬಿ.ಚಿಮ್ಮನಕಟ್ಟಿ, ಕಾರ್ಯದರ್ಶಿ, ಶಾಸಕ ಭೀಮಸೇನ ಚಿಮ್ಮನಕಟ್ಟಿ, ಆಡಳಿತಾಧಿಕಾರಿಗಳು, ಶಿಕ್ಷಕರು, ಸಿಬ್ಬಂದಿಗಳು ಅಭಿನಂದನೆ ಸಲ್ಲಿಸಿದ್ದಾರೆ.

ಜಿಲ್ಲೆಗೆ ಬಾದಾಮಿ ತಾಲೂಕು ಪ್ರಥಮ: ಹರ್ಷ

ಬಾದಾಮಿ: ಈ ಬಾರಿಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಬಾದಾಮಿ ತಾಲೂಕಿನ ವಿದ್ಯಾರ್ಥಿಗಳು ಶೇ.96.76ರಷ್ಟು ಉತ್ತೀರ್ಣರಾಗುವ ಮೂಲಕ ಬಾಗಲಕೋಟೆ ಜಿಲ್ಲೆಗೆ ನಮ್ಮ ಬಾದಾಮಿ ತಾಲೂಕು ಪ್ರಥಮ ಸ್ಥಾನ ಪಡೆದುಕೊಂಡಿದ್ದಕ್ಕೆ ಶಾಸಕ ಭೀಮಸೇನ ಚಿಮ್ಮನಕಟ್ಟಿ ಹರ್ಷ ವ್ಯಕ್ತಪಡಿಸಿದ್ದಾರೆ.ವರ್ಷದಿಂದ ವರ್ಷಕ್ಕೆ ತಾಲೂಕಿನ ಪರೀಕ್ಷಾ ಫಲಿತಾಂಶವು ಪ್ರಗತಿ ಪಥದತ್ತ ಸಾಗುತ್ತಿದೆ. ಇದೊಂದು ಉತ್ತಮ ಬೆಳವಣಿಗೆಯಾಗಿದೆ. ರಾಜ್ಯದಲ್ಲಿ ನಮ್ಮ ಸರಕಾರ ಕೈಗೊಂಡಿರುವ ಶೈಕ್ಷಣಿಕ ಕ್ರಮಗಳು ಮತ್ತು ತಾಲೂಕಿನಲ್ಲಿ ಕೈಗೊಂಡಿರುವ ಅನುಷ್ಠಾನ ಕ್ರಮಗಳು ಪ್ರಮುಖ ಪಾತ್ರ ವಹಿಸಿವೆ ಎಂದು ತಿಳಿಸಿದ್ದಾರೆ.

ಈ ಪ್ರಗತಿಗೆ ಕಾರಣರಾಗಿರುವ ವಿದ್ಯಾರ್ಥಿಗಳಿಗೆ, ಶಿಕ್ಷಕ ವೃಂದಕ್ಕೆ, ಅಧಿಕಾರಿ ವರ್ಗಕ್ಕೆ ಮತ್ತು ಪಾಲಕರಿಗೆ ನಾನು ಶಾಸಕನಾಗಿ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಕಳೆದ ಸಾಲಿಗೆ ಹೋಲಿಕೆ ಮಾಡಿದರೆ ಈ ಸಾಲಿನಲ್ಲಿ ಪಿಯುಸಿ ಮತ್ತು ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತಮ ಫಲಿತಾಂಶ ಬಂದಿದೆ ಎಂದು ಹೇಳಿದ್ದಾರೆ.

ತಾಲೂಕಿನ 15 ಕೇಂದ್ರಗಳಲ್ಲಿ ಪರೀಕ್ಷೆಗೆ ಹಾಜರಾಗಿದ್ದ 4974 ವಿದ್ಯಾರ್ಥಿಗಳಲ್ಲಿ 4813 ವಿದ್ಯಾರ್ಥಿಗಳು ಉತ್ತೀರ್ಣರಾಗುವ ಮೂಲಕ ತಾಲೂಕಿಗೆ ಕೀರ್ತಿ ತಂದಿದ್ದಾರೆ. ಹೀಗಾಗಿ ಈ ಎಲ್ಲ ವಿದ್ಯಾರ್ಥಿಗಳ ಭಾವಿ ಭವಿಷ್ಯವು ಉಜ್ವಲವಾಗಲಿ ಎಂದು ಶಾಸಕ ಚಿಮ್ಮನಕಟ್ಟಿ ಶುಭ ಹಾರೈಸಿದ್ದಾರೆ.

ಜೇಸಿ ಆಂಗ್ಲ ಮಾಧ್ಯಮ ಪ್ರೌಢ ಶಾಲೆಗೆ ಉತ್ತಮ ಫಲಿತಾಂಶ

ಮಹಾಲಿಂಗಪುರ: ಸ್ಥಳೀಯ ಜೇಸಿ ಆಂಗ್ಲ ಮಾಧ್ಯಮ ಪ್ರೌಢ ಶಾಲೆಯು 2025-26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದ್ದು ಶೇ.98 ಫಲಿತಾಂಶ ಪಡೆದಿದೆ ಎಂದು ಮುಖ್ಯೋಪಾಧ್ಯಾಯ ಎಸ್.ಜಿ.ಕೌಜಲಗಿ ತಿಳಿಸಿದ್ದಾರೆ. ವರ್ಷಿಣಿ ಅಶೋಕ ಸಗರಿ(602)96.32% ಪ್ರಥಮ, ಪ್ರತೀಕ್ಷಾ ನಾಗಪ್ಪ ಮ್ಯಾಗಾಡಿ(597) 95.52% ದ್ವಿತೀಯ, ಕೃಪಾ ಮಹಾಂತೇಶ ಕುರಹಟ್ಟಿ(585) 93.6% ತೃತೀಯ ಸ್ಥಾನದೊಂದಿಗೆ ನಿಶ್ಚಿತಾ ಈಶ್ವರ ಮುದಕವಿ(577)92.32%, ಸುಹಾನಾ ಇಮಾಮಸಾಬ ಕೊಣ್ಣೂರ(575)92%, ಮಹಾಲಕ್ಷ್ಮೀ ದೇವಪ್ಪ ಗುಳದಳ್ಳಿ(565)90.4%, ಹರ್ಷದ ಮೀರಾಸಾಬ ಮುಲ್ತಾನಿ(565)90.4%, ತೈಬಾ ಢವಳೇಶ್ವರ 89.92%, ಲಕ್ಷ್ಮೀ ಮುಗಳಖೋಡ 89.28%, ಸಮೃದ್ಧಿ ರಾವಳ 89.12%, ಮುನಸ್ಸಬಾ ತೇರದಾಳ 88.32%, ಪಾರ್ವತಿ ಶ್ರೀಮಂತ ಹುಣಶಾಳ 88%, ವಿಜಯಲಕ್ಷ್ಮೀ ರಾವಳ 87.84%, ತಷ್ನುಬಾ ಮುಲ್ಲಾ 87.52%, ಶ್ರೇಯಾ ನಾಗರಾಳ 85.76% ಅಂಕ ಪಡೆದು ಡಿಸ್ಟಿಂಕ್ಷನ್‌ನಲ್ಲಿ ಉತ್ತೀರ್ಣರಾಗಿದ್ದು, ಒಟ್ಟು 16 ಡಿಸ್ಟಿಂಕ್ಷನ್, 29 ಫಸ್ಟ್‌ಕ್ಲಾಸ್, 13 ಸೆಕೆಂಡ್‌ಕ್ಲಾಸ್, 04 ಉತ್ತೀರ್ಣ ಎಂದು ತಿಳಿಸಿದ್ದಾರೆ.

ಬಾಗಲಕೋಟೆ:ಬಾಗಲಕೋಟೆ ವಿಧಾನಸಭಾ ಉಪ ಚುನಾವಣೆ ನೀತಿ ಸಂಹಿತೆ ಜಾರಿಯಲ್ಲಿರುವ ಹಿನ್ನಲೆಯಲ್ಲಿ ಮಹರ್ಷಿ ಭಗೀರಥ ಜಯಂತಿಯನ್ನು ಜಿಲ್ಲಾಡಳಿತದಿಂದ ಸರಳವಾಗಿ ಆಚರಿಸಲಾಯಿತು.

ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಗುರುವಾರ ಜಿಲ್ಲಾಧಿಕಾರಿ ಸಂಗಪ್ಪ ಹಾಗೂ ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ ಸೇರಿದಂತೆ ಇತರೆ ಅಧಿಕಾರಿಗಳು ಭಗೀರಥರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಪುಷ್ಪನಮನ ಸಲ್ಲಿಸಿದರು. ಈ ಸಂದರ್ಭದಲ್ಲಿ ಆಹಾರ ಇಲಾಖೆಯ ಜಂಟಿ ನಿರ್ದೇಶಕ ಶ್ರೀಶೈಲ ಕಂಕಣವಾಡಿ, ಕಾರ್ಮಿಕ ಇಲಾಖೆಯ ಜಿಲ್ಲಾ ಅಧಿಕಾರಿ ರಮೇಶ ಸುಂಬಡ ಸೇರಿದಂತೆ ಇತರೆ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ಕಲಾವಿದ ಗುರುನಾಥ ಮುರಡಿಗೆ ಸನ್ಮಾನ

ದೇವರಹಿಪ್ಪರಗಿ: ಗ್ರಾಮೀಣ ಭಾಗದ ಜಾನಪದ ಕಲೆ, ಸಾಹಿತ್ಯ, ಸಂಸ್ಕೃತಿ ಉಳಿಸಿ ಬೆಳೆಸುವಲ್ಲಿ ಹಾಗೂ ಹಲವಾರು ವರ್ಷಗಳಿಂದ ತಮ್ಮದೇ ಆದ ಜಾನಪದ ಕಲೆಯನ್ನು ಹಾಡಕಿ ಮೂಲಕ ನಾಡಿನಾದ್ಯಂತ ಹೆಸರುವಾಸಿ ಆಗಿರುವ ಹಾಡಕಿ ಹಾಗೂ ಡೊಳ್ಳಿನ ಪದಗಳ ಕಲಾವಿದ ಗುರುನಾಥ ಮುರಡಿ ಅವರಿಗೆ ರಾಷ್ಟ್ರ ಮಟ್ಟದ ಜಾನಪದ ರಾಷ್ಟ್ರೀಯ ಕಲಾ ರತ್ನ ಪ್ರಶಸ್ತಿ ನೀಡಿರುವುದು ಶ್ಲಾಘನೀಯ ಎಂದು ಇಂಡಿ ಕ್ಷೇತ್ರದ ಜೆಡಿಎಸ್ ಪಕ್ಷದ ಮುಖಂಡರಾದ ಬಿ.ಡಿ.ಪಾಟೀಲ ಹೇಳಿದರು.ಪಟ್ಟಣದ ಪ್ರವಾಸಿ ಮಂದಿರದಲ್ಲಿ ಗುರುವಾರದಂದು ಕಲಾವಿದ ಗುರುನಾಥ ಮುರಡಿಗೆ ಸನ್ಮಾನಿಸಿ ಮಾತನಾಡಿದ ಅವರು, ಗ್ರಾಮೀಣ ಪ್ರದೇಶದ ಜಾನಪದ ಸೊಗಡಿನ ಕುಟುಂಬದ ಹಿನ್ನೆಲೆಯಿಂದ ಬಂದು,ತಮ್ಮದೇ ವಿಭಿನ್ನ ಶೈಲಿಯ ಮೂಲಕ ನಾಡಿನಾದ್ಯಂತ ಹೆಸರುವಾಸಿ ಆಗಿರುವ ನಮ್ಮ ಸಮುದಾಯದ ಜನಪದ ಕಲಾವಿದನಿಗೆ ರಾಷ್ಟ್ರ ಮಟ್ಟದ ಜಾನಪದ ಪ್ರಶಸ್ತಿ ಸಿಕ್ಕಿರುವುದು ಹೆಮ್ಮೆಯ ಸಂಗತಿ ಇನ್ನು ಹತ್ತು ಹಲವು ಪ್ರಶಸ್ತಿಗಳು ಸಿಗಲಿ ಎಂದು ಶುಭ ಹಾರೈಸಿದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಕಲಾವಿದ ಗುರುನಾಥ ಮುರಡಿ ಅವರು, ಇಂಡಿ ಭಾಗದಲ್ಲಿ ತಮ್ಮದೇ ಆದ ವಿಶಿಷ್ಟ ವ್ಯಕ್ತಿತ್ವ ರೂಪಿಸಿಕೊಂಡಿರುವ ಸಮುದಾಯದ ಮುಖಂಡರುಗಳಾದ ಬಿ.ಡಿ. ಪಾಟೀಲರು ಸನ್ಮಾನಿಸಿ, ಗೌರವಿಸಿದ್ದು ನನ್ನ ಜೀವನದ ಹೆಮ್ಮೆಯ ಕ್ಷಣವಾಗಿದೆ ಎಂದು ಹೇಳಿದರು. ಮುಖಂಡರುಗಳಾದ ಶರಣು ಪೂಜಾರಿ, ಅಪ್ಪು ಪಟ್ಟೇದ, ಆನಂದ ವಗ್ಗರ, ಮಾಡ್ರಿ ಸೈನಿಕ ಚಂದ್ರಮ ಪೂಜಾರಿ, ಅಮೋಗಿ ಕಗ್ಗೋಡ ಸೇರಿದಂತೆ ಹಲವಾರು ಜನ ಮುಖಂಡರು ಉಪಸ್ಥಿತರಿದ್ದರು.

ದೇವರಹಿಪ್ಪರಗಿ: ಪಟ್ಟಣದ ಪ್ರವಾಸಿ ಮಂದಿರದಲ್ಲಿ ಗುರುವಾರದಂದು ಕಲಾವಿದ ಗುರುನಾಥ ಮುರಡಿ ಅವರಿಗೆ ಇಂಡಿ ಕ್ಷೇತ್ರದ ಜೆಡಿಎಸ್ ಪಕ್ಷದ ಮುಖಂಡರಾದ ಬಿ.ಡಿ.ಪಾಟೀಲ ಅವರು ಸನ್ಮಾನಿಸಿದರು.

625ಕ್ಕೆ 621 ಅಂಕ ಪಡೆದ 4 ವಿದ್ಯಾರ್ಥಿಗಳು

ಬಾಗಲಕೋಟೆಗೆ 14ನೇ ಸ್ಥಾನ

ಬಾಗಲಕೋಟೆ: ಕಳೆದ ವರ್ಷ ಬಾಗಲಕೋಟೆ ಜಿಲ್ಲೆಯು ಎಸ್.ಎಸ್.ಎಲ್.ಸಿ ಪರೀಕ್ಷೆ ಫಲಿತಾಂಶದಲ್ಲಿ 16ನೇ ಸ್ಥಾನವನ್ನು ಪಡೆದುಕೊಂಡಿತ್ತು ಈ ವರ್ಷ 2026ರ ಎಸ್.ಎಸ್.ಎಲ್.ಸಿ ಪರೀಕ್ಷಾ ಫಲಿತಾಂಶದಲ್ಲಿ ಬಾಗಲಕೋಟೆ ಜಿಲ್ಲೆ ಶೇ.95.42 ರಷ್ಟು ಫಲಿತಾಂಶ ಪಡೆಯುವ ಮೂಲಕ ರಾಜ್ಯದಲ್ಲಿ 14ನೇ ಸ್ಥಾನ ಪಡೆದುಕೊಂಡಿದೆ.

ಜಿಲ್ಲೆಗೆ ಶೇ.95.42 ರಷ್ಟು ಎಸ್ ಎಸ್‌ಎಲ್‌ಸಿ ಫಲಿತಾಂಶ

ಜಿಲ್ಲೆಯಲ್ಲಿ 14596 ಬಾಲಕರು ಮತ್ತು 15515 ಬಾಲಕಿಯರು ಸೇರಿ ಒಟ್ಟು 30111 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು, ಈ ಪೈಕಿ 13589 ಬಾಲಕರು, 15142 ಬಾಲಕಿಯರು ಸೇರಿ ಒಟ್ಟು 28731 ವಿದ್ಯಾರ್ಥಿಗಳು ತೇರ್ಗಡೆ ಹೊಂದಿರುತ್ತಾರೆ. ಈ ಬಾರಿಯು ಬಾಲಕಿಯರೇ ಮೇಲುಗೈ ಸಾಧಿಸಿದ್ದಾರೆ. ಬಾಲಕರು ಶೇ.93.10 ರಷ್ಟು ತೇರ್ಗಡೆ ಹೊಂದಿದರೆ, ಬಾಲಕಿಯರು ಶೇ.97.60 ರಷ್ಟು ತೇರ್ಗಡೆ ಹೊಂದಿರುತ್ತಾರೆ. ಬಾಲಕರು 1007 ಮತ್ತು ಬಾಲಕಿಯರು 373 ಸೇರಿ ಒಟ್ಟು 1380 ವಿದ್ಯಾರ್ಥಿಗಳು ಅನುತ್ತೀರ್ಣರಾಗಿದ್ದಾರೆ ಎಂದು ಜಿಲ್ಲಾ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಎ.ಸಿ.ಮನ್ನಿಕೇರಿ ತಿಳಿಸಿದ್ದಾರೆ.

ಕಳೆದ 2024-25ನೇ ಸಾಲಿನಲ್ಲಿ ಶೇ.82.3 ರಷ್ಟು ಫಲಿತಾಂಶ ಪಡೆಯುವ ಮೂಲಕ 16ನೇ ಸ್ಥಾನ ಪಡೆದುಕೊಂಡಿತ್ತು. ಈ ಭಾರಿ ಶೇ.13.12 ರಷ್ಟು ಫಲಿತಾಂಶದಲ್ಲಿ ಹೆಚ್ಚಿಗೆ ಕಂಡು ಬಂದಿದೆ. 625ಕ್ಕೆ 621 ಅಂಕ ಪಡೆದು 5 ಜನ ವಿದ್ಯಾರ್ಥಿಗಳು ಜಿಲ್ಲೆಗೆ ಪ್ರಥಮ ಸ್ಥಾನ ಪಡೆದರೆ, 625ಕ್ಕೆ 620 ಅಂಕ ಪಡೆದ 5 ಜನ ವಿದ್ಯಾರ್ಥಿಗಳು ದ್ವಿತೀಯ ಸ್ಥಾನ ಹಾಗೂ 625ಕ್ಕೆ 619 ಅಂಕ ಪಡೆದ 4 ಜನ ವಿದ್ಯಾರ್ಥಿಗಳು ತೃತೀಯ ಸ್ಥಾನ ಪಡೆದುಕೊಂಡಿದ್ದಾರೆ. ಅಲ್ಲದೇ 600ಕ್ಕಿಂತ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳು 501 ಜನ ಇದ್ದಾರೆ.

ಬಾದಾಮಿ ತಾಲೂಕಿನಲ್ಲಿ 4974 ಪೈಕಿ 4812 (ಶೇ.96.74) ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದರೆ, ಬಾಗಲಕೋಟೆ ತಾಲೂಕಿನಲ್ಲಿ 4583 ಪೈಕಿ 4335 (ಶೇ.94.59), ಬೀಳಗಿ ತಾಲೂಕಿನಲ್ಲಿ 2742 ಪೈಕಿ 2449 (ಶೇ.89.31), ಹುನಗುಂದ ತಾಲೂಕಿನಲ್ಲಿ 5085 ಪೈಕಿ 4904 (ಶೇ.96.44), ಜಮಖಂಡಿ ತಾಲೂಕಿನಲ್ಲಿ 7707 ಪೈಕಿ 7387 (ಶೇ.95.85) ಹಾಗೂ ಮುಧೋಳ ತಾಲೂಕಿನಲ್ಲಿ 5188 ಪೈಕಿ 4844 (ಶೇ.93.37) ವಿದ್ಯಾರ್ಥಿಗಳು ತೇರ್ಗಡೆ ಹೊಂದಿರುತ್ತಾರೆ. ಜಿಲ್ಲೆಯ ಫಲಿತಾಂಶದಲ್ಲಿ ಬಾದಾಮಿ ತಾಲೂಕು ಪ್ರಥಮ ಸ್ಥಾನ ಪಡೆದರೆ, ದ್ವಿತೀಯ ಸ್ಥಾನ ಹುನಗುಂದ ಹಾಗೂ ತೃತೀಯ ಸ್ಥಾನ ಜಮಖಂಡಿ ತಾಲೂಕು ಪಡೆದುಕೊಂಡಿದೆ ಎಂದು ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರು ತಿಳಿಸಿದ್ದಾರೆ.

625ಕ್ಕೆ 621 ಅಂಕ ಪಡೆದ 4 ವಿದ್ಯಾರ್ಥಿಗಳು

ಬಾಗಲಕೋಟೆಯ ಸಮೃದ್ಧಿ ಗುರುಕುಲ ಶಾಲೆಯ ಆದರ್ಶ ಶೀಪರಮಟ್ಟಿ, ಜಮಖಂಡಿ ತಾಲೂಕಿನ ಹಿಪ್ಪರಗಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ನವೀನ ರುದ್ರಪ್ಪ ಕುಂಬಾರ, ಬಾದಾಮಿಯ ಗೌರಮ್ಮ ನಾಗಪ್ಪ ಕೋಟ ಇಂಗ್ಲೀಷ ಮೀಡಿಯಂ ಶಾಲೆಯ ಈಶ್ವರಿ ಹಳ್ಳೂರ, ಜಮಖಂಡಿ ತಾಲೂಕಿನ ರಾಮಪೂರ ಪುರಾಣಪ್ರಜ್ಞ ಇಂಗ್ಲೀಷ ಮಾಧ್ಯಮ ಶಾಲೆಯ ಸುಶಾಂತ ಬುರ್ಲಿ 625ಕ್ಕೆ 621 ಅಂಕ ಪಡೆದು ಜಿಲ್ಲೆಗೆ ಪ್ರಥಮ ಸ್ಥಾನ ಪಡೆದುಕೊಂಡಿದ್ದಾರೆ. ಅದೇ ರೀತಿ 625ಕ್ಕೆ 620 ಅಂಕ ಪಡೆದ 5 ವಿದ್ಯಾರ್ಥಿಗಳು ಜಿಲ್ಲೆಗೆ ದ್ವಿತೀಯ ಸ್ಥಾನ ಪಡೆದು ಕೊಂಡರೆ, 625ಕ್ಕೆ 619 ಅಂಕ ಪಡೆದ 4 ವಿದ್ಯಾರ್ಥಿಗಳು ತೃತೀಯ ಸ್ಥಾನ ಪಡೆದುಕೊಂಡಿದ್ದಾರೆ. ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಜಿಲ್ಲಾಧಿಕಾರಿ ಸಂಗಪ್ಪ, ಜಿಲ್ಲಾ ಪಂಚಾಯತ ಸಿಇಒ ಶಶಿಧರ ಕುರೇರ ಹಾಗೂ ಜಿಲ್ಲಾ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಎ.ಸಿ.ಮನ್ನಿಕೇರಿ, ಎಸ್.ಎಸ್.ಎಲ್.ಸಿ ಪರೀಕ್ಷಾ ನೋಡಲ್ ಅಧಿಕಾರಿ ಎಸ್.ಎಸ್.ಹಾಲವರ ಅಭಿನಂದನೆ ಸಲ್ಲಿಸಿದ್ದಾರೆ.

- ಈ ಬಾರಿಯು ಬಾಲಕಿಯರೇ ಮೇಲುಗೈ ಸಾಧಿಸಿದ್ದಾರೆ.
- ಬಾಲಕರು ಶೇ.93.10 ರಷ್ಟು ತೇರ್ಗಡೆ ಹೊಂದಿದರೆ, ಬಾಲಕಿಯರು ಶೇ.97.60 ರಷ್ಟು ತೇರ್ಗಡೆ ಹೊಂದಿರುತ್ತಾರೆ.
- ಈ ಭಾರಿ ಶೇ.13.12 ರಷ್ಟು ಫಲಿತಾಂಶದಲ್ಲಿ ಹೆಚ್ಚಿಗೆ ಕಂಡು ಬಂದಿದೆ.

ಸಿಇಟಿ ಪರೀಕ್ಷಾ ಕೇಂದ್ರಗಳಿಗೆ ಡಿಸಿ, ಸಿಇಓ ಭೇಟಿ

ಬಾಗಲಕೋಟೆ: ಜಿಲ್ಲೆಯ ಬಾಗಲಕೋಟೆ ಮತ್ತು ಜಮಖಂಡಿ ನಗರಗಳಲ್ಲಿ ಗುರುವಾರ ನಡೆದ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ಹಿನ್ನಲೆಯಲ್ಲಿ ಜಿಲ್ಲಾಧಿಕಾರಿ ಸಂಗಪ್ಪ ಹಾಗೂ ಜಿಪಂ ಸಿಇಒ ಶಶಿಧರ ಕುರೇರ ಭೇಟಿ ನೀಡಿ, ಪರೀಕ್ಷಾ ವ್ಯವಸ್ಥೆಗಳ ಪರಿಶೀಲಿಸಿದರು.

ಜಿಲ್ಲಾಧಿಕಾರಿ ಸಂಗಪ್ಪ ಅವರು ನಗರದ ಎಸ್.ಬಿ.ಪಾಟೀಲ ಕಾಳಿದಾಸ ಶಿಕ್ಷಣ ಸಂಸ್ಥೆಯಲ್ಲಿ ಸ್ಥಾಪಿಸಲಾದ ಕೇಂದ್ರಕ್ಕೆ ಭೇಟಿ ನೀಡಿದರೆ, ಜಿ.ಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶಶಿಧರ ಕುರೇರ ಅವರು ನವನಗರದ ಕಾಳಿದಾಸ ಶಿಕ್ಷಣ ಸಂಸ್ಥೆ, ವಿದ್ಯಾಗಿರಿಯಲ್ಲಿರುವ ತುಂಗಳ ಸೈನ್ಸ್ ಕಾಲೇಜ, ಬಾಗಲಕೋಟೆ ನಗರದ ಬಸವೇಶ್ವರ ಆರ್ಟ್ಸ ಕಾಲೇಜ ಹಾಗೂ ಸರಕಾರಿ ಹೆಣ್ಣು ಮಕ್ಕಳ ಪದವಿ ಪೂರ್ವ ಕಾಲೇಜುಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಪರೀಕ್ಷಾರ್ಥಿಗಳಿಗೆ ಕಲ್ಪಿಸಲಾದ ಮೂಲಭೂತ ಸೌಲಭ್ಯಗಳು, ಕುಡಿಯುವ ನೀರು, ಶೌಚಾಲಯ ವ್ಯವಸ್ಥೆ, ವಿದ್ಯುತ್ ಪೂರೈಕೆ ಸೇರಿದಂತೆ ಕೇಂದ್ರಗಳಲ್ಲಿ ಕೈಗೊಳ್ಳಲಾದಸಿದ್ದತೆಗಳನ್ನುಪರಿಶೀಲಿಸಿದರು. ಪರೀಕ್ಷೆಗಳು ಯಾವುದೇ ಅಡಚಣೆ ಇಲ್ಲದೇ ಸುಗಮವಾಗಿ ನಡೆಯುವಂತೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಪರೀಕ್ಷಾ ಕೇಂದ್ರದ ಸುತ್ತಮುತ್ತ ಭದ್ರತಾ ಕ್ರಮಗಳನ್ನು ಬಿಗಿಗೊಳಿಸಲಾಗಿರುವ ಬಗ್ಗೆ ಮಾಹಿತಿ ಪಡೆದು, ಪರೀಕ್ಷಾರ್ಥಿಗಳಿಗೆ ಯಾವುದೇ ತೊಂದರೆ ಆಗದಂತೆ ಎಲ್ಲ ಸೌಲಭ್ಯಗಳನ್ನು ಸಮರ್ಪಕವಾಗಿ ಒದಗಿಸುವಂತೆ ತಿಳಿಸಿದರು.

ಜಿಲ್ಲಾಧಿಕಾರಿಗಳ ಭೇಟಿ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ, ಜಿ.ಪಂ ಸಿಇಓ ಅವರ ಭೇಟಿ ಸಂದರ್ಭದಲ್ಲಿ ಜಿ.ಪಂ ಉಪ ಕಾರ್ಯದರ್ಶಿ ಎನ್.ವಾಯ್. ಬಸರಿಗಿಡದ, ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಪುಂಡಲೀಕ ಕಾಂಬಳೆ, ತಾ.ಪಂ ಕಾರ್ಯನಿರ್ವಾಹಕ ಅಧಿಕಾರಿ ಸುಭಾಷ ಸಂಪಗಾವಿ ಇದ್ದರು.

ಗ್ರಾಪಂ ಸಿಬ್ಬಂದಿಗಳಿಗೆ ಪ್ರಶಂಸನಾ ಪತ್ರ ವಿತರಣೆ

ಗುಳೇದಗುಡ್ಡ: ಗ್ರಾಮ ಪಂಚಾಯತ್ ಸಿಬ್ಬಂದಿಗಳು ಸರ್ಕಾರದ ವಿವಿಧ ಯೋಜನೆಗಳನ್ನು ಯಶಸ್ವಿಯಾಗಿ ಜಾರಿಗೆ ತರುವಲ್ಲಿ ಮಹತ್ವದ ಪಾತ್ರವಹಿಸುತ್ತಿದ್ದು ಅವರ ಸೇವೆಯನ್ನು ಗುರುತಿಸಲಾಗಿದೆ ಎಂದು ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಮಲ್ಲಿಕಾರ್ಜುನ ಬಡಿಗೇರ ಹೇಳಿದರು.

ಅವರು ಗುರುವಾರ ತಾಲೂಕು ಪಂಚಾಯತ್ ಸಭಾಭವನದಲ್ಲಿ ಹಮ್ಮಿಕೊಂಡಿದ್ದ ಪ್ರಶಸ್ತಿ ಪ್ರಶಂಸೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಗ್ರಾಮ ಪಂಚಾಯತಿಯಲ್ಲಿನ ಕರವಸೂಲಿಯಲ್ಲಿ ಗುರಿ ಮೀರಿ ಸಾಧನೆ ಮಾಡಿದವರು, ನರೇಗಾ ಯೋಜನೆಯಲ್ಲಿ ಹೆಚ್ಚಿನ ಉದ್ಯೋಗ ದಿನಗಳನ್ನು ಸೃಷ್ಟಿಸಿದವರು ಹಾಗೂ ವಸತಿ ಯೋಜನೆಗಳ ಅನುಷ್ಠಾನದಲ್ಲಿ ಫಲಾನುಭವಿಗಳಿಗೆ ಸಮಯಕ್ಕೆ ಸರಿಯಾಗಿ ಸೌಲಭ್ಯ ಒದಗಿಸಿದ ಸಿಬ್ಬಂದಿಗಳನ್ನು ವಿಶೇಷವಾಗಿ ಗುರುತಿಸಲಾಗಿದೆ ಎಂದರು.

ನರೇಗಾ ಯೋಜನೆಯಲ್ಲಿ ಗುಳೇದಗುಡ್ಡ ತಾಲೂಕು ಪಂಚಾಯಿತಿ ಒಟ್ಟು 45 ಲಕ್ಷ ಮಾನವ ದಿನಗಳ ಗುರಿಯಲ್ಲಿ 309492 ಮಾನವ ದಿನಗಳನ್ನು ಸೃಜನೆ ಮಾಡುವ ಮೂಲಕ ಶೇ. 68.77ರಷ್ಟು ಸಾಧನೆ ಮಾಡಿ ಜಿಲ್ಲೆಗೆ ಪ್ರಥಮಸ್ಥಾನ ಪಡೆದಿದ್ದು, ಇದರಲ್ಲಿ ವಿಶೇಷಚೇತನರಿಗೆ ಶೇ.13.10 ರಷ್ಟು ಉದ್ಯೋಗ ಖಾತ್ರಿ ನೀಡಿದೆ ಎಂದರು.

ಕಾರ್ಯಕ್ರಮದಲ್ಲಿ ತಾಲೂಕ ಪಂಚಾಯತ್ ವತಿಯಿಂದ ಗ್ರಾಮ ಪಂಚಾಯತ್ ಮಟ್ಟದಲ್ಲಿ ಕಾರ್ಯನಿರ್ವಹಿಸುವ ಕರವಸೂಲಿ, ನರೇಗಾ, 15ನೇ ಹಣಕಾಸು, ಮತ್ತು ವಸತಿ ಯೋಜನೆಗಳ ಅನು?ನದಲ್ಲಿ ಅತ್ಯುತ್ತಮ ಸಾಧನೆ ಮಾಡಿದ ಸಿಬ್ಬಂದಿಗಳಿಗೆ ಪ್ರಶಂಸಾ ಪತ್ರಗಳನ್ನು ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ತಾಲೂಕು ಯೋಜನಾಧಿಕಾರಿ ಶೇಖರ ಅಂಗಡಿ, ಸಹಾಯಕ ನಿರ್ದೇಶಕರುಗಳಾದ ರಾಮಚಂದ್ರ ಮೇತ್ರಿ , ಮಹಾಂತೇಶ ಕೋಟಿ, ಸಿದ್ದು ಪೂಜಾರಿ, ಎಲ್. ಜಿ. ಶಾಂತಗೇರಿ, ಶಿವುಕುಮಾರ ರಾಜನಾಳ, ಪ್ರವೀಣ ಚನ್ನಸಂಗಯ್ಯನಮಠ, ಎಂ.ಎಸ್. ವಾರದ, ಪ್ರವೀಣ ಬಡಿಗೇರ, ಸುಭಾಷಚಂದ್ರ ಎಚ್. ಸುನೀತಾ ಅಂಕೋಲೆ ಸೇರಿದಂತೆ ಪಂಚಾಯಿತಿ ಸಿಬ್ಬಂದಿಗಳು ಇದ್ದರು.

ಇಂದಿನಿಂದ ಅರಕೇರಿ ಗ್ರಾಮದೇವರ, ಮಾರುತೇಶ್ವರ ಜಾತ್ರಾ ಮಹೋತ್ಸವ

ಬೀಳಗಿ: ತಾಲೂಕಿನ ಅರಕೇರಿ ಗ್ರಾಮದಲ್ಲಿ ಏ.24 ಮತ್ತು ಏ.25ರಂದು ಗ್ರಾಮದೇವರ ಜಾತ್ರಾ ಮಹೋತ್ಸವ, ವಿವಿಧ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳು ವಿಜೃಂಭಣೆಯಿಂದ ನಡೆಯಲಿವೆ.

ಏ.24ರಂದು ಕಡೆವಾರದ ಪ್ರಯುಕ್ತ ಗ್ರಾಮದ ಎಲ್ಲ ದೇವರುಗಳಿಗೆ ನೀರು ನೀಡುವುದು, ಹೆಣ್ಣು ದೇವತೆಗಳಿಗೆ ಉಡಿ ತುಂಬುವ ಕಾರ್ಯಕ್ರಮ ಜರುಗಲಿದೆ. ಬೆಳಗ್ಗೆ 8 ಗಂಟೆಗೆ ಆರತಿ, ವಾದ್ಯ ವೈಭವ, ಡೊಳ್ಳಿನ ವಾಲಗದೊಂದಿಗೆ ಲಕ್ಷ್ಮೀದೇವಿ ಪಲ್ಲಕ್ಕಿ ಬನ್ನಿ ಕಟ್ಟೆಗೆ(ಸಿದ್ದಪ್ಪ ಹನಮರ ಹೊಲ) ಹೋಗಿ ಬಂದ ನಂತರ ಉಡಿ ತುಂಬುವ ಕಾರ್ಯಕ್ರಮ, ಮಹಾಪ್ರಸಾದ ಜರುಗಲಿದೆ. ಅಜ್ಜಮ್ಮದೇವಿ ಉಡಿ ತುಂಬುವ ಕಾರ್ಯಕ್ರಮದ ಬಳಿಕ ಹೂರಣ ಹೋಳಿಗೆ, ಮಾವಿನ ಹಣ್ಣಿನ ಶೀಕರಣಿ ಮಹಾಪ್ರಸಾದ ಜರುಗಲಿದೆ.

ದ್ಯಾಮವ್ವ-ದುರ್ಗಾದೇವಿ ಜಾತ್ರೆ: ಏ. 24ರಂದು ಬೆಳಗ್ಗೆ 9 ಗಂಟೆಗೆ ಸುಮಂಗಲೆಯರ ಆರತಿ, ಕುಂಭಮೇಳ ಹಾಗೂ ಸಕಲ ವಾದ್ಯ ವೈಭವ, ಪೋತರಾಜರ ಸೇವೆಯೊಂದಿಗೆ ಕೌದೇಶ್ವರ ಮಠದಿಂದ ಗ್ರಾಮದೇವತೆಯರಾದ ದ್ಯಾಮವ್ವದೇವಿ ಮತ್ತು ದುರ್ಗಾದೇವಿಯ ಮೆರವಣಿಗೆಯೊಂದಿಗೆ ಗ್ರಾಮದ ಪ್ರಮುಖ ಬೀದಿಯಲ್ಲಿ ಮೆರವಣಿಗೆ ಮೂಲಕ ಸಂಚರಿಸಿ ಗ್ರಾಮದೇವರ ದೇವಸ್ಥಾನ ಪ್ರವೇಶ, ವಿಶೇಷ ಪೂಜೆ, ಉಡಿ ತುಂಬುವ ಕಾರ್ಯಕ್ರಮದ ಬಳಿಕ ಮಹಾಪ್ರಸಾದ ಜರುಗಲಿದೆ.

ಸಂಜೆ ಗ್ರಾಮದೇವರ ಪ್ರತಿಷ್ಠಾಪನೆ ನಂತರ ಸಂಜೆ 7 ಗಂಟೆಗೆ ಧರ್ಮಸಭೆ ಜರುಗಲಿದೆ. ಕೌದೇಶ್ವರ ಮಠದ ಮಾಧವಾನಂದ ಸ್ವಾಮಿಗಳು, ಬೊಮ್ಮಲಿಂಗೇಶ್ವರ ಆಶ್ರಮದ ಬ್ರಹ್ಮಲಿಂಗ ಸ್ವಾಮಿಗಳು, ಬಕ್ಕೇಶ್ವರ ಮಠದ ಬಕ್ಕಯ್ಯ ಸ್ವಾಮಿಗಳು, ಮುರನಾಳದ ಮಳೆರಾಜೇಂದ್ರ ಸ್ವಾಮಿ ಮಠದ ಮಳೆಪ್ಪಯ್ಯ ಸ್ವಾಮಿಗಳು, ಗುರುನಾಥ ಸ್ವಾಮಿಗಳು, ಅನಗವಾಡಿ ಪೂರ್ಣಾನಂದ ಮಠದ ಅನಸೂಯಾ ತಾಯಿ ಪಾಲ್ಗೊಂಡು ಪ್ರವಚನ ನೀಡುವರು. ಸೋಮನಿಂಗ ಶಾಸ್ತ್ರಿಗಳು ಮುಗಳಿಹಾಳ ಇವರಿಂದ ಸಂಗೀತಸೇವೆ ಜರುಗಲಿದೆ. ಇದೇ ವೇದಿಕೆ ಮೇಲೆ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ.80 ರಷ್ಟು ಅಂಕಗಳನ್ನು ಪಡೆದ ಗ್ರಾಮದ ವಿದ್ಯಾರ್ಥಿಗಳಿದೆ ಸನ್ಮಾನಿಸಲಾಗುವುದು. ಏ. 25 ರಂದು ಬಳ್ಳಾರಿಯ ಗುರುನಾಥ ಜೋಶಿ ಮತ್ತು ತಂಡದವರಿಂದ ಹೋಮ-ಹವನಗಳು ಜರುಗಿದ ಬಳಿಕ ಮಹಾಪ್ರಸಾದದೊಂದಿಗೆ ಜಾತ್ರಾ ಮಹೋತ್ಸವ ಸಂಪನ್ನಗೊಳ್ಳಲಿದೆ.

ಲಕ್ಷ್ಮೀ ಸುಳ್ಳದ ಶಾಲೆಗೆ ಪ್ರಥಮ

ಬೀಳಗಿ: ತಾಲೂಕಿನ ಕಾತರಕಿ ಗ್ರಾಮದ ಶ್ರೀಮತಿ ದೊಡ್ಡವ್ವ ಬಸೆಟ್ಟೆಪ್ಪ ಅಂಗಡಿ ಸರ್ಕಾರಿ ಪ್ರೌಢ ಶಾಲೆ 2025-26ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ 51ಕ್ಕೆ 46 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಲಕ್ಷ್ಮೀ ಸುಳ್ಳದ 625ಕ್ಕೆ 601 (ಶೇ.96.16) ಅಂಕಗಳನ್ನು ಪಡೆದು ಶಾಲೆಗೆಪ್ರಥಮ ಸ್ಥಾನ ಪಡೆದಿರುವಳು. ಚೌರಮ್ಮ ಚಿನ್ನಣ್ಣವರ625ಕ್ಕೆ563 (ಶೇ.90.08) ಅಂಕಗಳನ್ನು ಪಡೆದು ಶಾಲೆಗೆ ದ್ವಿತೀಯ ಸ್ಥಾನ ಪಡೆದಿರುವಳೆಂದು ಮುಖ್ಯೋಪಾಧ್ಯಾಯ ಎಚ್. ಎಸ್. ನಾಯಕ ತಿಳಿಸಿದ್ದಾರೆ.

ಶಾಲೆಗೆ ಗಿರಿಜಾ ಪ್ರಥಮ, ಪ್ರಿಯಾ ದ್ವಿತೀಯ

ಬೀಳಗಿ: ತಾಲೂಕಿನ ಅರಕೇರಿ ಗ್ರಾಮದ ಶ್ರೀಮತಿ ಮಲ್ಲವ್ವ ಮಲ್ಲಪ್ಪ ಸಾವಕಾರ ಸರ್ಕಾರಿ ಪ್ರೌಢ ಶಾಲೆ 2025-26ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ 25ಕ್ಕೆ 25 ವಿದ್ಯಾರ್ಥಿಗಳು ಉತ್ತೀರ್ಣರಾಗುವ ಮೂಲಕ 100ಕ್ಕೆ 100ರಷ್ಟು ಫಲಿತಾಂಶ ಬಂದಿದೆ. ಗಿರಿಜಾ ಹಿರೇಮನಿ 625ಕ್ಕೆ 528 (ಶೇ.84.48) ಅಂಕಗಳನ್ನು ಪಡೆದು ಶಾಲೆಗೆ ಪ್ರಥಮ ಸ್ಥಾನ ಪಡೆದಿರುವಳು. ಪ್ರಿಯಾ ನಡಗೇರಿ 625ಕ್ಕೆ 510 (ಶೇ.81.60) ಅಂಕಗಳನ್ನು ಪಡೆದು ಶಾಲೆಗೆ ದ್ವಿತೀಯ ಸ್ಥಾನ ಪಡೆದಿರುವರೆಂದು ಮುಖ್ಯೋಪಾಧ್ಯಾಯ ರಾಮಚಂದ್ರ ಕಟ್ಟಿ ತಿಳಿಸಿದ್ದಾರೆ.

ಉತ್ತಮ ಸಾಧನೆ

ಜಮಖಂಡಿ: ನಗರದ ತುಂಗಳ ವಿದ್ಯಾ ಸಂಸ್ಥೆಯ ತುಂಗಳ ಪ್ರೌಢಶಾಲೆಯ ಕನ್ನಡ ಮಾಧ್ಯಮ ಪಠ್ಯ ಕ್ರಮದ ಸಮನಾ ಮುಜುಮದಾರ ಎಸ್‌ಎಸ್‌ಎಲ್‌ಸಿಯಲ್ಲಿ 625 ಕ್ಕೆ 614 ಅಂಕ ಪಡೆದು ಶಾಲೆಗ ಪ್ರಥಮಸ್ಥಾನ ಗಳಿಸಿದ್ದಾಳೆ, ಸಂಸ್ಕೃತ ಪ್ರಥಮ ಭಾಷೆ 100/100, ತೃತೀಯ ಭಾಷೆ ಕನ್ನಡ 100/100, ಸಮಾಜ ವಿಜ್ಞಾನ 100/100, ಇಂಗ್ಲಿಷ್ 97, ಗಣಿತ 97, ವಿಜ್ಞಾನ 95 ಅಂಕ ಪಡೆದು ಸಮಾಜಕ್ಕೆ ಕೀರ್ತಿ ತಂದಿದ್ದಾಳೆ ಎಂದು ವಿಪ್ರಸಮಾಜದಿಂದ ಶ್ಲಾಘನೆ ವ್ಯಕ್ತಪಡಿಸಿದ್ದಾರೆ.

ಶ್ರೀ ಬಸವೇಶ್ವರ ಪ್ರೌಢಶಾಲೆಗೆ ಶೇ. 99.02 ಫಲಿತಾಂಶ

ಬಾದಾಮಿ: ಪಟ್ಟಣದ ಶ್ರೀ ಬಸವೇಶ್ವರ ಪ್ರೌಢಶಾಲೆಯು 2026ನೇ ಸಾಲಿನಲ್ಲಿ ಜರುಗಿದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ. 99.02ರಷ್ಟು ಫಲಿತಾಂಶ ಬಂದಿದೆ.

ಶಾಲೆಯ ಒಟ್ಟು-103 ವಿದ್ಯಾರ್ಥಿ/ನಿಯರು ಪರೀಕ್ಷೆಗೆ ಹಾಜರಾಗಿದ್ದು ಇದರಲ್ಲಿ 20 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿಯಲ್ಲಿ ಹಾಗೂ 64 ವಿದ್ಯಾರ್ಥಿಗಳು ಉನ್ನತ ಶ್ರೇಣಿಯಲ್ಲಿ 16 ವಿದ್ಯಾರ್ಥಿಗಳು ದ್ವಿತೀಯ ಶ್ರೇಣಿಯಲ್ಲಿ 2 ವಿದ್ಯಾರ್ಥಿಗಳು ತೃತೀಯ ಶ್ರೇಣಿಯಲ್ಲಿ ಉತ್ತೀರ್ಣರಾಗಿರುತ್ತಾರೆ. ಕುಮಾರಿ ಸೃಜನಾ. ಸಂ. ಹೊಸಮನಿ-616(98.56%) ಪ್ರಥಮ, ಕುಮಾರಿ ಸಿಂಧೂ. ಉ. ಕಂದಗಲ್-610(ಶೇ97.6%) ದ್ವಿತೀಯ ಹಾಗೂ ಕುಮಾರಿ ಅಮೃತಾ.ಗೊ. ಚನ್ನಶೆಟ್ಟಿ-600(96%) ಪಡೆದು ತೃತೀಯ ಸ್ಥಾನ ಪಡೆದು ಶಾಲೆಗೆ ಕೀರ್ತಿ ತಂದಿದ್ದಾರೆ ಎಂದು ಮುಖ್ಯಶಿಕ್ಷಕ ರಮೇಶ ಆರಕೇರಿ ತಿಳಿಸಿದ್ದಾರೆ.

ಅಭಿನಂದನೆ: ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಸಂಸ್ಥೆಯ ಅಧ್ಯಕ್ಷ , ಮಾಜಿ ಶಾಸಕ ಎಂ.ಕೆ.ಪಟ್ಟಣಶೆಟ್ಟಿ ಹಾಗೂ ಆಡಳಿತ ಮಂಡಳಿಯ ಎಲ್ಲ ಸದಸ್ಯರು ತಾಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿ ಕೇಶವ ಪೆಟ್ಲೂರ, ಹಾಗೂ ಶಾಲೆಯ ಮುಖ್ಯಾಧ್ಯಾಪಕ ಆರ್.ಆಯ್. ಆರಕೇರಿ ಹಾಗೂ ಸಿಬ್ಬಂದಿ ವರ್ಗದವರು ಅಭಿನಂದಿಸಿದ್ದಾರೆ.

ಬೀಳಗಿ ತಾಲೂಕು ಉತ್ತಮ ಸಾಧನೆ: ಪ್ರಮೋದ ರಾಥೋಡ್ ರಾಜ್ಯಕ್ಕೆ 6ನೇ ರ್‍ಯಾಂಕ್

ಬೀಳಗಿ: ಎಸ್ಸೆಸ್ಸೆಲ್ಸಿ ಪರೀಕ್ಷೆಗಳು ನಕಲು ರಹಿತ ಪಾರದರ್ಶಕವಾಗಿ ನಡೆಯಬೇಕು. ಪ್ರಾಮಾಣಿಕವಾಗಿ ಓದಿದ ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಸಾಧನೆ ಮಾಡಲೆಂಬ ಶಾಸಕ ಜೆ. ಟಿ. ಪಾಟೀಲರ ಸೂಚನೆ ಮೇರೆಗೆ ತಾಲೂಕಿನ ಎಲ್ಲ ಪರೀಕ್ಷಾ ಕೇಂದ್ರಗಳಲ್ಲಿ ನೇರ ದೃಶ್ಯಾವಳಿ(ವೆಬ್ ಕಾಸ್ಟಿಂಗ್) ಮೂಲಕ ತಾಲೂಕು ಹಂತದಲ್ಲಿ ವೀಕ್ಷಣೆಗೆ ಅವಕಾಶ ಮಾಡಿದ ಏಕಮಾತ್ರ ತಾಲೂಕು ಇದಾಗಿದೆ. ಇದರ ಪರಿಣಾಮ ಗಟ್ಟಿಕಾಳುಗಳು ಎಸ್ಸೆಸ್ಸೆಲ್ಸಿ ಪರೀಕ್ಷೆ-1ರಲ್ಲಿ 2449 ವಿದ್ಯಾರ್ಥಿಗಳು ಉತ್ತೀರ್ಣರಾಗುವ ಮೂಲಕ ಉತ್ತಮ ಸಾಧನೆ ತೋರಿರುವರು.

ತಾಲೂಕಿನ ಒಟ್ಟು 2742 ಮಕ್ಕಳಲ್ಲಿ ಒಟ್ಟು 2449 ಉತ್ತೀರ್ಣರಾಗಿದ್ದಾರೆ. 293 ಮಕ್ಕಳು ಅನುತ್ತೀರ್ಣರಾಗಿದ್ದಾರೆ. ತಾಲೂಕಿನ ಒಟ್ಟು 89.31 ಶೇಕಡಾವಾರು ವಿದ್ಯಾರ್ಥಿಗಳು ಪಾಸಾಗಿದ್ದಾರೆ. 20 ವಿದ್ಯಾರ್ಥಿಗಳು 600 ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದಿರುತ್ತಾರೆ.

ಪ್ರೌಢ ಶಾಲಾ ವಿಭಾಗಗಳಲ್ಲಿ ಸರಕಾರಿ ಪ್ರೌಢ ಶಾಲೆಗಳು ಶೇ. 90.82, ಅನುದಾನಿತ ಪ್ರೌಢ ಶಾಲೆಗಳು ಶೇ. 79.56 ಹಾಗೂ ಅನುದಾನ ರಹಿತ ಶಾಲೆ ಶೇ. 92.46 ರಷ್ಟು ಪ್ರಗತಿ ಸಾಧಿಸಿವೆ.

ನಾಗರಾಳ ತಾಂಡಾದ ಧೀರಜ್ ಪಬ್ಲಿಕ್ ಶಾಲೆಯ ವಿದ್ಯಾರ್ಥಿ ಪ್ರಮೋದ ರಾಥೋಡ್ 620 ಅಂಕಗಳನ್ನು ಗಳಿಸಿ ರಾಜ್ಯಕ್ಕೆ 6ನೇ ರ್‍ಯಾಂಕ ಹಾಗೂ ಆದರ್ಶ ವಿದ್ಯಾಲಯ ಕೊಪ್ಪ (ಎಸ್.ಆರ್.)ದ ವಿದ್ಯಾರ್ಥಿಗಳಾದ ಸುಮಿತ ಹಾದಿಮನಿ 617 ಅಂಕಗಳನ್ನು ಪಡೆದು ರಾಜ್ಯಕ್ಕೆ 9ನೇ ರ್‍ಯಾಂಕ್ ಪಡೆದಿರುವರು. ಸೃಷ್ಟಿ ಕೆರಿಕಾರ 616 ಅಂಕಗಳನ್ನು ಪಡೆದು ರಾಜ್ಯಕ್ಕೆ 10ನೇ ರ್‍ಯಾಂಕ್ ಗಳಿಸಿದ್ದಾರೆ.

ತಾಲೂಕಿನ 50 ಪ್ರೌಢ ಶಾಲೆಗಳಲ್ಲಿ ಆದರ್ಶ ವಿದ್ಯಾಲಯ ಬೀಳಗಿ 76ಕ್ಕೆ 76 ವಿದ್ಯಾರ್ಥಿಗಳು, ಧೀರಜ್ ಪಬ್ಲಿಕ್ ಶಾಲೆ ನಾಗರಾಳ 66ಕ್ಕೆ 66 ವಿದ್ಯಾರ್ಥಿಗಳು, ಸ್ವಾಮಿ ವಿವೇಕಾನಂದ ಕನ್ನಡ ಪ್ರೌಢ ಶಾಲೆ ಬೀಳಗಿ 49ಕ್ಕೆ 49 ವಿದ್ಯಾರ್ಥಿಗಳು, ಕಿತ್ತೂರ ರಾಣಿ ಚೆನ್ನಮ್ಮ ವಸತಿ ಶಾಲೆ ಬೂದಿಹಾಳ (ಎಸ್.ಎ.) 44ಕ್ಕೆ 44 ವಿದ್ಯಾರ್ಥಿಗಳು, ಸರಕಾರಿ ಪ್ರೌಢ ಶಾಲೆ ಬೂದಿಹಾಳ (ಎಸ್.ಎ.) 50ಕ್ಕೆ 50 ವಿದ್ಯಾರ್ಥಿಗಳು, ಸರಕಾರಿ ಪ್ರೌಢ ಶಾಲೆ ಆರಕೇರಿ 25ಕ್ಕೆ 25 ವಿದ್ಯಾರ್ಥಿಗಳು, ಅಲ್ಪಸಂಖ್ಯಾತ ಮೊರಾರ್ಜಿ ವಸತಿ ಶಾಲೆ ಬೂದಿಹಾಳ(ಎಸ್.ಎ.) 32ಕ್ಕೆ 32 ವಿದ್ಯಾರ್ಥಿಗಳು, ಬಸವೇಶ್ವರ ಪ್ರೌಢ ಶಾಲೆ ಅನಗವಾಡಿ 37ಕ್ಕೆ 37 ವಿದ್ಯಾರ್ಥಿಗಳು ಪಾಸಾಗುವ ಮೂಲಕ 8 ಶಾಲೆಗಳು 100ಕ್ಕೆ 100ರಷ್ಟು ಫಲಿತಾಂಶ ಸಾಧಿಸಿದ್ದು, ಇದರಲ್ಲಿ 5 ಸರ್ಕಾರಿ ಪ್ರೌಢ ಶಾಲೆಗಳು ಸೇರಿವೆ. ತಾಲೂಕಿನ ಒಟ್ಟು 31 ಶಾಲೆಗಳು ಶೇ. 90 ಮತ್ತು ಹೆಚ್ಚು ಸಾಧನೆ ಮಾಡಿದ್ದು ಗಮನಾರ್ಹವಾಗಿದೆ.

> **ರಾಜ್ಯಕ್ಕೆ ರ್‍ಯಾಂಕ್ ಪಡೆದಿರುವ ಮೂರು ವಿದ್ಯಾರ್ಥಿಗಳಿಗೆ, ಅವರಿಗೆ ಕಲಿಸಿದ ಶಾಲೆಯ ಗುರುಗಳಿಗೆ ಹೃದಯ ಪೂರ್ವಕ ಧನ್ಯವಾದಗಳು. ಎಸ್ಸೆಸ್ಸೆಲ್ಸಿ ಪರೀಕ್ಷೆಯನ್ನು ಅತ್ಯಂತ ಪಾರದರ್ಶಕವಾಗಿ ನಿಯೋಜನೆ ಮಾಡಿದ ಬಿಇಒ ಆರ್. ಎಸ್. ಆದಾಪೂರ ಮತ್ತು ಸಿಬ್ಬಂದಿ ವರ್ಗಕ್ಕೆ, ಶಿಕ್ಷಕರಿಗೆ ಉತ್ತಮ ಫಲಿತಾಂಶ ಕೊಟ್ಟಿದ್ದಕ್ಕೆ ಧನ್ಯವಾದಗಳು.**
>
> **■ ಜೆ. ಟಿ. ಪಾಟೀಲ. ಶಾಸಕರು, ಬೀಳಗಿ**

> **ಬೀಳಗಿ ತಾಲೂಕಿನ ವಿದ್ಯಾರ್ಥಿಗಳು ರಾಜ್ಯ ಮಟ್ಟದಲ್ಲೂ ಉತ್ತಮ ಸಾಧನೆ ತೋರಿರುವುದು ಹೆಮ್ಮೆಯ ಸಂಗತಿ. ಶಾಸಕರ ಮಾರ್ಗದರ್ಶನಲ್ಲಿ ಶಿಕ್ಷಕರು, ಪೋಷಕರು ಹಾಗೂ ವಿದ್ಯಾರ್ಥಿಗಳ ಒಗ್ಗಟ್ಟಿನ ಪ್ರಯತ್ನದಿಂದಲೇ ಈ ಫಲಿತಾಂಶ ಸಾಧ್ಯವಾಗಿದೆ. ಮುಂದಿನ ವರ್ಷ ಇನ್ನಷ್ಟು ಉತ್ತಮ ಸಾಧನೆ ಮಾಡಲು ಕ್ರಮ ಕೈಗೊಳ್ಳಲಾಗುತ್ತದೆ.**
>
> **■ ಆರ್. ಎಸ್. ಆದಾಪೂರ, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಬೀಳಗಿ**

ಕಿರುಸುದ್ದಿ

ಕಾಶಿಬಾಯಿಗೆ ಶೆಣೈ ಪ್ರತಿಷ್ಠಾನ ಪ್ರಶಸ್ತಿ ಪ್ರದಾನ

ಮುದ್ದೇಬಿಹಾಳ: ತಾಲೂಕಿನ ಸಾಮಾಜಿಕ ಕಾರ್ಯಕರ್ತೆ, ರಾಜಕೀಯ ಧುರೀಣೆ ಕಾಶಿಬಾಯಿ ರಾಂಪುರ್ ಅವರಿಗೆ ದಾವಣಗೆರೆ ಜಿಲ್ಲೆಯ ಸಾಲಿಗ್ರಾಮ ಗ್ರಾಮದ ಸರಸ್ವತಿ ದಾಸಪ್ಪ ಶೆಣೈ ಪ್ರತಿಷ್ಠಾನದ ಕನ್ನಡ ರತ್ನ ರಾಜ್ಯ ಪ್ರಶಸ್ತಿ ಪ್ರದಾನ ಮಾಡಲಾಗಿದೆ. ಕಳೆದ ಭಾನುವಾರ ದಾವಣಗೆರೆಯ ಕಲಾಕುಂಚ ಸಾಂಸ್ಕೃತಿಕ ಸಂಸ್ಥೆ, ಚನ್ನಗಿರಿ ವಿರುಪಾಕ್ಷಪ್ಪ ಧರ್ಮಶಾಲಾ ಕಲ್ಯಾಣ ಮಂಟಪದಲ್ಲಿ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ರಾಜ್ಯ ರಾಷ್ಟ್ರ ಮಟ್ಟದ ಸಾಮಾಜಿಕ ಸೇವೆಯಲ್ಲಿ ತೊಡಗಿಕೊಂಡಿರುವುದಕ್ಕೆ ಮತ್ತು ಕನ್ನಡ ಸರಸ್ವತಿಯ ಸೇವೆಗಾಗಿ ಪ್ರಶಸ್ತಿ ಪತ್ರ ಹಾಗೂ ನೆನಪಿನ ಕಾಣಿಕೆಯನ್ನು ನೀಡಿ ಗೌರವಿಸಲಾಗಿದೆ ಎಂದು ತಿಳಿಸಲಾಗಿದೆ. ಸಮಾರಂಭದಲ್ಲಿ ಕಲಾ ಕುಂಚ ಸಂಸ್ಥೆಯ ಸಂಸ್ಥಾಪಕ ಗಣೇಶ್ ಶೆಣೈ, ಅಧ್ಯಕ್ಷ ನಾಗೇಶ್ ಕಿಣಿ, ಪ್ರಧಾನ ಕಾರ್ಯದರ್ಶಿ ರಾಘವೇಂದ್ರ ಶೆಣೈ ಸೇರಿದಂತೆ ಪದಾಧಿಕಾರಿಗಳು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

ವಿದ್ಯಾರ್ಥಿಗಳ ಉತ್ತಮ ಸಾಧನೆ

ಬಸವನಬಾಗೇವಾಡಿ: 2025-26 ನೇ ಸಾಲಿಗೆ ನಡೆದ ಎಸ್ ಎಸ್ ಎಲ್ ಸಿ ವಾರ್ಷಿಕ ಪರೀಕ್ಷೆಯಲ್ಲಿ ತಾಲೂಕಿನ ಹುಣಶ್ಯಾಳ ಪಿ.ಬಿ ಗ್ರಾಮದ ಸಮೀಪದ ಸರಕಾರಿ ಆದರ್ಶ ವಿದ್ಯಾಲಯ ಉತ್ತಮ ಸಾಧನೆ ಮಾಡಿದೆ. ವಿದ್ಯಾ ನೀಲಕಂಠಪ್ಪ ಹೂಗಾರ ವಿದ್ಯಾರ್ಥಿನಿ 617 ಅಂಕ ಪಡೆದು ಶೇ.98.72ರಷ್ಟು ಸಾಧನೆ ಮಾಡಿ ಪ್ರಥಮ ಸ್ಥಾನ, ಸಂಜು ಮಲ್ಲೇಶಪ್ಪ ಕೋನರೆಡ್ಡಿ ವಿದ್ಯಾರ್ಥಿ 607 ಅಂಕ ಪಡೆದು ಶೇ.97.12ರಷ್ಟು ಸಾಧನೆ ಮಾಡಿ ದ್ವಿತೀಯ ಸ್ಥಾನ, ಸ್ಪಂದನಾ ಮಹೇಶ ಪೂಜಾರಿ ಅವರು 604 ಅಂಕ ಪಡೆದು ಶೇ. 96.64 ತೃತೀಯ ಸ್ಥಾನ ಪಡೆದು ಉತ್ತಮ ಸಾಧನೆ ಮಾಡಿದ್ದಾರೆ.

ಶಾಲೆಯ ಫಲಿತಾಂಶ 100ಕ್ಕೆ 100ರಷ್ಟು ಆಗಿದ್ದು 42 ವಿದ್ಯಾರ್ಥಿಗಳು ಡಿಸ್ಟಿಂಗಷನ್, 24 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಸಾಧನೆ ಮಾಡಿದ್ದರೆ, 29 ವಿದ್ಯಾರ್ಥಿಗಳು 37 ವಿದ್ಯಾರ್ಥಿನಿಯರು ಸೇರಿ 66ಜನ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಿ ಶಾಲೆಯ ಹಾಗೂ ಪಾಲಕರ ಕೀರ್ತಿ ಹೆಚ್ಚಿಸಿದ್ದಾರೆ. ಅವರಿಗೆ ಶಾಲೆಯ ಮುಖ್ಯೋಪಾಧ್ಯಯರಾದ ಸುಭಾಸ ಹರಿಜನ ಸೇರಿ ಸಿಬ್ಬಂದಿ ವರ್ಗ ಹಾಗೂ ಶಾಲೆಯ ಎಸ್ ಡಿಎಂಸಿ ಅಧ್ಯಕ್ಷರಾದ ಆನಂದ ಸಜ್ಜನ ಉಪಾದ್ಯಕ್ಷೆ ಸವಿತಾ ಚಾಂದಕವಟೆ ಹಾಗೂ ಎಸ್ ಡಿ ಎಂ ಸಿಯ ಸರ್ವ ಸದಸ್ಯರು ಅಭಿನಂದನೆ ಸಲ್ಲಿಸಿದ್ದಾರೆ.

ಪ್ರೇರಣಾ ಶಾಲೆಯ ವಿದ್ಯಾರ್ಥಿಗಳ ಸಾಧನೆ

ಸಿಂದಗಿ: ನಗರದ ಹೊರವಲಯದ ಆಲಮೇಲ ರಸ್ತೆಯಲ್ಲಿರುವ ಪ್ರೇರಣಾ ಪಬ್ಲಿಕ್ ಆಂಗ್ಲ ಮಾಧ್ಯಮ ಪ್ರೌಢ ಶಾಲೆಯ ವಿದ್ಯಾರ್ಥಿಗಳು ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆ-1ರಲ್ಲಿ ಉತ್ತಮ ಸಾಧನೆ ಮಾಡಿದ್ದಾರೆ. ಎಸ್‌ಎಸ್‌ಎಲ್‌ಸಿ ಮುಖ್ಯ ಪರೀಕ್ಷೆ-1ರಲ್ಲಿ 84 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, ಆದರಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ 56, ಪ್ರಥಮ ಶ್ರೇಣಿ 26, ದ್ವಿತೀಯ ಶ್ರೇಣಿ 02 ವಿದ್ಯಾರ್ಥಿಗಳು ಪಾಸಾಗಿದ್ದು, ಶಾಲೆಯ ಒಟ್ಟು ಫಲಿತಾಂಶ ಶೇ.100ಕ್ಕೆ 100ರಷ್ಟಾಗಿದೆ.

ಅನುಸುಯಾ ಹಿರೇಮಠ 625 ಅಂಕಗಳಿಗೆ 615 (ಶೇ.98.40), ಅಂಕಗಳು ಪಡೆದು ಪ್ರಥಮ ಸ್ಥಾನ, ವೈಷ್ಣವಿ ರೇವೂರ 613 (ಶೇ.98.08), ದ್ವಿತೀಯ, ಶಿವಾನಿ ಬಿರಾದಾರ 608 (ಶೇ.97.28) ತೃತೀಯ, ಸಂಜೀವ ಬಮ್ಮಣ್ಣಿ 606 (ಶೇ.96.96), ವೇದಾ ಬಾಗಲಕೋಟ 606 (96.96%), ಅಪೇಕ್ಷಾ ಹುಗ್ಗಿ 601 (96.96%), ಆದರ್ಶ ಚಾಂದಕವಟೆ 599 (95.84%), ಪೂರ್ವಿ ಪಟ್ಟಣಶೆಟ್ಟಿ 598 (95.68%), ಶ್ರೇಯಾ ಆಗಸರ 598 (95.68%), ಸುಕೃತಾ ತೋಟದ 598 (95.68%), ಪ್ರಜ್ವಲ ಕಂಗಾಳ 597 (95.52%), ವಿಶ್ವಾಸ ಬಗಲಿ 597 (95.52%), ದುಂಡಮ್ಮ ಬಿರಾದಾರ 596 (95.36%), ಪೂರ್ವಿ ಪಾಟೀಲ 596 (95.36%), ಹರ್ಷಿತಾ ವಾಗಮುಂಡಿ 594 (95.04%), ವೈಷ್ಣವಿ ಜಾಬಾನೂರ 594 (95.04%), ವಿದ್ಯಾಶ್ರೀ ನಾಯಕ 594 (95.04%) ಅಂಕಗಳನ್ನು ಪಡದುಕೊಂಡು ಅತ್ಯುನ್ನತ ಶ್ರೇಣಿಯಲ್ಲಿ ಪಾಸಾಗಿ ಶಾಲೆಗೆ ಕೀರ್ತಿ ತಂದಿದ್ದಾರೆ. ವಿದ್ಯಾರ್ಥಿಗಳ ಈ ಸಾಧನೆಗೆ ಸಂಸ್ಥೆಯ ಅಧ್ಯಕ್ಷ ಆರ್.ಡಿ.ಕುಲಕರ್ಣಿ, ಪಿ.ಡಿ.ಕುಲಕರ್ಣಿ, ಮುಖ್ಯ ಗುರುಮಾತೆ ಎಸ್.ಆಯ್. ಆಸ್ಕಿ ಸೇರಿದಂತೆ ಶಾಲೆಯ ಆಡಳಿತ ಮಂಡಳಿ ಸದಸ್ಯರು, ಬೋಧಕ-ಬೋಧಕೇತರ ಸಿಬ್ಬಂದಿಗಳು ಅಭಿನಂದಿಸಿ ಹರ್ಷ ವ್ಯಕ್ತಪಡಿಸಿದ್ದಾರೆ.

ಮುದ್ದೇಬಿಹಾಳ: ತಾಲೂಕಿನ ಸಾಮಾಜಿಕ ಕಾರ್ಯಕರ್ತೆ, ರಾಜಕೀಯ ಧುರೀಣೆ ಕಾಶಿಬಾಯಿ ರಾಂಪುರ್ ಅವರಿಗೆ ದಾವಣಗೆರೆ ಜಿಲ್ಲೆಯ ಸಾಲಿಗ್ರಾಮ ಗ್ರಾಮದ ಸರಸ್ವತಿ ದಾಸಪ್ಪ ಶೆಣೈ ಪ್ರತಿಷ್ಠಾನದ ಕನ್ನಡ ರತ್ನ ರಾಜ್ಯ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಎಲ್ಲ ಸಮುದಾಯದ ನಾಯಕ ಅಂಬೇಡ್ಕರ್: ಯತ್ನಾಳ

ವಿಜಯಪುರ: 32 ಪದವಿಗಳನ್ನು ಪಡೆದು, ದೇಶದಲ್ಲಿ ಅತ್ಯಂತ ದೊಡ್ಡ ವಿದ್ಯಾವಂತರಾಗಿದ ಡಾ.ಬಿ.ಆರ್. ಅಂಬೇಡ್ಕರ್ ಎಲ್ಲ ಸಮುದಾಯಕ್ಕೂ ನಾಯಕರಾಗಿದ್ದಾರೆ ಎಂದು ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

ನಗರ ಮತಕ್ಷೇತ್ರದ ವ್ಯಾಪ್ತಿಯ ತೊರವಿ ಗ್ರಾಮದ ಜೈ ಭೀಮ ನಗರದಲ್ಲಿ ಸನ್ 2025-26ನೇ ಸಾಲಿನ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಮಂಜೂರಾದ 2 ಕೋಟಿ ರೂ. ಅನುದಾನದಲ್ಲಿ ಕೈಗೊಳ್ಳಲಾಗುತ್ತಿರುವ ಡಾ.ಬಿ.ಆರ್. ಅಂಬೇಡ್ಕರ್ ಸಮುದಾಯ ಭವನ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಅವರು ಮಾತನಾಡಿದರು. ವಿಧಾನಸಭೆಯಲ್ಲಿ ಸಂವಿಧಾನ ಬಗ್ಗೆ ಚರ್ಚೆ ನಡೆಸಿದ್ದರಿಂದ ಅಂಬೇಡ್ಕರ್ ಬಗ್ಗೆ ಅಧ್ಯಯನ ಮಾಡಿದಾಗ ಅವರು ಜೀವನದಲ್ಲಿ ಅನುಭವಿಸಿದ ಕಷ್ಟಗಳು, ಧ್ವನಿ ಇಲ್ಲದವರ ಪರವಾಗಿ ಹೋರಾಟ, ಅಪಾರ ಜ್ಞಾನದ ಬಗ್ಗೆ ತಿಳಿದುಕೊಂಡೆ. ಅವರು ವಿದೇಶಕ್ಕೆ ತೆರಳಿ ಅಧ್ಯಯನ ಮಾಡಲು ನೆರವಾದವರು ಶಿವಾಜಿ ಮಹಾರಾಜ ವಂಶಸ್ಥರು. ಅಂಬೇಡ್ಕರ್ ಅವರ ಇತಿಹಾಸ ದೊಡ್ಡದಿದೆ. ದುರ್ದೈವ ಅಂದರೆ ಅವರ ಇತಿಹಾಸ ನಮಗೆ ಕಲಿಸಲೇ ಇಲ್ಲ ಎಂದರು. ವಿಜಯಪುರ ನಗರದ ಮತಕ್ಷೇತ್ರದ ವ್ಯಾಪ್ತಿಯಲ್ಲಿ ನಿರೀಕ್ಷೆ ಮೀರಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿದ್ದರಿಂದ ಮಾದರಿ ನಗರವಾಗಿದೆ. ಡಾ.ಬಿ.ಆರ್. ಅಂಬೇಡ್ಕರ್ ಮಾರ್ಗ ಸೇರಿ ಅನೇಕ ಮಹಾಪುರುಷರ, ಸ್ವಾತಂತ್ರ್ಯ ಹೋರಾಟಗಾರ ವೃತ್ತ ನಿರ್ಮಾಣ, ಮಾರ್ಗಗಳಿಗೆ ಹೆಸರು ನಾಮಕರಣ, ಪ್ರತಿಮೆಗಳ ಸ್ಥಾಪನೆ ಮಾಡಿರುವೆ ಎಂದರು. ಮುಖಂಡರು, ಹಿತೈಷಿಗಳು, ಕಾರ್ಯಕರ್ತರು, ಅಭಿಮಾನಿಗಳು, ಅಧಿಕಾರಿಗಳು, ಸ್ಥಳೀಯ ನಿವಾಸಿಗಳು ಇದ್ದರು.

ವಿಜಯಪುರ: ನಗರ ಮತಕ್ಷೇತ್ರದ ವ್ಯಾಪ್ತಿಯ ತೊರವಿ ಗ್ರಾಮದ ಜೈ ಭೀಮ ನಗರದಲ್ಲಿ ಸನ್ 2025-26ನೇ ಸಾಲಿನ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಮಂಜೂರಾದ 2 ಕೋಟಿ ರೂ. ಅನುದಾನದಲ್ಲಿ ಕೈಗೊಳ್ಳಲಾಗುತ್ತಿರುವ ಡಾ.ಬಿ.ಆರ್. ಅಂಬೇಡ್ಕರ್ ಸಮುದಾಯ ಭವನ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರು ಮಾತನಾಡಿದರು.

ಎಸ್‌ಎಸ್‌ಎಲ್‌ಸಿ ಪರೀಕ್ಷೆ: ಜಿಲ್ಲೆಗೆ 22ನೇ ಸ್ಥಾನ

ವಿಜಯಪುರ: ದ್ವಿತೀಯ ಪಿಯುಸಿ ಫಲಿತಾಂಶದಲ್ಲಿ 4 ನೇ ಸ್ಥಾನಕ್ಕೆ ಬಂದು ಬೀಗಿದ್ದ ವಿಜಯಪುರ ಜಿಲ್ಲೆ ಎಸ್‌ಎಸ್‌ಎಲ್‌ಸಿಯಲ್ಲಿ 22ನೇ ಸ್ಥಾನಕ್ಕೆ ತಲುಪಿ ಸಮಾಧಾನ ಮೂಡಿಸುವಂತಾಗಿದೆ.

ಆದರೆ ಕಳೆದ ಬಾರಿ 34ನೇ ಸ್ಥಾನಕ್ಕಿದ್ದ ವಿಜಯಪುರಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಏರಿಕೆಯ ಸಾಧನೆ ತೋರಿದ್ದು ವಿಶೇಷ. ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ 38,423 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರೆ, ಆದರಲ್ಲಿ 36180 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, ಕೇವಲ 2243 ವಿದ್ಯಾರ್ಥಿಗಳು ಅನುತ್ತೀರ್ಣರಾಗಿದ್ದಾರೆ.

ಜಿಲ್ಲೆಯ 7 ಶೈಕ್ಷಣಿಕ ವಲಯದಲ್ಲಿ ಮುದ್ದೇಬಿಹಾಳ ವಲಯ ಈ ಬಾರಿ ಅಗ್ರಸ್ಥಾನ ಪಡೆದುಕೊಂಡಿದೆ. ಕಳೆದ ಬಾರಿ 3 ನೇ ಸ್ಥಾನದಲ್ಲಿದ್ದ ಮುದ್ದೇಬಿಹಾಳ ವಲಯ ಈ ಬಾರಿ ಪ್ರಥಮ ಸ್ಥಾನ ಪಡೆದರೆ, ಕಳೆದ ಬಾರಿ 1 ನೇ ಸ್ಥಾನಪಡೆದುಕೊಂಡಿದ್ದ ಬಸವನಬಾಗೇವಾಡಿ ಶೈಕ್ಷಣಿಕ ವಲಯ ಈ ಬಾರಿ ಮೂರನೇಯ ಸ್ಥಾನಕ್ಕೆ ಕುಸಿತ ಕಂಡಿದೆ.

ಮುದ್ದೇಬಿಹಾಳ ಶೈಕ್ಷಣಿಕ ವಲಯದಲ್ಲಿ 5943 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರೆ ಅವರಲ್ಲಿ 5682 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, ಶೇ.95.61 ರಷ್ಟು ಫಲಿತಾಂಶ ಬಂದಿದೆ.

» ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ 38,423 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರೆ, ಅದರಲ್ಲಿ 36180 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, ಕೇವಲ 2243 ವಿದ್ಯಾರ್ಥಿಗಳು ಅನುತ್ತೀರ್ಣ

ಚಡಚಣ ವಲಯ ಕಳೆದ ಬಾರಿ 4 ನೇ ಸ್ಥಾನ ಪಡೆದಿದ್ದು ಈ ಬಾರಿ ದ್ವಿತೀಯ ಸ್ಥಾನಕ್ಕೆ ಭಾಜನವಾಗಿದ್ದು, ಈ ವಲಯದಲ್ಲಿ 3064 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರೆ ಅವರಲ್ಲಿ 2928 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, ಶೇ.95.56 ರಷ್ಟು ಫಲಿತಾಂಶ ಬಂದಿದೆ.

ಬಸವನಬಾಗೇವಾಡಿ ವಲಯ ಕಳೆದ ಬಾರಿ 1 ನೇ ಸ್ಥಾನ ಪಡೆದಿದ್ದು ಈ ಬಾರಿ ಮೂರನೇಯ ಸ್ಥಾನ ಪಡೆದುಕೊಂಡಿದ್ದು, ಈ ವಲಯದಲ್ಲಿ 5226 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರೆ ಅವರಲ್ಲಿ 4995 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು ಶೇ.94.81 ರಷ್ಟು ಫಲಿತಾಂಶ ಬಂದಿದೆ.

ಕಳೆದ ಬಾರಿ 2ನೇ ಸ್ಥಾನ ಪಡೆದುಕೊಂಡಿದ್ದ ಇಂಡಿ ವಲಯ ಈ ಬಾರಿ ನಾಲ್ಕನೇಯ ಸ್ಥಾನ ಪಡೆದುಕೊಂಡಿದ್ದು, ಈ ವಲಯದಲ್ಲಿ 4479 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರೆ ಅವರಲ್ಲಿ 4227 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು ಶೇ.94.37 ರಷ್ಟು ಫಲಿತಾಂಶ ಬಂದಿದೆ.

ಕಳೆದ ಬಾರಿ 7 ನೇ ಸ್ಥಾನದಲ್ಲಿದ್ದ ಸಿಂದಗಿ ವಲಯ ಈ ಬಾರಿ 5 ನೇ ಸ್ಥಾನಕ್ಕೆ ಏರಿಕೆ ಕಂಡಿದ್ದು, ಈ ವಲಯದಲ್ಲಿ 6545 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರೆ ಅವರಲ್ಲಿ 6175 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ, ಶೇ.94.35 ರಷ್ಟು ಫಲಿತಾಂಶ ಬಂದಿದೆ.

ವಿಜಯಪುರ ಗ್ರಾಮೀಣ ವಲಯ ಕಳೆದ ಬಾರಿ 5 ನೇ ಸ್ಥಾನದಲ್ಲಿದ್ದು ಈ ಬಾರಿ 6 ನೇ ಸ್ಥಾನಕ್ಕೆ ಕುಸಿತ ಕಂಡಿದೆ. ಈ ವಲಯದಲ್ಲಿ 6936 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರೆ ಅವರಲ್ಲಿ 6513 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ, ಶೇ.93.90 ರಷ್ಟು ಫಲಿತಾಂಶ ಬಂದಿದೆ.

ನಗರ ವಲಯ ಕಳೆದ ಬಾರಿ 6 ನೇ ಸ್ಥಾನದಲ್ಲಿದ್ದು ಈ ಬಾರಿ ಏಳನೇಯ ಸ್ಥಾನಕ್ಕೆ ತಳ್ಳಲ್ಪಟ್ಟಿದೆ. ಈ ವಲಯದಲ್ಲಿ 6237 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರೆ ಅವರಲ್ಲಿ 5702 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, ಶೇ.91 ರಷ್ಟು ಫಲಿತಾಂಶ ಬಂದಿದೆ.

ಸಿಇಟಿ ಪರೀಕ್ಷಾ ಕೇಂದ್ರಗಳಿಗೆ ಜಿಪಂ ಸಿಇಒ ಭೇಟಿ

ವಿಜಯಪುರ: ಜಿಲ್ಲೆಯಲ್ಲಿ ಗುರುವಾರ ನಡೆದ ವೃತ್ತಿಪರ ಕೋರ್ಸ್‌ಗಳ ಪ್ರವೇಶ ಪರೀಕ್ಷೆಯ ಮೊದಲ ದಿನ ಭೌತಶಾಸ್ತ್ರ ವಿಷಯದ ಪರೀಕ್ಷಾ ಕೇಂದ್ರಗಳಿಗೆ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಿಷಿ ಆನಂದ ಅವರು ಭೇಟಿ ನೀಡಿ ಪರಿಶೀಲನೆ ನಡೆಸಿ, ಪರೀಕ್ಷಾ ಕೇಂದ್ರಗಳ ವ್ಯವಸ್ಥೆಗಳನ್ನು ಸಮಗ್ರವಾಗಿ ಅವಲೋಕಿಸಿದರು.

ಪರೀಕ್ಷಾರ್ಥಿಗಳಿಗೆ ಕಲ್ಪಿಸಲಾದ ಕುಡಿಯುವ ನೀರು, ಸಮರ್ಪಕ ಬೆಳಕು ಮತ್ತು ಗಾಳಿ ವ್ಯವಸ್ಥೆ, ಆಸನದ ವ್ಯವಸ್ಥೆ ಸೇರಿದಂತೆ ಮೂಲಭೂತ ಸೌಲಭ್ಯಗಳನ್ನು ನಿಖರವಾಗಿ ಪರಿಶೀಲಿಸಿದರು. ಪರೀಕ್ಷಾ ಕೇಂದ್ರಗಳಲ್ಲಿ ಮೇಲ್ವಿಚಾರಕರು ಕಟ್ಟುನಿಟ್ಟಾಗಿ ಕರ್ತವ್ಯ ನಿರ್ವಹಿಸುತ್ತಿರುವುದು, ಅಭ್ಯರ್ಥಿಗಳು ನಿಯಮಾನುಸಾರ ಪರೀಕ್ಷೆಗೆ ಹಾಜರಾಗಿರುವುದು ಹಾಗೂ ಯಾವುದೇ ಲೋಪಗಳಿಗೆ ಅವಕಾಶ ಇಲ್ಲದಂತೆ ಕ್ರಮ ಕೈಗೊಳ್ಳಲಾಗಿದೆ ಎಂಬುದನ್ನು ಅವರು ಖಚಿತಪಡಿಸಿಕೊಂಡರು.

ಸಿಸಿಟಿವಿ ನಿಗಾ ವ್ಯವಸ್ಥೆ, ಪ್ರವೇಶ ದ್ವಾರಗಳಲ್ಲಿ ಭದ್ರತಾ ತಪಾಸಣೆ ಹಾಗೂ ಪೊಲೀಸ್ ಬಂದೋಬಸ್ತ್‌ಗಳ ಕುರಿತು ಮಾಹಿತಿ ಪಡೆದು, ವ್ಯವಸ್ಥೆಗಳ ಕುರಿತು ಮೆಚ್ಚುಗೆ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಭೌತಶಾಸ್ತ್ರ ಪ್ರಮುಖ ವಿಷಯದ ಪರೀಕ್ಷೆಗಳು ವಿದ್ಯಾರ್ಥಿಗಳ ಭವಿಷ್ಯಕ್ಕೆ ದಿಕ್ಕು ತೋರಿಸುವಂತಿವೆ. ಆದ್ದರಿಂದ ಪರೀಕ್ಷೆಗಳು ಸಂಪೂರ್ಣ ಪಾರದರ್ಶಕವಾಗಿ, ನ್ಯಾಯಬದ್ಧವಾಗಿ ಮತ್ತು ಯಾವುದೇ ಅಡಚಣೆಗಳಿಲ್ಲದೆ ನಡೆಯಬೇಕು ಎಂದ ಅವರು, ಅಧಿಕಾರಿಗಳು ಹೆಚ್ಚಿನ ಜವಾಬ್ದಾರಿಯಿಂದ ಕಾರ್ಯನಿರ್ವಹಿಸಬೇಕು ಎಂದರು.

ಇದೇ ವೇಳೆ, ತುರ್ತು ಪರಿಸ್ಥಿತಿಗಳನ್ನು ಎದುರಿಸಲು ವೈದ್ಯಕೀಯ ನೆರವು, ಇತರೆ ಅಗತ್ಯ ಸೌಲಭ್ಯಗಳು ಸಮರ್ಪಕವಾಗಿ ಲಭ್ಯವಿರುವುದನ್ನು ಪರಿಶೀಲಿಸಿ, ಯಾವುದೇ ಕೊರತೆ ಕಂಡುಬಂದಲ್ಲಿ ತಕ್ಷಣ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದರು. ಈ ಸಂದರ್ಭದಲ್ಲಿ ಸಂಬಂಧಿತ ಇಲಾಖೆಗಳ ಅಧಿಕಾರಿಗಳು, ಪರೀಕ್ಷಾ ಕೇಂದ್ರಗಳ ಅಧೀಕ್ಷಕರು ಹಾಗೂ ಸಿಬ್ಬಂದಿಗಳು ಇದ್ದರು.

ಜ್ಯೋತಿಬಾ ಫುಲೆ 200ನೇ ಜನ್ಮದಿನೋತ್ಸವ: ಸಮಿತಿಗೆ ನೇಮಕ

ವಿಜಯಪುರ: ಕೇಂದ್ರ ಸರ್ಕಾರದ ಸಂಸ್ಕೃತಿ ಸಚಿವಾಲಯವು ಏ. 11 ರಿಂದ 2028 ರ ಏ. 11ರ ವರೆಗೆ ಎರಡು ವರ್ಷಗಳ ಕಾಲ ಮಹಾತ್ಮ ಜ್ಯೋತಿಬಾ ಫುಲೆ ಅವರ 200ನೇ ಜನ್ಮದಿನೋತ್ಸವದ ನಿಮಿತ್ತ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಈ ಕುರಿತು ಕೇಂದ್ರ ಸರ್ಕಾರದ ಸಂಸ್ಕೃತಿ ಸಚಿವಾಲಯವು ಉನ್ನತ ಮಟ್ಟದ ಸಮಿತಿ ರಚಿಸಿದ್ದು, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ರಾಜ್ಯದ ವಿಧಾನ ಪರಿಷತ್ ಸದಸ್ಯ ಕೇಶವ ಪ್ರಸಾದ್, ಮಾಜಿ ಸಚಿವ ಪ್ರಮೋದ್ ಮಧ್ವರಾಜ್ ಅವರನ್ನು ಸಮಿತಿಗೆ ನೇಮಿಸಲಾಗಿದೆ. ಈ ಸಮಿತಿಯಲ್ಲಿ ರಾಜಕೀಯ, ಆಧ್ಯಾತ್ಮಿಕ ಕ್ಷೇತ್ರದ ಗಣ್ಯರಲ್ಲದೇ ವಿವಿಧ ರಾಜ್ಯಗಳ ಪ್ರಮುಖರನ್ನು ಸೇರಿಸಲಾಗಿದೆ. ದೇಶಾದ್ಯಂತ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಉದ್ದೇಶದಿಂದ ಈ ಸಮಿತಿಯನ್ನು ನೇಮಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ನೂತನ ಶಾದಿ ಮಹಲ್ ಕಟ್ಟಡ ಲೋಕಾರ್ಪಣೆ

VIMAL EVENTS

ಇಂಡಿ: ಬಹುದಿನಗಳ ಬೇಡಿಕೆಯಂತೆ ಇಂದು ಸುಸಜೀತವಾದ ಶಾದಿಮಹಲ್ ನಿರ್ಮಾಣ ಮಾಡಲಾಗಿದೆ. ಇದರ ಸದುಪಯೋಗವನ್ನು ಪ್ರತಿಯೊಬ್ಬ ಮುಸ್ಲಿಂ ಸಮಾಜದ ಬಾಂದವರು ಪಡೆದುಕೊಳ್ಳಬೇಕು. ಮದುವೆ ಶುಭ ಕಾರ್ಯಗಳು ಸೇರಿದಂತೆ ಸಭೆ ಸಮಾರಂಭಗಳಿಗೆ ಇದರಿಂದ ಹೆಚ್ಚಿನ ಅನೂಕೂಲವಾಗಲಿದೆ ಎಂದು ಶಾಸಕ ಯಶವಂತರಾಯಗೌಡ ಪಾಟೀಲ ಹೇಳಿದರು.

ಅವರು ತಾಲೂಕಿನ ಹಿರೇಬೇವನೂರ ಗ್ರಾಮದ ಸಕ್ಕರೆ ಕಾರ್ಖಾನೆ ಹತ್ತಿರ ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ ಹಾಗೂ ಅಂಜುಮನ ಇಸ್ಲಾಂ ಸಮಿತಿ ಇವರಿಂದ ನಿರ್ಮಿಸಲಾದ 1.25 ಲಕ್ಷ ರೂಗಳ ಅಂದಾಜು ವೆಚ್ಚದಲ್ಲಿ ನಿರ್ಮಾಣ ಮಾಡಿದ ನೂತನ ಶಾದಿ ಮಹಲ್ ಕಟ್ಟಡವನ್ನು ಲೋಕಾರ್ಪಣೆಗೊಳಿಸಿ ಮಾತನಾಡಿದರು.

ಅಲ್ಪ ಸಂಖ್ಯಾತರ ಮದುವೆ ಹಾಗೂ ಸಮುದಾಯದ ಕಾರ್ಯಕ್ರಮಗಳ ಉದ್ದೇಶಕ್ಕಾಗಿ ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆಗೆ ಮುಖ್ಯಮಂತ್ರಿಗಳು ಸಾಕಷ್ಟು ಅನುದಾನವನ್ನು ನೀಡಿದ್ದು ಇಂಡಿ ತಾಲೂಕಿನ ಅಭಿವೃದ್ಧಿಗೆ ಮುಖ್ಯಮಂತ್ರಿಗಳ ಕೊಡುಗೆ ಅಪಾರವಾಗಿದೆ ಎಂದರು.

ಅಧ್ಯಕ್ಷತೆ ವಹಿಸಿದ ಮೌಲಾನಾ ಶಾಕಿರ ಹುಸೇನ ಖಾಸ್ಮಿ ಮಾತನಾಡಿ ಹಿಂದು ಮುಸ್ಲಿಂ ಬಾಂದವರು ಈ ನೆಲದಲ್ಲಿ ಅನ್ಯೋನತೆಯಿಂದ ಸಹೋದರತ್ವದಿಂದ ಬಾಳೋಣ ಎಂದರು.

ಸಾನಿದ್ಯ ವಹಿಸಿದ ದೇವಾನಂದ ಹಿರೇಮಠ, ಬ್ಲಾಕ್ ಕಾಂಗ್ರೆಸ್ ಮಾಜಿ ಅಧ್ಯಕ್ಷ ಜಾವೇದ ಮೋಮಿನ, ಶಾಕಿರ ಮುಲ್ಲಾ ಸಾನಿದ್ಯ ವಹಿಸಿ ಮಾತನಾಡಿದರು.

ನಿಂಬೆ ಅಬಿವೃದ್ದಿ ಮಂಡಳಿ ಅಧ್ಯಕ್ಷ ಭೀಮಣ್ಣ ಕವಲಗಿ, ಅಲ್ಪ ಸಂಖ್ಯಾತರ ಇಲಾಖೆಯ ಉಪನಿರ್ದೇಶಕ ಪ್ರಶಾಂತ ಪೂಜಾರಿ, ಇಲಿಯಾಸ ಬೋರಾಮಣಿ, ಬಿ.ಕೆ.ಪಾಟೀಲ, ಪ್ರಶಾಂತ ಕಾಳೆ, ಕಜಾಪ ಅಧ್ಯಕ್ಷ ಆರ್.ವಿ.ಪಾಟೀಲ , ಸತ್ತಾರ ಬಾಗವಾನ, ನಾಗಪ್ಪಗೌಡ ಬಿರಾದಾರ, ಸಂಗಪ್ಪ ಉಪ್ಪಿನ, ಬಸಪ್ಪ ಸೋಲಾಪುರ, ರಮಜಾನ ಮಕಾನದಾರ, ಚಾಂದ ಶೇಖ, ಚಾಂದಸಾಬ ಮೋಮಿನ, ಮೂಬೂಬ ಮುಜಾವರ, ಮಹಮ್ಮದ ಹನೀಫ ಜಾಲೆಗಾರ, ಅಣ್ಣಾರಾಯ ಬಮ್ಮನಳ್ಳಿ ಮತ್ತಿತರಿದ್ದರು.

ಕಾಲುಬಾಯಿ ಜ್ವರ ಲಸಿಕಾ ಅಭಿಯಾನ

ಚಡಚಣ: ಚಡಚಣ ತಾಲೂಕಿನಲ್ಲಿ ಏ.23ರಿಂದ ಮೇ 22ರವರೆಗೆ 9ನೇ ಸುತ್ತಿನ ಉಚಿತ ಕಾಲುಬಾಯಿ (ಎಫ್‌ಎಮ್‌ಡಿ) ಜ್ವರ ಲಸಿಕಾ ಅಭಿಯಾನ ಹಮ್ಮಿಕೊಳ್ಳಲಾಗಿದ್ದು ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಅಶೋಕಕುಮಾರ್ ರಾಠೋಡ ಅವರು 9ನೇ ಸುತ್ತಿನ ಲಸಿಕಾ ಅಭಿಯಾನದ ಭಿತ್ತಿಪತ್ರ ಬಿಡುಗೊಡೆಗೊಳಿಸಿದರು.

ತಾ.ಪಂ. ಸಭಾಂಗಣದಲ್ಲಿ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, 2026-27ನೇ ಸಾಲಿನ ರಾಷ್ಟ್ರೀಯ ಜಾನುವಾರು ರೋಗ ನಿಯಂತ್ರಣ ಕಾರ್ಯಕ್ರಮದಡಿ ಈ ಅಭಿಯಾನ ನಡೆಯುತ್ತಿದ್ದು, ರೈತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ತಮ್ಮ ಜಾನುವಾರುಗಳಿಗೆ ಲಸಿಕೆ ಹಾಕಿಸಿಕೊಳ್ಳುವ ಮೂಲಕ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ರೈತರಲ್ಲಿ ಮನವಿ ಮಾಡಿಕೊಂಡರು.

ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಮುಖ್ಯ ಪಶುವೈದ್ಯಾಧಿಕಾರಿ ಡಾ. ಎಂ.ಎಸ್. ಗಂಗನಳ್ಳಿ ಮಾತನಾಡಿ, ಚಡಚಣ ತಾಲೂಕಿನಲ್ಲಿ ಒಟ್ಟು 29,062 ಜಾನುವಾರುಗಳಿಗೆ ಉಚಿತ ಲಸಿಕೆ ನೀಡುವ ಗುರಿ ಹೊಂದಲಾಗಿದ್ದು ಈ ಲಸಿಕೆಯನ್ನು ವರ್ಷಕ್ಕೆ ಎರಡು ಬಾರಿ ನೀಡಲಾಗುತ್ತಿದ್ದು, ಒಂದು ತಿಂಗಳ ಕಾಲ ನಡೆಯುವ ಈ ಅಭಿಯಾನದಲ್ಲಿ ಪ್ರತಿದಿನ ಬೆಳಗ್ಗೆ 8 ಗಂಟೆಯಿಂದ 10 ಗಂಟೆಯವರೆಗೆ ಲಸಿಕೆ ನೀಡಲಾಗುತ್ತದೆ ಎಂದು ಹೇಳಿದರು.

ಈ ಕಾರ್ಯಕ್ರಮ ಯಶಸ್ವಿಗಾಗಿ ವಿಶೇಷ ಲಸಿಕಾ ತಂಡಗಳನ್ನು ರಚಿಸಲಾಗಿದೆ ಎಂದರು.ಈ ಸಂದರ್ಭದಲ್ಲಿ ಡಾ. ಪ್ರಮೋದ್ ಹೊರ್ತಿ, ಡಾ. ಸಂಗನಗೌಡ ಬಿರಾದಾರ, ಜಾನುವಾರು ಅಧಿಕಾರಿ ಅಶೋಕ ಮಾನೆ, ಪಶುವೈದ್ಯಕೀಯ ಪರೀವಿಕ್ಷಕ ರಾಕೇಶ್ ಬಿಜ್ಜುರ, ಸಹಾಯಕ ನಿರ್ದೇಶಕ ಎಸ್. ಆರ್. ಕೊಟ್ಟಲಗಿ ಹಾಗೂ ಯೋಜನಾಧಿಕಾರಿ ಗುರುಮೂರ್ತಿ ಭಾಸರಗಿ ಉಪಸ್ಥಿತರಿದ್ದರು.



ಆಕ್ಸ್‌ಫರ್ಡ್ ಆಂಗ್ಲ ಮಾಧ್ಯಮ ಪ್ರೌಢಶಾಲೆಗೆ ಉತ್ತಮ ಫಲಿತಾಂಶ

ಸಿಂದಗಿ: ಎಸ್ಸೆಸ್ಸೆಲ್ಸಿ ಪರೀಕ್ಷೆ-ರ ಫಲಿತಾಂಶ ಗುರುವಾರ ಪ್ರಕಟಗೊಂಡಿದ್ದು ಪಟ್ಟಣದ ಪ್ರಕಾಶ ಚೌಧರಿ ಅವರ ಆಕ್ಸ್‌ಫರ್ಡ್ ಆಂಗ್ಲ ಮಾಧ್ಯಮ ಪ್ರೌಢಶಾಲೆಯ ಶೇ.100 ರಷ್ಟಾಗಿದೆ. ಪರೀಕ್ಷೆಗೆ ಕುಳಿತ 64 ವಿದ್ಯಾರ್ಥಿಗಳಲ್ಲಿ 45 ವಿದ್ಯಾರ್ಥಿಗಳು ಉನ್ನತ ಶ್ರೇಣಿಯಲ್ಲಿ 19 ವಿದ್ಯಾರ್ಥಿಗಳುಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ.

ಅಮೃತಾ ದೊಡಮನಿ ಶೇ.98.72, ಸಾನಿಕಾ ಬಿರಾದಾರ ಶೇ.98.24, ಭೂಮಿಕಾ ಶಿವಣಗಿ ಶೇ.97.7, ಅಭಿಲಾಶಾ ಕೆರಕಿ ಶೇ.97.4, ಸಾಗರ ಸ್ಥಾವರಮಠ ಶೇ.97.4, ಸ್ನೇಹಾ ಜೋಗುರ ಶೇ.97.4, ಸಮರ್ಥ ಕಾಬಾ ಶೇ.96.9, ವರಪ್ರಸಾದ ಹೂಗಾರ ಶೇ.96.9, ವಿಜಯರೆಡ್ಡಿ ಬಿರಾದಾರ ಶೇ.96.9, ಸುನೀಲ ರೂಗಿ ಶೇ.96.6, ಅಪೂರ್ವಾ ಚುಂಚೂರ ಶೇ.96.4, ಅರ್ಪಿತಾ ಕತ್ತಿ ಶೇ.96.1, ಅಭಿಶೇಷ ಮಡಕೇಶ್ವರ ಶೇ.96, ಗುರುಶಾಂತ ಕುಂಬಾರ ಶೇ.95.6, ಶಿವಕುಮಾರ ಹಿರೇಮಠ ಶೇ.95.3, ಶ್ರೀಗಿರಿ ಚಾವರ ಶೇ.95.3, ಲಕ್ಷ್ಮಿ ಚಿಂಚೊಳ್ಳಿ ಶೇ.95.2, ಸಮೀರ ಚವ್ಹಾಣ ಶೇ.94.8, ಸಂಗನಗೌಡ ಬಳವಟಿ ಶೇ.94.5, ಮಲ್ಲಿಕಾರ್ಜುನ ಕುಂಬಾರ ಶೇ.94.2, ಕಾರ್ತಿ ಚವ್ಹಾಣ ಶೇ.94.8, ಸೌಮ್ಯಶ್ರೀ ಕಲ್ಲೂರ ಶೇ.94.8, ಸಮರ್ಥ ಬಬಲೇಶ್ವರ ಶೇ.93.7, ಸಾಯಿಪ್ರಸಾದ ಚೌಧರಿ ಶೇ.93.1, ಗುರುಪ್ರಸಾದ ಸಾಲೋಟಗಿ ಶೇ.92.9, ಮಹಾದೇವಿ ಕನ್ನೂರ ಶೇ.92.9, ಸ್ಪದ್ಧಾ ಗೌರ ಶೇ.92.9, ಯಲ್ಲಾಲಿಂಗ ನಗನೂರ ಶೇ.92.8, ಚಾಯಾ ಚವ್ಹಾಣ ಶೇ.92.6, ಪ್ರೀತಮ ಪವಾರ ಶೇ.92.6, ಸಂಕೇತ ದುದ್ದಗಿ ಶೇ.92.6, ರೇಣುಕಾ ಡೋಣೂರ ಶೇ.92.4, ಬೀರಪ್ಪ ದೇವರಮನಿ ಶೇ.92.1, ಅಭಿಜೀತ ಕಂಬಾರ ಶೇ.92.1, ಶಶಾಂಕ ದೇವರಮನಿ ಶೇ.92, ಸಾಕ್ಷಿ ಮರಬದ ಶೇ.91.8, ಕಾವೇರಿ ತಳವಾರ ಶೇ.91.5, ಕಾವೇರಿ ಮೋಟಗಿ ಶೇ.91.3, ಸಮರ್ಥ ಮೋಟಗಿ 91.3, ಶಿವಶರಣ ಗಡಂಚಿ ಶೇ.91.3, ಶ್ರೀನಿವಾಶಗೌಡ ಬಿರಾದಾರ ಶೇ.91.2, ಆಕಾಶ ಪತ್ತಾರ ಶೇ.90.8 ಅಂಕಪಡೆದು ಉತ್ತಮ ಸಾಧನೆ ಮಾಡಿದ್ದಾರೆ. ಸಂಸ್ಥೆಯ ಸಂಚಾಲಕ ಪ್ರಕಾಶ ಚೌಧರಿ, ಆಢಳಿತಾಧಿಕಾರಿ ಮಹಾಂತೇಶ ಚೌಧರಿ, ಮುಖ್ಯಗುರು ವಿಶ್ವನಾಥ ಯಾತನೂರ ಹಾಗೂ ಸಿಬ್ಬಂದಿ ಹರ್ಷ ವ್ಯಕ್ತ ಪಡೆಸಿದ್ದಾರೆ.

ಕಾಲುಬಾಯಿ ಲಸಿಕಾ ಕಾರ್ಯಕ್ರಮಕ್ಕೆ ತಾಪಂ ಇಒ ಚಾಲನೆ

ಬಸವನಬಾಗೇವಾಡಿ: ರಾಷ್ಟ್ರೀಯ ಪ್ರಾಣಿ ರೋಗ ನಿಯಂತ್ರಣ ಕಾರ್ಯಕ್ರಮದಡಿಯಲ್ಲಿ 9ನೇ ಸುತ್ತಿನ ಕಾಲು ಬಾಯಿ ಜ್ವರ ಲಸಿಕಾ ಕಾರ್ಯಕ್ರಮಕ್ಕೆ ತಾಪಂ ಕಾರ್ಯನಿರ್ವಾಹಕ ಅಧಿಕಾರಿ ವೆಂಕಟೇಶ ವಂದಾಲ ಇವರು ಗೋ ಪೂಜೆ ಸಲ್ಲಿಸುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ರೈತಾಪಿ ಜನರು ತಮ್ಮ ದನ ಕರುಗಳ ಆರೋಗ್ಯ ರಕ್ಷಣೆಗೆ ಒತ್ತು ನೀಡಬೇಕು ಎಂದು ಹೇಳಿದರು.

ಪಶು ಪಾಲನೆ ಇಲಾಖೆಯ ಮುಖ್ಯ ಪಶುವೈದ್ಯಾಧಿಕಾರಿ(ಆಡಳಿತ) ಡಾ.ಪಂಚಾಕ್ಷರಿ ಸಂಕ ಮಾತನಾಡಿ ತಾಲೂಕಿನಾದ್ಯಂತ ಏ.23ರಿಂದ ಮೇ.22ರವರೆಗೆ ಕಾಲು ಬಾಯಿ ಜ್ವರ ರೋಗದ ವಿರುದ್ಧ ಲಸಿಕೆ ಹಾಕಲು 8 ತಂಡಗಳನ್ನು ರಚಿಸಲಾಗಿದೆ. ತಾಲೂಕಿನಲ್ಲಿ 11086 ದನಗಳು,, 7848 ಎಮ್ಮೆಗಳು ಸೇರಿ 18934 ಜಾನುವಾರುಗಳು ನೋಂದಣಿಯಾಗಿದ್ದು ಜಾನುವಾರುಗಳಿಗೆ ವರ್ಷದಲ್ಲಿ ಎರಡು ಬಾರಿ ಪ್ರತಿ ಗ್ರಾಮದ ಮನೆ ಮನೆಗೂ ತೆರಳಿ ರಾಸುಗಳಿಗೆ ಲಸಿಕೆ ಹಾಕಲಾಗುತ್ತದೆ. ತಾಲೂಕಿನಾದ್ಯಂತ 35 ಜನ ಸಿಬ್ಬಂದಿಗಳನ್ನು ಲಸಿಕೆಗೆ ನೇಮಿಸಲಾಗಿದ್ದು, ತಾಲೂಕಿನಲ್ಲಿ 209 ಬ್ಲಾಕಗಳಿದ್ದು ಪ್ರತಿ ಬ್ಲಾಕಿಗೆ 85-100 ಜಾನುವಾರಗಳಿದ್ದು ಅವುಗಳಿಗೆ ಉಚಿತವಾಗಿ ಲಸಿಕೆಯನ್ನು ಹಾಕಲಾಗುವದು ಒಂದು ವೇಳೆ ಲಸಿಕೆಯಿಂದ ವ್ಯತಿರಿಕ್ತ ಪರಿಣಾಮ ಉಂಟಾದರೆ ಅದಕ್ಕೆ ಸೂಕ್ತ ಚಿಕಿತ್ಸೆ ನೀಡುವ ಔಷಧಿಗಳನ್ನು ಸಂಬಂಧಿಸಿದ ಲಸಿಕಾ ತಂಡದ ಮುಖ್ಯಸ್ಥರಿಗೆ ನೀಡಲಾಗಿದೆ. 9ನೇ ಸುತ್ತಿನ ರಾಷ್ಟ್ರೀಯ ಕಾಲುಬಾಯಿ ಜ್ವರ ಲಸಿಕೆಯನ್ನು ತಾಲ್ಲೂಕಿನಲ್ಲಿರುವ ಎಲ್ಲಾ ದನ-ಕರುಗಳಿಗೆ ಉಚಿತವಾಗಿ ರೈತರ ಮನೆ ಬಾಗಿಲಿಗೆ ತೆರಳಿ ಲಸಿಕೆಯನ್ನು ಹಾಕಲಾಗುತ್ತದೆ. ಆದ್ದರಿಂದ ತಾಲ್ಲೂಕಿನಲ್ಲಿರುವ ಎಲ್ಲಾ ರೈತರು ತಮ್ಮ ದನ-ಕರುಗಳಿಗೆ ತಪ್ಪದೇ ಲಸಿಕೆ ಹಾಕಿಸಿಕೊಳ್ಳಲು ಸಹಕರಿಸಬೇಕೆಂದು ಹೇಳಿದರು.

ಕಾರ್ಯಕ್ರಮದಲ್ಲಿ ಡಾ.ಬಸವರಾಜ ಕನಮಡಿ ಮುಖ್ಯ ಪಶು ವೈದ್ಯಾಧಿಕಾರಿಗಳು(ಸಂಚಾರಿ ಮತ್ತು ವಿಸ್ತರಣೆ), ಡಾ.ರೇವಣಸಿದ್ದ ದೇಗಿನಾಳ ಪಶು ವೈದ್ಯಾಧಿಕಾರಿಗಳು(ಆಸ್ಪತ್ರೆ), ಡಾ.ಎಸ್.ಎನ್ ಹಾದಿಮನಿ ಪಶು ವೈದ್ಯಾಧಿಕಾರಿ, ಅಂಬುಲೆನ್ಸ ಸೇವೆ ಆರ್.ಎಸ್.ಹಿರೇಮಠ ಜಾನುವಾರು ಅಭಿವೃದ್ಧಿ ಅಧಿಕಾರಿ, ಎಮ್.ಬಿ.ಗಣಿ ಕಿರಿಯ ಪಶು ವೈದ್ಯ ಪರೀಕ್ಷಕರು, ಕೆ.ಎ.ಚಪ್ಪರಬಂದ ಕಿರಿಯ ಪಶು ವೈದ್ಯ ಪರೀಕ್ಷಕ್ಕಿ ಸರೋಜಿನಿ ಗೋನಾಳ ಕಿರಿಯ ಪಶು ವೈದ್ಯ ಪರೀಕ್ಷಕರು ಹಾಗೂ ಇತರೆ ಇಲಾಖೆಯ ಸಿಬ್ಬಂದಿಗಳು ಇದ್ದರು.

ಎಸ್‌ಎಸ್‌ಎಲ್‌ಸಿ ಪರೀಕ್ಷೆ: ಇಂಡಿ ತಾಲೂಕು 94.37ರಷ್ಟು ಫಲಿತಾಂಶ

ಇಂಡಿ: ಪ್ರಸಕ್ತ 2025-26 ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಇಂಡಿ ತಾಲೂಕು 94.37ರಷ್ಟು ಫಲಿತಾಂಶ ಬಂದಿದೆ. ಇಂಡಿ ತಾಲೂಕಿನಲ್ಲಿ ಕನ್ನಡ, ಇಂಗ್ಲೀಷ್ ಮತ್ತು ಉರ್ದು ಮಾಧ್ಯಮದ 2263 ವಿದ್ಯಾರ್ಥಿಗಳು ಮತ್ತು 2216 ವಿದ್ಯಾರ್ಥಿನಿಯರು ಪರೀಕ್ಷೆ ಬರೆದಿದ್ದರು. ಇದರಲ್ಲಿ 2263 ವಿದ್ಯಾರ್ಥಿಗಳು ಮತ್ತು 2216 ವಿದ್ಯಾರ್ಥಿನಿಯರು ಸೇರಿ ಒಟ್ಟು 4479 ವಿದ್ಯಾರ್ಥಿಗಳು ಪರೀಕ್ಷೇ ಬರೆದಿದ್ದರು. ಇದರಲ್ಲಿ 2076 ವಿದ್ಯಾರ್ಥಿಗಳು ಮತ್ತು 2151 ವಿದ್ಯಾರ್ಥಿನಿಯರು ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದಾರೆ. ಒಟ್ಟು 4227 ವಿದ್ಯಾರ್ಥಿಗಳು ತೇರ್ಗಡೆ ಹೊಂದಿ ಜಿಲ್ಲೆಯಲ್ಲಿ ನಾಲ್ಕನೆ ಸ್ಥಾನಕ್ಕೇರಿದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಸಯಿದಾ ಮುಜಾವರ ಹಾಗೂ ಎಸ್.ಎಸ್.ಎಲ್.ಸಿ ಪರೀಕ್ಷಾ ನೋಡಲ್ ಅಧಿಕಾರಿ ಎ.ಓ ಹೂಗಾರ ತಿಳಿಸಿದ್ದಾರೆ.

ಸ್ಥಳಿಯ ಶ್ರೀ ಸಾಯಿ ಪಬ್ಲಿಕ್ ಆಂಗ್ಲ ಮಾಧ್ಯಮ ಪ್ರೌಢ ಶಾಲೆಯ ವಿದ್ಯಾರ್ಥಿಗಳಾದ ಕುಮಾರ ಅಲೋಕ ಮಹಾಂತೇಶ ಹೂಗಾರ 621 ಹಾಗೂ ಇದೇ ಶಾಲೆಯ ವಿದ್ಯಾರ್ಥಿನಿ ಕುಮಾರಿ ಸಿಂಚನಾ ಗಂಗಾಧರ ಪತ್ತಾರ 621 ಅಂಕಗಳನ್ನು ಪಡೆದು ತಾಲೂಕಿಗೆ ಪ್ರಥಮ ಸ್ಥಾನ ಪಡೆದುಕೊಂಡಿದ್ದಾರೆ. ಇನ್ನೂ ಸರ್ಕಾರಿ ಆದರ್ಶ ಶಾಲೆಯ ವಿದ್ಯಾರ್ಥಿ ಅಬುಹುರೇರಾ ಅಬ್ದುಲರಜಾಕ ತಾಂಬೆ 620 ಅಂಕಗಳನ್ನು ಪಡೆದು ಎರಡನೇ ಸ್ಥಾನ ಪಡೆದುಕೊಂಡಿದ್ದಾರೆ ತಿಳಿಸಿದ್ದಾರೆ.

ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ. 94.16ರಷ್ಟು ಫಲಿತಾಂಶ

ವಿಜಯಪುರ: ಪ್ರಸಕ್ತ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷಾ ಫಲಿತಾಂಶ ಶೇ.94.16 ರಷ್ಟಾಗಿದ್ದು, ಜಿಲ್ಲೆ, ಈ ಬಾರಿ ರಾಜ್ಯ ಮಟ್ಟದಲ್ಲಿ ಫಲಿತಾಂಶದಲ್ಲಿ ಗಣನೀಯ ಸುಧಾರಣೆ ಕಂಡಿದೆ.

ಈ ಬಾರಿ ಜಿಲ್ಲೆಯ ಫಲಿತಾಂಶ ಶೇ. 94.16 ರಷ್ಟಾಗುವ ಮೂಲಕ ಉತ್ತಮ ಸಾಧನೆ ಮಾಡಿದೆ. ಪ್ರಸಕ್ತ ಸಾಲಿನಲ್ಲಿ ಒಟ್ಟು 38423 ಮಕ್ಕಳ ಪೈಕಿ 36180 ಮಕ್ಕಳು ಉತ್ತೀರ್ಣರಾಗುವ ಮೂಲಕ ಸಾಧನೆ ಮಾಡಿದ್ದಾರೆ. ಈ ವರ್ಷದ ಫಲಿತಾಂಶದಲ್ಲಿ ಗಣನೀಯ ಹೆಚ್ಚಳವಾಗಿದೆ.

ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನ ನಾಗರಬೆಟ್ಟ ಆಕ್ಸಫರ್ಡ್ ಆಂಗ್ಲ ಮಾಧ್ಯಮ ಪ್ರೌಢಶಾಲೆಯ ಸೌಜನ್ಯ ಬಸವರಾಜ ಕಂದಕೂರ 625ಕ್ಕೆ 625 ಅಂಕ ಗಳಿಸುವ ಮೂಲಕ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದ 7 ಮಕ್ಕಳ ಪೈಕಿ ಒಬ್ಬರಾಗಿದ್ದು, ತನ್ಮೂಲಕ ರಾಜ್ಯ ಹಾಗೂ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದಿದ್ದಾಳೆ.

ನಾಗರಬೆಟ್ಟದ ಪಾಟೀಲ ಕನ್ನಡ ಮಾಧ್ಯಮ ಪ್ರೌಢಶಾಲೆ ನೇಹಾ ಪ್ರಭುಗೌಡ ಗುರಡ್ಡಿ 625ಕ್ಕೆ 624 ಅಂಕ ಪಡೆದು ಜಿಲ್ಲೆಗೆ ದ್ವಿತೀಯ ಸ್ಥಾನ ಪಡೆದಿದ್ದಾಳೆ.

ನಾಗರಬೆಟ್ಟದ ಎಸ್‌ಡಿಕೆ ಪ್ರೌಢಶಾಲೆಯ ಪೂಜಾ ಎಚ್. ಲಮಾಣಿ ಕನ್ನಡ ಮಾಧ್ಯಮದಲ್ಲಿ ಶೇ.99.84 ಅಂಕ ಪಡೆದು ಜಿಲ್ಲೆಗೆ ದ್ವಿತೀಯ, ಆಕ್ಸಫರ್ಡ್ ಆಂಗ್ಲ ಮಾಧ್ಯಮ ಪ್ರೌಢಶಾಲೆಯ ಜ್ಯೋತ್ಸ್ನಾ ಬಾಲಚಂದ್ರ ಪಾಟೀಲ ಶೇ.99.68 ಅಂಕ ಪಡೆದು ಜಿಲ್ಲೆಗೆ ತೃತೀಯ ಸ್ಥಾನ ಪಡೆದಿದ್ದಾರೆ. ಇವರೊಟ್ಟಿಗೆ ಮುದ್ದೇಬಿಹಾಳ ತಾಲೂಕಿನ ಮೈಲೇಶ್ವರ ಗ್ರಾಮದ ಬ್ರಿಲ್ಲಿಯಂಟ್ ಆಂಗ್ಲ ಮಾಧ್ಯಮ ಪ್ರೌಢಶಾಲೆಯ ಗಂಗಮ್ಮ ಅಶೋಕ ಕೋಳೂರ ಶೇ.99.68 ಅಂಕ ಹಾಗೂ ಜಿಲ್ಲೆಯ ಬೇಳೂರು ಕ್ರಾಸ್ ಜೆಎಸ್ಸೆಸ್ ಆಂಗ್ಲ ಮಾಧ್ಯಮ ಪ್ರೌಢಶಾಲೆಯ ಸುವರ್ಣಿಕಾ ಸಂಗನಗೌಡ ಪಾಟೀಲ ಶೇ. 99.68 ಅಂಕ ಪಡೆದು ಜಿಲ್ಲೆಗೆ ತೃತೀಯ ಸ್ಥಾನ ಪಡೆದಿದ್ದಾರೆ ಎಂದು ಡಿಡಿಪಿಐ ವೀರಯ್ಯ ಸಾಲಿಮಠ ಅವರು ತಿಳಿಸಿದ್ದಾರೆ.

ಕಿರುಸುದ್ದಿ

ಎಸ್ಸೆಸ್ಸೆಲ್ಸಿಯಲ್ಲಿ ಯಲಬುರ್ಗಾ ತಾಲೂಕು ಪ್ರಥಮ: ಸಂತಸ

ಕುಕನೂರ: ಜಿಲ್ಲೆಯಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಯಲಬುರ್ಗಾ ವಿಧಾನಸಭಾ ಕ್ಷೇತ್ರದಲ್ಲಿ ಉತ್ತಮ ಫಲಿತಾಂಶ ಪ್ರಕಟವಾಗಿದ್ದು, ಸಂತಸ ವಿಷಯ ಎಂದು ಸಿಎಂ ಆರ್ಥಿಕ ಸಲಹೆಗಾರ ಶಾಸಕ ಬಸವರಾಜ್ ರಾಯರೆಡ್ಡಿ ಹೇಳಿದರು. ಪಟ್ಟಣದಲ್ಲಿ ಪತ್ರಿಕೆ ಪ್ರಕಟಣೆ ನೀಡಿರುವ ಅವರು 2025–26ನೇ ಸಾಲಿನಲ್ಲಿ ಎಸ್ಸೆಸ್ಸೆಲ್ಸಿ ವಾರ್ಷಿಕ ಪರೀಕ್ಷೆ–1ರ ಫಲಿತಾಂಶ ಬಿಡುಗಡೆಯಾಗಿದ್ದು, ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಅಖಂಡ ಯಲಬುರ್ಗಾ ತಾಲೂಕಿನಲ್ಲಿ ನೋಂದಣಿಯಾದ 4673 ವಿದ್ಯಾರ್ಥಿಗಳಲ್ಲಿ 4446 ವಿದ್ಯಾರ್ಥಿಗಳು ಉತ್ತೀರ್ಣರಾಗಿರುತ್ತಾರೆ. ತಾಲೂಕಿನ ಫಲಿತಾಂಶ ಪ್ರತಿಶತ 95.14% ಆಗಿದ್ದು ಜಿಲ್ಲಾ ಫಲಿತಾಂಶವನ್ನು ವಿಶ್ಲೇಷಣೆ ಮಾಡಲಾಗಿ ಯಲಬುರ್ಗಾ ತಾಲೂಕು ಕೊಪ್ಪಳ ಜಿಲ್ಲೆಯಲ್ಲಿಯೇ ಪ್ರಥಮ ಸ್ಥಾನದಲ್ಲಿದೆ.ಮಾಧ್ಯಮ ರಹಿತವಾಗಿ ಅಖಂಡ ಯಲಬುರ್ಗಾ ತಾಲೂಕಿನಲ್ಲಿ ಹಾಗೂ ಇಂಗ್ಲೀಷ್ ಮಾಧ್ಯಮದಲ್ಲಿ ಎಸ್‌ಎಫ್‌ಎಸ್ ಪ್ರೌಢ ಶಾಲೆ ಕುಕನೂರ ಶಾಲೆಯ ಕುಮಾರ ಅನುಷಾ ಸೋಮರಡ್ಡಿ 622 ಅಂಕಗಳೊಂದಿಗೆ ಪ್ರಥಮ ಸ್ಥಾನ ಪಡೆದಿದ್ದಾರೆ. ಕನ್ನಡ ಮಾಧ್ಯಮದಲ್ಲಿ ಬಾಲಕಿಯರ ಸರಕಾರಿ ಪ್ರೌಢ ಶಾಲೆ ತಳಕಲ್ ವಿದ್ಯಾರ್ಥಿನಿ ಶ್ವೇತಾ ಗೋವಿಂದಪ್ಪ ಸಾನಿ 621 ಅಂಕಗಳೊಂದಿಗೆ ಪ್ರಥಮ ಸ್ಥಾನ ಪಡೆದಿದ್ದಾರೆ. ಒಟ್ಟು ತಾಲೂಕಿನಲ್ಲಿ 14 ಸರಕಾರಿ ಪ್ರೌಢ ಶಾಲೆಗಳು, 3 ಅನುದಾನಿತ ಪ್ರೌಢ ಶಾಲೆಗಳು, 7 ಅನುದಾನ ರಹಿತ ಪ್ರೌಢ ಶಾಲೆಗಳು, ಹಾಗೂ 11 ವಸತಿ ಸಹಿತ ಪ್ರೌಢ ಶಾಲೆಗಳು ಶೇ.100ಕ್ಕೆ 100ರಷ್ಟು ಫಲಿತಾಂಶ ಸಾಧಿಸಿದ್ದಾರೆ. ತಾಲೂಕಿನ ವಿದ್ಯಾರ್ಥಿಗಳ ಈ ಅಭೂತಪೂರ್ವ ಫಲಿತಾಂಶದ ಸಾಧನೆಗೆ ಕಾರಣಿಭೂತರಾದ ಎಲ್ಲಾ ಮುಖ್ಯ ಶಿಕ್ಷಕರು ಹಾಗೂ ಸಹ ಶಿಕ್ಷಕರು ಮತ್ತು ಫಲಿತಾಂಶ ಸುಧಾರಣೆಗೆ ಅವಿರತವಾಗಿ ಶ್ರಮಿಸಿದ ಶಿಕ್ಷಣ ಇಲಾಖೆಯ ಎಲ್ಲಾ ಅಧಿಕಾರಿ ಮತ್ತು ಸಿಬ್ಬಂದಿಗೂ ನನ್ನ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತೇನೆ ಎಂದಿದ್ದಾರೆ.

ಮೊರಾರ್ಜಿ ದೇಸಾಯಿ ವಸತಿ ಶಾಲೆಯ ವಿದ್ಯಾರ್ಥಿಗಳ ಸಾಧನೆ

ಸಿಂಧನೂರು: 2025–26ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ತಾಲೂಕಿನ ಉಮಲೂಟಿಯ ಮೊರಾರ್ಜಿ ದೇಸಾಯಿ ವಸತಿ ಶಾಲೆ ಪ್ರತಿಶತ 100ಕ್ಕೆ ನೂರರಷ್ಟು ಫಲಿತಾಂಶ ಪಡೆದುಕೊಂಡಿದೆ.ಇನ್ನೂ ಈ ಬಾರಿ ಎಸ್ಸೆಸ್ಸೆಲ್ಸಿ ಪರೀಕ್ಷೆಗೆ ಹಾಜರಾದ ಒಟ್ಟು 49 ವಿದ್ಯಾರ್ಥಿಗಳಲ್ಲಿ 29 ಉನ್ನತ ಶ್ರೇಣಿ, 19 ಪ್ರಥಮ ಶ್ರೇಣಿ, 1 ದ್ವಿತೀಯ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ.

ಅದರಲ್ಲಿ ಕು.ಶಾಂತಕುಮಾರಿ 618% (618) ಶೇಕಡಾ ರಷ್ಟು ಅಂಕಗಳಿಸಿ ಶಾಲೆಗೆ ಪ್ರಥಮ ಸ್ಥಾನ, ಕು.ಸೃಷ್ಟಿ 97.76(611) ಶೇಕಡಾ ರಷ್ಟು ಅಂಕಗಳಿಸಿ ದ್ವಿತೀಯ ಸ್ಥಾನ ಮತ್ತು ಕು.ಮಂಜುನಾಥ ಗಾಣದಾಳ 96.96(606) ಶೇಕಡಾ ರಷ್ಟು ಅಂಕ ಪಡೆದು ತೃತೀಯ ಸ್ಥಾನ ಪಡೆದುಕೊಂಡಿದ್ದಾರೆ. ಈ ರೀತಿಯ ಉತ್ತಮ ಫಲಿತಾಂಶಕ್ಕೆ ಸಹಕರಿಸಿದ ಮಸ್ಕಿ ಶಾಸಕ ಆರ್.ಬಸನಗೌಡ ತುರ್ವಿಹಾಳ, ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಶಿವಮಾನಪ್ಪ, ವಸತಿ ವಿಭಾಗದ ಜಿಲ್ಲಾ ಸಮನ್ವಯಾಧಿಕಾರಿ ಅಮೀನಸಾಬ್, ಉಮಲೂಟಿ ಗ್ರಾಮದ ಗುರು ಹಿರಿಯರು, ಶಿಕ್ಷಣ ಪ್ರೇಮಿಗಳು, ಸಂಸ್ಥೆಯ ಪಾಲಕರು ಪೋಷಕರು, ಶಿಕ್ಷಕರು ಹಾಗೂ ಉತ್ತಮ ಸಾಧನೆಗೈದ ವಿದ್ಯಾರ್ಥಿ, ವಿದ್ಯಾರ್ಥಿನಿಯರುಗಳಿಗೆ ಹೃದಯ ಪೂರ್ವಕ ಅಭಿನಂದನೆಗಳನ್ನು ವಸತಿ ಶಾಲೆಯ ಪ್ರಾಚಾರ್ಯ ಗುರುಪಾದಗೌಡ ಸೂಡಿ ತಿಳಿಸಿದರು.

ಅನುಶ್ರೀ ಪ್ರಥಮ

ಯಲಬುರ್ಗಾ: ತಾಲೂಕಿನ ಸಂಗನಾಳ ಗ್ರಾಮದ ಸರ್ಕಾರಿ ಪ್ರೌಢ ಶಾಲೆಯ 10ನೇ ತರಗತಿಯ ವಿದ್ಯಾರ್ಥಿನಿ ಹಾಗೂ ಸ್ಥಳೀಯ ಗ್ರಾಮ ಪಂಚಾಯಿತಿಯ ವಾಲಿಕಾರನಾಗಿ ಸೇವೆ ಸಲ್ಲಿಸುತ್ತಿರುವವರ ಮಗಳಾದ ಕು.ಅನುಶೀ ಶರಣಪ್ಪ ಕಿವುಡಿ ಅವರು ಎಸ್ಸೆಸ್ಸೆಲ್ಸಿ ವಾರ್ಷಿಕ ಪರೀಕ್ಷೆಯಲ್ಲಿ 625ಕ್ಕೆ 618 ಅಂಕಗಳನ್ನು ಪಡೆದುಕೊಂಡು ತಾಲೂಕಿಗೆ ದ್ವಿತಿಯ ಸ್ಥಾನ ಹಾಗೂ ಆ ಶಾಲೆಗೆ ಪ್ರಥಮ ಸ್ಥಾನ ಗಳಿಸಿದ್ದಕ್ಕಾಗಿ ಶಾಲೆಯ ಮುಖ್ಯಶಿಕ್ಷಕರು, ಶಾಲಾ ಸಿಬ್ಬಂದಿ, ಗ್ರಾಮಸ್ಥರು ಹರ್ಷ ವ್ಯಕ್ತಪಡಿಸಿದ್ದಾರೆ.

ಕರೂರ: ಸಮೀಪದ ಎಚ್.ಹೊಸಹಳ್ಳಿ ಗ್ರಾಪಂ ಆವರಣದಲ್ಲಿ ಇಂದು ಮಹಿಳಾ ಗ್ರಾಮ ಸಭೆಯನ್ನು ಆಯೋಜನೆ ಮಾಡಲಾಯಿತು. ಆಡಳಿತ ಅಧಿಕಾರಿಗಳು, ಪಿಡಿಓ, ಕಾರ್ಯದರ್ಶಿ, ಆಶಾ ಮತ್ತು ಅಂಗನವಾಡಿ ಕಾರ್ಯಕರ್ತೆಯರು, ವೈದ್ಯಾಧಿಕಾರಿಗಳು, ಎನ್ ಆರ್‌ಎಲ್‌ಎಂ ಘಟಕದವರು, ಬಿಎಫ್‌ಟಿ, ಗ್ರಾಪಂ ಸಿಬ್ಬಂದಿ, ಸ್ವಚ್ಛವಾಹಿನಿ ಸಿಬ್ಬಂದಿ, ಭಾಗವಹಿಸಿದ್ದರು.

ಧರೆಗೆ ಗಂಗೆ ತಂದ ಅಧ್ಯಾತ್ಮ ನಾಯಕ

ಕುಷ್ಟಗಿ: ಪುರಾಣದಲ್ಲಿ ಬರುವ ಮಹರ್ಷಿ ಭಗೀರಥರು ನಾಡಿನ ಆಧ್ಯಾತ್ಮ ನಾಯಕರಾಗಿ ಹೊರ ಹೊಮ್ಮಿದ್ದಾರೆ ಎಂದು ವಿಪ ಮುಖ್ಯ ಸಚೇತಕ ಹಾಗೂ ಶಾಸಕ ದೊಡ್ಡನಗೌಡ ಪಾಟೀಲ ಹೇಳಿದರು.

ಪಟ್ಟಣದ ತಹಶೀಲ್ದಾರ್ ಕಚೇರಿ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಮಹರ್ಷಿ ಭಗೀರಥ ಜಯಂತಿ ಕಾರ್ಯಕ್ರಮ ಹಿನ್ನೆಲೆ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಗುರುವಾರ ಮಾತನಾಡಿದರು.

ಮಹರ್ಷಿ ಭಗೀರಥರು ಶಕ್ತಿಯ ಮೂಲಕ ಗಂಗೆಯಿಂದ ನೀರು ಹರಿಸುವ ಮೂಲಕ ಆಧ್ಯಾತ್ಮ ಮಹಾನ್ ವ್ಯಕ್ತಿಗಳಾಗಿ ನಾಡಿನ ಉದ್ದಗಲಕ್ಕೂ ಹೆಸರಾಗಿದ್ದಾರೆ. ಅನೇಕ ಮಹಾನ್ ಪುರುಷರು ನಾಡಿಗಾಗಿ ಶ್ರಮಿಸಿದ್ದಾರೆ. ಅಂತ ನೆಲದಲ್ಲಿ ನಾವೆಲ್ಲರೂ ಜನಸಿದ ಪುಣ್ಯವಂತರು. ಪ್ರತಿಯೊಬ್ಬರೂ ಮಹಾನ್ ವ್ಯಕ್ತಿಗಳನ್ನು ಸ್ಮರಿಸುವ ಮೂಲಕ ಆದರ್ಶಗಳನ್ನು ಮೈಗೂಡಿಸಿಕೊಳ್ಳಬೇಕು ಎಂದು ತಿಳಿಸಿದರು.

ತಹಶೀಲ್ದಾರ್ ಅಶೋಕ ಶಿಗ್ಗಾವಿ, ತಾಲೂಕು ಉಪ್ಪಾರ ಭಗೀರಥ ಸಮಾಜದ ಅಧ್ಯಕ್ಷ ಸಂಗಪ್ಪ ಭಾವಿಕಟ್ಟಿ, ಬಿಜೆಪಿ ಮುಖಂಡ ಪ್ರಭಾಕರ್ ಚಿಣಿ, ಪ್ರಧಾನ ಕಾರ್ಯದರ್ಶಿ ಮಂಜುನಾಥ ಕೆಬಿ, ಯುವ ಘಟಕದ ಅಧ್ಯಕ್ಷ ಪುಂಡಲೀಕಪ್ಪ ಜೂಲಕಟ್ಟಿ,ಚಂದ್ರು ಹಾವರಗಿ,ನಾಗರಾಜ ಉಪ್ಪಾರ ವಕೀಲರು,ಶಿವು ಹಿರೇಮನಿ,ಅಮರೇಶ ನಾಗರಾಳ, ಮೈಲಾರಪ್ಪ ಮಂತ್ರಿ ಹಾಗೂ ಇನ್ನಿತರರು ಇದ್ದರು.

ಕುಷ್ಟಗಿ: ಪಟ್ಟಣದ ತಹಶೀಲ್ದಾರ್ ಕಚೇರಿ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಮಹರ್ಷಿ ಭಗೀರಥ ಜಯಂತಿ ಕಾರ್ಯಕ್ರಮ ಹಿನ್ನೆಲೆ ಭಾವಚಿತ್ರಕ್ಕೆ ವಿಪ ಮುಖ್ಯ ಸಚೇತಕ ಹಾಗೂ ಶಾಸಕ ದೊಡ್ಡನಗೌಡ ಪಾಟೀಲ ಪುಷ್ಪನಮನ ಸಲ್ಲಿಸಿದರು.

ಎಸ್ಸೆಸ್ಸೆಲ್ಸಿಯಲ್ಲಿ ಶೇಕಡಾವಾರು ಸುಧಾರಣೆ | ಗಣೇಶ್ ಭೋಂಸ್ಲೆ ಜಿಲ್ಲೆಗೆ ಪ್ರಥಮ

ಕಲಬುರಗಿ ಜಿಲ್ಲೆಗೆ ಕೊನೆ ಸ್ಥಾನ

ಕಲಬುರಗಿ: ಜಿಲ್ಲೆಯ ಎಸ್ಸೆಸ್ಸೆಲ್ಸಿ (ಪರೀಕ್ಷೆ-1) ಫಲಿತಾಂಶ ಹೊರಬಿದ್ದಿದ್ದು, ಕಲಬುರಗಿ ಜಿಲ್ಲೆಯು ಜಿಲ್ಲಾವಾರು ಫಲಿತಾಂಶದಲ್ಲಿ ಕೊನೆ ಸ್ಥಾನಕ್ಕೆ ಬಂದರೂ, ಶೇಕಡಾವಾರು 28.17ನಷ್ಟು ಈ ಬಾರಿ ಸಾಧನೆ ಮಾಡಿದೆ. ಒಟ್ಟು 85.06% ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು,ಕಳೆದ ವರ್ಷ (2024-25) ಕೇವಲ 42.43%ರಷ್ಟು ಫಲಿತಾಂಶ ಬಂದಿತ್ತು,ಅದಕ್ಕೆ ಹೋಲಿಸಿದರೆ ಈ ಬಾರಿ ಶೇ.42.63%ರಷ್ಟು ಸುಧಾರಣೆ ಕಂಡು ಬಂದಿದೆ.

ಜಿಲ್ಲೆಯ ಎಂಟು ತಾಲೂಕುಗಳಲ್ಲಿ ಸೇಡಂ ತಾಲೂಕು 92.33% ಫಲಿತಾಂಶದೊಂದಿಗೆ ಪ್ರಥಮ ಸ್ಥಾನ ಅಲಂಕರಿಸಿದೆ.ಚಿತ್ತಾಪುರ (87.72%) ಮತ್ತು ಚಿಂಚೋಳಿ (86.87%) ಕ್ರಮವಾಗಿ ದ್ವಿತೀಯ ಹಾಗೂ ತೃತೀಯ ಸ್ಥಾನಗಳನ್ನು ಪಡೆದುಕೊಂಡಿವೆ.

ಬಾಲಕಿಯರ ಮೇಲುಗೈ: ಸಂಪ್ರದಾಯದಂತೆ ಈ ಬಾರಿಯೂ ಬಾಲಕಿಯರೇ ಮೇಲುಗೈ ಸಾಧಿಸಿದ್ದಾರೆ. ಬಾಲಕಿಯರ ಪಾಸ್ ಶೇಕಡಾವಾರು 90.01% ಇದ್ದರೆ, ಬಾಲಕರು 79.78% ರಷ್ಟು ತೇರ್ಗಡೆಯಾಗಿದ್ದಾರೆ. ಮಾಧ್ಯಮವಾರು ಫಲಿತಾಂಶದಲ್ಲಿ ಇಂಗ್ಲಿಷ್ ಮಾಧ್ಯಮವು 90.05% ಗಳಿಸಿದ್ದರೆ,ಆಶ್ಚರ್ಯಕರವಾಗಿತೆಲುಗು ಮಾಧ್ಯಮದ ಎಲ್ಲಾ 23 ವಿದ್ಯಾರ್ಥಿಗಳು (100%) ಪಾಸ್ ಆಗಿ ದಾಖಲೆ ಬರೆದಿದ್ದಾರೆ. ಸರ್ಕಾರಿ ಶಾಲೆಗಳು (85.79%) ಅನುದಾನಿತ ಹಾಗೂ ಅನುದಾನ ರಹಿತ ಶಾಲೆಗಳಿಗಿಂತ ಉತ್ತಮ ಪ್ರದರ್ಶನ ನೀಡಿರುವುದು ವಿಶೇಷ.

> **ಕಲಬುರಗಿ ಜಿಲ್ಲೆ ಸೇರಿ ಕಕ ಭಾಗದ 7 ಜಿಲ್ಲೆಗಳಲ್ಲಿ ಕಳೆದ ವರ್ಷಕ್ಕಿಂತ ಈ ಬಾರಿ ಉತ್ತಮ ಫಲಿತಾಂಶ ಬಂದಿದೆ. ಕಲಬುರಗಿ ಫಲಿತಾಂಶದಲ್ಲಿ ರಾಜ್ಯದಲ್ಲೇ ಕೊನೆಯ ಸ್ಥಾನದಲ್ಲಿರಬಹುದು.ಆದರೆ,ಕಳೆದ ಬಾರಿಗೆ ಹೋಲಿಕೆ ಮಾಡಿದಲ್ಲಿ ಪಾಸಿಂಗ್ ಮಕ್ಕಳ ಪ್ರಮಾಣ ಶೇಕಡಾವಾರ ಹೆಚ್ಚಾಗಿದೆ. ಅಕ್ಷರ ಅವಿಷ್ಕಾರ ಯೋಜನೆ ಜಾರಿಗೆ ತಂದುದರ ಪರಿಣಾಮ ನಿಧಾನಕ್ಕೆ ಫಲಿತಾಂಶದಲ್ಲಿ ಸುಧಾರಣೆ ಗೋಚರಿಸುತ್ತಿದೆ.**
>
> **■ ಡಾ.ಅಜಯ್ ಧರ್ಮಸಿಂಗ್, ಕೆಕೆಆರ್‌ಡಿಬಿ ಅಧ್ಯಕ್ಷ, ಶಾಸಕ**

ಜಿಲ್ಲೆಯ ಕೀರ್ತಿ ಹೆಚ್ಚಿಸಿದ ಟಾಪರ್‌ಗಳು

ಜಿಲ್ಲೆಯ ವೈಯಕ್ತಿಕ ಸಾಧನೆಯಲ್ಲಿ ಅಜೀಂ ಪ್ರೇಮ್‌ಜಿ ಶಾಲೆಯ ಗಣೇಶ್ ಭೋಂಸ್ಲೆ 623 ಅಂಕ ಪಡೆಯುವ ಮೂಲಕ ಜಿಲ್ಲೆಗೆ ಮೊದಲ ಸ್ಥಾನ ಪಡೆದಿದ್ದಾರೆ. ಶರಣಬಸವೇಶ್ವರ ವಸತಿ ಶಾಲೆಯ ಮಾಧವಿ ಹಾಗೂ ಮೇಘನಾ ತಲಾ 622 ಅಂಕಗಳನ್ನು ಪಡೆಯುವ ಮೂಲಕ ದ್ವಿತೀಯ ಸ್ಥಾನ ಪಡೆದಿದ್ದು, ನಗರದ ಜಗತ್ ಪ್ರತಿಭಾನ್ವಿತ ಎಸ್.ಸಿ/ಎಸ್ಟಿ ಶಾಲೆಯ ವಿದ್ಯಾರ್ಥಿನಿ ಭಾಗ್ಯಶ್ರೀ, ಎಸ್‌ಆರ್‌ಎನ್ ಮೆಹತಾ ಆಂಗ್ಲ ಮಾಧ್ಯಮ ಶಾಲೆಯ ವಿದ್ಯಾರ್ಥಿ ಓಂಕಾರ್ ಹಾಸು, ಜೇವರ್ಗಿ ತಾಲೂಕಿನ ಚನ್ನೂರ್ ಆದರ್ಶ ವಿದ್ಯಾಲಯದ ನಿಸರ್ಗ 620 ಅಂಕಗಳನ್ನು ಪಡೆದುಕೊಂಡು ಜಿಲ್ಲೆಯ ತೃತೀಯ ಸ್ಥಾನ ಪಡೆದುಕೊಂಡಿದ್ದು,ಒಟ್ಟಾರೆಯಾಗಿ ಜಿಲ್ಲೆಯ ಅಧಿಕಾರಿಗಳು, ಶಿಕ್ಷಕರು ಮತ್ತು ವಿದ್ಯಾರ್ಥಿಗಳ ಸಂಘಟಿತ ಪ್ರಯತ್ನದಿಂದಾಗಿ ಕಲಬುರಗಿ ಜಿಲ್ಲೆಯು ಈ ಬಾರಿ ಜಿಲ್ಲಾವಾರು ಇಲ್ಲದಿದ್ದರೂ, ಶೇಕಡಾವಾರು ಫಲಿತಾಂಶದಲ್ಲಿ ಗಮನ ಸೆಳೆದಿದೆ.

ಮುಕ್ಕುಂಪಿ ಶಾಲೆಗೆ ಶೇ.100 ಫಲಿತಾಂಶ

ಮುನಿರಾಬಾದ್: ಆರ್‌ಎಂಎಸ್‌ಇ ಪ್ರೌಢ ಶಾಲೆ ಮುಕ್ಕುಂಪಿ ಯಲ್ಲಿ ಎಸ್ಸೆಸ್ಸೆಲ್ಸಿ ವಾರ್ಷಿಕ ಪರೀಕ್ಷೆಯಲ್ಲಿ ಎಲ್ಲಾ 67 ವಿದ್ಯಾರ್ಥಿಗಳು ಸಹ ಉತ್ತೀರ್ಣರಾಗಿದ್ದು ಶೇಕಡ 100 ಫಲಿತಾಂಶ ಬಂದಿದೆ. ಅದರಲ್ಲೂ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಾದ ಆನಂದ ಪೂಜಾರ್ 96.16% ಹಾಗೂ ನಂದಿನಿ ತಂದೆ ಮಲ್ಲಪ್ಪ 93.13 ಈ ಇಬ್ಬರು ವಿದ್ಯಾರ್ಥಿಗಳು ಅತಿ ಹೆಚ್ಚು ಅಂಕಗಳನ್ನು ಪಡೆದುಕೊಂಡಿರುವುದು ಹೆಮ್ಮೆಯ ಸಂಗತಿಯಾಗಿದೆ ಎಂದು ಶಾಲೆಯ ಮುಖ್ಯೋಪಾಧ್ಯಾಯರು ತಿಳಿಸಿದರು. ಎಸ್‌ಡಿಎಂಸಿ ಅಧ್ಯಕ್ಷರಾದ ಅಂಬರೀಶ್ ಹೊಸಳ್ಳಿ ಉಪಾಧ್ಯಕ್ಷರಾದ ಸೋಮನಗೌಡ ಬಿಡ್ನಾಳ ಹಾಗೂ ಸದಸ್ಯರು ಶಿಕ್ಷಕ ವೃಂದ ಉಪಸ್ಥಿತರಿದ್ದರು.

ಬಳೂಟಗಿ ವಸತಿ ಶಾಲೆಯ ಎಸ್ಸೆಸ್ಸೆಲ್ಸಿ ಫಲಿತಾಂಶ ಅತ್ಯುತ್ತಮ

ಯಲಬುರ್ಗಾ: ತಾಲೂಕಿನ ಬಳುಟಗಿ ಗ್ರಾಮದ ಕಿತ್ತೂರು ರಾಣಿ ಚನ್ನಮ್ಮ ವಸತಿ ಶಾಲೆಯ ಎಸ್ಸೆಸ್ಸೆಲ್ಸಿ ವಾರ್ಷಿಕ ಪರೀಕ್ಷೆಯ ಫಲಿತಾಂಶ ಪ್ರಕಟವಾಗಿದ್ದು, 50 ವಿದ್ಯಾರ್ಥಿನಿಯರು ಎಸ್ಸೆಸ್ಸೆಲ್ಸಿ ವಾರ್ಷಿಕ ಪರೀಕ್ಷೆಯಲ್ಲಿ ಹಾಜರಾಗಿ ಅದರಲ್ಲಿ 31 ವಿದ್ಯಾರ್ಥಿನಿಯರು ಡಿಸ್ಟಿಂಕ್ಷನ್‌ದಲ್ಲಿ 19 ವಿದ್ಯಾರ್ಥಿನಿಯರು ಪ್ರಥಮ ದರ್ಜೆಯಲ್ಲಿ ಉತ್ತೀರ್ಣಗೊಂಡು ಶಾಲೆಯ ಕಿರ್ತಿಯನ್ನು ಹೆಚ್ಚಿಸಿದ್ದಾರೆ.

ಭಾನುಪ್ರಿಯಾ ತಳವಾರ 97.66% ಪ್ರತಿಶತದಲ್ಲಿ ಉತ್ತೀರ್ಣಗೊಂಡು ಶಾಲೆಗೆ ಪ್ರಥಮ ಸ್ಥಾನ ಗಳಿಸಿದ್ದಾರೆ. ಶೃತಿ ಕಲಾಲ್ 95.68% ದ್ವಿತೀಯ ಸ್ಥಾನ.ಕವಿತಾ ಗೊಂದಿಹೊಸಳ್ಳಿ 95.20 ಆದರಂತೆ ಉಳಿದ ವಿದ್ಯಾರ್ಥಿನಿಯರು ಉತ್ತೀರ್ಣಗೊಂಡಿದ್ದಾರೆ.

ಈ ವಿದ್ಯಾರ್ಥಿನಿಯರ ಸಾಧನೆಗೆ ಉಪನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ ಕೊಪ್ಪಳ, ಪ್ರಾಂಶುಪಾಲರು, ಶಿಕ್ಷಕರು ಹಾಗೂ ಶಿಕ್ಷಕೇತರ ಸಿಬ್ಬಂದಿ ಹರ್ಷ ವ್ಯಕ್ತಪಡಿಸಿದ್ದಾರೆ.

ಹಿಂ.ವ.ಕ.ಇ.ವಸತಿ ನಿಲಯಗಳ ಪರೀಕ್ಷಾ ಫಲಿತಾಂಶ: ಯಲಬುರ್ಗಾ: ತಾಲೂಕಿನ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಸತಿ ನಿಲಯಗಳ ಎಸ್ಸೆಸ್ಸೆಲ್ಸಿ ಫಲಿತಾಂಶ 98.56% ಆಗಿದ್ದು 15 ವಸತಿ ನಿಲಯಗಳಲ್ಲಿ 11 ವಸತಿ ನಿಲಯಗಳಲ್ಲಿ ಫಲಿತಾಂಶ 100% ದಾಖಲಿಸಿದ್ದು ಅದೇ ರೀತಿ ಮೆಟ್ರಿಕ್ ಪೂರ್ವ ಬಾಲಕಿಯರ ವಸತಿ ನಿಲಯ ಇಟಗಿಯಲ್ಲಿ ಒಬ್ಬ ವಿದ್ಯಾರ್ಥಿನಿ 96.48% ಫಲಿತಾಂಶ ದಾಖಲಿಸಿದ್ದಾಳೆ. ವಿದ್ಯಾರ್ಥಿಗಳ ಸಾಧನೆಗೆ ಜಿಲ್ಲಾಧಿಕಾರಿಗಳ ಜಾರಿಗೊಳಿಸಿದ ಸ್ಫೂರ್ತಿಯ ನಡೆ ಕಾರ್ಯಕ್ರಮಕ್ಕೆ ಸ್ಫೂರ್ತಿ ತಂದಿದೆ. ಜತಗೆ ಜಿಲ್ಲಾ ಅಧಿಕಾರಿಗಳು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಕೊಪ್ಪಳ, ಉಪನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ ಕೊಪ್ಪಳ, ಎನ್ ಐಸಿ ಮುಖ್ಯಸ್ಥ ಬಸವರಾಜ್ ಸೇರಿದಂತೆ ತಾಲೂಕಿನ ಎಲ್ಲ ವಸತಿ ನಿಲಯಗಳ ಮೇಲ್ವಿಚಾರಕರು ಮತ್ತು ಸಿಬ್ಬಂದಿಗೆ ಹಾಗೂ ಎಲ್ಲ ಸಂಪನ್ಮೂಲ ಶಿಕ್ಷಕರ ಸಹಕರಿಸಿದ್ದಕ್ಕಾಗಿ ತಾಲೂಕು ಹಿಂದುಳಿದ ವರ್ಗಗಲ ಕಲ್ಯಾಣ ಇಲಾಖೆ ಅಧಿಕಾರಿ ಡಾ.ಶಿವಶಂಕರ ವಿ.ಕರ್ಡಕಲ್ ಸಂತಸ ವ್ಯಕ್ತಪಡಿಸಿದ್ದಾರೆ. ಸಮಾಜ ಕಲ್ಯಾಣ ಇಲಾಖೆ ವಸತಿ ನಿಲಯ ಪರೀಕ್ಷಾ ಫಲಿತಾಂಶ: ತಾಲೂಕಿನ ಸಮಾಜ ಕಲ್ಯಾಣ ಇಲಾಖೆಯ ಪ. ಜಾತಿಯ ವಸತಿ ನಿಲಯಗಳು ಒಟ್ಟು:11, ಶೇಕಡಾ 100 ಫಲಿತಾಂಶ:5,ಒಟ್ಟು ವಿದ್ಯಾರ್ಥಿಗಳು: 271, ಒಟ್ಟು ಉತ್ತೀರ್ಣ: 260, ಶೇಕಡ 85ಕ್ಕಿಂತ ಹೆಚ್ಚು 28,ಪ್ರಥಮ ದರ್ಜೆ:134, ದ್ವಿತೀಯ ದರ್ಜೆ: 62.ತೃತೀಯ ದರ್ಜೆ:36. ಶೇಕಡ ಫಲಿತಾಂಶ: 95.94%. ಪರಿಶಿಷ್ಟ ವರ್ಗಗಳ ವಸತಿ ನಿಲಯಗಳು ಒಟ್ಟು ವಸತಿ ನಿಲಯಗಳು: 2.ಶೇಕಡಾ 100 ಫಲಿತಾಂಶ: 1.ಒಟ್ಟು ವಿದ್ಯಾರ್ಥಿಗಳು: 41.ಒಟ್ಟು ಉತ್ತೀರ್ಣ:40.ಶೇಕಡ 85 ಕ್ಕಿಂತ ಹೆಚ್ಚು 6.ಪ್ರಥಮ ದರ್ಜೆ, 25, ದ್ವಿತೀಯ ದರ್ಜೆ6, ತೃತೀಯ ದರ್ಜೆ3, ಶೇಕಡ ಫಲಿತಾಂಶ 97.92% ತಾಲೂಕಿನ ಹಿರೇವಂಕಲಕುಂಟಾ ಗ್ರಾಮದ ಡಾ.ಅಂಬೇಡ್ಕರ್ ಮೆಟ್ರಿಕ್ ಪೂರ್ವ ಶಾಲೆಯ ವಿದ್ಯಾರ್ಥಿ ಸಂಗಮೇಶ ಶರಣಪ್ಪ ಅಂಗಡಿ 612 ಅಂಕ ಪಡೆದಿದ್ದಾನೆ ಎಂದು ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಶಶಿದರ ಸಕ್ರಿ ತಿಳಿಸಿದ್ದಾರೆ.

ಕ್ಷೇತ್ರ ಪುನರ್‌ವಿಂಗಡಣೆಗೆ ಕಾಂಗ್ರೆಸ್‌ನ ವಿರೋಧ

ರಾಯಚೂರು: ಲೋಕಸಭೆಯಲ್ಲಿ ಮಹಿಳಾ ಮೀಸಲಾತಿ ವಿಧೇಯಕ ಒಂದನ್ನೇ ಮಂಡಿಸಿದ್ದರೆ ಕಾಂಗ್ರೆಸ್ ಸಂಪೂರ್ಣವಾಗಿ ಬೆಂಬಲಿಸುತ್ತಿತ್ತು. ಆದರೆ ಈ ವಿಧೇಯಕದೊಂದಿಗೆ ಕ್ಷೇತ್ರ ಪುನರ್ ವಿಂಗಡಣೆಯನ್ನು ಮಂಡಿಸಿದ್ದರಿಂದ ಕಾಂಗ್ರೆಸ್ ಬೆಂಬಲ ನೀಡಲಿಲ್ಲ ಎಂದು ಸಂಸದ ಜಿ.ಕುಮಾರ ನಾಯಕ ಹೇಳಿದರು.

ನಗರದ ಸಂಸದರ ಸ್ಥಳೀಯ ಕಾರ್ಯಾಲಯದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಬಿಜೆಪಿ ಸರ್ಕಾರ ಪಶ್ಚಿಮ ಬಂಗಾಳ ಹಾಗೂ ತಮಿಳುನಾಡು ರಾಜ್ಯಗಳ ಚುನಾವಣೆಯ ದೃಷ್ಟಿಯಲ್ಲಿಟ್ಟುಕೊಂಡು ಮೋದಿ ಸರ್ಕಾರ ತರಾತುರಿಯಲ್ಲಿ ಮಹಿಳಾ ಮೀಸಲಾತಿಯೊಂದಿಗೆ ಕ್ಷೇತ್ರ ಪುನರ್‌ವಿಂಗಡಣೆ ಸೇರಿದಂತೆ ಕೆಲ ವಿಷಯಗಳನ್ನು ಈ ಸಂದರ್ಭದಲ್ಲಿ ಮಂಡಿಸಿದೆ. ಇದರಿಂದಾಗಿನೇ ಈ ಬಿಲ್‌ಗೆ ಬೆಂಬಲದೊರೆಯಲಿಲ್ಲ. ಆದರೆ ಬಿಜೆಪಿ ಎರಡೂ ರಾಜ್ಯಗಳ ಚುನಾವಣೆ ಸಂದರ್ಭದಲ್ಲಿ ಮಹಿಳಾ ಮೀಸಲಾತಿ ಕುರಿತು ಮಾತ್ರ ಚರ್ಚೆ ಮಾಡುತ್ತಿದೆ ಎಂದರು.

ಮಹಿಳಾ ಮೀಸಲಾತಿ ವಿಧೇಯಕಕ್ಕೆ 2023ರಲ್ಲಿನೇಕಾಂಗ್ರೆಸ್‌ಸೇರಿದಂತೆಸರ್ವಪಕ್ಷಗಳು ಬೆಂಬಲಿಸಿದ್ದರಿಂದ ಅದಕ್ಕೆ ಪಾಸಾಗಿತ್ತು. ಆದರೆ ಅಂದಿನಿಂದ ಇಂದಿನವರೆಗೂ ಅದನ್ನು ಜಾರಿಗೆ ತರುವುದಕ್ಕೆ ಕೇಂದ್ರ ಸರ್ಕಾರ ಮುಂದಾಗಿರಲಿಲ್ಲ. ಈಗ ತರಾತುರಿಯಲ್ಲಿ ಮಂಡಿಸುವುದಕ್ಕೆ ಚುನಾವಣಾ ದೃಷ್ಟಿಯಿಂದಲ್ಲದೇ ಬೇರೆನೂ ಇಲ್ಲ ಎಂದು ತಿಳಿಸಿದರು.

ಬಿಜೆಪಿಯ ಅಹಂಕಾರವನ್ನು ಧಮನ ಮಾಡುವುದಕ್ಕಾಗಿ ಈ ವಿಧೇಯಕಕ್ಕೆ ಕಾಂಗ್ರೆಸ್ ಸೇರಿದಂತೆ ಇತರೆ ವಿರೋಧ ಪಕ್ಷಗಳು ಬೆಂಬಲ ಸೂಚಿಸಿಲ್ಲ, ಕ್ಷೇತ್ರ ಪುನರ್‌ವಿಂಗಡಣೆ ಗಡಿಬಿಡಿಯಲ್ಲಿ ಮಾಡುವುದಲ್ಲ, ಅದಕ್ಕೆ ದೀರ್ಘಾವಧಿ ಚರ್ಚೆ ಆಗಬೇಕಾಗುತ್ತದೆ. ಶೇ.50 ಕ್ಷೇತ್ರಗಳನ್ನು ಹೆಚ್ಚಿಸಿದರೂ ದಕ್ಷಿಣ ಭಾರತದಲ್ಲಿನ ರಾಜ್ಯಗಳಿಗೆ ಅನ್ಯಾಯವಾಗುತ್ತದೆ ಈ ಹಿನ್ನಲೆಯಲ್ಲಿ ತಮಿಳುನಾಡು ಸೇರಿದಂತೆ ಈ ಭಾಗದ ಎಲ್ಲ ರಾಜ್ಯಗಲು ವಿರೋಧವ್ಯಕ್ತಪಡಿಸಿವೆ ಎಂದರು.

ಕೆಪಿಸಿಸಿ ಕಾರ್ಯಾಧ್ಯಕ್ಷ, ವಿಪ ಸದಸ್ಯ ಎ.ವಸಂತಕುಮಾರ ಮಾತನಾಡಿ, ಕೆಪಿಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಪಿಎಂ ಓರ್ವ ಭಯೋತ್ಪಾದಕ ಎಂದು ಬೇರೆ ಅರ್ಥದಲ್ಲಿ ಹೇಳಿದ್ದಾರೆ ಎಂದು ಸಮರ್ಥಿಸಿಕೊಳ್ಳಲು ಮುಂದಾದಾಗ ಅವರೇಕೆ ಕ್ಷಮೆ ಕೇಳಿದರು ಎನ್ನುವ ಮಾಧ್ಯಮದವರ ಪ್ರಶ್ನೆಗೆ ಅವರಲ್ಲಿ ಉತ್ತರವಿರಲಿಲ್ಲ.

ರುದ್ರಪ್ಪ ಅಂಗಡಿ, ಜಿಲ್ಲಾಧ್ಯಕ್ಷ ಬಸವರಾಜ ಪಾಟೀಲ ಇಟಗಿ, ರಝಾಕ್ ಉಸ್ತಾದ್ ಸೇರಿದಂತೆ ಇತರರಿದ್ದರು.

ಎಸ್ಸೆಸ್ಸೆಲ್ಸಿ ಫಲಿತಾಂಶ: ಎಸ್‌ವಿಸಿ ಶಾಲೆಗೆ ಉನ್ನತ ಶ್ರೇಣಿ

ಕೊಪ್ಪಳ: ಕುಷ್ಟಗಿ ಪಟ್ಟಣದ ಎಸ್‌ವಿಸಿ ಪ್ರಾಥಮಿಕ ಮತ್ತು ಪ್ರೌಢಶಾಲೆ 10ನೇ ತರಗತಿಯ ವಾರ್ಷಿಕ ಪರೀಕ್ಷೆಯಲ್ಲಿ 96% ಫಲಿತಾಂಶ ದಾಖಲಿಸಿದೆ ಎಂದು ಎಸ್‌ವಿಸಿ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಸಿ.ವಿ.ಚಂದ್ರಶೇಖರ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಒಟ್ಟು ಇಬ್ಬರು ವಿದ್ಯಾರ್ಥಿಗಳು 'ಎ ಪ್ಲಸ್ ಗ್ರೇಡ್', 7 ವಿದ್ಯಾರ್ಥಿಗಳು 'ಎ ಗ್ರೇಡ್', 9 ವಿದ್ಯಾರ್ಥಿಗಳು ಪ್ರಥಮ ದರ್ಜೆ ಹಾಗೂ ಎಂಟು ವಿದ್ಯಾರ್ಥಿಗಳು ದ್ವಿತೀಯ ದರ್ಜೆ ಪಡೆದಿದ್ದಾರೆ.

ಪವನ್ ಕುಲಕರ್ಣಿ (92.48%), ವೈಷ್ಣವಿ ಕಾತರಕಿ (91.2%) ಹಾಗೂ ರಶ್ಮಿ ಕಳಸಿ (87.36%) ಕ್ರಮವಾಗಿ ಪ್ರಥಮ ಮೂರು ಸ್ಥಾನಗಳನ್ನು ಗಳಿಸಿದ್ದಾರೆ. ಹಿಂದಿ ಭಾಷೆಯಲ್ಲಿ ರಶ್ಮಿಕಳಸಿ ಹಾಗೂ ಗೌತಮಿ ಹಿರೇಮಠ 100, ಕನ್ನಡ ಭಾಷೆಯಲ್ಲಿ ಜಾನಕಿ ಗಂಗನಾಳ 124, ಇಂಗ್ಲಿಷ್ ಭಾಷೆಯಲ್ಲಿ ವೈಷ್ಣವಿ ಕಾತರಕಿ ಮತ್ತು ರಶ್ಮಿ ಕಳಸಿ 99 ಹಾಗೂ ಸಮಾಜ ವಿಜ್ಞಾನದಲ್ಲಿ ಪವನ್ ಕುಲಕರ್ಣಿ 98 ಅಂಕಗಳನ್ನು ಗಳಿಸಿ ವಿಶಿಷ್ಟ ಸಾಧನೆ ಮಾಡಿದ್ದಾರೆ.

ವಿದ್ಯಾರ್ಥಿಗಳ ಈ ಸಾಧನೆಗೆ ಜೆಡಿಎಸ್ ಕೋರ್ ಕಮಿಟಿ ಸದಸ್ಯ ಸಿ.ವಿ.ಚಂದ್ರಶೇಖರ್, ಸಿಇಓ ಡಾ.ಜಗದೀಶ್ ಅಂಗಡಿ, ಮುಖ್ಯೋಪಾಧ್ಯಾಯ ಸುರೇಶ್ ಹೊಸಮನಿ ಹಾಗೂ ಶಿಕ್ಷಕ ಸಿಬ್ಬಂದಿ ಹರ್ಷ ವ್ಯಕ್ತಪಡಿಸಿದ್ದಾರೆ.

ಹಿಂದೂ ಜನಜಾಗೃತಿ ಸಮಿತಿಯಿಂದ ಮುಖ್ಯಮಂತ್ರಿಗೆ ಮನವಿ

ಮಾನ್ವಿ: ಪಟ್ಟಣದ ತಹಶೀಲ್ದಾರ್ ಕಚೇರಿಯಲ್ಲಿ ಹಿಂದೂ ಜನಜಾಗೃತಿ ಸಮಿತಿ ವತಿಯಿಂದ ಮುಖ್ಯಮಂತ್ರಿಗಳಿಗೆ ಗ್ರೇಡ್–2 ತಹಶೀಲ್ದಾರ್ ಅಬ್ದುಲ್ ವಾಹಿದ್ ರವರ ಮೂಲಕ ಮಾನ್ವಿ ತಾಲೂಕು ಹಿಂದೂ ಜನಜಾಗೃತಿ ಸಮಿತಿ ಸಂಚಾಲಕ ದುರುಗಪ್ಪ ಹೊನ್ನಕಸ್ತೂರಿ ಮನವಿ ಸಲ್ಲಿಸಿದರು.

ಬಳಿಕ ಮಾತನಾಡಿದ ಅವರು, ರಾಜ್ಯಾದ್ಯಂತ ಅನೇಕ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬಹುರಾಷ್ಟ್ರೀಯ ಕಂಪನಿಗಳಲ್ಲಿ ಹಿಂದೂ ಮಹಿಳೆಯರ ಮೇಲೆ ನಡೆಯುತ್ತಿರುವ ಅತ್ಯಾಚಾರ ಮತ್ತು ಕಾರ್ಪೋರೇಟ್ ಜಿಹಾದ್ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳುವ ಮೂಲಕ ಹಿಂದೂ ಮಹಿಳೆಯರಿಗೆ ರಕ್ಷಣೆ ನೀಡಬೇಕು. ದೇಶದ ಮಹಾರಾಷ್ಟ್ರದ ನಾಸಿಕ್ ಟಿ.ಸಿ.ಎಸ್. ಐ.ಟಿ. ಕಂಪನಿಯಲ್ಲಿ ಕಾರ್ಪೋರೇಟ್ ಜಿಹಾದ್ ಬೆಳಕಿಗೆ ಬಂದಿದು ಅದರಂತೆ ರಾಜ್ಯದಲ್ಲಿಯು ಕೂಡ ಇಂತಹ ಪ್ರಕರಣಗಳು ನಡೆಯದಂತೆ ಸರಕಾರ ಅಗತ್ಯ ಕ್ರಮ ಕೈಗೊಳ್ಳಬೇಕು. ಇಂತಹ ಘಟನೆಗಳು ನಡೆದ ಸಂಸ್ಥೆಯ ಪರವಾನಿಗೆಯನ್ನು ರದ್ದು ಮಾಡಬೇಕು. ಸಂತ್ರಸ್ತ ಮಹಿಳೆಯರಿಗೆ ಸೂಕ್ತ ಭದ್ರತೆ ಒದಗಿಸಬೇಕು ಹಾಗೂ ಅವರಿಗೆ ಅಗತ್ಯ ಕಾನೂನು ನೆರವನ್ನು ನೀಡಬೇಕು. ಕಾರ್ಪೋರೇಟ್ ಹಾಗೂ ಬಹುರಾಷ್ಟ್ರೀಯ ಕಂಪನಿಗಳಲ್ಲಿ ಧಾರ್ಮಿಕ ಭೇದಭಾವ ವಿರೋಧಿ ಪರಿಶೀಲನೆ ನಡೆಸಬೇಕು, ರಾತ್ರಿ ಪಳಿಯಲ್ಲಿ ಕೆಲಸ ನಿರ್ವಹಿಸುವ ಮಹಿಳೆಯರ ರಕ್ಷಣೆಗಾಗಿ ಮಹಿಳಾ ಭದ್ರತಾ ಸಿಬ್ಬಂದಿ ಹಾಗೂ ಸಿಸಿಟಿವಿ ವ್ಯವಸ್ಥೆ ಮಾಡಬೇಕು .ಬಲವಂತದ ಧರ್ಮಾಂತರ ಮಾಡುವವರ ಮೇಲೆ ಕಠಿಣ ಕ್ರಮ ಕೈಗೊಳ್ಳಬೇಕು. ಹಾಗೂ ಸಂಘಟಿತ ಅಪರಾಧದ ದೃಷ್ಟಿಯಿಂದ ಪರಿಶೀಲನೆ ನಡೆಸಬೇಕು ಎಂದು ಒತ್ತಾಯಿಸಿದರು.

ಜೈಸಿಂಗ್ ಪುರೋಹಿತ್, ನರಸಪ್ಪ ಜೂಕೂರ್, ನಿಂಗಪ್ಪ, ರಮೇಶ, ಮಹಾಂತೇಶಸ್ವಾಮಿ, ಮಂಜುನಾಥ, ಶಾಂತಪ್ಪ ಸಾಗರ್, ರಾಜಶೇಖರ್, ನಾಗರಾಜಶೆಟ್ಟಿ, ಸಚೀನ್, ಸಂಗಯ್ಯಸ್ವಾಮಿ, ನಾಗಭೂಷಣ, ರತನ್ ದಾನಿ, ಅಯ್ಯಣ್ಣ ಗೌಡ, ಶಾಂತು, ದೇವರಾಜು, ಮಲ್ಲಿಕಾರ್ಜುನ ಇದ್ದರು.

ಮೀರಾ ಜಾಸ್ಮಿನ್ ಶಾಲೆಗೆ ಪ್ರಥಮ

ಮುನಿರಾಬಾದ್: ಹಳೇ ಬಂಡಿಹರ್ಲಾಪುರ ಗ್ರಾಮದ ಆಶಾ ಕಾರ್ಯಕರ್ತೆ ರಮೀಜಾ ದಿ.ಖಾಜಾಸಾಬ ಅವರ ಮಗಳು ಕಡುಬಡತನದಲ್ಲಿ ಕಷ್ಟಪಟ್ಟು ಅಭ್ಯಾಸ ಮಾಡಿ ಶಾಲೆಗೆ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ.

ಕಳೆದ ಮಾರ್ಚ್/ಏಪ್ರಿಲ್ 2026ರಲ್ಲಿ ನಡೆದ ಎಸ್ಸೆಸ್ಸೆಲ್ಸಿ ಪರೀಕ್ಷೆಗೆ ಸರ್ಕಾರಿ ಪದವಿಪೂರ್ವ ಕಾಲೇಜು ಪ್ರೌಢಶಾಲಾ ವಿಭಾಗದ 164 ವಿದ್ಯಾರ್ಥಿಗಳು ಪರಿಕ್ಷೆಗೆ ಹಾಜರಾಗಿದ್ದು, 160 ವಿಧ್ಯಾರ್ಥಿಗಳು ಉತ್ತೀರ್ಣರಾಗಿರುತ್ತಾರೆ. 14 ವಿಧ್ಯಾರ್ಥಿಗಳು ಉನ್ನತ ಶ್ರೇಣಿಯಲ್ಲಿ, 78 ವಿಧ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿ ಶಾಲೆ ಹಾಗೂ ಗ್ರಾಮಕ್ಕೆ ಕೀರ್ತಿ ತಂದಿರುತ್ತಾರೆ. ಶಾಲೆಗೆ ಡಿಸ್ಟಿಂಕ್ಷನ್‌ನಲ್ಲಿ ತೇರ್ಗಡೆಯಾದ

ಕುಮಾರಿ ಮೀರಾ ಜಾಸ್ಮಿನ್ 95.52 % ಪ್ರಥಮವಾದರೆ, ಕುಮಾರ ಶಾಮಿದ್ 93.92 % ಕುಮಾರಿ ಮೇಘನಾ ಎ 92.48 ಕುಮಾರಿ ದೇವಯಾನಿ 92.64 % ಕುಮಾರ ಶಿವರಾಜ ಎಸ್ 91.68 % ಹಾಗೂ ಕುಮಾರಿ ಶ್ರುತಿ 90.24 % ಅಂಕಗಳನ್ನು ಗಳಿಸಿರುತ್ತಾರೆ. ಶಾಲೆಯ ಒಟ್ಟು ಫಲಿತಾಂಶ 97.56 ಆಗಿರುತ್ತದೆ. ಸದರಿ ಫಲಿತಾಶಕ್ಕೆ ಶಾಲೆಯ ಶಾಲಾಭಿವೃದ್ಧಿ ಮೇಲುಸ್ತುವಾರಿ ಸಮಿತಿಯ ಅಧ್ಯಕ್ಷರು ಸರ್ವ ಸದಸ್ಯರು

ಗ್ರಾಮದ ಗಣ್ಯ ಮಾನ್ಯರು ಶಿಕ್ಷಣ ಪ್ರೇಮಿಗಳು ಹಾಗೂ ಶಲೆಯ ಸಿಬ್ಬಂದಿ ವಿದ್ಯಾರ್ಥಿಗಳಿಗೆ ಅಭಿನಂದನೆ ಸಲ್ಲಿಸಿರುತ್ತಾರೆ.

ವಸತಿ ನಿಲಯದ ಫಲಿತಾಂಶ ಉತ್ತಮ

ಕುಕನೂರ: ಪಟ್ಟಣದ ಸಮಾಜ ಕಲ್ಯಾಣ ಇಲಾಖೆಯ ಮೆಟ್ರಿಕ್ ಪೂರ್ವ ವಸತಿ ನಿಲಯದ ಎಸ್ಸೆಸ್ಸೆಲ್ಸಿ ಫಲಿತಾಂಶ ಉತ್ತಮಮಟ್ಟದಲ್ಲಿ ಪ್ರಕಟವಾಗಿದೆ ಇದರಲ್ಲಿ 3:ವಿದ್ಯಾರ್ಥಿಗಳು ಡಿಸ್ಟಿಂಕ್ಷನ್, 14 ವಿದ್ಯಾರ್ಥಿಗಳು ಪ್ರಥಮ 8 ವಿದ್ಯಾರ್ಥಿಗಳು ದ್ವಿತೀಯ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ.

ಪಟ್ಟಣದ ಸರಕಾರಿ ವಸತಿ ನಿಲಯದಲ್ಲಿ ಪರೀಕ್ಷೆಗೆ ಹಾಜರಾದ 25 ವಿದ್ಯಾರ್ಥಿಗಳ ಪೈಕಿ 25 ವಿದ್ಯಾರ್ಥಿಗಳು ಉತ್ತೀರ್ಣರಾಗಿ ಶೇ. ನೂರಕ್ಕೆ ನೂರು ಫಲಿತಾಂಶವನ್ನು ನೀಡಿದ್ದಾರೆ.

ಒಟ್ಟಾರೆಯಾಗಿ ಎಲ್ಲಾ ವಿದ್ಯಾರ್ಥಿಗಳ ಪೈಕಿ 3 ವಿದ್ಯಾರ್ಥಿಗಳು ಡಿಸ್ಟಿಕ್ಷನ್, ಪ್ರಥಮ ಶ್ರೇಣಿಯಲ್ಲಿ 14 ವಿದ್ಯಾರ್ಥಿಗಳು ದ್ವಿತೀಯ ಶ್ರೇಣಿಯಲ್ಲಿ 8 ವಿದ್ಯಾರ್ಥಿಗಳು ತೇರ್ಗಡೆಗೊಂಡಿದ್ದಾರೆ. ಕೊಪ್ಪಳ ತಾಲೂಕಿನ ಅಬ್ಬಿಗೇರಿ ಗ್ರಾಮದ ಮಲ್ಲಿಕಾರ್ಜುನ್ ಮಿಸಿ ವಿದ್ಯಾರ್ಥಿ 625ಕ್ಕೆ 574 ಅಂಕ ಪಡೆದು 91.84% ಅಂಕ ಪಡೆದು ವಸತಿ ನಿಲಯಕ್ಕೆ ಟಾಪರ್ ಎನಿಸಿಕೊಂಡಿದ್ದಾನೆ. ಉತ್ತಮವಾಗಿ ಉತ್ತೀರ್ಣರಾದ ಎಲ್ಲಾ ವಿದ್ಯಾರ್ಥಿಗಳಿಗೆ ನಿಲಯ ಪಾಲಕ ರಾಮಚಂದ್ರ ಹಣಗಿ ಉತ್ತಮ ಸಾಧನೆಗೆ ಶ್ರಮವಹಿಸಿದ ಎಲ್ಲಾ ವಿದ್ಯಾರ್ಥಿಗಳಿಗೆ ಹರ್ಷ ವ್ಯಕ್ತಪಡಿಸಿದ್ದಾರೆ ಹೀಗೆ ನಿಮ್ಮ ಜೀವನ ಉತ್ತಮವಾಗಿ ಬೆಳೆಸಿಕೊಳ್ಳಿ ಎಂದು ಶುಭ ಹಾರೈಸಿದ್ದಾರೆ.

ಅಪಮಾನ ಪ್ರಕರಣ: ತಪ್ಪಿತಸ್ಥರನ್ನು ಅಮಾನತುಗೊಳಿಸಿ

ಕಲಬುರಗಿ: ಬೆಂಗಳೂರಿನಲ್ಲಿ ಮುಖ್ಯಮಂತ್ರಿಗೆ ಭೇಟಿಯಾಗಲು ತೆರಳಿದ್ದ ಸೇಡಂ ತಾಲೂಕಿನ ಕೊಡ್ಲಾ ಮಠದ ಶ್ರೀಜ್ಞಾನಪ್ರಕಾಶ ಮಹಾಸ್ವಾಮಿಗಳು ಹಾಗೂ ಚಿತ್ರದುರ್ಗ ದಲಿತ ಪೀಠದ ಶ್ರೀಬಸವ ನಾಗಿದೇವ ಛಲವಾದಿ ಸ್ವಾಮಿಗಳಿಗೆ ಅಲ್ಲಿನ ಕರ್ತವ್ಯನಿರತ ಪೊಲೀಸ್ ಅಧಿಕಾರಿಗಳು ಅವಮಾನಿಸಿದ್ದು, 24 ಗಂಟೆಯೊಳಗೆ ಸರ್ಕಾರ ಅವರನ್ನು ಅಮಾನತು ಮಾಡದಿದ್ದರೆ ಸೇಡಂ ಬಂದ್‌ಗೆ ಕರೆ ನೀಡಿ ತೀವ್ರ ಹೋರಾಟ ರೂಪಿಸಲಾಗುವುದು ಎಂದು ಮಾಜಿ ಶಾಸಕ ರಾಜಕುಮಾರ ಪಾಟೀಲ್ ತೆಲ್ಕೂರ ಎಚ್ಚರಿಕೆ ನೀಡಿದರು.

ನಗರದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬುಧವಾರ ಶ್ರೀಗಳು ಮುಖ್ಯಮಂತ್ರಿಗಳ ಭೇಟಿಗೆ ತೆರಳಿದ್ದಾಗ, ಅವರು ದಲಿತ ಸಮುದಾಯದ ಪೀಠಾಧಿಪತಿಗಳೆಂದು ತಿಳಿದಿದ್ದರೂ ಸಹ, ಕರ್ತವ್ಯದಲ್ಲಿದ್ದ ಪೊಲೀಸರು ಉದ್ದೇಶಪೂರ್ವಕವಾಗಿ ತಡೆದು ಸಾರ್ವಜನಿಕವಾಗಿ ಕೀಳಾಗಿ ನಡೆಸಿಕೊಂಡಿದ್ದಾರೆ. ಇದು ಕೇವಲ ಶ್ರೀಗಳಿಗಾದ ಅವಮಾನವಲ್ಲ, ಇಡೀ ದಲಿತ ಸಮುದಾಯ ಮತ್ತು ಧಾರ್ಮಿಕ ಪೀಠಗಳಿಗೆ ಮಾಡಿದ ಘೋರ ಅಪಮಾನವಾಗಿದೆ ಎಂದು ಸರ್ಕಾರದ ವಿರುದ್ಧ ಹರಿಹಾಯ್ದರು.

ಎಸ್ಸಿ–ಎಸ್ಟಿ ದೌರ್ಜನ್ಯ ತಡೆ ಕಾಯ್ದೆ ಅಡಿಯಲ್ಲಿ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ತಕ್ಷಣ ಎಫ್‌ಐಆರ್ ದಾಖಲಿಸಬೇಕು. ಜಾತಿ ಆಧಾರಿತ ತಾರತಮ್ಯ ಎಸಗಿದ ಅಧಿಕಾರಿಗಳನ್ನು ಕೂಡಲೇ ಸೇವೆಯಿಂದ ಅಮಾನತು ಮಾಡಬೇಕು. ಈ ಘಟನೆಯ ಬಗ್ಗೆ ಉನ್ನತ ಮಟ್ಟದ ತನಿಖೆ ನಡೆಸಿ ತಪ್ಪಿತಸ್ಥರಿಗೆ ಕಠಿಣ ಶಿಕ್ಷೆಯಾಗಬೇಕು ಎಂದು ಒತ್ತಾಯಿಸಿದ ಅವರು, 24 ಗಂಟೆಯೊಳಗೆ ತಪ್ಪಿತಸ್ಥ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳದಿದ್ದಲ್ಲಿ ದಲಿತಪರ ಸಂಘಟನೆಗಳು ಮತ್ತು ಭಕ್ತಾದಿಗಳ ವತಿಯಿಂದ 'ಸೇಡಂ ಬಂದ್' ಮಾಡುವ ಮೂಲಕ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದರು.

> **ವಿಧಾನಸೌಧದಿಂದ ಹೊರಗೆ ಬರುವಾಗ ಪೊಲೀಸರು ಈ ಸ್ವಾಮಿಗಳ ಮೇಲೆ ತಮ್ಮ ದರ್ಪ ತೋರಿಸಿದ್ದಾರೆ. ದಲಿತ ಸ್ವಾಮೀಜಿಗಳಿಗೆ ಅಪಮಾನವಾದರೂ ಸಹ ದಲಿತ ಮತ್ತು ಭೀಮ ಆರ್ಮಿ ಸಂಘಟನೆಗಳು ಖಂಡಿಸಿಲ್ಲ, ಪ್ರತಿಭಟನೆ ಮಾಡಿಲ್ಲ.**
>
> **■ ಡಾ.ಅಂಬಾರಾಯ ಅಷ್ಟಗಿ, ರಾಜ್ಯ ಉಪಾಧ್ಯಕ್ಷ, ಬಿಜೆಪಿ ಎಸ್‌ಸಿ ಮೋರ್ಚಾ**

ಧರ್ಮಣ್ಣ ಇಟಗಿ, ಶರಣಪ್ಪ ತೊಟ್ನಳ್ಳಿ, ಓಂಪ್ರಕಾಶ ಪಾಟೀಲ್, ವಿಶಾಲ ದರ್ಗಿ, ಸಂತೋಷ ಹಾನಿಮನಿ ಇತರರಿದ್ದರು.

ಕಿರುಸುದ್ದಿ

ಎಸ್ಸೆಸ್ಸೆಲ್ಸಿ ಪರೀಕ್ಷೆ: ಗಣಿಜಿಲ್ಲೆ ಬಳ್ಳಾರಿ 24ನೇ ಸ್ಥಾನ

ಬಳ್ಳಾರಿ: 2025-26ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷಾ ಫಲಿತಾಂಶ ಪ್ರಕಟಗೊಂಡಿದ್ದು, ಗಣಿಜಿಲ್ಲೆ ಬಳ್ಳಾರಿ ರಾಜ್ಯಕ್ಕೆ 24ನೇ ಸ್ಥಾನ ಪಡೆದಿದೆ. ಕಳೆದ ವರ್ಷ ಜಿಲ್ಲೆ ಶೇ.79.3ರಷ್ಟು ಫಲಿತಾಂಶ ಪಡೆದಿದ್ದು, ಪ್ರಸಕ್ತ ವರ್ಷ ಶೇ.93.35ರಷ್ಟು ಫಲಿತಾಂಶ ಪಡೆಯುವ ಮೂಲಕ ಜಿಗಿತ ಕಂಡಿದೆ. ಜಿಲ್ಲೆಯ ಒಟ್ಟು 18995 ಮಕ್ಕಳು ದಾಖಲಿಸಿಕೊಂಡಿದ್ದರು. ಇದರಲ್ಲಿ ಒಟ್ಟು 17,732 ಮಕ್ಕಳು ಉತ್ತೀರ್ಣರಾಗಿದ್ದಾರೆ. ಮಕ್ಕಳ ಸಾಧನೆಗೆ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕಿ ಉಮಾದೇವಿ ಅವರು ಅಭಿನಂದನೆ ಸಲ್ಲಿಸಿದ್ದಾರೆ.

ಟಿ.ಲಕ್ಷ್ಮೀ ತಾಲೂಕಿಗೆ ಪ್ರಥಮ ಸ್ಥಾನ

ಹಗರಿಬೊಮ್ಮನಹಳ್ಳಿ: ಪಟ್ಟಣದ ಡಾ.ಬಿ.ಆರ್. ಅಂಬೇಡ್ಕರ್ ಆಂಗ್ಲ ಮಾಧ್ಯಮ ಪ್ರೌಢ ಶಾಲೆಯ ವಿದ್ಯಾರ್ಥಿನಿ ಟಿ.ಲಕ್ಷ್ಮೀ 625 ಅಂಕಗಳಿಗೆ 621 ಅಂಕ ಪಡೆಯುವ ಮೂಲಕ ತಾಲೂಕಿಗೆ ಮೊದಲ ಸ್ಥಾನ, ಜಿಲ್ಲೆಗೆ 2ನೇ ಸ್ಥಾನ ಪಡೆದಿದ್ದಾರೆ. ಈ ವಿದ್ಯಾರ್ಥಿನಿ ಸಾಧನೆಗೆ ಶಾಲೆಯ ಮುಖ್ಯಸ್ಥರಾದ ಸತ್ಯನಾರಾಯಣ ವಕೀಲರು, ಆಡಳಿತಾಧಿಕಾರಿ ಎಂ.ಚಿದಾನಂದಪ್ಪ, ಶಾಲೆಯ ಮುಖ್ಯ ಶಿಕ್ಷಕ ಎ.ಕೃಷ್ಣಪ್ಪ ಹಾಗೂ ಶಾಲೆಯ ಶಿಕ್ಷಕ ಶಿಕ್ಷಕಿಯರು ಸಿಬ್ಬಂದಿ ಅಭಿನಂದಿಸಿದ್ದಾರೆ.

ಸಂಧ್ಯಾಬಾಯಿ ಶಾಲೆಗೆ ಟಾಪರ್

ಹೂವಿನಹಡಗಲಿ: ತಾಲೂಕಿನ ಅಡವಿಮಲ್ಲನಕೇರಿ ಗ್ರಾಮದ ಎಂಎಂಜಿ ಸರ್ಕಾರಿ ಪ್ರೌಢಶಾಲೆಯ 2026ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆ ಫಲಿತಾಂಶ ಪ್ರಕಟಣೆಯಲ್ಲಿ ಸಂಧ್ಯಾಬಾಯಿ ಎಂಬ ವಿದ್ಯಾರ್ಥಿನಿ 593 ಅಂಕಗಳನ್ನು ಪಡೆದುಕೊಂಡು ಶೇ.94.88ರಷ್ಟು ಫಲಿತಾಂಶ ಪಡೆದುಕೊಂಡು ಶಾಲೆಗೆ ಪ್ರಥಮ ಸ್ಥಾನವನ್ನು ಪಡೆದುಕೊಂಡಿದ್ದಾರೆ.

ತಂದೆ ಶಿವನಾಯಕ, ತಾಯಿ ಸವಿತಾಬಾಯಿ ಅವರ ಮಗಳಾಗಿ ಜನಿಸಿದ ಇವರು ಶಾಲೆಗೆ ಗ್ರಾಮಕ್ಕೆ ಕೀರ್ತಿ ಪತಾಕೆ ಹಾರಿಸಿದ್ದಾರೆ. 2026ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷಾ ಫಲಿತಾಂಶದಲ್ಲಿ ಶಾಲೆಗೆ ದ್ವಿತೀಯ ಸ್ಥಾನ ಪ್ರೀತಮ್ ಕೆ. 93.76% (586) ತೃತಿಯ ಸ್ಥಾನ ದ್ರಾಕ್ಷಾಯಿಣಿ ಎಚ್. 91.52%(572) ನಾಲ್ಕನೇ ಸ್ಥಾನ ತೌಸಿಫ್ 90.72%(567) ಐದನೇ ಸ್ಥಾನ ರಾಹುಲ್ ಎಚ್.90.08%(563) ಆರನೇ ಸ್ಥಾನ ದುರ್ಗೇಶ್ 89.76%(561) ಏಳನೇ ಸ್ಥಾನ ಊಳಿಗದ ಸಂಜಯ್ 88.32%(552) ಅತ್ಯುತ್ತಮ ಫಲಿತಾಂಶವನ್ನು ಪಡೆದುಕೊಂಡು ಶಾಲೆಗೆ, ವಸತಿ ನಿಲಯಕ್ಕೆ, ಗ್ರಾಮಕ್ಕೆ ಹಾಗೂ ತಂದೆ ತಾಯಿಗಳಿಗೆ ಕೀರ್ತಿ ತರುವಲ್ಲಿ ಜ್ಞಾನ ಪ್ರತಿಭೆಗಳಾಗಿದ್ದಾರೆ. ಎಂಎಂಜಿ ಸರ್ಕಾರಿ ಪ್ರೌಢಶಾಲೆಯ ಒಟ್ಟು ಫಲಿತಾಂಶ 79.17 ಆಗಿರುತ್ತದೆ. ಕ್ಷೇತ್ರ ಶಿಕ್ಷಣಾಧಿಕಾರಿ ಮಹೇಶ್ ಪೂಜಾರ, ಕ್ರಿಯಾಶೀಲ ಪತ್ರಕರ್ತರಾದ ವೀರೇಶ್ ಕಲ್ಮಠ, ಶಿಕ್ಷಕರು, ನಿಲಯ ಪಾಲಕರು, ಗ್ರಾಮಸ್ಥರು, ಹರ್ಷವ್ಯಕ್ತಪಡಿಸಿದ್ದಾರೆ.

ಕುಡಿಯುವ ನೀರಿನ ಸಮಸ್ಯೆ ಆಗದಂತೆ ಕ್ರಮ ಕೈಗೊಳ್ಳಿ

ವಿಜಯನಗರ: ಬೇಸಿಗೆ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿ ಕುಡಿಯುವ ನೀರಿಗೆ ತೊಂದರೆಯಾಗದಂತೆ ಎಲ್ಲ ಅಗತ್ಯ ಕ್ರಮ ಕೈಗೊಳ್ಳುವಂತೆ ವಿಜಯನಗರ ಜಿಲ್ಲಾ ಉಸ್ತುವಾರಿ ಸಚಿವರು ಜಮೀರ್ ಅಹಮದ್ ಖಾನ್ ಸೂಚನೆ ನೀಡಿದ್ದಾರೆ. ಜಿಲ್ಲಾಧಿಕಾರಿ ಕವಿತಾ ಮಣ್ಣಿಕೇರಿ ಹಾಗೂ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮೊಹಮ್ಮದ್ ಅಕ್ರಂ ಅವರೊಂದಿಗೆ ದೂರವಾಣಿ ಮೂಲಕ ಮಾತನಾಡಿದ ಸಚಿವರು, ಕುಡಿಯುವ ನೀರು ಪೂರೈಕೆಗೆ ಕೈಗೊಂಡಿರುವ ಕ್ರಮಗಳ ಬಗ್ಗೆ ಮಾಹಿತಿ ಪಡೆದರು. ಕುಡಿಯುವ ನೀರು ಪೂರೈಕೆ ಸಂಬಂಧ ನಿರಂತರ ಸಭೆ ನಡೆಸಿ ಸ್ಥಳೀಯ ಶಾಸಕರ ಜತೆ ಸಮನ್ವಯ ಸಾಧಿಸಿ ಜಿಲ್ಲೆಯ ಯಾವ ತಾಲೂಕಿನಲ್ಲಾದರೂ ಸಮಸ್ಯೆ ಇದ್ದರೆ ತಕ್ಷಣ ಪರ್ಯಾಯ ಕ್ರಮ ಕೈಗೊಳ್ಳಿ ಎಂದು ನಿರ್ದೇಶನ ನೀಡಿದರು. ಅಗತ್ಯ ಇರುವ ಕಡೆ ಮೊದಲನೇ ಆದ್ಯತೆಯಾಗಿ ಖಾಸಗಿ ಬೋರ್ ವೆಲ್ ಅನ್ನು ಬಾಡಿಗೆ ಪಡೆಯುವುದು, ಎರಡನೇ ಆದ್ಯತೆಯಾಗಿ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡುವುದು, ಅತೀ ಅವಶ್ಯವಿದ್ದಲ್ಲಿ ಬೋರ್ ವೆಲ್ ಕೊರೆಯುಸುವುದರ ಬಗ್ಗೆಯೂ ಗಮನಹರಿಸಿ ಎಂದು ತಿಳಿಸಿದರು. ಡಿಸಿ ಹಾಗೂ ಜಿಪಂ ಸಿಇಒ ಈಗಾಗಲೇ ಕೈಗೊಂಡಿರುವ ಕ್ರಮಗಳ ಬಗ್ಗೆ ಸಚಿವರಿಗೆ ಮಾಹಿತಿ ನೀಡಿದರು. ಪ್ರಸ್ತುತ ಬೇಸಿಗೆಯಲ್ಲಿ 153 ಗ್ರಾಮಗಳಲ್ಲಿ ನೀರಿನ ಸಮಸ್ಯೆ ಉದ್ಭವವಾಗಬಹುದೆಂದು ಗುರುತಿಸಲಾಗಿದ್ದು ಈಗಾಗಲೇ ಸದರಿ ಗ್ರಾಮಗಳಲ್ಲಿ ಖಾಸಗೀ ಕೊಳವೆ ಬಾವಿಗಳನ್ನು ಗುರುತಿಸಲಾಗಿದೆ. ಪ್ರಸ್ತುತ 27 ಗ್ರಾಮಗಳಲ್ಲಿ ನೀರಿನ ಸಮಸ್ಯೆ ಉದ್ಭವಿಸಿದ್ದು ಸದರಿ ಗ್ರಾಮಗಳಿಗೆ 34 ಖಾಸಗಿ ಕೊಳವೆಬಾವಿಗಳನ್ನು ಬಾಡಿಗೆ ಪಡೆದು ನೀರು ಸರಬರಾಜು ಮಾಡಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಕೊಟ್ಟೂರು: ಪಂಚಪೀಠಗಳಲ್ಲಿ ಒಂದಾದ ಕೊಟ್ಟೂರು ತಾಲೂಕಿನ ಉಜ್ಜೈನಿ ಸದ್ಧರ್ಮ ಪೀಠದಲ್ಲಿ ಸದ್ಧರ್ಮ ಪೀಠದ ಜಗದ್ಗುರು ಜಗದ್ಗುರು ಸಿದ್ದಲಿಂಗ ಶಿವಾಚಾರ್ಯ ರಾಜ ದೇಶಿ ಕೇಂದ್ರ ಭಗವತ್ಪಾದ ಮಹಾಸ್ವಾಮಿಗಳ ದಿವ್ಯ ಸಾನಿಧ್ಯದಲ್ಲಿ ಹಾಗೂ ಅನೇಕ ಶಿವಾಚಾರ್ಯರ ನೇತೃತ್ವದಲ್ಲಿ ನೂರಾರು ಜಂಗಮ ವಟು ಗಳಿಗೆ ಶಿವ ದೀಕ್ಷಾ ಕಾರ್ಯಕ್ರಮವು ಯಶಸ್ವಿಯಾಗಿ ನೆರವೇರಿತು.

ಭೂಮಿಯ ರಕ್ಷಣೆ-ನಮ್ಮೆಲ್ಲರ ಹೊಣೆ

ಸಿರುಗುಪ್ಪ: ಜೀವ ಸಂಕುಲ ಕ್ಷೇಮವಾಗಿ ಇರಬೇಕಾದರೆ ಭೂಮಿ ಆರೋಗ್ಯದಿಂದ ಇರಬೇಕು ಎಂದು ಸಿವಿಲ್ ನ್ಯಾಯಾಧೀಶ ಅಶೋಕ್ ಆರ್.ಎಚ್. ಹೇಳಿದರು.

ತಾಲೂಕಿನ ಅರಳಿಗನೂರು ಗ್ರಾಮದಲ್ಲಿ ಬುಧವಾರ ತಾಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ, ತಾಲೂಕು ಪಂಚಾಯಿತಿ, ಪೊಲೀಸ್ ಇಲಾಖೆ, ಕೃಷಿ ಇಲಾಖೆ ಮತ್ತು ತೋಟಗಾರಿಕೆ ಇಲಾಖೆ ಆಶ್ರಯದಲ್ಲಿ ಭೂಮಿ ದಿನಾಚರಣೆ ನಿಮಿತ್ತ ಹಮ್ಮಿಕೊಂಡಿದ್ದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಭೂಮಿ ಎಂದರೆ ಕೇವಲ ಮಣ್ಣಲ್ಲ, ಮರ, ಗಿಡ, ಬಳ್ಳಿ, ಖನಿಜ, ನೀರು, ಗಾಳಿ ಎಲ್ಲವೂ ಒಳಗೊಳ್ಳುತ್ತವೆ. ಭೂಮಿಯ ಆರೋಗ್ಯ ಹಾಳಾದರೆ ಪ್ರಾಣೀ , ಪಕ್ಷಿ ಮತ್ತು ಸಸ್ಯ ಸಂಪತ್ತು ಹಾಳಾಗುತ್ತದೆ. ಕೃಷಿ ಚಟುವಟಿಕೆಯಲ್ಲಿ ಮಿತಿ ಮೀರಿದ ರಾಸಾಯನಿಕ ಗೊಬ್ಬರಗಳ ಬಳಕೆ ಭೂಮಿಯ ಫಲವತ್ತತೆಯನ್ನು ನಾಶ ಮಾಡುತ್ತದೆ. ಭೂಮಿಯನ್ನು ಕಾಪಾಡುವುದು, ನೈಸರ್ಗಿಕ ಸಂಪನ್ಮೂಲಗಳನ್ನು ಸಂರಕ್ಷಿಸುವುದು ಮತ್ತು ಮುಂದಿನ ಪೀಳಿಗೆಗೆ ಹಸಿರು ಭೂಮಿಯನ್ನು ನೀಡುವುದು. ಭೂಮಿಯ ರಕ್ಷಣೆ ನಮ್ಮೆಲ್ಲರ ಜವಾಬ್ದಾರಿಯಾಗಿದ್ದು, ನಮ್ಮ ಸಣ್ಣ ಪ್ರಯತ್ನಗಳು ಭೂಮಿಯ ಭವಿಷ್ಯವನ್ನು ಬದಲಾಯಿಸಬಲ್ಲವು ಎಂದರು.

ಪಿಎಸ್ಐ ಸದ್ದಾಂ ಹುಸೇನ್, ವಕೀಲರಾದ ಮಲ್ಲಿಗೌಡ, ಎನ್.ಅಬ್ದುಲ್ ಸಾಹೇಬ್, ಮಹಾದೇವಪ್ಪ, ವೆಂಕಟೇಶ ನಾಯ್ಕ್, ಅಬ್ದುಲ್ ಖಾದರ್ ಜಿಲಾನ್, ಖಾದರ್ ಭಾಷಾ ಸೇರಿದಂತೆ ಇತರರಿದ್ದರು.

ಸಿರುಗುಪ್ಪ: ತಾಲೂಕಿನ ಅರಳಿಗನೂರು ಗ್ರಾಮದಲ್ಲಿ ತಾಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ, ತಾಪಂ, ಪೊಲೀಸ್ ಇಲಾಖೆ, ಕೃಷಿ ಇಲಾಖೆ ಮತ್ತು ತೋಟಗಾರಿಕೆ ಇಲಾಖೆ ಆಶ್ರಯದಲ್ಲಿ ಭೂಮಿ ದಿನಾಚರಣೆ ಆಚರಿಸಲಾಯಿತು. ತಾಲೂಕು ವಕೀಲರ ಸಂಘದ ಅಧ್ಯಕ್ಷ ಉಪ್ಪಾರ ವೆಂಕೋಬ, ಸಹಾಯಕ ಕೃಷಿ ನಿರ್ದೇಶಕ ಮಂಜುನಾಥರೆಡ್ಡಿ, ಸಹಾಯಕ ಸರ್ಕಾರಿ ಅಭಿಯೋಜಕ ಶಿವರಾಜ ಇದ್ದರು.

ಕಲ್ಯಾಣ ಕರ್ನಾಟಕಕ್ಕೆ ವಿಜಯನಗರ ನಂ.1

ವೀರೇಂದ್ರ, ನಾಗಲದಿನ್ನಿ

ದಿಗಂತ ವಿಶೇಷ

ವಿಜಯನಗರ: 2025-26 ನೇ ಸಾಲಿನ ಎಸ್.ಎಸ್.ಎಲ್ ಸಿ ಫಲಿತಾಂಶ ಪ್ರಕಟಗೊಂಡಿದ್ದು, ಶೇಕಡ 96.39 ಪ್ರತಿಶತದೊಂದಿಗೆ ಜಿಲ್ಲೆಯ ರಾಜ್ಯದಲ್ಲಿ 10 ನೇ ಸ್ಥಾನ ಹಾಗೂ ಕಲ್ಯಾಣ ಕರ್ನಾಟಕ (ಕಲಬುರಗಿ) ವಿಭಾಗದಲ್ಲಿ ಪ್ರಥಮ ಸ್ಥಾನ ಪಡೆದಿದೆ. ಅಲ್ಲದೇ ಕಳೆದ ವರ್ಷ 27 ರಿಂದ 18ನೇ ಸ್ಥಾನಕ್ಕೆ ಜಿಗಿದಿದ್ದರೆ, ಈ ಬಾರಿ 8 ಜಿಲ್ಲೆಗಳನ್ನು ಹಿಂದಿಕ್ಕಿ 10ನೇ ಸ್ಥಾನ ಪಡೆದಿರುವುದು ಜಿಲ್ಲಾಡಳಿತ ಮತ್ತು ಶಿಕ್ಷಕ ವಲಯದಲ್ಲಿ ಹರ್ಷ ಮೂಡಿಸಿದೆ.

2025-26ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಗೆ ಒಟ್ಟು 18,817 ವಿದ್ಯಾರ್ಥಿಗಳು ಪರೀಕ್ಷೆ ಎದುರಿಸಿದ್ದು, 8466 ಬಾಲಕ ಹಾಗೂ 9672 ಬಾಲಕಿಯರು ಉತ್ತೀರ್ಣರಾಗಿದ್ದಾರೆ. ತಾಲೂಕುವಾರು ಫಲಿತಾಂಶದಲ್ಲಿ ಹಡಗಲಿ ಶೇ.98.29ರಷ್ಟು ಫಲಿತಾಂಶ ಪಡೆದು ಮೇಲುಗೈ ಸಾಧಿಸಿದೆ. ಎಚ್.ಬಿ.ಹಳ್ಳಿ ಶೇ.97.97, ಹರಪನಹಳ್ಳಿ ಶೇ.96.33, ಹೊಸಪೇಟೆ ಶೇ.95.42, ಕೂಡ್ಲಿಗಿ ಶೇ.94.93 ರಷ್ಟು ಫಲಿತಾಂಶ ಪಡೆದಿವೆ. ಕಳೆದ ವರ್ಷಕ್ಕೆ ಹೋಲಿಸಿದರೆ, ಎಲ್ಲ ತಾಲೂಕುಗಳಲ್ಲಿ ಶೇ.20 ರಷ್ಟು ಫಲಿತಾಂಶ ಹೆಚ್ಚಿರುವುದು ಜಿಲ್ಲೆಯನ್ನು ಟಾಪ್-10 ಸ್ಥಾನಕ್ಕೇರಲು ಕಾರಣವಾಗಿದೆ.

ಪ್ರಯೋಗಾತ್ಮಕ ಕಲಿಕೆಯಿಂದ ಪ್ರಗತಿ: ಜಿಲ್ಲಾ ಆಡಳಿತದ ಮಾರ್ಗದರ್ಶನದಲ್ಲಿ ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಶಾಲೆಗಳಲ್ಲೂ ಫಲಿತಾಂಶ ಸುಧಾರಣೆಗೆ ಹೆಚ್ಚಿನ ಒತ್ತು ನೀಡಲಾಗಿತ್ತು. ವಿಷಯವಾರು ''ವಿಶೇಷ ತರಗತಿಗಳು'',ಕಲಿಕೆಯಿಂದ ಹಿಂದುಳಿದ ವಿದ್ಯಾರ್ಥಿಗಳಿಗೆ ಹೆಚ್ಚಿನ ಒತ್ತು ನೀಡಿರುವುದು, ಶಿಕ್ಷಣ ಇಲಾಖೆಯಿಂದ ವಿಷಯವಾರು ಶಿಕ್ಷಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ಕಾರ್ಯಾಗಾರ, ಮಕ್ಕಳಿಗೆ ವಿಜ್ಞಾನ ಚಿತ್ರಗಳನ್ನು ಬಿಡಿಸುವುದು, ಎಸ್ಎಸ್ಎಲ್‌ಸಿ ವಿದ್ಯಾರ್ಥಿಗಳನ್ನು ಶಿಕ್ಷಕರುಗಳಿಗೆ ದತ್ತು ನೀಡುವುದು, ಹಾಗೂ ವಿಷಯವಾರು ಕಠಿಣ ವಿದ್ಯಾರ್ಥಿಗಳಿಗೆ ಪರೀಕ್ಷೆ ಹೇಗೆ ಎದುರಿಸಬೇಕು ಎಂಬುದರ ಕುರಿತು ನಡೆಸಿದ ಕಾರ್ಯಾಗಾರ, ಹಾಗೂ ಮುಂತಾದ ಪ್ರೋತ್ಸಾಹದಾಯಕ ಕಾರ್ಯಕ್ರಮಗಳ ಮೂಲಕ ವಿದ್ಯಾರ್ಥಿಗಳ ಕಲಿಕೆಯನ್ನು ಸರಳಗೊಳಿಸಿ, ಉತ್ತಮ ಫಲಿತಾಂಶ ಪಡೆಯುವಲ್ಲಿ ಸಹಕಾರಿಯಾಯಿತು ಎಂಬುದು ಇಲಾಖೆ ಅಧಿಕಾರಿಗಳ ಅಭಿಪ್ರಾಯ.

ಮತ್ತೊಮ್ಮೆ ಸಾಧನೆಯ ಗರಿ: ರಾಜ್ಯದ 31ನೇ ಜಿಲ್ಲೆಯಾಗಿ ವಿಜಯನಗರ ಅಸ್ತಿತ್ವಕ್ಕೆ ಬಂದ ಬಳಿಕ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಸತತ ನಾಲ್ಕು ವರ್ಷಗಳಿಂದ ಮೇಲುಗೈ ಸಾಧಿಸಿದೆ. 2023-24 ಸಾಲಿನಲ್ಲಿ 27, 2024-25ನೇ ಸ್ಥಾನದಲ್ಲಿ 18ನೇ ಸ್ಥಾನದಲ್ಲಿದ್ದ ವಿಜಯನಗರ ಜಿಲ್ಲೆ ಈ ವರ್ಷ ಹತ್ತನೇ ಸ್ಥಾನವನ್ನು ಅಲಂಕರಿಸಿಕೊಂಡಿದೆ.

ವಿದ್ಯಾರ್ಥಿನಿಯರದ್ದೇ ಮೇಲುಗೈ: ಎಸ್ಎಸ್ ಎಲ್‌ಸಿ ಫಲಿತಾಂಶದಲ್ಲಿ ಜಿಲ್ಲೆಯಲ್ಲಿ ಈ ಬಾರಿಯೂ ವಿದ್ಯಾರ್ಥಿನಿಯರೇ ಮೇಲುಗೈ ಸಾಧಿಸಿದ್ದಾರೆ. ಜಿಲ್ಲೆಯ ಟಾಪ್ -10 ರಲ್ಲಿ 9 ನೇ ಸ್ಥಾನದಲ್ಲಿ ಓರ್ವ ಬಾಲಕ ಹೊರತಾಗಿ ಇನ್ನುಳಿದ ಎಲ್ಲ ಸ್ಥಾನಗಳನ್ನು ಬಾಲಕಿಯರು ಬಾಚಿಕೊಂಡಿದ್ದಾರೆ. ಒಟ್ಟು 625 ಅಂಕಗಳಿಗೆ ಹರಪನಹಳ್ಳಿಯ ಕೆಪಿಎ ಪ್ರೌಢ ಶಾಲೆಯ ಪ್ರಾಂಜಲ ಬಿ.(623), ಎಚ್.ಬಿ.ಹಳ್ಳಿಯ ಡಾ.ಅಂಬೇಡ್ಕರ್ ಶಾಲೆ ಟಿ.ಲಕ್ಷ್ಮೀ, ಎಚ್.ಬಿ.ಹಳ್ಳಿ ತಾಲೂಕಿನ ವರಲಹಳ್ಳಿಯ ಕೆ.ಆರ್‌ಸಿಆರ್‌ಎಸ್ ಶಾಲೆಯ ಸಹನಾ ಜಿ., ಹರಪನಹಳ್ಳಿಯ ಕೆಪಿಎ ಪ್ರೌಢ ಶಾಲೆಯ ಸುರಭಿ ವಿ.ಎಚ್ ಸಮಾನವಾಗಿ 621 ಅಂಕ ಪಡೆದು ಜಿಲ್ಲೆಗೆ ದ್ವಿತೀಯರಾಗಿದ್ದರೆ, ಎಚ್.ಬಿ.ಹಳ್ಳಿಯ ಪ್ರಸಿದ್ಧಿ ಪ್ರೌಢ ಶಾಲೆಯ ತನುಶ್ರೀ ಪಾಟೀಲ, ಅನಂತಹಳ್ಳಿ ಆದರ್ಶ ವಿದ್ಯಾಲಯದ ಜಯಶ್ರೀ ಎನ್.ಎಂ., ಹರಪನಹಳ್ಳಿ ವಿವಿ ಸಂಘದ ವಿದ್ಯಾರ್ಥಿನಿ ಅನುಪಮಾ ಬಿ.ಕೆ., ಇಟಗಿ ಕೆಪಿಎಸ್ ಎಸ್‌ಸಿ ಶಾಲೆಯ ಪೂಜಾಶ್ರೀ, ಕೊಟ್ಟೂರು ವಿಸ್‌ಡಮ್ ಶಾಲೆಯ ಪ್ರಜ್ವಲ್ ಗುಪ್ತಾ, ಬನ್ನಿಗೋಳದ ಸರ್ಕಾರಿ ಪ್ರೌಢ ಶಾಲೆಯ ಅಮೃತಾ ತಲಾ 620 ಅಂಕ ಪಡೆದು ಜಿಲ್ಲೆಗೆ ಮೂರನೇ ರ್‍ಯಾಂಕ್ ಪಡೆದಿದ್ದಾರೆ.

ಸಭಾ ಪರಿನಾ ಟಾಪರ್ ತಾಯಿ ಅಗಲಿಕೆಯಲ್ಲೂ ಪರೀಕ್ಷೆ ಬರೆದಿದ್ದ ಬಾಲೆಗೆ ಶೇ.95 ತಾಯಿ ಸಾವಿನ ನೋವಿನಲ್ಲಿ ಪರೀಕ್ಷೆ ಎದುರಿಸಿದ್ದ ಹೊಸಪೇಟೆ ಮಹಾವೀರ ಶಾಲೆ ವಿದ್ಯಾರ್ಥಿನಿ ಸಭಾ ಪರಿನಾ, ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ.95ರಷ್ಟು ಅಂಕಗಳನ್ನು ಪಡೆಯುವ ಮೂಲಕ ಟಾಪರ್ ಆಗಿ ಹೊರ ಹೊಮ್ಮಿದ್ದಾರೆ. ಪರೀಕ್ಷೆ ಸಮಯದಲ್ಲಿ ತಾಯಿಯನ್ನು ಕಳೆದುಕೊಂಡಿದ್ದ ವಿದ್ಯಾರ್ಥಿನಿ ಸಭಾ ಫರೀನಾ, ತಾಯಿ ಅಗಲಿಕೆ ನೋವಿನಲ್ಲಿಯೂ ಎಸ್ಸೆಸ್ಸೆಲ್ಸಿ ಪರೀಕ್ಷೆ ಬರೆದು, ಶೇ.95ರಷ್ಟು ಅಂಕಗಳಿದ್ದಾರೆ.

- ಎಸ್ಸೆಸ್ಸೆಲ್ಸಿ ಮತ್ತೆ 10ನೇ ಸ್ಥಾನಕ್ಕೆ ಜಿಗಿತ
- ಎಲ್ಲ ತಾಲೂಕಿನ ಫಲಿತಾಂಶದಲ್ಲಿ ಭಾರೀ ಹೆಚ್ಚಳ

> **ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ವಿಜಯನಗರ ಜಿಲ್ಲೆ 10 ಸ್ಥಾನಕ್ಕೆ ಬಂದಿರುವುದು ಉತ್ತಮ ಬೆಳವಣಿಗೆ. ಸರ್ಕಾರಿ ಶಾಲೆಗಲ್ಲಿ ಗುಣಮಟ್ಟದ ಶಿಕ್ಷಣ ನಮ್ಮ ಉದ್ದೇಶ. ಅಧಿಕಾರಿಗಳಿಗೂ ಇದೇ ರೀತಿಯ ಸೂಚನೆ ನೀಡಲಾಗಿತ್ತು. ಜಿಲ್ಲಾಡಳಿತದ ಆಶಯವನ್ನು ಈಡೇರಿಸಿರುವ ಅಧಿಕಾರಿಗಳು, ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಅವರ ಪೋಷಕರಿಗೂ ಅಭಿನಂಧನೆಗಳು. ಮುಂದಿನ ವರ್ಷ ಇನ್ನೂ ಉತ್ತಮ ಫಲಿತಾಂಶ ಬರಲು ಪ್ರಯತ್ನ ಮಾಡಲು ಶಿಕ್ಷಣ ಇಲಾಖೆ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗುವುದು.**
>
> ■ ಬಿ.ಜೆಡ್.ಜಮೀರ್ ಅಹಮದ್ ಖಾನ್, ಸಚಿವ

ರಸಗೊಬ್ಬರ ಖರೀದಿಗೆ ಎಫ್ಐಡಿ ಕಡ್ಡಾಯ

ಕುರುಗೋಡು: ಪ್ರಸಕ್ತದಲ್ಲಿನ ಮುಂಗಾರು ವೇಳೆಗೆ ಯೂರಿಯಾ, ರಸಗೊಬ್ಬರಗಳ ರೈತರಿಗೆ ವಿತರಿಸಲು ಎಫ್ಐಡಿ ಕಡ್ಡಾಯ ಹಾಗೂ ಪಿಓಎಸ್ ಮೂಲಕವೇ ವಿತರಿಸಬೇಕು ಎಂದು ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಗರ್ಜಪ್ಪ ಪರಿಕರ ಮಾರಾಟಗಾರರಿಗೆ ಸೂಚಿಸಿದರು.

ಅವರು ಕುರುಗೋಡುಪಟ್ಟಣದ ರೈತ ಸಂಪರ್ಕ ಕೇಂದ್ರದಲ್ಲಿ ಕೃಷಿ ಇಲಾಖೆಯಿಂದ 2026-27ನೇ ಸಾಲಿನ ರಸಗೊಬ್ಬರ ಪೂರೈಕೆ ಹಾಗೂ ಸಮರ್ಪಕ ನಿರ್ವಹಣೆ ಕುರಿತು ಬುಧವಾರ ಹಮ್ಮಿಕೊಂಡಿದ್ದ ರೈತ ಸಂಪರ್ಕ ಕೇಂದ್ರದಲ್ಲಿ ಕೃಷಿ ಇಲಾಖೆಯಿಂದ ರಸಗೊಬ್ಬರ ಪೂರೈಕೆ ಹಾಗೂ ಸಮರ್ಪಕ ನಿರ್ವಹಣೆ ಕುರಿತು ತಾಲೂಕು ಮಟ್ಟದ ಕೃಷಿ ಪರಿಕರ ಮಾರಾಟಗಾರರ ಸಭೆ ಜರುಗಿತು

ತಾಲೂಕು ಮಟ್ಟದ ಕೃಷಿ ಪರಿಕರ ಮಾರಾಟಗಾರರ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ರಸಗೊಬ್ಬರ ದಸ್ತಾನು ದರ ಪಟ್ಟಿಯನ್ನು ರೈತರಿಗೆ ಕಾಣುವಂತೆ ಸೂಚನಾ ಫಲಕಗಳಲ್ಲಿ ಪ್ರದರ್ಶಿಸಬೇಕು. ಮಾರಾಟಗಾರರು ಕೃತಕ ಅಭಾವ ಸೃಷ್ಟಿಸಿ ಹೆಚ್ಚಿನ ದರಕ್ಕೆ ಮಾರಾಟ ಮಾಡಿದರೆ, ರಸಗೊಬ್ಬರ ಕಾಯಿದೆ ಅನ್ವಯ ಸೂಕ್ತ ಕಾನೂನು ಕ್ರಮ ಜರುಗಿಸಲಾಗುವುದು ಎಂದರು.

ಕೃಷಿ ಅಧಿಕಾರಿ ದೇವರಾಜ ಮಾತನಾಡಿ, ಮಣ್ಣು ಪರೀಕ್ಷೆಯ ಆಧಾರದ ಮೇಲೆ ರಸಗೊಬ್ಬರ ವಿತರಿಸಿ, ರಾಸಾಯನಿಕ ಗೊಬ್ಬರ ಕಡಿಮೆ ಮಾಡಿಸಿ, ಹೆಚ್ಚಿನ ಮಟ್ಟದಲ್ಲಿ ಸಾವಯವ ಕೃಷಿ ಅಳವಡಿಸಿ, ಭೂಮಿಯ ಫಲವತ್ತತೆ ಕಾಪಾಡುವಂತೆ ರೈತರಿಗೆ ಸಲಹೆ ನೀಡಲು ಪರಿಕರ ಮಾರಾಟಗಾರರು ಮುಂದಾಗಬೇಕು ಎಂದು ತಿಳಿಸಿದರು.

ನಂತರ ಕೋಳೂರು ಕೃಷಿ ಅಧಿಕಾರಿ ಜೆ.ಅರುಣಾ ಮಾತನಾಡಿ, ಪರಿಕರ ಮಾರಾಟಗಾರರು, ರೈತ ಮತ್ತು ಕೃಷಿ ಇಲಾಖೆಯ ನಡುವೆ ಕೊಂಡಿಯಂತೆ ಕಾರ್ಯ ನಿರ್ವಹಿಸಬೇಕು. ಸಮರ್ಪಕ ಹಾಗೂ ಸಮತೋಲಿನ ಗೊಬ್ಬರಗಳ ಬಳಕೆಯ ಬಗ್ಗೆ ರೈತರಿಗೆ ಅರಿವು ಮೂಡಿಸುವಲ್ಲಿ ಕೈ ಜೋಡಿಸಿ ರೈತರ ಒಳಿತಿಗಾಗಿ ಶ್ರಮಿಸೋಣ ಕರೆ ನೀಡಿದರು.

ಕೃಷಿ ಪರಿಕರ ಮಾರಾಟಗಾರರ ಸಂಘದ ಅಧ್ಯಕ್ಷ ಶೇಖರಪ್ಪ, ಕೃಷಿ ಅಧಿಕಾರಿ ಸೋಮಶೇಖರ, ಬಸವರಾಜ, ಸಿಬ್ಬಂದಿ ರೇಣುಕಾರಾಧ್ಯ, ಹನುಮಂತರೆಡ್ಡಿ, ಮಲ್ಲಪ್ಪ ಹಾಗೂ ಕುರುಗೋಡು ಹಾಗೂ ಕೋಳೂರು ಹೋಬಳಿಯ ಕೃಷಿ ಪರಿಕರ ಮಾರಾಟಗಾರರು ಇದ್ದರು.

ಹೆರಕಲ್ ಸರ್ಕಾರಿ ಪ್ರೌಢ ಶಾಲೆಗೆ ಶೇ.100ರಷ್ಟು ಫಲಿತಾಂಶ

ಸಿರುಗುಪ್ಪ: 2025-26ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಇಲ್ಲಿನ ಸರ್ಕಾರಿ ಪ್ರೌಢಶಾಲೆ (ಆರ್ ಎಂ ಎಸ್ ಎ)ಹೆರಕಲ್ ವಿದ್ಯಾರ್ಥಿಗಳು ಸಾಧನೆ ಮಾಡಿದ್ದು, ಶೇ.100ರಷ್ಟು ಫಲಿತಾಂಶ ಬಂದಿದೆ. ಶಾಲೆಯ ವಿದ್ಯಾರ್ಥಿಗಳಾದ ಎಂ.ರಂಜಿತ ಶೇ.95.64, ರೇಣುಕಮ್ಮ ಶೇ.94.72, ಕೆ.ಅಂಬಿಕಾ ಶೇ.94.44, ಐಶ್ವರ್ಯ ಶೇ.93.44 ಪಡೆದು ಅತ್ಯುತ್ತಮ ಸಾಧನೆ ಮಾಡುವ ಮೂಲಕ ಗಮನಸೆಳೆದಿದ್ದಾರೆ. ಸರ್ಕಾರಿ ಶಾಲೆಯ ಮಕ್ಕಳು ಮಾಡಿದ ಈ ಉತ್ತಮ ಸಾಧನೆಯನ್ನು ಪಾಲಕರು, ಶಿಕ್ಷಕರ ವೃಂದ, ಸಿಬ್ಬಂದಿ ಮಕ್ಕಳನ್ನು ಅಭಿನಂದಿಸಿದ್ದಾರೆ. ಶಾಲೆಯಲ್ಲಿ ಒಟ್ಟು 45 ವಿದ್ಯಾರ್ಥಿಗಳು ನೋಂದಣಿ ಮಾಡಿಕೊಂಡಿದ್ದು ಅದರಲ್ಲಿ 45 ವಿದ್ಯಾರ್ಥಿಗಳು ಉತ್ತೀರ್ಣರಾಗುವ ಮೂಲಕ ಶಾಲೆಯ ಕೀರ್ತಿ ಹೆಚ್ಚಿಸಿದ್ದಾರೆ. ಶಾಲೆಯ ಈ ವಿದ್ಯಾರ್ಥಿಗಳ ಸಾಧನೆಗೆ ಶಾಲೆ ಮುಖ್ಯಗುರುಗಳು ಹಾಗೂ ಎಲ್ಲ ಶಿಕ್ಷಕರು, ಸಿಬ್ಬಂದಿ ಹಾಗೂ ಎಸ್‌ಡಿಎಂಸಿ ಅಧ್ಯಕ್ಷರು, ಸರ್ವಸದಸ್ಯರು ಅಭಿನಂದಿಸಿದ್ದಾರೆ.

ವಿಜಯ ಮೇರಿ ಆಂಗ್ಲ ಮಾಧ್ಯಮ ಶಾಲೆಗೆ ಶೇ.98ರಷ್ಟು ಫಲಿತಾಂಶ

ಸಿರುಗುಪ್ಪ: 2025-26ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಇಲ್ಲಿನ ಪ್ರತಿಷ್ಠಿತ ವಿಜಯ ಮೇರಿ ಆಂಗ್ಲ ಮಾಧ್ಯಮ ಶಾಲೆ ಮಕ್ಕಳು ಅತ್ಯುತ್ತಮ ಸಾಧನೆ ಮಾಡಿದ್ದು, ಶೇ.98ರಷ್ಟು ಫಲಿತಾಂಶ ಬಂದಿದೆ. ಶಾಲೆಯ ಇಬ್ಬರು ವಿದ್ಯಾರ್ಥಿಗಳು 600ಕ್ಕೂ ಹೆಚ್ಚು ಅಂಕಗಳನ್ನು ಪಡೆಯುವ ಮೂಲಕ ಶಾಲೆಯ, ಕಲಿಸಿದ ಗುರುಗಳ, ಪಾಲಕರ ಕೀರ್ತಿ ಹೆಚ್ಚಿಸಿದ್ದಾರೆ. ವಿದ್ಯಾರ್ಥಿಗಳಾದ ಚಂದನ ಶೇ.97, ಲತಾ ಶೇ. 96, ಸ್ಫೂರ್ತಿ ಶೇ.93, ಪೂಜಾ ಶೇ.92, ಕೇದಾರೇಶ್ವರಿ ಶೇ.91, ಪಲ್ಲವಿ ಶೇ.88ರಷ್ಟು ಅಂಕಗಳನ್ನು ಪಡೆದಿದ್ದು, ಶಾಲೆಯ ಒಟ್ಟು ಫಲಿತಾಂಶ ಶೇ.98 ಬಂದಿದೆ.

ಉಳಿದ ವಿದ್ಯಾರ್ಥಿಗಳು ಶೇ.90 ಗಿಂತ ಹೆಚ್ಚು ಅಂಕಗಳನ್ನು ಪಡೆಯುವ ಮೂಲಕ ಶಾಲೆಗೆ ಕೀರ್ತಿಯನ್ನು ಹೆಚ್ಚಿಸಿದ್ದಾರೆ. ಈ ವಿದ್ಯಾರ್ಥಿಗಳ ಸಾಧನೆಗೆ ಶಾಲಾ ಆಡಳಿತ ಮಂಡಳಿ ಮುಖ್ಯಸ್ಥರು ಹಾಗೂ ಎಲ್ಲ ಶಿಕ್ಷಕರು, ವಿದ್ಯಾರ್ಥಿಗಳನ್ನು ಸನ್ಮಾನಿಸಿ ಗೌರವಿಸಿದರು.

ಇದರ ಜೊತೆಗೆ ವಿಜಯ ಮೇರಿ ಕನ್ನಡ ಮಾಧ್ಯಮ ಶಾಲೆಯ ಫಲಿತಾಂಶ ಶೇ.88 ರಷ್ಟು ಬಂದಿದೆ.

ಶಾಲೆ ಮುಖ್ಯಗುರು ಸಿಸ್ಟರ್ ಆರೋಗ್ಯ ಮೇರಿ ಅವರು ಮಾತನಾಡಿ, ಪ್ರಸಕ್ತ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ನಮ್ಮ ಶಾಲೆಯ ಮಕ್ಕಳು ಅತ್ಯುತ್ತಮ ಸಾಧನೆ ಮಾಡಿದ್ದು, ಶಾಲೆಯ, ಕಲಿಸಿದ ಗುರುಗಳ, ಪಾಲಕರ ಕೀರ್ತಿ ಹೆಚ್ಚಿಸಿದ್ದಾರೆ. ಇದು ಅತ್ಯಂತ ಸಂತಸ ಮೂಡಿಸಿದೆ. ಮಕ್ಕಳ ಸಾಧನೆಯನ್ನು ಗುರುತಿಸಿ ಸನ್ಮಾನಿಸಿ ಗೌರವಿಸಲಾಗಿದೆ ಎಂದರು. ಶಾಲೆಯ ಸಿಸ್ಟರ್ ಆರೋಗ್ಯ ಮೇರಿ, ಸಿಸ್ಟರ್ ಸರಿತಾ, ಉಪೇಂದ್ರ, ಚಿನ್ನಪ್ಪ, ಚಂದ್ರಶೇಖರ, ಮಲ್ಲಿಕಾರ್ಜುನ ಗೌಡ ಸೇರಿದಂತೆ ಪಾಲಕರು ಇತರರಿದ್ದರು.

ಹಗರಿಬೊಮ್ಮನಹಳ್ಳಿ: ಪುರಸಭೆಯ ಆವರಣದಲ್ಲಿ ಭಗೀರಥ ಮಹರ್ಷಿ ಅವರ ಭಾವಚಿತ್ರಕ್ಕೆ ಪುರಸಭೆಯ ನಿಕಟ ಪೂರ್ವ ಅಧ್ಯಕ್ಷ ಎಂ.ಮರಿರಾಮಣ್ಣ ಪೂಜೆ ಸಲ್ಲಿಸಿ ಪುಷ್ಪನಮನ ಅರ್ಪಿಸಿದರು. ಪುರಸಭೆಯ ನಾ.ನಿ.ಸದಸ್ಯ ಚಿಂತ್ರಪಳ್ಳಿ ಮಂಜಣ್ಣ,ಉಪ್ಪಾರ ಬಾಳಪ್ಪ ಮುಖಂಡರಾದ ಗುಂಡ್ರು ಹನುಮಂತಪ್ಪ, ಬಾಲರಾಜ್ ,ಎಸ್ ಅಂಬಣ್ಣ ಉಪ್ಪಾರ ಸಮಾಜದ ಮತ್ತು ಇತರ ಮುಖಂಡರು ಪಾಲ್ಗೊಂಡಿದ್ದರು.

ಹುಣಸಗಿ ಬಾಲಕಿಯರ ಸರ್ಕಾರಿ ಪ್ರೌಢಶಾಲೆಗೆ ಭರ್ಜರಿ ಸಾಧನೆ

ಹುಣಸಗಿ: 2026 ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಪಟ್ಟಣದ ಬಾಲಕಿಯರ ಸರ್ಕಾರಿ ಪ್ರೌಢಶಾಲೆ ಗಮನಾರ್ಹ ಸಾಧನೆ ದಾಖಲಿಸಿದೆ. ಈ ವರ್ಷ ಪರೀಕ್ಷೆಗೆ ಒಟ್ಟು 74 ವಿದ್ಯಾರ್ಥಿನಿಯರು ಕುಳಿತುಕೊಂಡಿದ್ದು, 5 ವಿದ್ಯಾರ್ಥಿನಿಯರು ಡಿಸ್ಟಿಂಕ್ಷನ್, 35 ಪ್ರಥಮ ಶ್ರೇಣಿ, 17 ದ್ವಿತೀಯ ಶ್ರೇಣಿ ಮತ್ತು 13 ತೃತೀಯ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದು, ಕೇವಲ 4 ವಿದ್ಯಾರ್ಥಿನಿಯರು ಅನುತ್ತೀರ್ಣರಾಗಿದ್ದಾರೆ. ಒಟ್ಟು ಶಾಲೆಯ ಸರಾಸರಿ ಫಲಿತಾಂಶ 94.5% ಆಗಿದ್ದು, ಇದು ಶಾಲೆಯ ಶೈಕ್ಷಣಿಕ ಮಟ್ಟವನ್ನು ಎತ್ತಿಹಿಡಿಯುತ್ತದೆ.

ವಿಶೇಷವೆಂದರೆ ಪರೀಕ್ಷೆಗೆ ಹಾಜರಾದ 74 ವಿದ್ಯಾರ್ಥಿನಿಯರು ಗಣಿತ, ವಿಜ್ಞಾನ ಹಾಗೂ ಹಿಂದಿ ವಿಷಯಗಳಲ್ಲಿ ಶತಪ್ರತಿಶತ ಫಲಿತಾಂಶ ಸಾಧನೆಗೊಂಡಿದ್ದು, ವಿದ್ಯಾರ್ಥಿನಿಯರ ಶ್ರಮ ಹಾಗೂ ಶಿಕ್ಷಕರ ಮಾರ್ಗದರ್ಶನಕ್ಕೆ ಸಾಕ್ಷಿಯಾಗಿದೆ.

ವಿದ್ಯಾರ್ಥಿನಿಯರ ವೈಯಕ್ತಿಕ ಸಾಧನೆಯಲ್ಲೂ ಗಮನಾರ್ಹ ಫಲಿತಾಂಶ ಕಂಡುಬಂದಿದೆ. ಸೌಜನ್ಯ ಚೆನ್ನಪ್ಪ 588 ಅಂಕಗಳನ್ನು (94.08%) ಗಳಿಸಿ ಪ್ರಥಮ ಸ್ಥಾನ ಪಡೆದರೆ, ಚಂದನ ಶ್ರೀಮಂತ್ 579 ಅಂಕಗಳೊಂದಿಗೆ (92.64%) ದ್ವಿತೀಯ ಸ್ಥಾನ ಪಡೆದಿದ್ದಾರೆ. ಜಯಶ್ರೀ ಮಲ್ಲಣ್ಣ ಡಂಗಿ 569 ಅಂಕಗಳೊಂದಿಗೆ (91.04%) ತೃತೀಯ ಸ್ಥಾನ ಪಡೆದು ಶಾಲೆಗೆ ಕೀರ್ತಿ ತಂದಿದ್ದಾರೆ.

ವಿದ್ಯಾರ್ಥಿನಿಯರ ಈ ಸಾಧನೆಗೆ ಎಸ್‌ಡಿಎಂಸಿ ಅಧ್ಯಕ್ಷ ಸಿದ್ರಾಮಪ್ಪ ಮುದುಗಲ್, ಉಪಾಧ್ಯಕ್ಷ ರಮೇಶ್ ವಾಲಿ, ಮುಖ್ಯಗುರು ವಿಠ್ಠಲ್ ಬಿ.ಚೌಹಾನ್, ಎಸ್‌ಡಿಎಂಸಿ ಸದಸ್ಯರು, ಶಿಕ್ಷಕ ವೃಂದ ಹಾಗೂ ಪಟ್ಟಣದ ನಾಗರಿಕರು ಹರ್ಷ ವ್ಯಕ್ತಪಡಿಸಿದ್ದಾರೆ. ವಿದ್ಯಾರ್ಥಿನಿಯರ ಸಾಧನೆಗೆ ಎಲ್ಲೆಡೆ ಪ್ರಶಂಸೆ ವ್ಯಕ್ತವಾಗುತ್ತಿದೆ.

ಎಸ್ಸೆಸ್ಸೆಲ್ಸಿಯಲ್ಲಿ ಹೂವಿನಹಡಗಲಿ ಜಿಲ್ಲೆಗೆ ಪ್ರಥಮ

ಹೂವಿನಹಡಗಲಿ: 2026 ಮಾರ್ಚ್-ಏಪ್ರಿಲ್ ಎಸ್ಸೆಸ್ಸೆಲ್ಸಿ ಪರೀಕ್ಷೆ 1ರ ತಾಲೂಕಿನ ಫಲಿತಾಂಶ 98.29 ಬಂದಿದ್ದು ಜಿಲ್ಲೆಗೆ ಪ್ರಥಮ ಸ್ಥಾನ ಲಭಿಸಿದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಮಹೇಶ್ ವಿ ಪೂಜಾರ ತಿಳಿಸಿದ್ದಾರೆ.

ಪರೀಕ್ಷೆಗೆ ನೊಂದಾಯಿಸಿದ 1431 ಬಾಲಕರು 1447 ಬಾಲಕಿಯರ ಪೈಕಿ 1397 ಬಾಲಕರು ಹಾಗೂ 1432 ಬಾಲಕಿಯರು ಒಟ್ಟು 2829 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಅತ್ಯಧಿಕ ಅಂಕ ಪಡೆದವರು ಪೂಜಶ್ರೀಗೆ 620 ಅಂಕ, ಎನ್ ಎಸ್‌ಸಿ ಇಟಗಿ ನಾಗರಾಜಗೆ 619, ಎಂ.ಎಂ.ಪಾಟೀಲ ಹಡಗಲಿ ಕೆ.ಬಿ.ಪೂಜಾಗೆ 619, ದಯಾನಂದ ಅಕ್ಕಿಗೆ 619, ಬಿ.ಆಶಾಬಾನು 618, ಗಣೇಶ್ ಕೆ.ಎಸ್. 618 ಅಂಕ ಪಡೆದಿದ್ದಾರೆ. ಶೇ.100 ಫಲಿತಾಂಶ ಪಡೆದ ಶಾಲೆಗಳು 29 ಸರ್ಕಾರಿ 13, ಅನುದಾನಿತ 5 ಮೊರಾರ್ಜಿ 5, ಅನುದಾನ ರಹಿತ 06 ಪ್ರೌಢಶಾಲೆಗಳು.

ಹರವಿ, ಮೈಲಾರ, ಲಿಂಗನಾಯಕನಹಳ್ಳಿ ಪ್ಲಾಟ್, ಹಿರೇಬನ್ನಿಮಟ್ಟಿ, ಬ್ಯಾಲಹುಣಸಿ, ತಿಮಲಾಪುರ 63, ಕೊಂಬಳಿ, ಎಂ.ಎಂ.ವಾಡಾ, ಮೀರಾಕೊರ್ನಹಳ್ಳಿ, ಹಿರೇಮಲ್ಲನಕೆರೆ, ನಂದಿಹಳ್ಳಿ, ಪಶ್ಚಿಮ ಕಾಲ್ವಿ, ಉತ್ತಂಗಿ. ಅನುದಾನಿತ: ಎಂ.ಎಂ.ಜಿ. ಸೋವೇನಹಳ್ಳಿ, ಕೆಎನ್ಎಸ್‌ಸಿ ಇಟಗಿ, ಸಿ.ಸಿ.ಕುರುವತ್ತಿ, ಕೆ.ಎಂ.ತಾಂಡಾ. ಮೊರಾರ್ಜಿ: ಮದಲಗಟ್ಟಿ ಗಿರಿಯಾಪುರ ಮಠ, ಇಟಗಿ, ವಿನೋಬ ನಗರ, ವರಕನಹಳ್ಳಿ ಅನುದಾನ ರಹಿತ: ಎಂ.ಎಂ.ಪಾಟೀಲ, ಮೈಲಾರ ಏಳು ಕೋಟಿ ಶಾಲೆ, ದಿವೈನ್ ಹಿರೇಹಡಗಲಿ, ತರಳಬಾಳು ಉತ್ತಂಗಿ, ದಾವಣಗೆರೆ ಕಾನ್ವೆಂಟ್, ವಿದ್ಯಾಂಜಲಿ ಶಾಲೆ.

ಅಭಿನಂದನೆ: ಎಸ್ಸೆಸ್ಸೆಲ್ಸಿ ಫಲಿತಾಂಶ ಜಿಲ್ಲೆಗೆ ಪ್ರಥಮ ಸ್ಥಾನ ಲಭಿಸಿದ್ದಕ್ಕೆ ಶಾಸಕ ಎಲ್.ಕೃಷ್ಣನಾಯಕ ಮಾಜಿ ಸಚಿವ ಪಿ.ಟಿ. ಪರಮೇಶ್ವರ ನಾಯ್ಕ್, ಜಿಲ್ಲಾ ಉಪ ನಿರ್ದೇಶಕ ವೆಂಕಟೇಶ್ ರಾಮಚಂದ್ರಪ್ಪ ಕ್ಷೇತ್ರ ಶಿಕ್ಷಣಾಧಿಕಾರಿ ಮಹೇಶ್ ಪೂಜಾರ, ಕ್ಷೇತ್ರ ಸಮನ್ವಯಾಧಿಕಾರಿ ಎ.ಕೋಟೆಪ್ಪ, ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ವಿ.ಹನುಮಂತಪ್ಪ ಇತರರು ಅಭಿನಂದಿಸಿದ್ದಾರೆ.

ಖರ್ಗೆ ಹೇಳಿಕೆಗೆ ಶ್ರೀರಾಮುಲು ಆಕ್ರೋಶ

ಬಳ್ಳಾರಿ: ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರನ್ನು, ಅವರ ಸಾಧನೆಯನ್ನು ಇಡೀ ವಿಶ್ವವೇ ಕೊಂಡಾಡುತ್ತಿದೆ. ಹೀಗಿರುವಾಗ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು, ಮೋದಿ ಅವರ ಬಗ್ಗೆ ಹಗುರವಾಗಿ ಮಾತನಾಡಿರುವುದು ಅತ್ಯಂತ ಖಂಡನೀಯ, ಅವರ ಈ ಹೇಳಿಕೆ ಅವರ ಸಣ್ಣತನವನ್ನು ತೋರಿಸುತ್ತಿದೆ ಎಂದು ಮಾಜಿ ಸಚಿವ ಬಿ.ಶ್ರೀರಾಮುಲು ಆಕ್ರೋಶ ವ್ಯಕ್ತಪಡಿಸಿದರು.

ನಗರದ ಸಿರುಗುಪ್ಪ ರಸ್ತೆಯ ಗೃಹ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದರು. ಮಲ್ಲಿಕಾರ್ಜುನ್ ಖರ್ಗೆ ಅವರು ಮೋದಿ ಅವರ ಬಗ್ಗೆ ಈ ರೀತಿಯ ಅವಹೇಳಕಾರಿ ಹೇಳಿಕೆ ಇದು ಮೊದಲೇನು ಅಲ್ಲ, ಈ ಹಿಂದೆಯೂ ಅತ್ಯಂತ ಕೆಟ್ಟ ರೀತಿಯಲ್ಲಿ ಹೇಳಿಕೆ ನೀಡಿದ್ದಾರೆ. ರಾಜಕಾರಣ ನಿಂತ ನೀರಲ್ಲ, ಹರಿಯುವ ನೀರಿದ್ದಂತೆ, ಅಧಿಕಾರಯಾರಿಗೂ ಶಾಶ್ವತವಲ್ಲ, ಜನರು ನಮಗೇನು ಮಾಡಿದ್ದಾರೆ ಎನ್ನುವುದು ಮುಖ್ಯವಲ್ಲ, ಇರುವ ಅವಧಿಯಲ್ಲಿ ನಾವೇನು ಮಾಡಿದ್ದೇವೆ ಎನ್ನುವುದು ಮುಖ್ಯ. ನರೇಂದ್ರ ಮೋದಿ ಅವರು ಪ್ರಧಾನ ಮಂತ್ರಿಯಾದ ಬಳಿಕ ದೇಶದ ಅಭಿವೃದ್ಧಿ ಚಿತ್ರಣವೇ ಬದಲಾಗಿದೆ. ನಮ್ಮ ದೇಶವನ್ನು ಇಡೀ ವಿಶ್ವವೇ ತಿರುಗಿ ನೋಡುವಂತೆ ಮಾಡಿದ್ದಾರೆ. ಮೋದಿ ಅವರ ಜನಪ್ರಿಯತೆ, ನಮ್ಮ ಕೇಂದ್ರದ ಬಿಜೆಪಿ ಸರ್ಕಾರದ ಸಾಧನೆಯನ್ನು ಸಹಿಸದ ಕಾಂಗ್ರೆಸ್ ನಾಯಕರು ಬಿಜೆಪಿ ವಿರುದ್ಧ, ನಮ್ಮ ನಾಯಕರ ವಿರುದ್ಧ ಸುಳ್ಳು ಹೇಳಿಕೆಗಳನ್ನು ನೀಡುವ ಮೂಲಕ ಅಪಪ್ರಚಾರಕ್ಕೆ ಮುಂದಾಗಿದ್ದಾರೆ. ಅವರ ಈ ಆಟ ನಡೆಯಲ್ಲ, ಪ್ರಧಾನಿ ಮೋದಿ ವ್ಯಕ್ತಿಯಲ್ಲ, ದೇಶದ ಶಕ್ತಿ, ಕಾಂಗ್ರೆಸ್‌ನವರು ಎಷ್ಟೇ ಟಿಪ್ಪರ್ ಲಾಗ್ ಹಾಕಿದರೂ ಕೇಂದ್ರದಲ್ಲಿ ಅಧಿಕಾರಕ್ಕೆ ಬರೋಲ್ಲ, ರಾಜ್ಯದಲ್ಲೂ ಮತ್ತೆ ನಮ್ಮ ಬಿಜೆಪಿ ಸರ್ಕಾರ ಅಸ್ತಿತ್ವಕ್ಕೆ ಬರುವುದು ಖಚಿತ ಎಂದರು.

ಮಹಿಳೆಯರಿಗೆ ಮೀಸಲಾತಿ ಕಲ್ಪಿಸಲು ಕೇಂದ್ರ ಸರ್ಕಾರ ಮುಂದಾಗಿದ್ದು, ಕಾಂಗ್ರೆಸ್ ನಾಯಕರು, ಅದರ ಮಿತ್ರಪಕ್ಷಗಳು ವಿರೋಧ ವ್ಯಕ್ತಪಡಿಸಿದ್ದು ಸರಿಯಲ್ಲ, ಇದು ಮಹಿಳೆಯರಿಗೆ ಮಾಡಿದ ಅಪಮಾನವಾಗಿದೆ. ಮಹಿಳಾ ಮೀಸಲಾತಿ ಜಾರಿಗೆ ತರುವಲ್ಲಿ ಸಂಸತ್ ನಲ್ಲಿ ಎನ್‌ಡಿಎ ವಿಫಲವಾಗಿದೆ ಎಂದು ಪ್ರತಿಪಕ್ಷಗಳು ಬಿಂಬಿಸಿಕೊಳ್ಳುತ್ತಿದೆ ಎಂದರು. ಗಾಂಧಿ ಕುಟುಂಬಕ್ಕೆ ಮಹಿಳಾ ಮೀಸಲಾತಿ ಬೇಕಿಲ್ಲ, ಅವರಿಗೆ ಮಹಿಳೆಯರ ಅಭಿವೃದ್ಧಿ ಬೇಕಿಲ್ಲ, ಎಲ್ಲ ಹುದ್ದೆಗಳಲ್ಲೂ ನಾವೇ ಇರಬೇಕು ಎನ್ನುವ ಮನೋಭಾವನೆ ಗಾಂಧಿ ಕುಟುಂಬದವರಲ್ಲಿದೆ. ಇದಕ್ಕೆ ದೇಶದ ಜನರೆ ತಕ್ಕ ಪಾಠ ಕಲಿಸಲಿದ್ದಾರೆ ಎಂದು ವಾಗ್ದಾಳಿ ನಡೆಸಿದರು.

ಬಿಜೆಪಿ ರೈತ ಮೋರ್ಚಾ ರಾಜ್ಯ ಕಾರ್ಯದರ್ಶಿ ಎಸ್.ಗುರುಲಿಂಗನ ಗೌಡ, ಮಹಾನಗರ ಪಾಲಿಕೆಯ ವಿರೋಧ ಪಕ್ಷದ ನಾಯಕ ಶ್ರೀನಿವಾಸ್ ಮೊತ್ಕರ್, ಪಾಲಿಕೆ ಲೆಕ್ಕಪತ್ರ ಸಮಿತಿ ಅಧ್ಯಕ್ಷ ಕೆ.ಹನುಮಂತಪ್ಪ, ಪಾಲಿಕೆ ಸದಸ್ಯರಾದ ಸುರೇಂದ್ರ, ಚೇತನಾ ವೇಮಣ್ಣ ಸೇರಿದಂತೆ ಇತರರಿದ್ದರು.

> **ಜನರು ದಡ್ಡರಲ್ಲ, ಬರುವ ದಿನಗಳಲ್ಲಿ ಕಾಂಗ್ರೆಸ್ ಗೆ ದೇಶದ ಜನರು ತಕ್ಕ ಪಾಠ ಕಲಿಸಲಿದ್ದಾರೆ. ದೇಶದಲ್ಲಿ ಕಾಂಗ್ರೆಸ್ ಸರ್ವನಾಶವಾಗಲಿದೆ. ರಾಜ್ಯದಲ್ಲೂ ಜನರು ಕಾಂಗ್ರೆಸ್ ಅನ್ನು ಬುಡ ಸಮೇತ ಕಿತ್ತೊಗೆಯಲಿದ್ದಾರೆ.**
>
> ■ ಬಿ.ಶ್ರೀರಾಮುಲು, ಮಾಜಿ ಸಚಿವ

'ಸರ್ವಾಂತರ್ಯಾಮಿ' ಟ್ರೈಲರ್ ಬಿಡುಗಡೆ

ಕೊಟ್ಟೂರು: ಶ್ರೀಮದ್ ಉಜ್ಜಯಿನಿ ಜಗದ್ಗುರು ಸದ್ಧರ್ಮ ಸಿಂಹಾಸನ ಮಹಾ ಸಂಸ್ಥಾನ ಪೀಠ ಶ್ರೀಜಗದ್ಗುರು ದಾರುಕಾಚಾರ್ಯ ಜಯಂತಿ ಯುಗಮಾನೋತ್ಸವ ಶ್ರೀಮರುಳಸಿದ್ದೇಶ್ವರ ಸ್ವಾಮಿ ರಥೋತ್ಸವ ದಿನದಂದು ಜಗದ್ಗುರು ಅಭಿನವ ಸಿದ್ದಲಿಂಗ ರಾಜ ದೇಶಿ ಕೇಂದ್ರ ಶಿವಾಚಾರ್ಯ ಶ್ರೀ ಹಾಗೂ ರಮೇಶ್ ಅವರು ಸರ್ವಾಂತರ್ಯಾಮಿ ಕನ್ನಡ ಚಲನಚಿತ್ರದ ಟ್ರೈಲರ್ ಮತ್ತು ಸಾಂಗ್ ಬಿಡುಗಡೆಗೊಳಿಸಿದರು.

ಕೆ.ಎಸ್.ರಮೇಶ್ ಗುರುಗಳು ಸಾಹಿತಿ ವಚನ ಕಾರ ರಂಗಭೂಮಿ ಚಲನಚಿತ್ರ ಕಲಾವಿದರು ಖ್ಯಾತ ಚಲನಚಿತ್ರ ನಟ ನಿರ್ದೇಶಕರು, ವಿಕ್ಟರಿ ವಾಸು ಖ್ಯಾತ ಚಲನಚಿತ್ರ ನಟ ಮತ್ತು ಪ್ರಚಾರಕರು ಆಟೋ ನಾಗರಾಜು ಸಿದ್ದಲಿಂಗ ಮೂರ್ತಿ ಆರ್.ರಂಗಭೂಮಿ ಚಲನಚಿತ್ರ ಕಾಲವಿದರು ನಿರ್ದೇಶಕರು. ಟಿವಿ 9 ರಿತೇಶ್ ಚಲನಚಿತ್ರ ಕಲಾವಿದರು ಮಿಮಿಕ್ರಿ ಧ್ವನಿ ಮಾಂತ್ರಿಕ ಸರ್ವಾತರ್ಯಾಮಿ ಚಿತ್ರದ ನಾಯಕಿ ಭರತ ನಾಟ್ಯ ಕಲಾವಿದೆ. ಕು.ಸಂಜನ ದ್ವಿವೇದಿ ಕು.ಸಂಜನ ಮೈಸೂರು ಕು.ಬಾಲ ನಟಿ ಮೈರಾ ಸರ್ವಾತರ್ಯಾಮಿ ಚಿತ್ರದ ನಿರ್ದೇಶಕ ರಂಗಭೂಮಿ ಭರತ ನಾಟ್ಯ ಕಲಾವಿದರಾದ ರಂಗಸ್ವಾಮಿ ಕಪನಿಪಾಳ್ಯ ಇತರರಿದ್ದರು.